# ಸಂಸ್ಕೃತಭಾಷಾಭ್ಯಾಸ

## (संस्कृतभाषाभ्यासः)

## ಮೂರನೆಯ ಭಾಗ

ಲೇಖಕರು :

ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ

೨೦೦೧

## ಸಂಸ್ಕೃತಭಾಷೆಯ ಮಹತ್ತ್ವ

(ಶ್ರೀಶ್ರೀಗಳವರ ಲೇಖನಗಳಿಂದ ಆರಿಸಿದ ಕೆಲವು ಕುಸುಮಗಳು)

೧. ವಾಚಕವೃಂದ, ಸಂಸ್ಕೃತವು ನಿಮ್ಮ ಅಂತಃಕರಣಕ್ಕೆ ಸಂಸ್ಕೃತಿಯನ್ನು ಕೊಡಬಲ್ಲದು ; ಜೀವನದಲ್ಲಿ ನೆಮ್ಮದಿಯನ್ನು ನೀಡಬಲ್ಲದು ; ಇಡಿಯ ಭೂಲೋಕವನ್ನೇ ಏಕೆ, ಇಡಿಯ ವಿಶ್ವವನ್ನೇ ಪರಮಾನಂದಸಾಗರವೆಂಬುದನ್ನು ಮನದಟ್ಟು ಮಾಡಿಕೊಟ್ಟು ನಿಮ್ಮ ಇಷ್ಟಾರ್ಥಗಳನ್ನೆಲ್ಲ ನೆರವೇರಿಸಬಲ್ಲ ಅಧ್ಯಾತ್ಮವಿದ್ಯೆಯ ಕಲ್ಪತರುವನ್ನು ನಿಮ್ಮೊಳಗೆ ನೆಡಬಲ್ಲದು ; ಹೀಗೆಂದು ಋಷಿಗಳು ಹೇಳಿದ್ದಾರೆ ! ಕವಿಗಳೂ ಸಂಗೀತಶಾಸ್ತ್ರಜ್ಞರೂ ವೈದ್ಯರುಗಳೂ ಹಾಡಿದ್ದಾರೆ. ದಾರ್ಶನಿಕರು ಕೊಂಡಾಡಿದ್ದಾರೆ. ನೀತಿವಿಶಾರದರು ಬಾಯಿತುಂಬ ಹೊಗಳಿದ್ದಾರೆ. ಇಂದಿನ ಭಾಷಾವಿದರು ಅದನ್ನು ಸ್ತೋತ್ರಗಳಿಂದ ಅಲಂಕರಿಸಿದ್ದಾರೆ. ರಾಜಕಾರಣಿಗಳೂ ಈ ರಾಗಕ್ಕೆ ತಾಳಹಾಕಿದ್ದಾರೆ **ಸಂಸ್ಕೃತಭಾಷೆಯ ಒಂದೊಂದು ಮಾತು ಒಂದು ಮಹಾಮಂತ್ರವೆಂದು ತಿಳಿಯಿರಿ.** ಸಂಸ್ಕೃತಶಬ್ದಗಳನ್ನು ಎಡೆಬಿಡದೆ ಜಪಿಸಿರಿ. ನಿಮ್ಮ ಹೆಣ್ಣುಮಕ್ಕಳಿಗೆ ಈ ಭಾಷೆಯ ಪರಿಚಯವನ್ನು ಮಾಡಿಕೊಡಿರಿ. ಗಂಡುಮಕ್ಕಳಿಗೆ ಈ ಭಾಷೆಯ ವೈಶಾಲ್ಯವನ್ನು ತಿಳಿಸಿಕೊಡಿರಿ. ಈ ವಿಶ್ವಶಕ್ತಿಯನ್ನು ಸಂಪಾದಿಸಿಕೊಂಡು ನಿರ್ಭೀತಿಯಿಂದಲೂ ಆನಂದದಿಂದಲೂ ಬಾಳಿರಿ.

೨. ಸಂಸ್ಕೃತವನ್ನು ಕಲಿಯುವದು ಕಷ್ಟವೆಂಬ ಹುಚ್ಚುಕಲ್ಪನೆಯನ್ನು ಮಾಡಿಕೊಳ್ಳಬೇಡಿರಿ. ಇಂದಿನಿಂದಲೇ ಪ್ರಯತ್ನಿಸಿ ನೋಡಿರಿ. ಇಂಗ್ಲಿಷನ್ನು ಕಲಿಯುವದಕ್ಕೆ ಬೇಕಾದ ಶ್ರಮದಲ್ಲಿ ಅರ್ಧ ಅಥವಾ ಕಾಲುಪಾಲನ್ನು ಸಂಸ್ಕೃತಕ್ಕೆ ವಿನಿಯೋಗಿಸಿದರೂ ಅದರಲ್ಲಿ ಅದ್ಭುತಪಾಂಡಿತ್ಯವನ್ನು ನೀವು ಸಂಪಾದಿಸಿಕೊಳ್ಳಬಹುದು. ಅದರಿಂದ ದೇಶದ ಸಂಸ್ಕೃತಿಯ ಸಂಸ್ಪರ್ಶವನ್ನು ಪಡೆಯಬಹುದು. ಜನಸಾಮಾನ್ಯರ ಹೃದಯದ ಮಿಡಿತವನ್ನು ಅರಿತುಕೊಂಡು ದೇಶದವರ ಮತ್ತು ನಿಮ್ಮ ಇಹಪರಸುಖಗಳಿಗೆ ಬೇಕಾದ ಸತ್ಕಾರ್ಯಗಳನ್ನು ಕೈಗೊಳ್ಳಬಹುದು.

೩. ಸಂಸ್ಕೃತವನ್ನು ಕಲಿಯುವೆನೆಂದು ಇಂದಿನಿಂದಲೇ ಸಂಕಲ್ಪವನ್ನು ಮಾಡಿಕೊಳ್ಳಿರಿ. ಸಂಸ್ಕೃತವನ್ನು ನಮ್ಮ ಮಕ್ಕಳಿಗೆಲ್ಲ ಅವಶ್ಯವಾಗಿ ಕಲಿಯಿಸಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸಿ ಕೇಳಿಕೊಳ್ಳಿರಿ. ಸಂಸ್ಕೃತದಲ್ಲಿ ಸಂಭಾಷಣೆ ಮಾಡುವದು, ಇತಿಹಾಸ ಪುರಾಣಗಳನ್ನು ಓದುವದು, ಹೇಳುವದು, ಕೇಳುವದು - ಮುಂತಾದ ಪ್ರಯತ್ನಗಳನ್ನು ಕೈಗೊಳ್ಳಿರಿ.

೪. ಭಾರತವು ಒಂದೇ ಜನಾಂಗವೆನಿಸಿಕೊಳ್ಳುವದಕ್ಕೆ ತಕ್ಕ ಪುಷ್ಟಿಯನ್ನು ಕೊಡುವ ಮೂಲಭಾಷೆ ಸಂಸ್ಕೃತವಲ್ಲದಿದ್ದರೆ ಮತ್ತೆ ಯಾವದು ತಾನೆ ಇದೆ ? ನಮಗೆ ಇಹಪರದ ಪುರುಷಾರ್ಥಗಳ ಹಸಿವನ್ನು ಅಡಗಿಸಿ, ತುಷ್ಟಿಯನ್ನೂ ಪುಷ್ಟಿಯನ್ನೂ ಕೊಡಬಲ್ಲ ಶಕ್ತಿ ಮತ್ತೆ ಯಾವ ಭಾಷೆಗೆ ಇದ್ದೀತು ?

ಅಧ್ಯಾತ್ಮಗ್ರಂಥಾವಳಿ

# ಸಂಸ್ಕೃತಭಾಷಾಭ್ಯಾಸ

## (संस्कृतभाषाभ्यासः)

### ಮೂರನೆಯಭಾಗ

ಲೇಖಕರು :

ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೧೦೮

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ.

೨೦೦೧

| | | | |
|---|---|---|---|
| ಒಂದನೆಯ ಮುದ್ರಣ | : | ೧೯೬೧ | (೫೦೦ ಪ್ರತಿಗಳು) |
| ಎರಡನೆಯ ಮುದ್ರಣ | : | ೧೯೬೨ | (೧೦೦೦ ಪ್ರತಿಗಳು) |
| ಮೂರನೆಯ ಮುದ್ರಣ | : | ೧೯೮೫ | (೧೦೦೦ ಪ್ರತಿಗಳು) |
| ನಾಲ್ಕನೆಯ ಮುದ್ರಣ | : | ೨೦೦೧ | (೨೦೦೦ ಪ್ರತಿಗಳು) |



All Rights Reserved

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು



ಗಣಕಯಂತ್ರ ವಿನ್ಯಾಸ :

**ಎಲ್. ಎಂ. ಗ್ರಾಫಿಕ್ಸ್**

ನಂ. 766, 10ನೇ 'ಸಿ' ಅಡ್ಡರಸ್ತೆ,

ಪಶ್ಚಿಮ ಕಾರ್ಡ್ ರೋಡ್, ಮೋದಿ ಆಸ್ಪತ್ರೆಯ ಹತ್ತಿರ,

ಮಹಾಲಕ್ಷ್ಮೀಪುರಂ, ಬೆಂಗಳೂರು - 10

ಫೋ. ನಂ : 359 3747

ಮುದ್ರಕರು :

**ಶ್ರೀ ಗಣೇಶಮಾರುತಿ ಪ್ರಿಂಟರ್ಸ್**

ನಂ. 76, 6ನೇ ಮುಖ್ಯರಸ್ತೆ,

3ನೇ ಬ್ಲಾಕ್, ತ್ಯಾಗರಾಜನಗರ,

ಬೆಂಗಳೂರು - 28. ದೂ. : 676 6342

# ಒಂದನೆಯ ಮುದ್ರಣದ ಪೀಠಿಕೆ

ಹೊಸದಾಗಿ ಸಂಸ್ಕೃತವನ್ನು ಕಲಿಯುವವರಿಗಾಗಿ ಬರೆದಿರುವ ಪುಸ್ತಕಗಳಲ್ಲಿ ಇದು ಮೂರನೆಯದು. ಇವು ಸ್ವತಂತ್ರವಾಗಿ ತಾವೇ ಓದುವವರಿಗಾಗಿ ಬರೆದ ಪುಸ್ತಕಗಳಾದ್ದರಿಂದ ಆದಮಟ್ಟಿಗೂ ಈ ಪುಸ್ತಕಗಳಲ್ಲಿ ಪಾಠಗಳ ಕನ್ನಡದರ್ಥವನ್ನು ಅಲ್ಲಲ್ಲಿಯೇ ಕೊಟ್ಟಿರುತ್ತದೆ. ಮೊದಲನೆಯ ಎರಡು ಭಾಗಗಳಲ್ಲಿ ವಾಕ್ಯಗಳಿಗೆ ಸಂಖ್ಯೆಯನ್ನು ಕೊಟ್ಟಿರುವದರಿಂದ ಆಯಾ ಸಂಖ್ಯೆಯ ವಾಕ್ಯದ ಅನುವಾದವು ತಟ್ಟನೆ ಸಿಕ್ಕುವಂತೆ ಇದೆ. ಈ ಮೂರನೆಯ ಪುಸ್ತಕದಲ್ಲಿ ಮಹಾವಾಕ್ಯಗಳಾಗಿ ವಿಂಗಡಿಸಿದ ಕಥಾಭಾಗಗಳನ್ನು ಕೊಟ್ಟು ಅದೇ ಕ್ರಮದಲ್ಲಿ ಅನುವಾದದ ವಾಕ್ಯಗಳನ್ನು ಅಚ್ಚು ಮಾಡಿಸಿದೆ. ಆದರೆ ಸಂಖ್ಯೆಯನ್ನು ಕೊಟ್ಟಿಲ್ಲ. ಇದರಿಂದ ಸಂಸ್ಕೃತವಾಕ್ಯಗಳನ್ನು ಸಲೀಸಾಗಿ ಓದುವದು, ತಾವೇ ಅರ್ಥವನ್ನು ಊಹಿಸುವದು, ಗೊತ್ತಾಗದ ಸಂದರ್ಭಗಳಲ್ಲಿ ಮಾತ್ರ ಅನುವಾದವನ್ನು ನೋಡುವದು - ಹೀಗೆ ಅಭ್ಯಾಸವನ್ನು ಮಾಡುವದಕ್ಕೆ ಸೌಕರ್ಯವಿದೆ.

ಮುಖ್ಯವಾಗಿ ಪಂಚತಂತ್ರದಲ್ಲಿ ಮೊದಲನೆಯ ತಂತ್ರವಾದ 'ಮಿತ್ರಭೇದ'ದ ಕಥೆಯನ್ನು ಸಂಗ್ರಹಿಸಿಕೊಟ್ಟಿದೆ. ಪದ್ಯಭಾಗಗಳನ್ನೂ ಉಪಕಥೆಗಳನ್ನೂ ಕೈಬಿಟ್ಟಿರುವ ದರಿಂದ ಕಥಾಸರಣಿಯು ತಡೆಬಿಡೆಯಿಲ್ಲದೆ ಸಾಗಿರುತ್ತದೆ. ಸಂಸ್ಕೃತಗದ್ಯವನ್ನು ಅಭ್ಯಾಸಮಾಡುವದಕ್ಕೆ ಬೇಕಾದ ಸೌಕರ್ಯಗಳನ್ನೆಲ್ಲ ಇಲ್ಲಿ ಕೊಟ್ಟಿದೆ. ಪ್ರತಿಯೊಂದು ಭಾಗದ ಕೆಳಗೂ ''ಚಿಂತನ'' ವೆಂಬ ಹೆಸರಿನಿಂದ ಮೂಲವನ್ನು ಸರಿಯಾಗಿ ತಿಳಿದುಕೊಳ್ಳುವದಕ್ಕೆ ಬೇಕಾದ ಮುಖ್ಯವಿಷಯಗಳನ್ನು ಟಿಪ್ಪಣಿರೂಪದಿಂದ ಕೊಟ್ಟಿರುತ್ತದೆ. ಈ ಗ್ರಂಥಮಾಲೆಯ ಎರಡನೆಯ ಭಾಗವನ್ನು ಓದಿರುವವರು ಈ ಚಿಂತನದ ಲಾಭವನ್ನು ಪಡೆದುಕೊಳ್ಳಬಹುದಾಗಿದೆ.

ಕಥೆಯಲ್ಲಿ ಸಂಭಾಷಣಾವಾಕ್ಯಗಳು ಸಹಜವಾಗಿಯೇ ಹೆಚ್ಚಾಗಿರುತ್ತವೆ. ಆದ್ದರಿಂದ ಇಲ್ಲಿ ಕೊಟ್ಟಿರುವ ಕಥಾಭಾಗಗಳನ್ನು ಮತ್ತೆ ಮತ್ತೆ ಓದುವದರಿಂದ ಸಂಸ್ಕೃತಸಂಭಾಷಣೆಯು ಹೇಗಿರುವದೆಂಬುದು ತಿಳಿಯುತ್ತದೆ. ಈ ಪುಸ್ತಕವನ್ನು ಇಬ್ಬರು ಮೂವರು ಜೊತೆಯಲ್ಲಿ ಓದುವದಾದರೆ ವಾಕ್ಯಗಳನ್ನು ಸಂಭಾಷಣೆಯಲ್ಲಿ ಬಳಸುವದಕ್ಕೆ ಪ್ರಯತ್ನಿಸಬಹುದಾಗಿದೆ.

ಚಿಂತನದಲ್ಲಿ ಕನ್ನಡಭಾಷೆಯ ಮರ್ಯಾದೆಗೂ ಸಂಸ್ಕೃತಭಾಷೆಯ ಮರ್ಯಾದೆಗೂ ಇರುವ ವೈಲಕ್ಷಣ್ಯವನ್ನು ಅಲ್ಲಲ್ಲಿ ತೋರಿಸುತ್ತಾ ಹೋಗಿದೆ. ಅನುವಾದದಲ್ಲಿ ಸಂಸ್ಕೃತವಾಕ್ಯದ ಅಕ್ಷರಾರ್ಥವನ್ನು ಮೊದಲು ಕಂಸದಲ್ಲಿಟ್ಟು "=" ಹೀಗೆ ಚಿಹ್ನೆಯನ್ನು ತೋರಿಸಿ, ಮುಂದಕ್ಕೆ ಕನ್ನಡದ ಮರ್ಯಾದೆಗೆ ಒಪ್ಪುವಂತೆ ಒಟ್ಟರ್ಥವನ್ನು ಬರೆದಿದೆ. ಸಂಸ್ಕೃತವಾಕ್ಯಗಳಿಗೆ ಹೀಗೆ ಎರಡೂ ಬಗೆಗಳ ಅನುವಾದದ

ಪರಿಯನ್ನು ಅಭ್ಯಾಸಮಾಡುವದರಿಂದ ಕನ್ನಡವಾಕ್ಯಗಳನ್ನು ಸಂಸ್ಕೃತಕ್ಕೆ ಹೇಗೆ ಪರಿವರ್ತನೆ ಮಾಡಬೇಕೆಂಬುದು ತಿಳಿಯುತ್ತದೆ.

ಎರಡನೆಯ ಪುಸ್ತಕದಲ್ಲಿ ಮುಖ್ಯಸ್ವರಾಂತವ್ಯಂಜನಾಂತನಾಮಪದಗಳ ರೂಪಗಳನ್ನು ತೋರಿಸಿರುವದಲ್ಲದೆ ಕ್ರಿಯಾಪದಕ್ಕೆ ೧, ೪, ೬, ೧೦ - ಈ ಗಣಗಳ ಧಾತುಗಳ ವರ್ತಮಾನ, ಅನದ್ಯತನಭೂತ, ಆಜ್ಞಾರ್ಥ, ವಿಧ್ಯಾದ್ಯರ್ಥ - ಈ ನಾಲ್ಕು ರೂಪಗಳನ್ನೇ ಮುಖ್ಯವಾಗಿ ತಿಳಿಸಿಕೊಟ್ಟಿದೆ. ಈ ಮೂರನೆಯ ಭಾಗದಲ್ಲಿ ಸಂಸ್ಕೃತದಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವ ಸಮಸ್ತಪದಗಳಿಗೆ ವಿಗ್ರಹವಾಕ್ಯಗಳನ್ನು ಬಿಡಿಸಿ ಹೇಳುವ ಬಗೆಯನ್ನು ವಿವರಿಸಿದೆ. ಎಲ್ಲಾ ಗಣದ ಧಾತುಗಳಿಗೂ ಕ್ರಿಯಾಪದದ ರೂಪಗಳನ್ನು ತೋರಿಸಿಕೊಟ್ಟಿದೆ. ಪರೋಕ್ಷಭೂತದ ಮತ್ತು ಭವಿಷ್ಯತ್ಕಾಲದ ಎರಡೂ ರೂಪಗಳನ್ನೂ ವಿವರಿಸಿದೆ. ಇದರ ಜೊತೆಗೆ ಎರಡನೆಯ ಪುಸ್ತಕದಲ್ಲಿ ಸಂಕ್ಷೇಪವಾಗಿ ತಿಳಿಸಿದ್ದ ಕೃದಂತಾದಿ ರೂಪಗಳ ವಿಷಯವನ್ನು ಇಲ್ಲಿ ಸ್ವಲ್ಪ ಹಿಗ್ಗಿಸಿ ಬರೆದಿದೆ. ಸಂಸ್ಕೃತದಲ್ಲಿ ಕ್ರಿಯಾಪದದ ರೂಪಗಳನ್ನು ಸಿದ್ಧಪಡಿಸುವದು ಕಠಿನವೇ ಆಗಿರುವದರಿಂದ ಇಲ್ಲಿ ಬರೆದಿರುವ ನಿಯಮಗಳನ್ನು ಮೊದಲನೆಯ ಸಲಕ್ಕೆ ಓದಿ ಬಿಟ್ಟುಬಿಡಬಹುದು ; ಇಲ್ಲಿ ಕೊಟ್ಟಿರುವ ಅನೇಕ ಕ್ರಿಯಾಪದರೂಪಗಳು ಬಳಕೆಯಲ್ಲಿರುವವಾದ್ದರಿಂದ ಅವು ಮತ್ತೆ ಮತ್ತೆ ಕಣ್ಣಿಗೆ ಬೀಳುವದರಿಂದಲೇ ಲಾಭವಿದೆ.

ಈ ಮೂರು ಪುಸ್ತಕಗಳಲ್ಲಿಯೂ ಕನ್ನಡವನ್ನೇ ಬೋಧನೆಗೆ ಮಾಧ್ಯಮವನ್ನಾಗಿ ಮಾಡಿಕೊಂಡಿರುವದರಿಂದ ಕನ್ನಡಭಾಷೆಯ ಪರಿಚಯವಿದ್ದರೆ, ಸಂಸ್ಕೃತವಿದ್ಯಾರ್ಥಿಗಳು ತಾವೇ ಇವುಗಳನ್ನು ಅಭ್ಯಾಸಮಾಡುವದಕ್ಕೆ ಅವಕಾಶವಿದೆ. ಇಲ್ಲಿರುವ ಅಭ್ಯಾಸಗಳಿಗೆ ಉತ್ತರವನ್ನೂ ಸ್ವಪ್ರಯತ್ನದಿಂದ ತಾವೇ ಕಂಡುಕೊಳ್ಳಬಹುದಾಗಿದೆ.

ಸಂಸ್ಕೃತಭಾಷೆಯು ಭಾರತದ ಸಂಸ್ಕೃತಿಯ ಭಾಂಡಾಗಾರವಾದ ಗ್ರಂಥಗಳನ್ನೊಳಗೊಂಡಿದೆ. ಇದನ್ನು ಭಾರತದೇಶನಿವಾಸಿಗಳೆಲ್ಲರೂ ಅಭ್ಯಾಸಮಾಡುವದರಿಂದ ಜನಾಂಗದ ಒಗ್ಗಟ್ಟು ಹೆಚ್ಚುವದು ; ದೇಶಭಾಷೆಗಳು ಬೆಳೆಯುವವು. ಓದುವವರಿಗೆ ಜ್ಞಾನವಿಕಾಸವಾಗಿ ಚತುರ್ವಿಧಪುರುಷಾರ್ಥಗಳೂ ಲಭಿಸಬಹುದು. ಈ ಕಾರಣದಿಂದ ಎಲ್ಲರಿಗೂ ಸಹಾಯವಾಗಲೆಂದು ಈ ಗ್ರಂಥಮಾಲೆಯನ್ನು ಆರಂಭಿಸಿದೆ. ಇಲ್ಲಿಂದ ಮುಂದೆ - ಅಥವಾ ಮೂರನೆಯ ಪುಸ್ತಕದ ಜೊತೆಗೇ - ಕಾವ್ಯದ ಅಭ್ಯಾಸವನ್ನೂ ಮಾಡಬಹುದಾಗಿದೆ. ಕಾವ್ಯಾಭ್ಯಾಸದಲ್ಲಿ ಕನ್ನಡದ ಬಳಕೆಯನ್ನು ಆದಷ್ಟು ಕಡಿಮೆ ಮಾಡಿ ಸಂಸ್ಕೃತವನ್ನೇ ಹೆಚ್ಚುಹೆಚ್ಚು ನೇರಾಗಿ ಉಪಯೋಗಿಸಬೇಕು.

**ಹೊಳೆನರಸೀಪುರ** **ಪ್ರಕಾಶಕರು**

೬-೨-೬೧

## ಎರಡನೆಯ ಮುದ್ರಣಕ್ಕೆ ಪೀಠಿಕೆ

ಈ ಸಂಸ್ಕರಣದಲ್ಲಿ ಹಿಂದೆ ಇದ್ದ ಅಚ್ಚಿನ ತಪ್ಪುಗಳನ್ನು ತಿದ್ದಿ ಕೆಲವು ಮಾರ್ಪಾಟುಗಳನ್ನು ಮಾಡಿದೆ.

೧೫-೩-೭೨ ಪ್ರಕಾಶಕರು

## ಮೂರನೆಯ ಮುದ್ರಣಕ್ಕೆ ಮುನ್ನುಡಿ

ಬ್ರಹ್ಮೀಭೂತ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು ಸಂಸ್ಕೃತಭಾಷೆಯನ್ನು ಕಲಿಯುವ ಇಚ್ಛೆಯುಳ್ಳ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಬರೆದು ಪ್ರಕಟಗೊಳಿಸಿರುವ 'ಸಂಸ್ಕೃತಭಾಷಾಭ್ಯಾಸ' ಎಂಬ ಗ್ರಂಥದ ಮೂರನೆಯ ಭಾಗವು ಈಗ ಮೂರನೆಯ ಬಾರಿಗೆ ವಾಚಕರ ಕರಕಮಲವನ್ನು ಅಲಂಕರಿಸುತ್ತಿದೆ. ಕನ್ನಡ ಭಾಷಾಜ್ಞಾನವುಳ್ಳವರು ಈ ಗ್ರಂಥಮಾಲೆಯ ಮೂರು ಭಾಗಗಳನ್ನೂ ಕ್ರಮವಾಗಿ ಅಭ್ಯಾಸಮಾಡುವ ಮೂಲಕ ಸಂಸ್ಕೃತಭಾಷೆಯನ್ನು ವ್ಯಾಕರಣಶುದ್ಧವಾಗಿ ತಕ್ಕಮಟ್ಟಿಗೆ ಕಲಿತು ಸಂಸ್ಕೃತಗ್ರಂಥಗಳನ್ನು ಓದಿ ಅರ್ಥಮಾಡಿಕೊಳ್ಳಬಹುದಾಗಿದೆ.

ಈ ಮೂರನೆಯ ಭಾಗದಲ್ಲಿ ವಿಶೇಷವಾಗಿ ಕ್ರಿಯಾಪದಗಳನ್ನು ಬಳಸುವ ಹಾಗೂ ಕ್ರಿಯಾಪದಗಳಿಂದ ಕೃತ್ ಪ್ರತ್ಯಯಗಳ ಜೋಡಣೆಯ ಮೂಲಕ ಸಿದ್ಧವಾಗುವ ಕೃದಂತನಾಮಪದಗಳ ರೂಪಗಳನ್ನೂ, ಧಾತುಗಳ ಹತ್ತು ಲಕಾರಗಳಲ್ಲಿಯೂ ಸಿದ್ಧವಾಗುವ ಪರಿನಿಷ್ಠಿತರೂಪಗಳನ್ನೂ ತಿಳಿಸಲಾಗಿದೆ. ಪಂಚತಂತ್ರದ ಕಥೆಯನ್ನು ಸಂಗ್ರಹಿಸಿ ಕೊಡಲಾಗಿದೆ. ಆದರೂ ಇನ್ನೂ ತಿಳಿಸಬೇಕಾದ ವಿಷಯಗಳಿದ್ದು ಗ್ರಂಥಕರ್ತರಿಗೆ ಈ ಮಾಲೆಯ ನಾಲ್ಕನೆಯ ಭಾಗವನ್ನು ಹೊರತರುವ ಸಂಕಲ್ಪವಿತ್ತಾದರೂ ಕಾರಣಾಂತರಗಳಿಂದ ಅದು ಸಾಧ್ಯವಾಗಲಿಲ್ಲ. ಆದ್ದರಿಂದ ವಾಚಕರು ಇಷ್ಟರಿಂದಲೇ ತೃಪ್ತರಾಗಬೇಕಾಗಿದೆ.

ಅಧ್ಯಾತ್ಮವಿಚಾರಗಳನ್ನುಳ್ಳ ಭಾಷ್ಯಗ್ರಂಥಗಳೂ, ಪ್ರಕರಣಗ್ರಂಥಗಳೂ ಸ್ತೋತ್ರಾದಿಗಳೂ ಸಂಸ್ಕೃತಭಾಷೆಯಲ್ಲಿರುವದರಿಂದ ಅಧ್ಯಾತ್ಮವಿಚಾರಾಸಕ್ತರು ಸಂಸ್ಕೃತಭಾಷೆಯ ಪರಿಚಯವುಳ್ಳವರಾದಷ್ಟೂ ಮೂಲಗ್ರಂಥಗಳ ವ್ಯಾಸಂಗಕ್ಕೂ

ತಾತ್ಪರ್ಯಗ್ರಹಣಕ್ಕೂ ಬಹಳ ಸಹಾಯವಾಗಲಿದೆ. ಈ ಕಾರಣದಿಂದಲೇ ಗ್ರಂಥಕರ್ತರು ಈ ಸ್ವಯಂಬೋಧನಾಪುಸ್ತಕಗಳನ್ನೂ ರಚಿಸಿದ್ದಾರೆ. ಇವುಗಳ ಉಪಯೋಗವನ್ನು ಜಾಣರಾದ ವಾಚಕರು ಪಡೆದು ವೇದಾಂತವಿಜ್ಞಾನಸುನಿಶ್ಚಿತಾರ್ಥರಾಗಬೇಕಾಗಿ ಪ್ರಾರ್ಥನೆ.

ಹೊಳೆನರಸೀಪುರ
ತಾ || 10-11-95

ಇತಿ ಸಜ್ಜನವಿಧೇಯ,
ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ
ಅಧ್ಯಾತ್ಮಗ್ರಂಥಾವಳಿಯ ಸಂಪಾದಕ.

## ನಾಲ್ಕನೆಯ ಮುದ್ರಣಕ್ಕೆ ಮುನ್ನುಡಿ

೧೯೯೫ ರಲ್ಲಿ ಮೂರನೆಯ ಬಾರಿಗೆ ಮುದ್ರಣವಾಗಿದ್ದ ಈ ಗ್ರಂಥದ ಪ್ರತಿಗಳೆಲ್ಲವೂ ಮುಗಿದುಹೋದದ್ದರಿಂದ ಈಗ ನಾಲ್ಕನೆಯ ಬಾರಿಗೆ ಪುನರ್ಮುದ್ರಿಸಿ ವಾಚಕರಿಗೆ ಸಮರ್ಪಿಸಲಾಗಿದೆ. ಸಾಧ್ಯವಾದ ಮಟ್ಟಿಗೂ ಅಚ್ಚಿನ ತಪ್ಪುಗಳನ್ನು ಸರಿಪಡಿಸಲಾಗಿದೆ.

ಈ ಗ್ರಂಥವು ಸಾಕಷ್ಟು ಪ್ರೌಢಶೈಲಿಯಲ್ಲಿದ್ದು ವ್ಯಾಕರಣ ವಿಶೇಷಗಳನ್ನು ಒಳಗೊಂಡಿದೆಯಾಗಿ ಸಂಸ್ಕೃತಭಾಷಾಜ್ಞಾನವುಳ್ಳ ವಿದ್ವಾಂಸರ ಸಹಾಯದಿಂದ ವಾಚಕರು ಅಭ್ಯಾಸಮಾಡುವದು ಒಳ್ಳೆಯದು. ಇದರಿಂದ ಭಾಷೆಯ ಪರಿಚಯವು ಚೆನ್ನಾಗಿ ಉಂಟಾಗುವದರಿಂದ ಮುಂದೆ ವಾಚಕರು ಸಂಸ್ಕೃತಗ್ರಂಥಗಳನ್ನು ಓದಲು ಅನುಕೂಲವಾಗಲಿದೆ.

ಇತಿ
ಸಂಪಾದಕ

ಹೊಳೆನರಸೀಪುರ
೨೦-೯-೨೦೦೦

## ವಿಷಯಗಳ ಅನುಕ್ರಮಣಿಕೆ


| ವಿಷಯ | ಪುಟ |
|---|---|
| ೧. ಪಞ್ಚತನ್ತ್ರಕಮ್-ಕಥಾಮುಖಮ್ | ೧ |
| ೨. ಪಞ್ಚತನ್ತ್ರಕಮ್-ಕಥಾಮುಖಮ್ (ಅನುವೃತ್ತಮ್) | ೪ |
| ೩. ಪಞ್ಚತನ್ತ್ರಕಮ್-ಕಥಾಮುಖಮ್ (ಅನುವೃತ್ತಮ್) | ೬ |
| ೪. ಸಮಸ್ತಪದಗಳು-ದ್ವಂದ್ವ | ೧೧ |
| ೫. ಮಿತ್ರಭೇದಃ | ೧೬ |
| ೬. ಸಮಸ್ತಪದಗಳು (ತತ್ಪುರುಷ, ಕರ್ಮಧಾರಯ) | ೨೧ |
| ೭. ಮಿತ್ರಭೇದಃ (ಅನುವೃತ್ತಃ) | ೨೬ |
| ೮. ಸಮಸ್ತಪದಗಳು (ಬಹುವ್ರೀಹಿ, ನಞ್ಸಮಾಸ, ಅವ್ಯಯೀಭಾವ) | ೩೧ |
| ೯. ಮಿತ್ರಭೇದಃ (ಅನುವೃತ್ತಃ) | ೩೭ |
| ೧೦. ಮಿತ್ರಭೇದಃ (ಅನುವೃತ್ತಃ) | ೪೫ |
| ೧೧. ಮಿತ್ರಭೇದಃ (ಅನುವೃತ್ತಃ) | ೪೮ |
| ೧೨. ಕೆಲವು ಪರೋಕ್ಷಭೂತಕ್ರಿಯಾಪದಗಳು | ೫೩ |
| ೧೩. ಮಿತ್ರಭೇದಃ (ಅನುವೃತ್ತಃ) | ೫೮ |
| ೧೪. ಕೆಲವು ಪರೋಕ್ಷಭೂತಕ್ರಿಯಾಪದಗಳು | ೬೪ |
| ೧೫. ಮಿತ್ರಭೇದಃ (ಅನುವೃತ್ತಃ) | ೭೨ |
| ೧೬. ಪರೋಕ್ಷಭೂತವೂ ಭವಿಷ್ಯದ್ರೂಪಗಳೂ | ೭೮ |
| ೧೭. ಮಿತ್ರಭೇದಃ (ಅನುವೃತ್ತಃ) | ೮೫ |
| ೧೮. ಧಾತುಗಣಗಳ ಎರಡನೆಯ ಗುಂಪು | ೯೦ |

| | | |
|---|---|---|
| ೧೯. | ಮಿತ್ರಭೇದಃ (ಅನುವೃತ್ತಃ) | ೯೮ |
| ೨೦. | ಎರಡನೆಯ ಗಣದ ಧಾತುಗಳು | ೧೦೬ |
| ೨೧. | ಮಿತ್ರಭೇದಃ (ಅನುವೃತ್ತಃ) | ೧೧೨ |
| ೨೨. | ಎರಡನೆಯ ಗಣದ ಧಾತುಗಳು | ೧೧೬ |
| ೨೩. | ಮಿತ್ರಭೇದಃ (ಅನುವೃತ್ತಃ) | ೧೨೨ |
| ೨೪. | ಮೂರನೆಯ ಗಣದ ಧಾತುಗಳು | ೧೨೭ |
| ೨೫. | ಮಿತ್ರಭೇದಃ (ಅನುವೃತ್ತಃ) | ೧೩೨ |
| ೨೬. | ಏಳನೆಯ ಗಣದ ಧಾತುಗಳೂ ವರ್ತಮಾನಕೃದಂತಗಳೂ | ೧೩೪ |
| ೨೭. | ಮಿತ್ರಭೇದಃ (ಅನುವೃತ್ತಃ) | ೧೪೦ |
| ೨೮. | ಮಿತ್ರಭೇದಃ (ಅನುವೃತ್ತಃ) | ೧೪೩ |
| ೨೯. | ಭೂತಕೃದಂತಗಳು | ೧೪೫ |
| ೩೦. | ವಿಧ್ಯಾದ್ಯರ್ಥಕಕೃದಂತಗಳು | ೧೫೧ |
| | ಪರಿಶಿಷ್ಟ | ೧೫೭ |

||ॐ||

# ೩. ಸಂಸ್ಕೃತಭಾಷಾಭ್ಯಾಸ

## १. पञ्चतन्त्रकम् - कथामुखम्

मनवे वाचस्पतये शुक्राय पराशराय ससुताय ।
चाणक्याय च विदुषे नमोऽस्तु नयशास्त्रकर्तृभ्यः ।।१।।

सकलार्थशास्त्रसारं जगति समालोक्य विष्णुशर्मेदम् ।
तन्त्रै : पञ्चभिरेतच्चकार सुमनोहरं शास्त्रम् ।।२।।

ಇಲ್ಲಿ ಗ್ರಂಥಕರ್ತನು ಮೊದಲನೆಯ ಶ್ಲೋಕದಲ್ಲಿ ನೀತಿಶಾಸ್ತ್ರವನ್ನು ರಚಿಸಿದ ಹಿಂದಿನವರನ್ನು ನಮಸ್ಕರಿಸುತ್ತಾನೆ. ಈ **ಪಂಚತಂತ್ರ**ಕವೆಂಬ ಶಾಸ್ತ್ರವು ಎಲ್ಲಾ ಅರ್ಥಶಾಸ್ತ್ರಗಳ ಸಾರ ; ಇದನ್ನು **ವಿಷ್ಣುಶರ್ಮ**ನು ಮಾಡಿದನು ಎಂಬುದು ಎರಡನೆಯ ಶ್ಲೋಕದ ಅರ್ಥ. ('ನಮೋऽಸ್ತು' - ಇಲ್ಲಿ ನಮಃ ಎಂಬ ಅವ್ಯಯಕ್ಕೆ ನಮಸ್ಕಾರವು ಎಂದರ್ಥ.)

ಇಲ್ಲಿಯ ಚತುರ್ಥೀವಿಭಕ್ತ್ಯಂತವಾದ ಪದಗಳಿಗೆ ಮೂರೂ ವಚನಗಳ ರೂಪಗಳನ್ನು ಎರಡನೆಯ ಪುಸ್ತಕದ ಸಹಾಯದಿಂದ ಬರೆಯಿರಿ.

१. तद्यथानुश्रूयते - अस्ति दाक्षिणात्ये जनपदे महिलारोप्यं नाम नगरम् । तत्र सकलार्थिसार्थकल्पद्रुमः प्रवरनृप - मुकुटमणि - मरीचि मञ्जरी - चर्चित - चरणयुगलः, सकलकला - पारंगतः, अमरशक्तिर्नाम राजा बभूव (अभवत्)[1] । तस्य त्रयः पुत्राः परमदुर्मेधसः बहुशक्तिः[2], उग्रशक्तिः, अनन्तशक्तिश्च - इतिनामानो बभूवुः (अभवन्) ।।

(ಅದು ಹೇಗೆಂದರೆ, ಹೀಗೆ ಹೇಳಲ್ಪಟ್ಟಿದೆ =) ಹೀಗೆಂದು ಹೇಳುತ್ತಾರೆ : ದಕ್ಷಿಣದಲ್ಲಿರುವ ದೇಶದಲ್ಲಿ **ಮಹಿಲಾರೋಪ್ಯ**ವೆಂಬ ನಗರವುಂಟು. ಅಲ್ಲಿ ಸಕಲ

1. ಕಂಸದಲ್ಲಿಟ್ಟಿರುವದು ಅದೇ ಅರ್ಥದ (ಪರ್ಯಾಯ)ಶಬ್ದ.
2. 'ವಸುಶಕ್ತಿಃ' ಎಂದು ಪಾಠಾಂತರ.

ಯಾಚಕರ ಗುಂಪಿಗೆ ಕಲ್ಪವೃಕ್ಷವಾದವನೂ, ಶ್ರೇಷ್ಠರಾದ ಅರಸರುಗಳ ಕಿರೀಟದಲ್ಲಿ(ರುವ) ರತ್ನಗಳ ಕಿರಣಗಳ (ಗೊಂಚಲಿನಿಂದ =) ಸಮೂಹದಿಂದ ಬಳಿದ ಪಾದಯುಗಲವುಳ್ಳವನೂ ಸಕಲಕಲೆಗಳ (ಆಚೆಯ ದಡವನ್ನು ಕಂಡವನೂ = ಅವನ್ನು) ಚೆನ್ನಾಗಿ ಬಲ್ಲವನೂ (ಆದ) ಅಮರಶಕ್ತಿ ಎಂಬ ರಾಜನು ಇದ್ದನು. ಅವನಿಗೆ ಬಲು (ಕೆಟ್ಟಬುದ್ಧಿಯುಳ್ಳ) ದಡ್ಡರಾದ **ಬಹುಶಕ್ತಿ, ಉಗ್ರಶಕ್ತಿ, ಅನಂತಶಕ್ತಿ**, ಎಂಬೀ ಹೆಸರಿನ ಮೂವರು ಮಕ್ಕಳು ಇದ್ದರು.

२. अथ राजा तान् शास्त्रविमुखान् आलोक्य, सचिवान् आहूय प्रोवाच (उक्तवान्), 'भोः, ज्ञातमेतद् भवद्भिः, यन्मम एते त्रयोऽपि पुत्राः शास्त्रविमुखाः, विवेकरहिताश्च । तदेतान् पश्यतो मे महदपि राज्यं न सौख्यमावहति । तदेतेषां यथा बुद्धिप्रकाशो भवति तथा कोऽप्युपायोऽनुष्ठीयताम् । अत्र च मद्दत्तां वृत्तिं भुञ्जानानां पण्डितानां पञ्चशती तिष्ठति । ततो यथा मम मनोरथाः सिद्धिं यान्ति तथा अनुष्ठीयताम्' इति ॥

ಬಳಿಕ ರಾಜನು (ಶಾಸ್ತ್ರದಿಂದ ಹಿಮ್ಮೆಟ್ಟಿರುವ =) ಶಾಸ್ತ್ರಗಳ ಅಭ್ಯಾಸಕ್ಕೆ ಒಲಿಯದಿರುವ ಅವರನ್ನು ಕಂಡು, ಮಂತ್ರಿಗಳನ್ನು ಕರೆದು (ಹೀಗೆಂದು) ಹೇಳಿದನು : "ಎಲೈ, ನನ್ನ ಈ ಮೂರೂ ಮಕ್ಕಳು ಶಾಸ್ತ್ರವಿಮುಖರು, ವಿವೇಕವಿಲ್ಲದವರು-ಎಂಬಿದು (ನಿಮ್ಮಿಂದ ತಿಳಿಯಲ್ಪಟ್ಟೇ ಇದೆ =)ನಿಮಗೆ ತಿಳಿದೇ ಇದೆ. ಆದ್ದರಿಂದ ಇವರನ್ನು ಕಾಣುತ್ತಿರುವ ನನಗೆ (ದೊಡ್ಡದಾಗಿದ್ದರೂ ರಾಜ್ಯವು=) ದೊಡ್ಡ ರಾಜ್ಯವು ಕೂಡ (ಸುಖವನ್ನು ತರುತ್ತಿಲ್ಲ =) ಸುಖವನ್ನುಂಟುಮಾಡುತ್ತಿಲ್ಲ. ಆದ್ದರಿಂದ ಇವರಿಗೆ (ಹೇಗೆ ಬುದ್ಧಿಯ ಪ್ರಕಾಶವು ಆಗುತ್ತದೆಯೋ ಹಾಗೆ =) ಬುದ್ಧಿಯು ವಿಕಾಸವಾಗುವಂತೆ ಯಾವದಾದರೊಂದು (ಉಪಾಯವು ಮಾಡಲ್ಪಡಲಿ=) ಉಪಾಯವನ್ನು (ನೀವು ಮಾಡಬೇಕು. ಮತ್ತು ಇಲ್ಲಿ (ನನ್ನಿಂದ ಕೊಡಲ್ಪಟ್ಟಿರುವ =) ನಾನು ದಾನಮಾಡಿರುವ ವೃತ್ತಿಯನ್ನು ಭೋಗಿಸುತ್ತಿರುವ (ಪಂಡಿತರ ಪಂಚಶತಿಯು ಇರುತ್ತದೆ=) ಐನೂರು ಪಂಡಿತರ ಗುಂಪು ಇದೆ. ಆದ್ದರಿಂದ (ಹೇಗೆ ನನ್ನ ಮನೋರಥಗಳು ಸಿದ್ಧಿಯನ್ನು ಹೊಂದುವವೋ ಹಾಗೆ =) ನನ್ನ ಮನೋರಥವು ಕೈಗೂಡುವಂತೆ (ಮಾಡಲ್ಪಡಲಿ =) ಮಾಡಬೇಕು".

## ಚಿಂತನ

ಈ 'ಪಂಚತಂತ್ರಕ' ಅಥವಾ 'ಪಂಚತಂತ್ರ' ಎಂಬ ಗ್ರಂಥವು ಹಿಂದಿನ ಮಿಕ್ಕ ರಾಜನೀತಿಶಾಸ್ತ್ರಗಳಿಗಿಂತಲೂ ಹೆಚ್ಚು ಜನಾನುರಾಗಕ್ಕೆ ಪಾತ್ರವಾಗಿರುವದಕ್ಕೆ ಇದು ಕಥೆಗಳ ರೂಪದಲ್ಲಿ ವಿನೋದದಿಂದಲೇ ನೀತಿಯನ್ನು ಕಲಿಸುವದಕ್ಕೆ ಹೊರಟಿರುವದೇ ಕಾರಣ. ಇದು ಕ್ರಮಕ್ರಮವಾಗಿ ಪಲ್ಲವಿ, ಅರಬ್ಬಿ, ಗ್ರೀಕ್, ಹೀಬ್ರು, ಹಳೆಯ ಸ್ಪಾನಿಷ್, ಲ್ಯಾಟಿನ್, ಜರ್ಮನ್, ಇಟಾಲಿಯನ್, ಇಂಗ್ಲಿಷ್ - ಈ ಭಾಷೆಗಳಿಗೆ ಪರಿವರ್ತಿತ ವಾಗಿದೆ. ಲೇಯಾಸ್, ಸಯಾಂ, ಯವದ್ವೀಪ - ಈ ಏಷ್ಯಾಖಂಡದ ಭಾಗಗಳ ಭಾಷೆ ಗಳಲ್ಲಿಯೂ ಇದರ ಅನುವಾದಗಳು ಆಗಿರುವದಾಗಿ ಈಚೆಗೆ ತಿಳಿದುಬಂದಿದೆ. ಬಹಳ ಈಚೆಗೆ ರಷ್ಯದವರೂ ಇದನ್ನು ತಮ್ಮ ಭಾಷೆಗೆ ಇಳಿಸಿಕೊಂಡಿರುತ್ತಾರೆ. ನಾರಾಯಣ ಪಂಡಿತನು ಬರೆದಿರುವ 'ಹಿತೋಪದೇಶ'ವೆಂಬ ಸಂಸ್ಕೃತಗ್ರಂಥದಲ್ಲಿ ಇದರ ರೂಪಾಂತರ ವಿದೆ. ಈ ಗ್ರಂಥವು ಗದ್ಯ, ಪದ್ಯ - ಎರಡರ ಮಿಶ್ರಣವಾಗಿದೆ. ನಾವು ಇದರ ಗದ್ಯಭಾಗ ವನ್ನೇ ಮುಖ್ಯವಾಗಿ ಎತ್ತಿ ಈ ಪುಸ್ತಕದಲ್ಲಿ ಬರೆದುಕೊಂಡಿದೇವೆ.

೧. ಈ ಪಾಠದಲ್ಲಿ ಅನೇಕ ಸಮಸ್ತಪದಗಳು (ಹಲವು ಪದಗಳು ಒಟ್ಟಾಗಿ ಒಂದು ಪದವಾಗಿರುವಂಥವು) ಬಂದಿವೆ. ಅವುಗಳ ಅರ್ಥವು ಸ್ಪಷ್ಟವಾಗುವ ಹಾಗೆ ವಿಭಕ್ತಿಪ್ರತ್ಯಯಗಳನ್ನು ಸೇರಿಸಿ ಬಿಡಿಸಿ ಬರೆಯುವ ವಾಕ್ಯಗಳನ್ನು ವಿಗ್ರಹವಾಕ್ಯಗಳೆನ್ನುವರು. ಉದಾಹರಣೆಗೆ :

| ಸಮಸ್ತಪದ | | ವಿಗ್ರಹವಾಕ್ಯ |
|---|---|---|
| सकलार्थशास्त्रसारम् | - | सकलस्य अर्थशास्त्रस्य सारम् । |
| सकलार्थिसार्थकल्पद्रुमः | - | सकलानां अर्थिनां सार्थस्य कल्पद्रुम इव (स्थितः) । |
| परमदुर्मेधसः | - | परमं दुष्टा मेधा येषां ते । |
| शास्त्रविमुखाः | - | शास्त्रेभ्यो विमुखाः । |
| विवेकरहिताः | - | विवेकेन रहिताः |

ಮುಂದಿನ ಪಾಠಗಳಲ್ಲಿ ವಿಗ್ರಹವಾಕ್ಯಗಳನ್ನು ಬಿಡಿಸುವ ಬಗೆಯನ್ನು ತಿಳಿಸಿಕೊಡಲಾಗುವದು.

೨. **'ಪ್ರೋವಾಚ'** ಇದು 'ವಚ್' ಧಾತುವಿನ ಪರೋಕ್ಷಭೂತ. ಅನದ್ಯತನವಲ್ಲದ ಭೂತರೂಪಗಳ ಅರ್ಥವನ್ನು ಅನದ್ಯತನರೂಪದಲ್ಲಿ[1] ಅಲ್ಲಲ್ಲಿಯೇ ಕಂಸದಲ್ಲಿ ಬರೆದಿದೆ.

---

1. ಅನದ್ಯತನರೂಪಗಳನ್ನು ೨ನೆಯ ಭಾಗದ ೬೫ನೆಯ ಪುಟದಲ್ಲಿ ಖಂಡ ೬೩ ರಲ್ಲಿ ಕೊಟ್ಟಿದೆ.

## ಅಭ್ಯಾಸ ೧

೧. ಈ ಪ್ರಶ್ನೆಗಳಿಗೆ ಅರ್ಥವನ್ನು ಬರೆದು ಸಂಸ್ಕೃತದಲ್ಲಿ ಉತ್ತರವನ್ನು ಬರೆಯಿರಿ :

१. महिलारोप्यं नाम नगरं कुत्रास्ति ? २. तस्य नगरस्य राज्ञः किं नाम ? ३. राज्ञः कति पुत्रा आसन् ? ४. तस्य ज्येष्ठपुत्रस्य किं नाम ? ५. मध्यमः किं नाम ? ६. अथ कनिष्ठः ? ७. अपि राज्ञः सर्वे पुत्राः शास्त्रपारंगताः ?

೨. ಈ ವಾಕ್ಯಗಳು ಪೂರ್ಣವಾಗುವಂತೆ ಪದಗಳನ್ನು ಜೋಡಿಸಿರಿ :

१. अमरशक्तिः सकलानां अर्थिनां.... आसीत् । २. तस्य महदपि राज्यं न सौख्यम् आवहति, यतः .... । ३. भोः, ज्ञातमेव भवद्भिः, यत्पुत्रा मम .... । ४. राज्ञा पञ्चशतब्राह्मणेभ्यो .... । ५. मम पुत्राणां बुद्धविकासो यथा भवेत् तथा भवन्तः ..... ।

## २. पञ्चतन्त्रककथामुखम् (अनुवृत्तम्)

३. तत्रैकः प्रोवाच - 'देव, द्वादशभिर्वर्षैर्व्याकरणं श्रूयते । ततो धर्मशास्त्राणि मन्वादीनि, अर्थशास्त्राणि चाणक्यादीनि, कामशास्त्राणि वात्स्यायनादीनि । एवं च ततो धर्मार्थकामशास्त्राणि ज्ञायन्ते । ततः प्रतिबोधनं भवति ।।

(ಅಲ್ಲಿ =) ಅವರಲ್ಲಿ ಒಬ್ಬನು (ಹೀಗೆ)ಂದನು : "ದೇವ, ಹನ್ನೆರಡು ವರ್ಷಗಳಲ್ಲಿ ವ್ಯಾಕರಣವು (ಶ್ರವಣಮಾಡಲ್ಪಡುತ್ತದೆ =) ತಿಳಿಯುತ್ತದೆ. ಆಮೇಲೆ ಮನ್ವಾದಿ ಧರ್ಮಶಾಸ್ತ್ರಗಳು, ಚಾಣಕ್ಯಾದಿ ಅರ್ಥಶಾಸ್ತ್ರಗಳು, ವಾತ್ಸ್ಯಾಯನಾದಿ ಕಾಮಶಾಸ್ತ್ರಗಳು. ಅಂತೂ ಹೀಗೆ ಆ ಬಳಿಕ ಧರ್ಮಾರ್ಥಕಾಮಶಾಸ್ತ್ರಗಳು (ತಿಳಿಯಲ್ಪಡುತ್ತವೆ =)ತಿಳಿಯುತ್ತವೆ. ಆಮೇಲೆ (ತಿಳಿಸಿಕೊಟ್ಟದ್ದು ಆಗುತ್ತದೆ =) ಶಿಕ್ಷಣವು (ಆಗುತ್ತದೆ =) ಮುಗಿಯುತ್ತದೆ".

४. अथ तन्मध्यतः सुमतिर्नाम सचिवः प्राह - 'अशाश्वतोऽयं जीवितव्यविषयः । प्रभूतकालज्ञेयानि शब्दशास्त्राणि । तत् संक्षेपमात्रं

शास्त्रं किञ्चित्, एतेषां प्रबोधनार्थं चिन्त्यताम् । तदत्रास्ति विष्णुशर्मा नाम ब्राह्मणः सकलशास्त्रपारंगतः, छात्रसंसदि लब्धकीर्तिः । तस्मै समर्पयतु एतान् । स नूनं द्राक् प्रबुद्धान् करिष्यति, इति ॥

ಈಗ ಅವರುಗಳೊಳಗಿಂದ (ಎದ್ದ) ಸುಮತಿ ಎಂಬ ಮಂತ್ರಿ ಇಂತೆಂದನು : "ಈ (ಬದುಕಿನ ವಿಷಯವು =) ಬಾಳಿನ ಪ್ರಮಾಣವು ಅನಿತ್ಯ. ಶಬ್ದಶಾಸ್ತ್ರಗಳು ಬಹುಕಾಲಕ್ಕೆ ತಿಳಿಯುಬರುವಂತಹವು. ಆದ್ದರಿಂದ (ಸಂಕ್ಷೇಪವಾದ ಪ್ರಮಾಣ ವುಳ್ಳ =) ಸಣ್ಣದಾಗಿರುವ ಯಾವದಾದರೊಂದು (ಶಾಸ್ತ್ರವು ಇವರಿಗೆ ಕಲಿಸುವದಕ್ಕಾಗಿ ಚಿಂತಿಸಲ್ಪಡಲಿ =) ಶಾಸ್ತ್ರವನ್ನು ಇವರಿಗೆ ಕಲಿಯಿಸುವದಕ್ಕಾಗಿ ಆಲೋಚಿಸಿ ನೋಡ ಬೇಕು. ಆದ್ದರಿಂದ ಇಲ್ಲಿ ಸಕಲಶಾಸ್ತ್ರಗಳನ್ನೂ ಚೆನ್ನಾಗಿ ಬಲ್ಲವನೂ, ಶಿಷ್ಯರ (ಸಭೆ ಯಲ್ಲಿ =) ಪ್ರಪಂಚದಲ್ಲಿ (ಪಡೆಯಲ್ಪಟ್ಟ ಕೀರ್ತಿಯುಳ್ಳವನೂ =) ಕೀರ್ತಿಯನ್ನು ಪಡೆದವನೂ ಆದ ವಿಷ್ಣುಶರ್ಮನೆಂಬ ಬ್ರಾಹ್ಮಣನಿದ್ದಾನೆ. ಅವನಿಗೆ ಇವರನ್ನು ಒಪ್ಪಿಸು. ಅವನು ನಿಶ್ಚಯವಾಗಿಯೂ ಬೇಗ ಜಾಣರನ್ನಾಗಿ ಮಾಡುವನು."

## ಚಿಂತನ

೧. ಕಥಾಮುಖವೆಂದರೆ ಕಥೆಗೆ ದ್ವಾರ. ಕಥೆಗೆ ಪ್ರಾರಂಭ. 'ಅನುವೃತ್ತಮ್' ಎಂದರೆ ಮುಂದುವರೆದದ್ದು.

೨. 'ತತ್' ಎಂಬ ಶಬ್ದವು ವಾಕ್ಯದ ಆದಿಯಲ್ಲಿ 'ಆದ್ದರಿಂದ' ಎಂಬರ್ಥದಲ್ಲಿ ಬರುತ್ತದೆ. 'ತದೇತಾನ್ ಪಶ್ಯತಃ' (೨)[1], 'ತದೇತೇಷಾಂ ಯಥಾ ಬುದ್ಧಿಪ್ರಕಾಶೋ ಭವತಿ' (೨), 'ತತ್ ಸಂಕ್ಷೇಪಮಾತ್ರಮ್' (೩), 'ತದತ್ರಾಸ್ತಿ' (೪) - ಇವುಗಳ ಅರ್ಥವನ್ನು ನೋಡಿ. ಕನ್ನಡಕ್ಕೆ ಈ 'ತತ್' ಶಬ್ದಗಳನ್ನು ಕೆಲವು ಕಡೆ ಬಿಟ್ಟರೂ ಸಾಗುತ್ತದೆ ; ಸಂಸ್ಕೃತದ ಮರ್ಯಾದೆಗೆ ಅವು ಬೇಕೆನಿಸುತ್ತವೆ.

೩. 'ದ್ವಾದಶಭಿರ್ವರ್ಷೈರ್ವ್ಯಾಕರಣಂ ಶ್ರೂಯತೇ' - 'ಇಂತಿಷ್ಟು ಕಾಲದೊಳಗೆ ಸಮಾಪ್ತಿ' ಎಂಬರ್ಥವನ್ನು ತಿಳಿಸುವ ಕಾಲವಾಚಕಕ್ಕೆ ತೃತೀಯಾವಿಭಕ್ತಿ ಬೇಕು ; ಆದರೆ 'ವರೆಗೂ' ಎಂಬರ್ಥವನ್ನು ತಿಳಿಸುವದಕ್ಕೆ ದ್ವಿತೀಯಾವಿಭಕ್ತಿ ಬೇಕು. ಉದಾ : ಮಾಸೇನ ಅಧೀತೋ ಭವತಿ (ತಿಂಗಳೊಳಗೆ ಓದಿದ್ದಾಗುತ್ತದೆ) ; ಮಾಸಮ್ ಅಧೀತೇ (ತಿಂಗಳವರೆಗೂ ಓದುತ್ತಾನೆ.)

೪. ಸಂಸ್ಕೃತದಲ್ಲಿ ಕರ್ಮಣಿಪ್ರಯೋಗವು ಹೆಚ್ಚು ಬಳಕೆಯಲ್ಲಿರುತ್ತದೆ. ಉದಾ : ಅನುಶ್ರೂಯತೇ, ಅನುಷ್ಠೀಯತಾಮ್, ಜ್ಞಾಯನ್ತೇ, ಚಿನ್ತ್ಯತಾಮ್. ಇವುಗಳನ್ನು ಕನ್ನಡಕ್ಕೆ ಒಪ್ಪುವಂತೆ ಅನುವಾದಮಾಡಬೇಕು.

---

1. ಹೀಗೆ ಕಂಸದಲ್ಲಿ ಅಂಕೆಯನ್ನಿಟ್ಟಿದ್ದರೆ ಈ ಪುಸ್ತಕದ ಖಂಡಸಂಖ್ಯೆಯೆಂದು ತಿಳಿಯಬೇಕು.

೫. ಧರ್ಮ, ಅರ್ಥ, ಕಾಮ - ಈ ಮೂರರ ಒಟ್ಟಿಗೆ 'ತ್ರಿವರ್ಗ' ಎಂದು ಹೆಸರು. ಮೋಕ್ಷವೂ ಸೇರಿದರೆ ಪುರುಷಾರ್ಥಚತುಷ್ಟಯ.

೬. 'ಪ್ರಬುದ್ಧಾನ್' - 'ಬುಧ್' ಎಂಬ ಧಾತುವಿಗೆ ಭೂತಕೃದಂತಕ್ಕೆ 'ಪ್ರ' ಎಂಬ ಉಪಸರ್ಗವು ಸೇರಿದ ಭೂತಕೃದಂತವಿದು.

೭. 'ತನ್ಮಧ್ಯತಃ' ಅವರ ನಡುವೆಯಿಂದ, ಆ ಮಂತ್ರಿಗಳೊಳಗೆ ಎಂದರ್ಥ ; ಹಿಂದಿನ ಖಂಡದಲ್ಲಿರುವ 'ತತ್ರ' ಎಂಬುದರ ಅರ್ಥವೇ ಇದಕ್ಕೂ ಇದೆ.

## ಅಭ್ಯಾಸ ೨

೧. ಇವಕ್ಕೆ ಸಂಸ್ಕೃತಭಾಷೆಯಲ್ಲಿ ಅರ್ಥವನ್ನು ಬರೆಯಿರಿ :

विवेकरहिताः, कोऽप्युपायः, अनुष्ठीयताम्, जीवितव्यविषयः ।

೨. ಇಲ್ಲಿ ಬಿಟ್ಟಿರುವ ಮಾತುಗಳನ್ನು ಭರ್ತಿಮಾಡಿ ವಾಕ್ಯಗಳನ್ನು ಬರೆಯಿರಿ :

मनुः .... कर्ता । .... अर्थशास्त्रस्य निर्माता । .... कामशास्त्रं रचितम् ।

೩. ಈ ವಾಕ್ಯಗಳನ್ನು ಕನ್ನಡಿಸಿರಿ :

सर्वाणि शास्त्राणि प्रभूतेन कालेन ज्ञायन्ते । आयुषः परिमाणं तु स्वल्पमेव । बहवश्च विघ्नाः । तस्मात् शास्त्रेषु यत्सारं तद्ग्राह्यम् ॥

೪. ಈ ವಾಕ್ಯವನ್ನು यद्यपि - तथापि ಎಂಬ ಮಾತುಗಳನ್ನು ಉಪಯೋಗಿಸಿ ಬರೆಯಿರಿ.

'महदपि राज्यं मे न सौख्यम् आवहति ।'

೫. ಈ ವಾಕ್ಯಗಳಲ್ಲಿ ಕರ್ತೃಪದವು (ಉದ್ದೇಶವು - subject) ಯಾವುದು ?

'शास्त्रं किञ्चित् एतेषां प्रबोधनार्थं चिन्त्यताम्' ; तस्मै समर्पयतु एतान् ।

## ३. पञ्चतन्त्रककथामुखम् (अनुवृत्तम्)

५. स राजा तदाकर्ण्य विष्णुशर्माणम् आहूय प्रोवाच - 'भो भगवन्, मदनुग्रहार्थम् एतान् अर्थशास्त्रं प्रति द्राग् यथा अनन्यसदृशान् विदधासि (= करोषि) तथा कुरु । तदा अहं त्वां शासनशतेन योजयिष्यामि' ॥

ಆ ರಾಜನು ಅದನ್ನು ಕೇಳಿ ವಿಷ್ಣುಶರ್ಮನನ್ನು ಕರೆದು ಇಂತೆಂದನು : ''(ಎಲೈ ಪೂಜ್ಯನೆ, =) ಪೂಜ್ಯರೆ, ನನಗೆ ಅನುಗ್ರಹ (ಮಾಡುವದ)ಕ್ಕಾಗಿ ಇವರನ್ನು (ಅರ್ಥಶಾಸ್ತ್ರವನ್ನು ಕುರಿತು =) ಅರ್ಥಶಾಸ್ತ್ರದ ವಿಷಯಕ್ಕೆ ಬೇಗ (ಹೇಗೆ ಮತ್ತೊಬ್ಬರು

ಸಮಾನರಿಲ್ಲದವರನ್ನಾಗಿ ಮಾಡುವೆಯೋ ಹಾಗೆ=) ಇವರಿಗೆ ಸಮಾನರು ಬೇರೊಬ್ಬರು ಇಲ್ಲವೆಂಬಂತೆ (ಮಾಡು=) ಮಾಡಿರಿ. ಆಗ ನಾನು (ನಿನ್ನನ್ನು ಶಾಸನಗಳ ನೂರರಿಂದ ಕೂಡಿಸುವೆನು =) ನಿಮಗೆ ನೂರು ಉಂಬಳಿಗಳನ್ನು ಹಾಕಿ ಕೊಡುವೆನು.''

६. अथ विष्णुशर्मा तं राजानम् ऊचे (= उक्तवान्) - 'देव, श्रूयतां मे तथ्यवचनम् । नाहं विद्याविक्रयं शासनशतेनापि करोमि । पुनरेतान् तव पुत्रान् मासषट्केन यदि नीतिशास्त्रज्ञान् न करोमि ततः स्वनामत्यागं करोमि' ।।

ಆಗ ವಿಷ್ಣುಶರ್ಮನು ರಾಜನನ್ನು ಕುರಿತು ಇಂತೆಂದನು : ''ದೇವ, ನನ್ನ ನಿಜವಾದ (ಮಾತು ಕೇಳಲ್ಪಡಲಿ=) ಮಾತನ್ನು ಕೇಳೋಣಾಗಬೇಕು. ನಾನು ನೂರು ಉಂಬಳಿಗೂ ವಿದ್ಯೆಯ ವಿಕ್ರಯವನ್ನು ಮಾಡುವದಿಲ್ಲ. ಆದರೆ ಆರು ತಿಂಗಳೊಳಗೆ ಈ ನಿನ್ನ (ಮಕ್ಕಳನ್ನು ನೀತಿಶಾಸ್ತ್ರಜ್ಞರನ್ನಾಗಿ ಮಾಡದೆ ಇರುವೆನಾದರೆ ಆಗ =) ಮಕ್ಕಳಿಗೆ ನೀತಿಶಾಸ್ತ್ರವನ್ನು ಕಲಿಸದೆಹೋದರೆ ಆಗ ನನ್ನ (ಹೆಸರಿನ ತ್ಯಾಗವನ್ನು ಮಾಡು ವೆನು =)ಹೆಸರನ್ನು ಬಿಟ್ಟುಬಿಡುವೆನು.''

## ಚಿಂತನ

೧. ಯಥಾ ಬುದ್ಧಿಪ್ರಕಾಶೋ ಭವತಿ, ತಥಾ ಕೋಽಪ್ಯುಪಾಯೋಽನುಷ್ಠೀಯತಾಮ್ ಯಥಾ ಮಮ ಮನೋರಥಾಃ ಸಿದ್ಧಿಂ ಯಾನ್ತಿ, ತಥಾ ಅನುಷ್ಠೀಯತಾಮ್ ಯಥಾ ಅನನ್ಯಸದೃಶಾನ್ ವಿದಧಾಸಿ, ತಥಾ ಕುರು ।

ಈ ವಾಕ್ಯಗಳಲ್ಲಿ ಯಥಾ-ತಥಾ ಎಂಬ ನಿತ್ಯಸಂಬದ್ಧಾವ್ಯಯ (Correlative adverbs) ಬಂದಿವೆ. ಇಂಥ ವಾಕ್ಯಗಳನ್ನು ಇದ್ದಂತೆ ಅನುವಾದಮಾಡಿದರೆ ಕನ್ನಡಕ್ಕೆ ಒಪ್ಪಾಗುವದಿಲ್ಲ ; 'ಬುದ್ಧಿ ಪ್ರಕಾಶವಾಗುವಂತೆ' ಎಂಬ ರೀತಿಯಲ್ಲಿ ಕನ್ನಡಿಸಿಕೊಳ್ಳಬೇಕು.

ಯದಿ ನ ಕರೋಮಿ, ತತಃ ಸ್ವನಾಮತ್ಯಾಗಂ ಕರೋಮಿ ।

ಇಲ್ಲಿಯೂ 'ಯದಿ-ತತಃ' ಎಂಬ ನಿತ್ಯಸಂಬದ್ಧಾವ್ಯಯಗಳಿವೆ. **'ತತಃ'** ಎಂಬುದಕ್ಕೆ ಬದಲು **'ತರ್ಹಿ', 'ತದಾ'** ಎಂದೂ ಉಪಯೋಗಿಸಬಹುದು. ಇಂಥ ಸಂದರ್ಭಗಳಲ್ಲಿ **'ತತಃ'** ಮುಂತಾದ ಮಾತುಗಳನ್ನು ಕನ್ನಡಿಸದಿದ್ದರೂ ಅರ್ಥವಾಗುತ್ತದೆ.

**೨. ನಾಹಂ ವಿದ್ಯಾವಿಕ್ರಯಂ ಶಾಸನಶತೇನಾಪಿ ಕರೋಮಿ ।** ಕ್ರಯಾರ್ಥವನ್ನು ಹೇಳುವ ಮಾತುಗಳ ಸಂಬಂಧವಿರುವಾಗ **ಎಷ್ಟಕ್ಕೆ ಮಾರುತ್ತಾರೋ ಅಥವಾ ಕೊಳ್ಳುತ್ತಾರೋ** ಅದರ ಹೆಸರು **ತೃತೀಯಾವಿಭಕ್ತಿಯಲ್ಲಿರಬೇಕು.**

ವಿದ್ಯಾವಿಕ್ರಯಂ ಕರೋಮಿ = ವಿದ್ಯಾಂ ವಿಕ್ರೀಣಾಮಿ ; ಸ್ವನಾಮತ್ಯಾಗಂ ಕರೋಮಿ = ಸ್ವನಾಮ ತ್ಯಜಾಮಿ. ಕೃ ಎಂಬ ಧಾತುವಿನಿಂದಾದ ಕ್ರಿಯೆಗೆ ಭಾವನಾಮವನ್ನು ಸೇರಿಸಿದರೆ ಆಯಾ ಕಾಲದ ಅಥವಾ ರೂಪದ ಕ್ರಿಯಾಪದದ ಅರ್ಥ. (ಪು. ೧೧೦)[1]

೩. ಬಭೂವ (ಇದ್ದನು), ಬಭೂವುಃ (ಇದ್ದರು), ಪ್ರೋವಾಚ (ಹೇಳಿದನು), ಊಚೇ (ಹೇಳಿದನು) - ಇವು ಪರೋಕ್ಷಭೂತಕಾಲದ (ಪು. ೬೪) ರೂಪಗಳು. ಈ ರೂಪದ ವಿಷಯವನ್ನು ಮುಂದೆ ವಿವರಿಸುವವರೆಗೂ ಆಯಾ ರೂಪದ ಮುಂದೆ ಅದೇ ಅರ್ಥದ ಅನದ್ಯತನ ಭೂತ (ಪು. ೬೫-೬೬) ಅಥವಾ ಭೂತಕೃದಂತದ ರೂಪವನ್ನು (ಪು. ೮೪-೯೦) ಕಂಸದಲ್ಲಿಟ್ಟು ತೋರಿಸುವೆವು.

## ಅಭ್ಯಾಸ - ೩

१. राजा विष्णुशर्माणं प्रोवाच (उक्तः) । २. विष्णुशर्मा राजानम् ऊचे (उक्तः) । ३. तस्मै समर्पयतु (समर्प्यन्ताम्) एतान् ।।

ಕಂಸಗಳಲ್ಲಿಟ್ಟಿರುವ ಮಾತುಗಳನ್ನು ಉಪಯೋಗಿಸಿ ವಾಕ್ಯಗಳನ್ನು ರೂಪಾಂತರದಲ್ಲಿ ಬರೆಯಿರಿ.

२. अस्य रुचकस्य कोऽर्घः ? कति रूप्यकैरिमं रुचकं विक्रीणासि ? रुचकस्यास्य मूल्यं कियत् ? कियता मूल्येनैष रुचकः क्रीयते ? अस्य रुचकस्य अर्घः कियान् स्यात् ?

ಈ ವಾಕ್ಯಗಳಿಗೆಲ್ಲ 'ಈ ಸರಿಗೆಯ ಬೆಲೆಯೆಷ್ಟು ?' - ಎಂಬ ಅಭಿಪ್ರಾಯವೇ ಇದೆ. ವಾಕ್ಯಗಳನ್ನು ರೂಪಕ್ಕೆ ಅನುಗುಣವಾಗಿ ಕನ್ನಡಿಸಿ.

३. अस्य रुचकस्य शतं रूप्यकाणि भवन्ति । शतेन रूप्यकैरिमं रुचकं विक्रीणामि । रुचकस्यास्य मूल्यं शतं रूप्यकाणि भवन्ति । शतरूप्यकैरयं रुचकः क्रीयते । अस्य रुचकस्य अर्घः शतं रूप्यकाणि ।।

ಮೇಲಿನ ಪ್ರಶ್ನೆಗಳಿಗೆ ಇವು ಉತ್ತರಗಳು. ಇವನ್ನು ಕನ್ನಡಿಸಿರಿ. क्रीयते = ಕೊಳ್ಳಲ್ಪಡುತ್ತದೆ, विक्रीयते = ಮಾರಲ್ಪಡುತ್ತದೆ.

---

1. ( ) ಈ ಕಂಸದಲ್ಲಿರುವ ಪು. ಎಂಬ ಸಂಕೇತವು ಸಂಸ್ಕೃತಭಾಷಾಭ್ಯಾಸದ ೨ ನೆಯ ಭಾಗದ ಪುಟಗಳನ್ನು ಸೂಚಿಸುತ್ತದೆ. [ ] ಈ ಕಂಸದಲ್ಲಿನ ಪು. ಎಂಬುದು ಇದೇ ಭಾಗದ ಪುಟಗಳನ್ನು ಸೂಚಿಸುತ್ತದೆ.

७. अथासौ राजा तां ब्राह्मणस्य असंभाव्यां प्रतिज्ञां श्रुत्वा ससचिवः प्रहृष्टो विस्मयान्वितः, तस्मै सादरं तान् कुमारान् समर्प्य परां निर्वृतिम् आजगाम (= आगच्छत्) । विष्णुशर्मणापि तानादाय तदर्थं मित्रभेद - मित्रप्राप्ति-काकोलूकीय-लब्धप्रणाशा-परीक्षितकारकाणीति पञ्च तन्त्राणि रचयित्वा पाठितास्ते राजपुत्राः । तेऽपि तानि अधीत्य मासषट्केन यथोक्ताः संवृत्ताः । ततः प्रभृति एतत् पञ्चतन्त्रकं नाम नीतिशास्त्रं बालावबोधनार्थं भूतले प्रवृत्तम् । किं बहुना ?

अधीते य इदं नित्यं नीतिशास्त्रं शृणोति च ।
न पराभवमाप्नोति शक्रादपि कदाचन ।।

## इति कथामुखम्

ಆಗ ಆ ರಾಜನು ಬ್ರಾಹ್ಮಣನ (ಆಗಬಹುದೆನ್ನಲಾಗದ =) ನಂಬಲಾಗದ ಆ ಪ್ರತಿಜ್ಞೆಯನ್ನು ಕೇಳಿ ಮಂತ್ರಿಗಳೊಡನೆ ಬಹಳ ಹರ್ಷಪಟ್ಟವನಾಗಿ ಆಶ್ಚರ್ಯದಿಂದೊಡಗೂಡಿ ಆತನಿಗೆ ಮಕ್ಕಳನ್ನು ಆದರದಿಂದ ಒಪ್ಪಿಸಿ ಹೆಚ್ಚಿನ ಸುಖವನ್ನು ಹೊಂದಿದನು. (ವಿಷ್ಣುಶರ್ಮನಿಂದಲೂ ಅವರನ್ನು ತೆಗೆದುಕೊಂಡು =) ವಿಷ್ಣುಶರ್ಮನೂ ಅವರನ್ನು ಕರೆದುಕೊಂಡುಹೋಗಿ ಅವರಿಗೋಸ್ಕರ ಮಿತ್ರಭೇದ, ಮಿತ್ರಪ್ರಾಪ್ತಿ, ಕಾಕೋಲೂಕೀಯ, ಲಬ್ಧಪ್ರಣಾಶ, ಅಪರೀಕ್ಷಿತಕಾರಕ - ಎಂಬ ಐದು ತಂತ್ರಗಳನ್ನು ರಚಿಸಿ (ಆ ರಾಜಪುತ್ರರು ಪಾಠಿತರಾದರು =) ಆ ಅರಸುಗುವರರಿಗೆ ಕಲಿಸಿದನು. ಅವರೂ ಅವನ್ನು (ಓದಿ =) ಕಲಿತು ಆರು ತಿಂಗಳಲ್ಲಿ ಮೇಲೆ ಹೇಳಿದಂಥವರಾದರು.

(ಅಂದು ಮೊದಲಾಗಿ =) ಅಂದಿನಿಂದ ಈ ಪಂಚತಂತ್ರಕವೆಂಬ ನೀತಿಶಾಸ್ತ್ರವು ಹುಡುಗರಿಗೆ ಕಲಿಯಿಸುವದಕ್ಕಾಗಿ ಭೂತಲದಲ್ಲಿ ಹರಡಿತು. ಹೆಚ್ಚೇನು ?- ''ಯಾವನು ಈ ನೀತಿಶಾಸ್ತ್ರವನ್ನು ನಿತ್ಯವೂ ಓದುತ್ತಾನೋ ಮತ್ತು ಕೇಳುತ್ತಾನೋ (ಅವನು) ಎಂದಿಗೂ ಇಂದ್ರನಿಂದಲೂ ಪರಾಜಯವನ್ನು ಹೊಂದುವದಿಲ್ಲ.''

ಇಂತು ಕಥಾಮುಖವು (ಮುಗಿಯಿತು)

## ಚಿಂತನ

೧. ಯಥೋಕ್ತಾಃ ಸಂವೃತ್ತಾಃ ನೀತಿಶಾಸ್ತ್ರಜ್ಞಾ ಅಭವನ್ ।

'ಯಥೋಕ್ತ' (ಮೇಲೆ ಹೇಳಿದಂಥ), 'ತಥೋಕ್ತ' (ಹಾಗೆಂದು ಹೇಳಿದ) ಎಂಬ ಮಾತುಗಳನ್ನು 'ಅಂಥ' ಎಂಬರ್ಥದಲ್ಲಿ ಹೇಳುತ್ತಾರೆ.

೨. **ತತಃ ಪ್ರಭೃತಿ** ಅಲ್ಲಿಂದ ಮುಂದಕ್ಕೆ 'ಪ್ರಭೃತಿ', 'ಆರಭ್ಯ', 'ಊರ್ಧ್ವಮ್', 'ಅನನ್ತರಮ್' - ಇವಕ್ಕೆ ಪಂಚಮೀವಿಭಕ್ತಿ ಬೇಕು ; ಅಥವಾ ತತಃ, ಅತಃ, ಇತಃ - ಎಂಬ ಅವ್ಯಯಗಳಿದ್ದರೂ ಆಗುತ್ತದೆ. ಕಾಲವನ್ನು ಹೇಳುವ ಕ್ರಿಯಾವಿಶೇಷಣಗಳಿಗೆ 'ಪ್ರಭೃತಿ' ಯನ್ನು ಸೇರಿಸಿ ಅದ್ಯಪ್ರಭೃತಿ (ಇಂದಿನಿಂದ), ಯತಃ ಪ್ರಭೃತಿ (ಯಾವ = ಆ ಕಾಲದಿಂದ), ತದಾಪ್ರಭೃತಿ (ಆಗಿನಿಂದ) ಎಂದು ಈ ಅರ್ಥದಲ್ಲಿ ಪ್ರಯೋಗಿಸುತ್ತಾರೆ.

೩. **ಕಿಂ ಬಹುನಾ ?** - ಸ್ವಲ್ಪದರಲ್ಲಿಯೇ ಹೇಳುತ್ತೇನೆಂದರ್ಥ. ಇಲ್ಲಿ ಪ್ರಯೋಜನ ವೆಂಬರ್ಥವಿರುವದರಿಂದ ತೃತೀಯಾವಿಭಕ್ತಿಯೇ ಇರಬೇಕು.

೪. 'ಯಃ' ಎಂಬುದಕ್ಕೆ 'ಸಃ' ಎಂಬುದನ್ನು ಅಧ್ಯಾಹಾರಮಾಡಿ ಸೇರಿಸಿಕೊಂಡು ಶ್ಲೋಕಕ್ಕೆ ಅರ್ಥವನ್ನು ಮಾಡಬೇಕು.

೫. **ಇತಿ ಕಥಾಮುಖಮ್** । 'ಇತಿ' ಶಬ್ದವು ಸಮಾಪ್ತಿಯನ್ನು ತಿಳಿಸುತ್ತದೆ. 'ಇತಿ ಕಥಾಮುಖಂ ಸಮಾಪ್ತಮ್' ಎಂದೂ ಬೇಕಾದರೆ ಬರೆಯಬಹುದು.

## ಅಭ್ಯಾಸ ೪

1. ಈ ವಾಕ್ಯಗಳನ್ನು ಕನ್ನಡಿಸಿರಿ :

१. तावत् क्षीरम् एक एव पिबतीति असंभाव्यमेतत् । २. विष्णुशर्मा प्रतिज्ञां करोति - अद्यप्रभृति षड्भिरेव मासैस्तव पुत्रान् नीतिशास्त्रज्ञान् करोमीति । ३. अस्माकमनुग्रहार्थं शीघ्रमागम्यताम् । ४. तदाप्रभृत्येव राजपुत्रान् पाठयति स्म । ५. यथोक्तो ग्रन्थः कुत्र लभ्यते ?

2. ಈ ಪ್ರಶ್ನೆಗಳಿಗೆ ಸಂಸ್ಕೃತದಲ್ಲಿ ಉತ್ತರವನ್ನು ಬರೆಯಿರಿ :

१. पञ्चतन्त्रकं किमर्थं केन रचितम् ? २. अनेन ग्रन्थेन अधीतेन किं प्रयोजनं भवेत् ?

3. ಇಲ್ಲಿ ಬಿಟ್ಟಿರುವ ಪದಗಳನ್ನು ಸೇರಿಸಿ ವಾಕ್ಯಗಳನ್ನು ಪೂರ್ಣಮಾಡಿರಿ. ಬೇಕಾದ ಶಬ್ದಗಳಿಗೆ ಕಥೆಯನ್ನು ಓದಿ ಊಹಿಸಿಕೊಳ್ಳಿರಿ :

१. अमरशक्तेः ..... ..... आसन् । २. ते सर्वे ..... विवेकरहिताश्च । ३. तेषां

बुद्धिप्रकाशार्थं ..... अनुष्ठीयताम् इति सचिवान् प्राह । ४. किं ..... मासैः सर्वाणि शास्त्राणि ..... ?

## ೪. ಸಮಸ್ತಪದಗಳು - ದ್ವಂದ್ವ

## (Copulative Compounds)

೮. ಈ ವಾಕ್ಯಗಳಲ್ಲಿ च ಶಬ್ದದಿಂದ ಕೂಡಿಸಿರುವ ಪದಗಳು ಯಾವ ಪದಕ್ಕೆ ಅನ್ವಯಿಸುತ್ತವೆ (= ಸಂಬಂಧಪಟ್ಟಿವೆ) ? च ಶಬ್ದದ ಅರ್ಥವಿಶೇಷವನ್ನು ಲಕ್ಷಿಸಿರಿ:

| | |
|---|---|
| १. ईश्वरं गुरुं च भजस्व । | = ಈಶ್ವರನನ್ನು, ಗುರುವನ್ನು ಕೂಡ ಭಜಿಸು. |
| २. भिक्षामट, गां च आनय । | = ಭಿಕ್ಷಾಟನೆಮಾಡು,ಗೋವನ್ನೂ(ತೆಗೆದು ಕೊಂಡು=) ಹೊಡೆದುಕೊಂಡು ಬಾ. |
| ३. रामश्च लक्ष्मणश्च वने सञ्चरतः । | = ರಾಮನೂ ಲಕ್ಷ್ಮಣನೂ ಕಾಡಿನಲ್ಲಿ ಓಡಾಡುತ್ತಿದ್ದಾರೆ. |
| ४. कौसल्या च कैकेयी च संभाषेते । | = ಕೌಸಲ್ಯೆಯೂ ಕೈಕೇಯಿಯೂ ಮಾತನಾಡುತ್ತಿದ್ದಾರೆ. |
| ५. पार्वतीं च परमेश्वरं च वन्दे । | = ಪಾರ್ವತಿಯನ್ನೂ ಪರಮೇಶ್ವರ ನನ್ನೂ ವಂದಿಸುತ್ತೇನೆ. |
| ६. रामश्च लक्ष्मणश्च भरतश्च शत्रुघ्नश्च भ्रातरः । | = ರಾಮನೂ ಲಕ್ಷ್ಮಣನೂ ಭರತನೂ ಶತ್ರುಘ್ನನೂ ಅಣ್ಣತಮ್ಮಂದಿರು. |
| ७. आयुश्च आरोग्यं च ऐश्वर्यं च अभिवर्धन्ताम् । | = ಆಯುಸ್ಸೂ ಆರೋಗ್ಯವೂ ಐಶ್ವರ್ಯವೂ ಹೆಚ್ಚಲಿ ! |
| ८. पटः शुक्लो रक्तश्च भवति । | = ಬಟ್ಟೆ ಬಿಳಿಯದೂ ಕೆಂಪನೆ ಯದೂ ಆಗಿರುತ್ತದೆ. |
| ९. नीलं वस्त्रम्, आकाशं च । | = ಬಟ್ಟೆಯು ಕಪ್ಪು, ಆಕಾಶವೂ (ಕಪ್ಪು) |
| १०. पाण्योः पादयोश्च समाहारं कुत्र पश्यामः ? | = ಕೈಗಳ ಮತ್ತು ಕಾಲುಗಳ ಒಟ್ಟನ್ನು ಎಲ್ಲಿ ಕಾಣುತ್ತೇವೆ ? |

# ಚಿಂತನ

೧. ''ಈಶ್ವರನನ್ನೂ', 'ಗುರುವನ್ನೂ' ಎಂಬೀ ಪದಗಳಿಗೆ ಒಂದಕ್ಕೊಂದರ ಅಪೇಕ್ಷೆಯಿಲ್ಲ ; ಎರಡೂ 'ಭಜಿಸು' ಎಂಬ ಕ್ರಿಯೆಯಲ್ಲಿ ಅನ್ವಯಿಸುತ್ತವೆ. ಇದು ಚಕಾರದ ಸಮುಚ್ಚಯಾರ್ಥಕ್ಕೆ ಉದಾಹರಣೆ.

೨. ಭಿಕ್ಷಾಟನೆಮಾಡು ಎಂಬುದೇ ಪ್ರಧಾನವಾಕ್ಯ ; ಗೋವು ಸಿಕ್ಕಿದರೆ ಅದನ್ನೂ ಹೊಡೆದುಕೊಂಡು ಬಾ ; ಸಿಕ್ಕದಿದ್ದರೂ ಅದಕ್ಕಾಗಿ ಹೆಚ್ಚಿನ ಪ್ರಯತ್ನವನ್ನು ಮಾಡಬೇಕಾದದ್ದಿಲ್ಲವೆಂಬರ್ಥವಿದೆ. ಇಲ್ಲಿ ಎರಡು ಸ್ವತಂತ್ರವಾಕ್ಯಗಳಿವೆ. ಇದು ಚಕಾರದ ಅನ್ವಾಚಯಾರ್ಥ.

೩. ರಾಮನೂ ಲಕ್ಷ್ಮಣನೂ ಸೇರಿಯೇ ಸಂಚರಿಸುತ್ತಿದ್ದಾರೆ ಎಂಬುದನ್ನು ಹೇಳುವ ವಾಕ್ಯ ಇತರೇತರಯೋಗಾರ್ಥ.

೪. ಇಲ್ಲಿ ಕೈಕಾಲುಗಳ ಒಟ್ಟನ್ನು ಹೇಳುವದರಿಂದ ಚಕಾರಕ್ಕೆ ಸಮಾಹಾರಾರ್ಥವಿದೆ.

೯. ಈ ಕೆಳಗಿನ ವಾಕ್ಯಗಳಲ್ಲಿ ಎರಡುಮೂರು ಪದಗಳನ್ನು ಸೇರಿಸಿ ಒಂದೇ ಪದವಾಗಿ ಮಾಡಿ ಬರೆದಿದೆ. ಅವುಗಳ ಲಿಂಗವಿಭಕ್ತಿವಚನಗಳನ್ನು ಹೇಳಿರಿ : -

१. रामलक्ष्मणौ वने सञ्चरतः । २. कौसल्याकैकेय्यौ संभाषेते । ३. पार्वतीपरमेश्वरौ वन्दे । ४. रामलक्ष्मणभरतशत्रुघ्ना भ्रातरः । ५. आयुरारोग्यैश्वर्याणि अभिवर्धताम् । ६. पाणिपादं कुत्र पश्यामः ?

**ಇತರೇತರಯೋಗ ಅಥವಾ ಸಮಾಹಾರ** - ಈ ಅರ್ಥಗಳಲ್ಲಿರುವ ಚಕಾರದಿಂದ ಕೂಡಿದ ನಾಮಪದಗಳು ಒಟ್ಟಾಗಿ ಸಮಸ್ತಪದಗಳಾಗುವುವು. ಇದು ದ್ವಂದ್ವಸಮಾಸ. (ಸಮುಚ್ಚಯ, ಅನ್ವಾಚಯ - ಈ ಅರ್ಥಗಳಿದ್ದರೆ ಸಮಾಸವಾಗುವದಿಲ್ಲ.)

ಸಮಸ್ತಪದದ ಕೊನೆಯ ಪದದ ಲಿಂಗವೇ ಒಟ್ಟು ಪದದ ಲಿಂಗ ; ಸಮಸ್ತಪದದಲ್ಲಿರುವ ಪದಗಳ ಅರ್ಥಗಳ ಸಂಖ್ಯೆಗೆ ಅನುಗುಣವಾಗಿ ಅದರ ವಚನವಿರುತ್ತದೆ. ಸಮಾಹಾರದ್ವಂದ್ವವು ನಪುಂಸಕಲಿಂಗ ; ಏಕವಚನದಲ್ಲಿರುತ್ತದೆ.

೧೦. ಈ ಕೆಳಗಿನ ವಾಕ್ಯಗಳಲ್ಲಿರುವ ಸಮಸ್ತಪದಗಳನ್ನೂ (ಚಕಾರದಿಂದ ಕೂಡಿದ ಪದಗಳನ್ನು ಬಿಡಿಸಿ ಹೇಳುವ) **ವಿಗ್ರಹವಾಕ್ಯ**ಗಳನ್ನೂ ಹೇಗೆ ತೋರಿಸಿದೆ ?

१. ब्राह्मणक्षत्रियविशां कर्माणि प्रविभक्तानि । (ವಿಂಗಡವಾಗಿರುತ್ತವೆ) ब्राह्मणानां च क्षत्रियाणां च विशां च ब्राह्मणक्षत्रियविशाम् ।

ಅಥವಾ ब्राह्मणाश्च क्षत्रियाश्च विशश्च = ब्राह्मणक्षत्रियविशः ; तेषाम् ॥

'ब्राह्मणक्षत्रियविड्भ्यः' ಎಂದಿದ್ದರೆ ब्राह्मणेभ्यश्च क्षत्रियेभ्यश्च विड्भ्यश्च ಎಂದಾಗಲಿ, ब्राह्मणाश्च क्षत्रियाश्च विशश्च - ब्राह्मणक्षत्रियविशः ; तेभ्यः ॥

ಎಂದಾಗಲಿ ವಿಗ್ರಹವಾಕ್ಯವನ್ನು ಹೇಳಬಹುದು. ಮುಂದಿನ ವಾಕ್ಯಗಳಿಗೂ ಹೀಗೆಯೇ.
२. रामरावणयोर्युद्धं रामरावणयोरिव ।

(ರಾಮರಾವಣರ ಯುದ್ಧವು ರಾಮರಾವಣರ ಯುದ್ಧದಂತೆಯೇ.)

रामस्य च रावणस्य च रामरावणयोः । ಅಥವಾ रामश्च रावणश्च रामरावणौ ; तयोः ಎಂದು ವಿಗ್ರಹ.

३. अस्मिन् स्थाने हरिहरयोरेकत्र दर्शनं भवति ॥ ಈ ಸ್ಥಾನದಲ್ಲಿ ಹರಿಹರರಿಬ್ಬರ ದರ್ಶನವೂ ಒಂದೇ ಕಡೆಯಲ್ಲಿ ಆಗುತ್ತದೆ.

**ವಿಗ್ರಹವಾಕ್ಯ** : हरेश्च हरस्य च ಅಥವಾ हरिश्च हरश्च - हरिहरौ ; तयोः ॥

ಪ್ರತಿಯೊಂದು ಪದಕ್ಕೂ ಸಮಸ್ತಪದದ ವಿಭಕ್ತಿಯನ್ನು ಹತ್ತಿಸುವದಕ್ಕೆ ಚಕಾರದಿಂದ ಕೂಡಿಸುವದು ಒಂದು ಬಗೆ ; ವಿಗ್ರಹವಾಕ್ಯದ ಪ್ರತಿಯೊಂದು ಪದವನ್ನೂ ಪ್ರಥಮಾ ವಿಭಕ್ತಿಯಲ್ಲಿಟ್ಟುಕೊಂಡು ಸಮಾಸವನ್ನು ಮಾಡಿದಬಳಿಕ, ಬೇಕಾದ ವಿಭಕ್ತಿಗೆ ಇಳಿಸಿಕೊಳ್ಳುವದು ಇನ್ನೊಂದು ಬಗೆ. ಈ ಎರಡನೆಯ ಕ್ರಮವೇ ಈಗ ಹೆಚ್ಚು ಬಳಕೆಯಲ್ಲಿದೆ. ಈ ಸಂದರ್ಭದಲ್ಲಿ ತಚ್ಛಬ್ದದ ಆಯಾ ವಿಭಕ್ತಿಯ ರೂಪವನ್ನು ಉಪಯೋಗಿಸಿಕೊಂಡು ಸಮಸ್ತಪದದ ವಿಭಕ್ತಿಗೆ ಇಳಿಸಬೇಕಾಗುವುದು.

೧೧. ಈ ವಿಗ್ರಹವಾಕ್ಯಗಳಲ್ಲಿ ಉಪಯೋಗಿಸಿರುವ ತಚ್ಛಬ್ದವು ಯಾವ ಲಿಂಗವಿಭಕ್ತಿವಚನಗಳಲ್ಲಿದೆ ?

१. माता च पिता च = मातापितरौ ; तयोः = मातापित्रोः ॥ (ಪು.ಷ.ಸ.ದ್ವಿ.)

२. तरवश्च लताश्च = तरुलताः ; ताभ्यः = तरुलताभ्यः ॥ (ಸ್ತ್ರೀ.ಚ.ಪಂ.ಬ.)

३. गंधाश्च पुष्पाणि च अक्षताश्च = गन्धपुष्पाक्षताः ; तैः = गन्धपुष्पाक्षतैः ॥ (ಪು.ತೃ.ಬ.)

४. कन्दाश्च मूलानि च = कन्दमूलानि ; तैः = कन्दमूलैः ॥ (ನ.ತೃ.ಬ.)

५. शौर्यं च औदार्यं च विभवश्च = शौर्यौदार्यविभवाः ;
तेषु = शौर्यौदार्यविभवेषु ॥ (ಪು.ಸ.ಬ.)

ಪ್ರಥಮಾಂತವಾಗಿ ಸಮಾಸವನ್ನು ಮಾಡಿಕೊಂಡಬಳಿಕ ಸಮಸ್ತಪದದ ಲಿಂಗಭಕ್ತಿವಚನಗಳಿಗೆ ತಕ್ಕ ತಚ್ಛಬ್ದರೂಪವನ್ನು ಉಪಯೋಗಿಸಿಕೊಳ್ಳಬೇಕು.

## ಅಭ್ಯಾಸ ೫

ಇಲ್ಲಿರುವ ವಿಗ್ರಹವಾಕ್ಯಗಳನ್ನು ಸೇರಿಸಿ ಸಮಸ್ತಪದಗಳನ್ನು ಮಾಡಿ ವಾಕ್ಯಗಳನ್ನು ಬರೆಯಿರಿ ; ಕೊನೆಯ ಪದದ ಲಿಂಗವೇ ಸಮಸ್ತಪದಕ್ಕೆ ಇರಲಿ :

१. रामश्च लक्ष्मणश्च मातुः पितुश्च पादयोः पततः । २. रामो दीनेषु च अन्धेषु च बधिरेषु च मूकेषु च दयावान् । ३. आर्यरक्षितश्च फल्गुरक्षितश्च इति द्वौ पुत्रौ । ४. मातरि च पितरि च भक्तिः श्रेयसे भवति । ५. एते संन्यासिनः त्रिदण्डेन च यज्ञोपवीतेन च कमण्डलुना च सहिताः सन्ति । ६. यज्ञश्च दानं च तपश्च अवश्यं कर्तव्यानि ॥

## ಅಭ್ಯಾಸ ೬

ಇಲ್ಲಿರುವ ಸಮಸ್ತಪದಗಳಿಗೆ ಪ್ರಥಮಾಂತಪದಗಳನ್ನು ಉಪಯೋಗಿಸಿದ ವಿಗ್ರಹಗಳನ್ನು ಬರೆಯಿರಿ :

१. अयं छात्रो विद्याविनयाभ्यां शोभते । २. अजातमृतमूर्खेभ्यो मृताजातौ वरम् । ३. रूपद्रव्यगुणैर्युक्तो भवतः पुत्रः । ४. विष्णुशर्मा बहुशक्तयुग्रशक्तयनन्तशक्तिभ्यः पञ्चतन्त्रकं नाम नीतिशास्त्रं व्यरचयत् । ५. न मे वाञ्छा धनकनकवस्तुवाहनेषु । ६. दिने दिने हरिहरगुरून् नमस्कुर्यात् । ७. सुखदुःखे समे कृत्वा लाभालाभौ जयाजयौ च समौ कृत्वा युध्यस्व ॥

## ಅಭ್ಯಾಸ ೭

ಈ ವಿಗ್ರಹವಾಕ್ಯಗಳಿಂದ ಸಮಸ್ತಪದಗಳನ್ನು ಏರ್ಪಡಿಸಿಕೊಂಡು ಅವನ್ನು ವಾಕ್ಯಗಳಲ್ಲಿ ಪ್ರಯೋಗಿಸಿರಿ :

१. शिशिरश्च वसन्तश्च = शिशिरवसन्तौ ; तयोः ॥ २. शिवश्च केशवश्च = शिव केशवौ ; ताभ्याम् ॥ ३. कौसल्या च सुमित्रा च कैकेयी च = कौसल्यासुमित्राकैकेय्यः ; तासाम् ॥ ४. ब्रह्मा च विष्णुश्च महेश्वरश्च = ब्रह्मविष्णुमहेश्वराः ; तेषु ॥ ५. धर्मश्च अर्थश्च कामश्च मोक्षश्च = धर्मार्थकाममोक्षाः ; तैः ॥ ६. युधिष्ठिरश्च भीमश्च अर्जुनश्च = युधिष्ठिरभीमार्जुनाः ; तेषु ॥

೧೨. ಪ್ರಾಣಿಗಳ ಅಂಗಗಳು, ಸೇನೆಯ ಅಂಗಗಳು, ಮತ್ತು ಹೊಡೆದು ಬಾರಿಸುವ ವಾದ್ಯಗಳ ಅಂಗಗಳು - ಇವುಗಳನ್ನು ಹೇಳುವ ಪದಗಳಿಂದ ಆಗುವ ದ್ವಂದ್ವ ಸಮಾಸಗಳು ಸಮಾಹಾರದ್ವಂದ್ವವೇ ಆಗುವವು. ಆದ್ದರಿಂದ ಸಮಸ್ತಪದವು ನಪುಸಂಕೈಕ ವಚನದಲ್ಲಿರಬೇಕು.

१. पाणी च पादौ च - एषां समाहारः = पाणिपादम् ॥

पाणी च पादं च मुखं च - एषां समाहारः = पाणिपादमुखम् ॥

मुखं च बाहू च ऊरू च पादौ च - एषां समाहारः = मुखबाहूरुपादम् ॥

२. हस्तिनश्च अश्वाश्च रथाश्च पदातयश्च - एषां समाहारः =

हस्त्यश्वरथपदाति ॥

रथिकाश्च अश्वारोहाश्च - एषां समाहारः = रथिकाश्वारोहम् ॥

३. मार्दङ्गिकाश्च पाणविकाश्च - एषां समाहारः = मार्दङ्गिकपाणविकम् ॥

ಪಾಣವಿಕರು ಎಂದರೆ ಒಂದುಬಗೆಯ ತಮಟೆಯನ್ನು ಬಾರಿಸುವವರು.

ವಿಶೇಷ : ಏಷಾಂ ಅಥವಾ 'ಆಸಾಂ' ಸಮಾಹಾರಃ (- ಇವುಗಳ ಒಟ್ಟು) ಎಂಬ ಮಾತುಗಳನ್ನು ಸಮಾಹಾರವೆಂಬ ಅರ್ಥವನ್ನು ತಿಳಿಸುವದಕ್ಕೆ ಉಪಯೋಗಿಸಿದೆ ; ಸಮಸ್ತಪದಗಳಲ್ಲಿ ಅವನ್ನು ಸೇರಿಸಬಾರದು. ಇಂಥಿಂಥ ಸಂದರ್ಭಗಳಲ್ಲಿ ಸಮಾಹಾರದ್ವಂದ್ವವೇ ಆಗಬೇಕೆಂಬ ನಿಯಮವುಂಟು. ಅಂಥ ಸಂದರ್ಭವು ಬಂದಾಗ ತಿಳಿಸುವೆವು.

## ಅಭ್ಯಾಸ ೮

. ಈ ಕೆಳಗಿನ ವಿಗ್ರಹವಾಕ್ಯಗಳನ್ನು ಸಮಾಹಾರದ್ವಂದ್ವವಾಗಿ ಮಾಡಿರಿ. ಅರ್ಥವನ್ನು ಊಹಿಸಿರಿ.

१. काकाश्च उलूकाश्च - एषां समाहारः । २. धानाश्च शष्कुल्यश्च - एषां समाहारः । (ಅವಲಕ್ಕಿ ಚಕ್ಕುಲಿಗಳ ರಾಶಿ) ३. गङ्गा च शोणा च - तयोः समाहारः ।[1] ४. अहयश्च नकुलश्च (ಮುಂಗಸಿಗಳು) - एषां समाहारः । ५. दास्यश्च दासाश्च - एषां समाहारः । ६. गावश्च अश्वाश्च - एषां समाहारः । ७. यूकाश्च लिक्षाश्च

1. ದ್ವಂದ್ವಸಮಾಸವು ಸಮಾಹಾರವಾಗುವ ಉದಾಹರಣೆಗಳನ್ನು ಈ ಅಭ್ಯಾಸದಲ್ಲಿ ಕೊಟ್ಟಿದೆ. ಪ್ರಾಣ್ಯಂಗವೇ ಮುಂತಾದವುಗಳಲ್ಲದಿದ್ದರೂ ಇವು ಸಮಾಹಾರವಾಗುವವು. ಆದರೆ ಹೀಗೆ ಎಲ್ಲಿ ಬೇಕೆಂದರೆ ಅಲ್ಲಿ ಆಗುವದಿಲ್ಲ.

- आसां समाहारः । (ಹೇನುಕೂರೆಗಳ ಒಟ್ಟು) ८. रथाश्च अश्वाश्च - एषां समाहारः । ९. गावश्च व्याघ्राश्च - एषां समाहारः ॥

## ५. मित्रभेदः

१३. अथातः प्रारभ्यते मित्रभेदो नाम प्रथमं तन्त्रम् । यस्यायम् आदिमः श्लोकः

वर्धमानो महान् स्नेहः सिंहगोवृषयोर्वने ।
पिशुनेनातिलुब्धेन जम्बूकेन विनाशितः ॥

तद्यथानुश्रूयते - अस्ति दाक्षिणात्ये जनपदे महिलारोप्यं नाम नगरम् । तत्र धर्मोपार्जितभूरिविभवो वर्धमानको नाम वणिक्पुत्रो बभूव (= अभवत्) । तस्य कदाचित् रात्रौ शय्यारूढस्य चिन्ता समुत्पन्ना यत् प्रभूतेऽपि वित्ते अर्थोपायाश्चिन्तनीयाः कर्तव्याश्चेति ॥

ಆದ್ದರಿಂದ ಇನ್ನು ಮಿತ್ರಭೇದವೆಂಬ (ಮೊದಲನೆಯ ತಂತ್ರವು ಆರಂಭಿಸಲ್ಪಡುತ್ತದೆ =) ಮೊದಲನೆಯ ತಂತ್ರವನ್ನು ಆರಂಭಿಸಲಾಗುತ್ತದೆ. (ಯಾವದಕ್ಕೆ =) ಅದಕ್ಕೆ ಇದು ಮೊದಲನೆಯ ಶ್ಲೋಕವು :-

'ಸಿಂಹ ಮತ್ತು ಎತ್ತು - ಇವುಗಳಿಗೆ ಕಾಡಿನಲ್ಲಿ ಬೆಳೆಯುತ್ತಿರುವ ದೊಡ್ಡ ಗೆಳೆತನವು ಅತ್ಯಾಶೆಯುಳ್ಳ ಚಾಡಿಕೋರ ನರಿಯಿಂದ ನಾಶಮಾಡಲ್ಪಟ್ಟಿತು.'

ಹೀಗೆಂದು ಹೇಳುತ್ತಾರೆ : ದಕ್ಷಿಣದಲ್ಲಿರುವ ದೇಶದಲ್ಲಿ ಮಹಿಲಾರೋಪ್ಯವೆಂಬ ನಗರವುಂಟು. ಅಲ್ಲಿ (ಧರ್ಮದಿಂದ ಸಂಪಾದಿಸಲ್ಪಟ್ಟ ಹೆಚ್ಚಿನ ಧನವುಳ್ಳ =) ಧರ್ಮದಿಂದ ಬಹಳ ಹಣವನ್ನು ಗಳಿಸಿಕೊಂಡಿದ್ದ ವರ್ಧಮಾನಕನೆಂಬ ವರ್ತಕನ ಮಗನಿದ್ದನು. ಅವನಿಗೆ ಒಮ್ಮೆ ರಾತ್ರಿಯಲ್ಲಿ (ಹಾಸಿಗೆಯನ್ನೇರಿದವನಿಗೆ =) ಮಲಗಿರುವಾಗ ಯೋಚನೆಯುಂಟಾಯಿತು. ಏನೆಂದರೆ (ವಿತ್ತವು ಹೆಚ್ಚಾಗಿದ್ದರೂ ಅರ್ಥಕ್ಕೆ ಉಪಾಯಗಳು ಚಿಂತಿಸಲ್ಪಡತಕ್ಕವು ಮತ್ತು ಮಾಡಲ್ಪಡತಕ್ಕವು =) ಎಷ್ಟೇ ಧನವಿದ್ದರೂ ಧನವನ್ನು (ಸಂಪಾದಿಸುವ)[1] ಉಪಾಯಗಳನ್ನು ವಿಚಾರಿಸುತ್ತಿರಬೇಕು, (ಅವುಗಳನ್ನು) ಮಾಡಲೂಬೇಕು.

1. 'ಅರ್ಥೋತ್ಪತ್ತ್ಯುಪಾಯಾಃ' ಎಂಬ ಪಾಠಕ್ಕೆ ಧನವು ಉಂಟಾಗುವ ಉಪಾಯಗಳು ಎಂದರ್ಥ.

# ಚಿಂತನ

೧. **ಅಥಾತಃ ।** ಶಾಸ್ತ್ರಗಳ ಆದಿಯಲ್ಲಿಯೂ ಸೂತ್ರಗ್ರಂಥಗಳ ಆದಿಯಲ್ಲಿಯೂ ಅಥ, ಅತಃ ಎಂಬ ಶಬ್ದಗಳನ್ನು ಪ್ರಯೋಗಿಸುತ್ತಾರೆ. ಉದಾ : 'ಅಥಾತೋ ಧರ್ಮಜಿಜ್ಞಾಸಾ' (ಜೈಮಿನಿಗಳ ಪೂರ್ವಮೀಮಾಂಸಾ ಸೂತ್ರ) ; 'ಅಥಾತೋ ಬ್ರಹ್ಮಜಿಜ್ಞಾಸಾ' (ಬಾದ ರಾಯಣರ ಉತ್ತರ ಮೀಮಾಂಸಾ ವೇದಾಂತಸೂತ್ರ) ಇಂಥ ಸಂದರ್ಭಗಳಲ್ಲಿ ಈ ಮಾತುಗಳಿಗೆ ಏನರ್ಥವೆಂಬ ವಿಷಯಕ್ಕೆ ವ್ಯಾಖ್ಯಾನಕಾರರಲ್ಲಿ ಬಹಳ ವಾದವಾಗುವದುಂಟು. ಇಲ್ಲಿ ಅಥ ಎಂದರೆ ಈಗ ಎಂದೂ, ಅತಃ ಎಂದರೆ ಆದ್ದರಿಂದ, ಈ ಶಾಸ್ತ್ರವನ್ನು ಓದುವವರಿಗೆ ಯಾರಿಂದಲೂ ಎಂದಿಗೂ ಪರಾಭವ ವಾಗುವದಿಲ್ಲವಾದ್ದರಿಂದ - ಎಂದೂ ಅರ್ಥವನ್ನು ಮಾಡಬಹುದು. ಅಥಶಬ್ದವನ್ನು ಮೊದಲು ಪ್ರಯೋಗಿಸುವದು ಮಂಗಲಸೂಚಕವೆಂದು ಆಸ್ತಿಕರ ನಂಬಿಕೆ. 'ಮಂಗಲಾನನ್ತರಾರಮ್ಭ ಪ್ರಶ್ನಕಾರ್ತ್ಸ್ನ್ಯೇಷ್ವಥೋ ಅಥ ।' ಮಂಗಲ, ಅನಂತರ, ಪ್ರಾರಂಭ, ಪ್ರಶ್ನೆ, ಪೂರ್ಣವಾದದ್ದು - ಎಂಬ ಅರ್ಥಗಳಲ್ಲಿ ಅಥೋ, ಅಥ - ಎಂಬ ಅವ್ಯಯಗಳನ್ನು ಬಳಸುತ್ತಾರೆ - ಎಂದು ಅಮರಕೋಶದಲ್ಲಿದೆ.

೨. 'ಯಸ್ಯ' ಇದಕ್ಕೆ ಯಾವದಕ್ಕೆ ಎಂದು ಅಕ್ಷರಾರ್ಥವಾದರೂ ಹಿಂದಿನ ವಾಕ್ಯದ ಅರ್ಥಕ್ಕೆ ಮತ್ತೊಂದರ್ಥವನ್ನು ಜೋಡಿಸಿ (continuatively) ಹೇಳುವದರಿಂದ 'ಅದಕ್ಕೆ' ಎಂದು ಕನ್ನಡಿಸಿದೆ.

೩. **ಆದ್ಯಃ ಶ್ಲೋಕಃ ।** ಈ ಕಥೆಯ ಸಾರವನ್ನು ಹೇಳುವ ಸೂತ್ರರೂಪವಾದ ಶ್ಲೋಕ ಎಂದರ್ಥ.

೪. '**ವನೇ ಸಿಂಹಗೋವೃಷಯೋಃ ವರ್ಧಮಾನಃ ಮಹಾನ್ ಸ್ನೇಹಃ, ಪಿಶುನೇನ ಅತಿಲುಬ್ಧೇನ ಜಮ್ಬೂಕೇನ ವಿನಾಶಿತಃ ॥**' ಎಂದು ಶ್ಲೋಕದ ವಾಕ್ಯಕ್ಕೆ ಅನ್ವಯಕ್ರಮ. (ಪು. ೩೦)

೫. **ಗೋವೃಷಃ ।** ಗೂಳಿ, ಗೌಃ ಎಂದರೆ ಎತ್ತು, ಗೂಳಿ ; ಆದರೆ ಅದಕ್ಕೆ ಹಸು ಎಂಬರ್ಥವೂ ಇದೆ. 'ವೃಷ' ಎಂಬ ಮಾತಿಗೆ ಸ್ವತಂತ್ರವಾಗಿ ವೇದದಲ್ಲಿ ಮಾತ್ರ ಪ್ರಯೋಗವಾಗುತ್ತದೆ. ವೃಷಭ ಎಂದು ಲೌಕಿಕಭಾಷೆಯಲ್ಲಿಯೂ ಇದೆ. ಈ ಮಾತನ್ನು ಆಯಾ ಜಾತಿಯ ಪ್ರಾಣಿಯ ಗಂಡು ಎಂಬರ್ಥವನ್ನು ಕೊಡುವದಕ್ಕೆ ಬಳಸುವದೂ ಉಂಟು. ಜಮ್ಬೂಕೇನ - ಜಮ್ಬುಕೇನ ಎಂದು ಹ್ರಸ್ವೋಕಾರವನ್ನುಪಯೋಗಿಸುವದೇ ಹೆಚ್ಚು.

೬. '**ನಾಮ**' ಎಂಬ ಅವ್ಯಯದ ಹಿಂದಕ್ಕೂ ಮುಂದಕ್ಕೂ ಇರುವ ಒಂದೇ ಪದಾರ್ಥದ ವಾಚಕವಾದ ಪದವು ಒಂದೇ ವಿಭಕ್ತಿಯಲ್ಲಿರಬೇಕು. ಉದಾ : ಮಹಿಲಾರೋಪ್ಯೇ ನಾಮ ನಗರೇ, ವರ್ಧಮಾನಕಸ್ಯ ನಾಮ ವಣಿಕ್ಪುತ್ರಸ್ಯ ॥ (ಪು. ೭೪)

೭. '**ತಸ್ಯ ಚಿನ್ತಾ ಸಮುತ್ಪನ್ನಾ ಯತ್**' ಅನುವಾದಕವಾಕ್ಯ (direct quotation) ಕ್ಕೆ ಯತ್ ಎಂಬ ಅವ್ಯಯವನ್ನು ಮೊದಲು ಬರೆಯುವದುಂಟು ; ಆದರೆ ಇಲ್ಲಿರುವಂತೆ, ವಾಕ್ಯದ ಕೊನೆಯಲ್ಲಿ 'ಇತಿ' ಯನ್ನು ಸೇರಿಸುವದು ಹೆಚ್ಚಾಗಿ ರೂಢಿಯಲ್ಲಿಲ್ಲ. (ಪು. ೮೫)

## ಅಭ್ಯಾಸ ೯

೧. ಈ ವಾಕ್ಯಗಳಲ್ಲಿ ಬಿಟ್ಟಿರುವ ಪದಗಳನ್ನು ಭರ್ತಿಮಾಡಿರಿ :

१. अथ विष्णुशर्मा मित्रभेदं नाम .... .... आरभते । २. वने सिंहगोवृषयोः महान् स्नेहः .... । ३. तं स्नेहं .... .... जम्बुको व्यनाशयत् । ४. यद्यपि ..... वित्तं स्यात्, .... अर्थोपायान् ..... कुर्याच्च ॥

೨. ಈ ಪ್ರಶ್ನವಾಕ್ಯಗಳಿಗೆ ಅರ್ಥವನ್ನು ಬರೆದು ಸಂಸ್ಕೃತವಾಕ್ಯಗಳಿಂದ ಉತ್ತರವನ್ನು ಕೊಡಿರಿ ;

१. पञ्चतन्त्रके कतमत् प्रथमं तन्त्रम् ? २. किमिति तस्य नाम तथा कृतम् ? ३. के ते द्वे मित्रे ययोर्भेदः कृतः ? ४. तयोर्महान् स्नेहः केन विनाशितः ? कीदृशः स जम्बुकः ?

೩. महान् ಇದರ ದ್ವಿತೀಯಾ ಮತ್ತು ಪಂಚಮೀವಿಭಕ್ತಿಗಳ ಎಲ್ಲಾ ರೂಪಗಳನ್ನೂ ಬರೆಯಿರಿ ; 'सिंहगोवृषयोः' ಇದಕ್ಕೆ ವಿಗ್ರಹವಾಕ್ಯವು ಹೇಗಾಗುವದು ?

१४. स चार्थः पुरुषाणां षड्भिरुपायैर्भवति - भिक्षया, नृपसेवया, कृषिकर्मणा, विद्योपार्जनेन, व्यवहारेण, वणिक्कर्मणा वा । सर्वेषामपि तेषां वाणिज्येन अतिरस्कृतोऽर्थलाभः स्यात् । तच्च वाणिज्यं सप्तविधम् अर्थागमाय स्यात् । तद्यथा - गान्धिकव्यवहारः, निक्षेपप्रवेशः, गोष्ठिककर्म, परिचितग्राहकागमः, मिथ्याक्रयकथनम्, कूटतुलामानम्, देशान्तराद् भाण्डानयनं चेति ॥

द्विगुणं त्रिगुणं वित्तं भाण्डक्रयविचक्षणाः ।
प्राप्नुवन्त्युद्यमाल्लोका दूरदेशान्तरं गताः ॥

इत्येवं संप्रधार्य मथुरागामीनि भाण्डन्यादाय शुभायां तिथौ गुरुजनानुज्ञातः सुरथाधिरूढः प्रस्थितः ॥

ಮತ್ತು ಆ ಧನವು ಮನುಷ್ಯರಿಗೆ ಆರು ಉಪಾಯಗಳಿಂದ ಉಂಟಾಗುತ್ತದೆ : ಭಿಕ್ಷೆಯಿಂದ, (ರಾಜನ ಸೇವೆಯಿಂದ =) ಸರಕಾರಿಯ ನೌಕರಿಯಿಂದ, ಬೇಸಾಯದ ಕೆಲಸದಿಂದ, ವಿದ್ಯಾಸಂಪಾದನೆಯಿಂದ, (ವ್ಯವಹಾರದಿಂದ =) ಲೇವಾದೇವಿಯಿಂದ,

ಅಥವಾ (ವರ್ತಕನ ಕರ್ಮದಿಂದ =) ವ್ಯಾಪಾರದಿಂದ (ಅವುಗಳಿಗೆಲ್ಲ =) ಅವುಗಳೆಲ್ಲದರೊಳಗೆ ವ್ಯಾಪಾರದಿಂದ (ಮರೆಮಾಡಲ್ಪಡದ =) ಸ್ಪಷ್ಟವಾದ ಧನಲಾಭವುಂಟಾದೀತು. ಮತ್ತು ಆ ವ್ಯಾಪಾರವು ಏಳು ವಿಧವಾದದ್ದು (ಧನದ ಬರುವಿಕೆಗೆ =) ಲಾಭಕರವಾಗಿ ಆದೀತು. ಅದು ಹೇಗೆಂದರೆ, ಸುಗಂಧದ ವ್ಯಾಪಾರ, (ನಿಕ್ಷೇಪಗಳನ್ನು ಒಳಸೇರಿಸುವದು =) ಅಡವಿಟ್ಟುಕೊಳ್ಳುವದು, (ಜೊತೆಯಲ್ಲಿರುವವರ ಕರ್ಮ =) ಕಂಪೆನಿಯ ದಲ್ಲಾಳಿ, ಪರಿಚಿತರಾದ (ಕೊಳ್ಳುವವರ ಬರುವಿಕೆ =) ಗಿರಾಕಿಗಳು ಬರುವದು, ಸುಳ್ಳುಬೆಲೆ ಹೇಳುವದು, ಮೋಸದ ತಕ್ಕಡಿಯಿಂದ ತೂಗುವದು, ಮತ್ತು ಬೇರೊಂದು ದೇಶದಿಂದ (ಮಾರಾಟದ) ಸಾಮಾನುಗಳನ್ನು ತರುವದು.

'ಸಾಮಾನುಕೊಳ್ಳುವದರಲ್ಲಿ ಜಾಣರಾದವರು ದೂರದೇಶಕ್ಕೆ (ಹೋದವರು =) ಹೋಗಿ ಪ್ರಯತ್ನದಿಂದ ದುಪ್ಪಟ್ಟು, ತಿಪ್ಪಟ್ಟು, ಧನವನ್ನು ಪಡೆದುಕೊಳ್ಳುತ್ತಾರೆ.'

ಹೀಗೆಂದು ನಿಶ್ಚಯಿಸಿಕೊಂಡು ಮಧುರೆಗೆ ಹೋಗುವ ಸಾಮಾನುಗಳನ್ನು ತೆಗೆದುಕೊಂಡು ಶುಭತಿಥಿಯಲ್ಲಿ ಹಿರಿಯ ಜನರಿಂದ ಅನುಜ್ಞೆಯನ್ನು ಹೊಂದಿ ಒಳ್ಳೆಯ ಬಂಡಿಯನ್ನು ಹತ್ತಿ ಹೊರಟನು.

## ಚಿಂತನ

೧. **ಷಡ್ಭಿರುಪಾಯೈರ್ಭವತಿ - ಇತಿ ।** ಇದನ್ನು 'ಎಂಬ ಆರು ಉಪಾಯಗಳಿಂದ ಆಗುತ್ತದೆ' ಎಂದು ಅರ್ಥಮಾಡಿಕೊಳ್ಳಬೇಕು. ವಿಧಗಳನ್ನು ಹೇಳುವ ವಾಕ್ಯಭಾಗವು ಹೀಗೆ ಮುಖ್ಯವಾಕ್ಯವಾದ ಮೇಲೆಯೇ ಬರುವದು ವಾಡಿಕೆ. ಉದಾ : 'ಪುರುಷಾರ್ಥಾಶ್ಚತ್ವಾರಃ - ಧರ್ಮಃ, ಅರ್ಥಃ, ಕಾಮಃ, ಮೋಕ್ಷಶ್ಚ - ಇತಿ ।' ಮುಂದೆ 'ಸಪ್ತವಿಧಮ್' ಎಂಬುದರ ವಿವರಣವನ್ನು ನೋಡಿ.

೨. **'ಸರ್ವೇಷಾಮಪಿ ತೇಷಾಮ್'** - ಅವುಗಳೊಳಗೆಲ್ಲ ಒಂದನ್ನು ನಿರ್ಧರಿಸುವಾಗ ಷಷ್ಠೀ ಅಥವಾ ಸಪ್ತಮೀವಿಭಕ್ತಿಯನ್ನುಪಯೋಗಿಸುವರು.

೩. **'ಅತಿರಸ್ಕೃತಃ'** - ಮರೆಯೇ ಇಲ್ಲದ, ಸ್ಫುಟವಾಗಿರುವ ; ಮಿಕ್ಕ ಐದರಲ್ಲಿ ಲಾಭವಾಗುವದು ಇಷ್ಟು ನಿಶ್ಚಿತವಲ್ಲ - ಎಂದಭಿಪ್ರಾಯ.

೪. **'ತದ್ಯಥಾ'** - ಅದು ಹೇಗೆಂದರೆ 'ತದ್ ಯಥಾ ಭವತಿ ತಥಾ ಉಚ್ಯತೇ' (ಹೇಳಲ್ಪಡುತ್ತದೆ) ಎಂದು ಪೂರ್ಣವಾಕ್ಯ.

೫. **ಗೋಷ್ಠಿಕಕರ್ಮ । 'ಗೌಷ್ಠಿಕ'** - ಎಂಬುದು ವ್ಯಾಕರಣಕ್ಕೆ ಹೆಚ್ಚು ಒಪ್ಪು. ಗೌಷ್ಠಿಕವೆಂದರೆ ಗುಂಪಾಗಿ ಒಟ್ಟಿನಮೇಲೆ ವ್ಯಾಪಾರಮಾಡುವವರು (company) ; ಅವರಿಗಾಗಿ ಮಾಡುವ ಕರ್ಮವು ಎಂದರೆ ದಲ್ಲಾಳಿ ಕೆಲಸ (agency).

೬. **ದ್ವಿಗುಣಮ್** - ಎರಡರಷ್ಟು ಎಂಬರ್ಥದ ವಿಶೇಷಣ. ಗುಣನಮ್ ಗುಣಃ = ಗುಣಿಸುವದು ; ದ್ವೌ ಗುಣೌ ಯಸ್ಯ ತತ್ । ದ್ವೇ (ಎರಡು), ದ್ವಿತೀಯಮ್ (ಎರಡನೆಯ),

ದ್ವಿಗುಣಮ್ (ಎರಡರಷ್ಟು) - ಇವುಗಳ ಅರ್ಥಭೇದವನ್ನು ನೆನಪಿನಲ್ಲಿಡಿರಿ. 'ದ್ವಿವಾರಮ್', 'ದ್ವಿಃ' - ಈ ಕ್ರಿಯಾವಿಶೇಷಣಗಳಿಗೆ ಎರಡು ಸಲ (twice) ಎಂದರ್ಥ.

೭. ಮಧುರಾಗಾಮಿನಿ - ಮಧುರೆಗೆ ಹೋಗುವ ; ಎಂದರೆ ಅಲ್ಲಿ ಹೆಚ್ಚಾಗಿ ಖರೀದಿಯಾಗುವ ಎಂದರ್ಥ.

## ಅಭ್ಯಾಸ ೧೦

ಈ ವಾಕ್ಯಗಳ ಅಭಿಪ್ರಾಯವನ್ನು ಸಂಸ್ಕೃತದಲ್ಲಿ ಬರೆಯಿರಿ :

೧. ಭಿಕ್ಷುಕರು ಅನೇಕರಿರುತ್ತಾರೆ. ೨. ದೊರೆಯು ಯೋಗ್ಯರಿಗೆ ಯುಕ್ತವಾದ ಸಂಬಳವನ್ನು (भृति) ಕೊಡುವದಿಲ್ಲ. ೩. ಬೇಸಾಯವು ಕ್ಲೇಶವನ್ನುಂಟುಮಾಡತಕ್ಕದ್ದು (क्लिष्ट). ೪. ವಿದ್ಯೆಯನ್ನು ಸಂಪಾದಿಸುವದು ಗುರುಗಳ ಸೇವೆಯಿಂದ ಸಿಕ್ಕತಕ್ಕದ್ದು (लभ्य). ೫. ಲೇವಾದೇವಿಯಿಂದ ಹಣದ ಗಂಟು (वित्तग्रन्थि) ನಾಶವಾಗುತ್ತದೆ. ೬. ವರ್ತಕತನಕ್ಕಿಂತ ಹೆಚ್ಚಿನ ವೃತ್ತಿಯಿಲ್ಲವೆಂದು ನಾನು ಎಣಿಸುತ್ತೇನೆ.

೧೫. ಸಮಸ್ತಪದಗಳಲ್ಲಿ ಮೊದಲನೆಯ ಪದದ, ಅಥವಾ ಎರಡನೆಯ ಪದದ, ಅಥವಾ ಎರಡೂ ಪದಗಳ ಅರ್ಥಗಳು ಪ್ರಧಾನವಾಗಿರುತ್ತವೆ. ಎಂದರೆ ಅದನ್ನೇ ಮುಖ್ಯವಾಗಿ ಹೇಳುವದಕ್ಕೆ ಹೊರಟಿರುತ್ತದೆ. ಇಲ್ಲದಿದ್ದರೆ ಸಮಸ್ತಪದದಲ್ಲಿಲ್ಲದ ಮತ್ತೊಂದು ಪದದ ಅರ್ಥವೇ ಮುಖ್ಯವಾಗಿರುತ್ತದೆ. ಹೇಗೆಂದರೆ :

१. उपकृष्णम् (ಕೃಷ್ಣನ ಹತ್ತಿರ) - ಇಲ್ಲಿ उप (ಹತ್ತಿರ) ಎಂಬ ಮೊದಲನೆಯ ಪದದ ಅರ್ಥವು ಮುಖ್ಯ.

२. तद्धनम् (ಅವನ ಧನವು) - ಇಲ್ಲಿ धनम् (ಧನವು) ಎಂಬ ಎರಡನೆಯ ಪದದ ಅರ್ಥವು ಮುಖ್ಯ.

३. रामलक्ष्मणौ (ರಾಮನೂ ಲಕ್ಷ್ಮಣನೂ) - ಇಲ್ಲಿ ಎರಡೂ ಪದಗಳ ಅರ್ಥವು ಪ್ರಧಾನವಾಗಿದೆ.

४. लब्धकीर्ति : (ಪಡೆಯಲ್ಪಟ್ಟ ಕೀರ್ತಿಯುಳ್ಳ) - ಇಲ್ಲಿ ಕೀರ್ತಿಯನ್ನು ಪಡೆದುಕೊಂಡ ಎಂಬರ್ಥವು ಪಡೆದುಕೊಂಡ 'ಮತ್ತೊಬ್ಬನಿಗೆ' ವಿಶೇಷಣವಾಗಿದೆ ; ಆದ್ದರಿಂದ ಇಲ್ಲಿ ಅನ್ಯಪದದ ಅರ್ಥವೇ ಪ್ರಧಾನವಾಗಿದೆ.

ಈವರೆಗೆ ನಾವು ಸಮಾಸದ ಎಲ್ಲ ಪದಗಳೂ ಪ್ರಧಾನವಾಗಿರುವ ದ್ವಂದ್ವ ಸಮಾಸವನ್ನು ವಿವರಿಸಿದ್ದೇವೆ. ಇನ್ನು ಮುಂದಕ್ಕೆ ಉಳಿದ ಸಮಾಸಗಳನ್ನು ತಿಳಿಯಿಸುವೆವು.

# ೬. ಸಮಸ್ತಪದಗಳು (ತತ್ಪುರುಷ, ಕರ್ಮಧಾರಯ)

೧೬. ಈ ಕಥೆಯ ಅರ್ಥವನ್ನು ಊಹಿಸಿ ಬರೆಯಿರಿ :-

## धूर्तो धूर्तेन वञ्चित:

अस्ति महिलारोप्यनगरे धनगुप्तो नाम वणिक्पुत्रः। तेन च अधर्मेण भूरिविभवः उपार्जितः। स च दूरदेशात्, विविधानि भाण्डानि आनीय हट्टे (ಪೇಟೆಯಲ್ಲಿ) स्वापणे (ತನ್ನ ಅಂಗಡಿಯಲ್ಲಿ) तानि विस्तारयति। प्रभूतवित्तोऽपि स वणिक् धनसञ्चय प्रत्याशां न मुञ्चति। सर्वदा भाण्डानां मिथ्याक्रयं कथयति। आपणगतान् परिचित ग्राहकानपि कूटतुलामानेन वञ्चयति। एवं क्रयविक्रयं कुर्वतस्तस्या आपणे कदाचित् एका मुग्धा आभीरी (ಶೂದ್ರರವಳು) आगता। सा प्राह 'भोः, रूप्यकद्वयस्य गुडं देहि' इति। लोभग्रस्तः श्रेष्ठी चिन्तयति 'कथमिमां वराकीं (ಬಡಪಾಯಿ, ಬೆಪ್ಪು)वञ्च येयम्' इति। अथ रूप्यकद्वयं तद्दत्तमादाय एकेनैव रूप्यकेण विक्रेयं गुडं द्विवारं तोलयित्वा तस्यै अयच्छत्। एतेन च कपटव्यवहारेण तेन लब्धोऽनायासेन सपाद रूप्यकमितो (ಒಂದೂಕಾಲು ರೂಪಾಯಿನಷ್ಟು) लाभः। पापभयं तु तस्य नैवास्ति॥

परम् एतस्मिन्नेवावसरे गुडतोलनव्यग्रे वणिक्पुत्रे तस्य पेटिकोपरि स्थितं आभरणकरण्डकं केनचिद् धूर्तेन अदृष्टेन मुषितम् (ಕದಿಯಲ್ಪಟ್ಟಿತು) तथा च तत्रस्थमेकम् अनर्घं रत्नं पुत्रार्थं रक्षितं कुण्डलहिरण्यं च एकपदे (ಒಂದೇ ಹೆಜ್ಜೆಗೆ, ತತ್ಕಾಲದಲ್ಲಿಯೇ, ಇದ್ದಕ್ಕಿದ್ದ ಹಾಗೆಯೇ) विनष्टम्। वाणिज्यनिपुणोऽपि वणिक् चौर्यशौण्डेन परेण वञ्चितः॥

೧೭. ಮೇಲಿನ ಕಥೆಯಲ್ಲಿರುವ ಕೆಲವು ಸಮಸ್ತಪದಗಳ ವಿಗ್ರಹವಾಕ್ಯವನ್ನು ಇಲ್ಲಿ ಕೊಟ್ಟಿದೆ. ಒಟ್ಟುಪದದಲ್ಲಿರುವ ಎರಡು ಪದಗಳೊಳಗೆ ಯಾವದರ ಅರ್ಥವು ಪ್ರಧಾನವಾಗಿದೆ ?

| | | |
|---|---|---|
| वणिक्पुत्रः | = वणिजः पुत्रः । ಸ್ವತಂತ್ರನಾಮ | |
| आपणगतान् | = आपणं (२) गतान् । 'ग्राहकान्' ಎಂಬುದಕ್ಕೆ ವಿಶೇಷಣ | |
| लोभग्रस्तः | = लोभेन (३) ग्रस्तः । 'श्रेष्ठी' " " | तद्दत्तम् |
| | = तया (३) दत्तम् । 'रूप्यकद्वयम्' " | |
| कूटतुलामानम् | = कूटतुलया (३) मानम् । ಸ್ವತಂತ್ರನಾಮ | |
| कपटव्यवहारः | = कपटेन व्यवहारः । ಸ್ವತಂತ್ರನಾಮ | |
| सपादरूप्यकमितः | = सपादरूप्यकेण (३) मितः । 'लाभः' ಎಂಬುದಕ್ಕೆ ವಿಶೇಷಣ | |
| कुण्डलहिरण्यम् | = कुण्डलाय (४) हिरण्यम् । ಸ್ವತಂತ್ರನಾಮ | |
| पापभयम् | = पापाद् (५) भयम् । " | |
| स्वापणे | = स्वस्य (६) आपणे । " | |
| धनसञ्चयः | = धनस्य (६) सञ्चयः । " | |
| सञ्चयप्रत्याशा | = सञ्चयस्य (६) प्रत्याशा । " | |
| रूप्यकद्वयम् | = रूप्यकस्य (६) द्वयम् । " | |
| पेटिकोपरि | = पेटिकायाः (६) उपरि । " | |
| आभरणकरण्डकम् | = आभरणानां (६) करण्डकम् । " | |
| वाणिज्यनिपुणः | = वाणिज्ये (७) निपुणः । 'वणिक्' ಎಂಬುದಕ್ಕೆ ವಿಶೇಷಣ | |
| चौर्यशौडेन | = चौर्ये (७) शौण्डेन । 'परेण' | |

ಮೇಲೆ ಕೊಟ್ಟಿರುವ ಸಮಸ್ತಪದಗಳಲ್ಲಿ (ಉತ್ತರ - ಎರಡನೆಯ) ಪದದ ಅರ್ಥವೇ ಮುಖ್ಯ. ಉದಾಹರಣೆಗೆ 'ಆಪಣಗತಾನ್' ಎಂಬಲ್ಲಿ ಅಂಗಡಿಗೆ 'ಬಂದವರ' ವಿಷಯವಾಗಿ ಮಾತನಾಡುತ್ತೇವೆ, ಅಂಗಡಿಯ ವಿಷಯವನ್ನಲ್ಲ. ಇಂಥ ಸಮಾಸವನ್ನು

ತತ್ಪುರುಷಸಮಾಸ ಎಂದು ಕರೆಯುತ್ತಾರೆ. ಪೂರ್ವಪದವು ಬೇರೆಬೇರೆಯ ವಿಭಕ್ತಿಗಳಲ್ಲಿದೆ ಎಂಬುದನ್ನು ಆಯಾ ಸಂಖ್ಯೆಯಿಂದ ತೋರಿಸಿದೆ.[1]

೧೮. ಈ ಕೆಳಗೆ ಸಮಸ್ತಪದಗಳಿಗೆ ಎರಡೆರಡು ಪ್ರಕಾರಗಳಿಂದ ವಿಗ್ರಹವಾಕ್ಯಗಳನ್ನು ತೋರಿಸಿದೆ. ಅವುಗಳಲ್ಲಿರುವ ವೈಲಕ್ಷಣ್ಯವೇನು ?

आपणगतान् = आपणं गतान् ।

अथवा आपणं गताः = आपणगताः ; तान् ।।

स्वापणे = स्वस्य आपणे ।

अथवा स्वस्य आपणम् = स्वापणम् ; तस्मिन् ।।

चौर्यशौण्डेन = चौर्ये शौण्डेन ।

अथवा चौर्ये शौण्डः = चौर्यशौण्डः ; तेन ।।

ದ್ವಂದ್ವಸಮಾಸದಂತೆಯೇ ತತ್ಪುರುಷಸಮಾಸಕ್ಕೂ ಎರಡು ಬಗೆಯಲ್ಲಿ ವಿಗ್ರಹವಾಕ್ಯಗಳನ್ನು ಹೇಳಬಹುದು. (೧) ಸಮಸ್ತಪದದ ವಿಭಕ್ತಿಯಲ್ಲಿಯೇ ಉತ್ತರಪದದ ವಿಭಕ್ತಿಯನ್ನು ಇಟ್ಟುಕೊಳ್ಳುವದು ಒಂದು ಬಗೆ. (೨) ಉತ್ತರಪದವನ್ನು ಪ್ರಥಮಾ ವಿಭಕ್ತಿಯಲ್ಲಿಟ್ಟು ಸಮಾಸವನ್ನು ಮಾಡಿ ತಚ್ಛಬ್ದದ ಆಯಾ ರೂಪದಿಂದ ಆಯಾ ವಿಭಕ್ತಿಗೆ ಇಳಿಸಿಕೊಳ್ಳುವದು ಇನ್ನೊಂದು ಬಗೆ. ಎರಡನೆಯದೇ ಹೆಚ್ಚಾಗಿ ವಾಡಿಕೆಯಲ್ಲಿದೆ.

## ಅಭ್ಯಾಸ ೧೧

ಇಲ್ಲಿರುವ ತತ್ಪುರುಷಸಮಾಸಗಳಿಗೆ ಎರಡು ಪ್ರಕಾರದಿಂದಲೂ ವಿಗ್ರಹವಾಕ್ಯವನ್ನು ಹೇಳಿ :

१. विश्वामित्रः, पुत्रपरिवृतं दशरथं सभायां दृष्टवान् । २. गृहस्वामी कुत्रापि बहिर्गतः । ३. ग्रामीणाश्चोरभयात् प्रधाविताः । ४. शत्रुघ्नः कैकेयीसुतं भरतमेवानुसरति । ५. बृहन्नलावेषं गृहीतवता अर्जुनेन भरतविद्याकुशलेन राजकुमारी सम्यक् शिक्षिता । ६. वणिक्पुत्रो गुरुजनानुज्ञातः सुरथारुढः प्रस्थितः । ७. कृष्णाश्रितो दुःखातीतो भवति । ८. ज्येष्ठः पुत्रः पितृसमो भवति । ९. ग्रामस्य अभ्याशे

1. ಅರ್ಧಂ ಪಿಪ್ಪಲ್ಯಾಃ - ಅರ್ಧಪಿಪ್ಪಲೀ - ಎಂಬುದು ಮೊದಲನೆಯ ಪದವೇ ಪ್ರಧಾನವಾದ ಪ್ರಥಮಾತತ್ಪುರುಷ. ಈ ಪುಸ್ತಕದಲ್ಲಿ ಇಂಥ ಉದಾಹರಣೆಗಳನ್ನು ಕೊಟ್ಟಿಲ್ಲ.

गोरक्षिता भूमयो भवन्ति । १०. व्याघ्रभीता गौः कुत्रापि पलायिता । ११. स्थालीपक्वम् ओदनम् प्राङ्गणे प्रक्षिपति ।।

೧೯. ಧೂರ್ತನ ಕಥೆಯಲ್ಲಿರುವ ಇನ್ನೂ ಕೆಲವು ಸಮಾಸಗಳಿಗೆ ಇಲ್ಲಿ ವಿಗ್ರಹವಾಕ್ಯಗಳನ್ನು ಕೊಟ್ಟಿದೆ. ಇಲ್ಲಿ ಯಾವ ಪದದ ಅರ್ಥವು ಮುಖ್ಯವಾಗಿದೆ ?

भूरिविभवः = भूरिः विभवः । अथवा भूरिश्च असौ विभवश्च ।

दूरदेशात् = दूरात् देशात् । " दूरश्च असौ देशश्च ; तस्मात् ।।

मिथ्याक्रयम् = मिथ्या क्रयम् । " मिथ्या च असौ क्रयश्च ; तम् ।।
('ಮಿಥ್ಯಾ' ಎಂಬುದು ಅವ್ಯಯ).

परिचितग्राहकान् = परिचितान् ग्राहकान् । अथवा परिचिताश्च ते ग्राहकाश्च ; तान् ।।

ಈ ಸಮಸ್ತಪದಗಳಲ್ಲಿಯೂ ಉತ್ತರಪದದ ಅರ್ಥವೇ ಮುಖ್ಯವಾಗಿದೆ ; ಆದ್ದರಿಂದ ಇವೂ ತತ್ಪುರುಷವೇ. ಆದರೆ ಇಲ್ಲಿ ಅದೇ ವಿಭಕ್ತಿಯಲ್ಲಿರುವ ಪದಗಳು ಸೇರಿವೆ ; ಅವೆರಡೂ ಒಂದೇ ಪದಾರ್ಥವನ್ನು ತಿಳಿಸುತ್ತವೆ. ಪರಿಚಿತರೂ ಗ್ರಾಹಕರೂ ಅವರೇ. ಹೀಗೆ ಒಂದೇ ಪದಾರ್ಥಕ್ಕೆ ಸಂಬಂಧಪಟ್ಟ ಪದಗಳು ಸಮಾನಾಧಿಕರಣಗಳೆನಿಸುವವು.

ಹೀಗೆ **ಸಮಾನಾಧಿಕರಣಪದಗಳಿಂದಾಗುವ** ತತ್ಪುರುಷಸಮಾಸಕ್ಕೆ ಕರ್ಮಧಾರಯ ವೆಂದು ಹೆಸರು. ಇಲ್ಲಿ (ಸಮಾನಾಧಿಕರಣತತ್ಪುರುಷ ಅಥವಾ) ಕರ್ಮಧಾರಯಕ್ಕೂ ಎರಡು ಬಗೆಯಿಂದ ವಿಗ್ರಹವನ್ನು ಹೇಳಬಹುದು ; ಎರಡನೆಯ ಪ್ರಕಾರವೇ ಹೆಚ್ಚು ರೂಢವಾಗಿದೆ.

೨೦. ಇಲ್ಲಿರುವ ವಾಕ್ಯಗಳಲ್ಲಿ ಕರ್ಮಧಾರಯ ಸಮಾಸಪದಗಳಿವೆ. ಅವುಗಳಿಗೆ ಮೊದಲನೆಯ ಪ್ರಕಾರದಿಂದ ಹೇಳಬೇಕಾದ ವಿಗ್ರಹವನ್ನು ಅಲ್ಲಲ್ಲಿಯೇ ಕಂಸದಲ್ಲಿಟ್ಟಿರುತ್ತದೆ.

घटिका -ಸಣ್ಣ ಗಡಿಗೆ ;पटी - ತುಂಡುಬಟ್ಟೆ, ಅರಿವೆ ; उत्पलम् -ನೈದಿಲೆ

कपिला - ಎಣ್ಣೆಗೆಂಪು.

१. अत्र सन्ति केचिन्नीलघटाः (नीलाः घटाः), केचिद् रक्तघटाश्च (रक्ता घटाः)। २. एतेषां मध्यात् एकं नीलघटं (नीलं घटं), द्वौ रक्तघटौ (रक्तौ घटौ) च तत्र नय । ३. अनया नीलघटिकया (नीलया घटिकया) किं करोषि ? ४. ताभ्यां

रक्तघटिकाभ्यां (रक्ताभ्यां घटिकाभ्यां) मम न प्रयोजनम् । ५. अहं तिस्रो हरितपटीः (हरिताः पटीः) आनयामि । ६. अत्र सर्वत्र नीलगाः (नीला गाः) पश्यामि ; इयमेका कपिला । ७. सर्वाः रक्तपथ्यः (रक्ताः पथ्यः) । ८. सरस्यत्र नीलोत्पलम् (नीलम् उत्पलम्) एकम्, तत्र रक्तोत्पले (रक्ते उत्पले) द्वे ; अन्यत्र सर्वाणि नीलोत्पलान्येव (नीलानि उत्पलानि एव) ।।

ಎರಡನೆಯ ಪ್ರಕಾರದಿಂದ ವಿಗ್ರಹವಾಕ್ಯಗಳು ಹೀಗಿರುವವು :

नीलाश्च ते घटाश्च = नीलघटाः ।

नीलश्च असौ घटश्च = नीलघटः ; तं (२) नीलघटम् ।

रक्तौ च तौ घटौ च = रक्तघटौ ; तौ (२) रक्तघटौ ।

नीला च सा घटिका च = नीलघटिका ; तया (३) नीलघटिकया ।

रक्ते च ते घटिके च = रक्तघटिके ; ताभ्यां (३) रक्तघटिकाभ्याम् ।

नीलाश्च ताः गावश्च = नीलगावः ; ताः (२) नीलगाः ।

नीलं च तत् उत्पलं च = नीलोत्पलम् ।

रक्ते च ते उत्पले च = रक्तोत्पले ।

रक्तानि च तानि उत्पलानि च = रक्तोत्पलानि ।

ವಿಶೇಷ : ಇಲ್ಲಿ ಪುಲ್ಲಿಂಗೈಕವಚನಕ್ಕೆ 'ಅಸೌ', ಉಳಿದವಕ್ಕೆ ತಚ್ಛಬ್ದದ ಆಯಾ ಲಿಂಗ ವಿಭಕ್ತಿಗಳು - ಹೀಗೆ ಪ್ರಯೋಗವಾಗಿರುತ್ತವೆ. ಕೊನೆಯಲ್ಲಿ ಆಯಾ ವಿಭಕ್ತ್ಯಂತವಾದ ತಚ್ಛಬ್ದವನ್ನು ಉಪಯೋಗಿಸಿದೆ. ವಿಭಕ್ತಿಯನ್ನು ಆಯಾ ಸಂಖ್ಯೆಯಿಂದ ಕಂಸದಲ್ಲಿ ತೋರಿಸಿದೆ. ಕೊನೆಯ ಮೂರೂ ಪ್ರಥಮಾವಿಭಕ್ತ್ಯಂತವಾಗಿರುವದರಿಂದ ತಚ್ಛಬ್ದವನ್ನು ಬಳಸಬೇಕಾಗಿಲ್ಲ.

'नीलं च तत् उत्पलं च' ಇದಕ್ಕೆ ನೀಲವಾದ ನೈದಿಲೆ ಎಂದರ್ಥ ;

'नीलं च रक्तं च' ಇದಕ್ಕೆ ಕಪ್ಪೂ ಕೆಂಪೂ ಎಂದರ್ಥ.

೨೧. ಇಲ್ಲಿ ಕರ್ಮಧಾರಯಕ್ಕೆ ಬೇರೆಯ ಕೆಲವು ಉದಾಹರಣೆಗಳನ್ನು ಕೊಟ್ಟಿದೆ. ಅವುಗಳ ವಿಗ್ರಹವನ್ನು ಎರಡೂ ರೀತಿಗಳಿಂದ ತೋರಿಸಿದೆ ;

१. कोसलदेशे = कोसले इति देशे ।

ಅಥವಾ **कोसल इति देशः कोसलदेशः ; तस्मिन् ।**

२. मेघश्यामम् = मेघमिव श्यामम् ।

ಅಥವಾ **मेघ इव श्यामः मेघश्यामः ; तम् ।**

३. विद्याधनेन = विद्ययैव धनेन ।

ಅಥವಾ **विद्यैव धनम् विद्याधनम् ; तेन ।**

४. सुप्तोत्थिताय = सुप्ताय उत्थिताय ।

ಅಥವಾ **सुप्तश्च असौ उत्थितश्च सुप्तोत्थितः ; तस्मै ।**

५. पुरुषव्याघ्रः = पुरुषो व्याघ्र इव ।

६. सप्तर्षयः = सप्त च ते ऋषयश्च ।

७. त्रिभुवनम् = त्रयाणां भुवनानां समाहारः ।

८. पञ्चशती = पञ्चानां शतानां समूहः ।

(६–८) ಸಂಖ್ಯಾವಾಚಕವು ಪೂರ್ವ ಪದವಾಗಿರುವದರಿಂದ ಇವು ದ್ವಿಗು.

ಇಲ್ಲಿ ಎರಡನೆಯ ಪ್ರಕಾರವೇ ಹೆಚ್ಚಾಗಿ ರೂಢಿಯಲ್ಲಿರುವದರಿಂದ ಅವನ್ನು ನೆನಪಿನಲ್ಲಿಡಬೇಕೆಂಬುದನ್ನು ತಿಳಿಸುವದಕ್ಕೆ ಕಪ್ಪಕ್ಷರದಲ್ಲಿಟ್ಟಿದೆ.

## ಅಭ್ಯಾಸ ೧೨

ಇಲ್ಲಿರುವ ಸಮಸ್ತಪದಗಳಿಗೆ ವಿಗ್ರಹವಾಕ್ಯಗಳನ್ನು ಹೇಳಿರಿ :

१. वणिक्पुत्रः शय्यारूढश्चिन्तितवान् - अर्थोपाया कर्तव्या इति । २. शत्रुजितो राजा वनं प्रविष्टः । ३. व्याघ्रभीता कन्या धावन्ती वृक्षपतितं फलमेकं दृष्टवती । ४. अहं ब्राह्मणधनं न वाञ्छामि । ५. भाषणनिपुणाय विप्राय भूपालो गोशतं दत्तवान् । ६. परममूर्खोऽसौ कृष्णसर्पस्य जिह्वाग्रे अङ्गुलिं दत्तवान् । ७. भगवतः पादकमलयुगलं समाश्रयन्ति भक्तभृङ्गाः (ಭಕ್ತರೆಂಬ ದುಂಬಿಗಳು) ।

## ७. मित्रभेदः (अनुवृत्तः)

२२. तस्य च मङ्गलवृषभौ सञ्जीवकनन्दकनामानौ गृहोत्पन्नौ

धूर्वोढारौ स्थितौ । तयोरेकः सञ्जीवकाभीधानो यमुनाकच्छमवतीर्णः सन् पङ्कपूरम् आसाद्य कलितचरणः युगभङ्गं विधाय निषसाद (= न्यषीदत्, निषण्णः) । अथ तं तदवस्थम् आलोक्य वर्धमानकः परं विषादम् अगमत् (= अगच्छत्, गतः) । तदर्थं च स्नेहार्द्रहृदयः त्रिरात्रं प्रयाणभङ्गम् अकरोत् ।।

अथ तं विषण्णम् आलोक्य सार्थिकैरभिहितम् - भोः श्रेष्ठिन्, किमेवं वृषभस्य कृते सिंहव्याघ्रसमाकुले बह्वपाये अस्मिन् वने समस्तसार्थस्त्वया संदेहे नियोजितः ? उक्तं च -

न स्वल्पस्य कृते भूरि नाशयेन्मतिमान्नरः ।
एतदेवात्र पाण्डित्यं यत्स्वल्पाद्भूरिरक्षणम् ।।

ಮತ್ತು ಅವನಿಗೆ ಸಂಜೀವಕ, ನಂದಕ - ಎಂಬ (ಹೆಸರುಳ್ಳ =) ಹೆಸರಿನ ಮನೆಯಲ್ಲಿ(ಯೇ) ಹುಟ್ಟಿದ್ದ (ಎರಡು) ಶುಭ(ಲಕ್ಷಣದ) ಹೊರೆ(ಯನ್ನು) ಹೊರಬಲ್ಲ ಎತ್ತುಗಳು ಇದ್ದವು. ಅವುಗಳೊಳಗೆ ಒಂದಾದ ಸಂಜೀವಕನೆಂಬ ಹೆಸರಿನ (ಎತ್ತು) ಯಮುನೆಯ (ಜೌಗಿನ) ದಡವನ್ನು ಇಳಿದದ್ದಾಗಿ (ಕೆಸರಿನ ಪ್ರವಾಹವನ್ನು ಹೊಂದಿ =) ತುಂಬು ಕೆಸರಿನ ಭಾಗಕ್ಕೆ ಬಂದು (ಹೊಕ್ಕ ಕಾಲುಳ್ಳದ್ದಾಗಿ =) ಕಾಲು ಸಿಕ್ಕಿಸಿಕೊಂಡು (ನೊಗದ ಮುರಿಯುವಿಕೆಯನ್ನು ಮಾಡಿ =) ಕಣಿ ಹಾಕಿಕೊಂಡು ಕುಸಿದುಬಿತ್ತು. ಆಗ ಆ ಅವಸ್ಥೆಯಲ್ಲಿದ್ದ ಅದನ್ನು ಕಂಡು ವರ್ಧಮಾನಕನು ಬಹಳ ವಿಷಾದವನ್ನು ಹೊಂದಿದನು. ಮತ್ತು (ಅದಕ್ಕಾಗಿ ಸ್ನೇಹದಿಂದ ಒದ್ದೆಯಾದ ಹೃದಯವುಳ್ಳವನಾಗಿ =) ಅದರ ಪ್ರೇಮದಿಂದ ಹೃದಯವು ಕರಗಿ ಮೂರು ರಾತ್ರಿಗಳವರೆಗೆ (ಪ್ರಯಾಣಭಂಗವನ್ನು ಮಾಡಿದನು =) ಪ್ರಯಾಣವನ್ನು ನಿಲ್ಲಿಸಿದನು.

ಆಮೇಲೆ ವಿಷಾದಪಟ್ಟ ಅವನನ್ನು ಕಂಡು (ಸಾರ್ಥದವರಿಂದ ಹೇಳಲ್ಪಟ್ಟಿತು =) ಜೊತೆಯ ವರ್ತಕರು ಇಂತೆಂದರು : "ಎಲೈ ಶೆಟ್ಟಿಯೆ, ಎತ್ತಿಗೋಸ್ಕರ ಸಿಂಹ, ಹುಲಿ - ಇವುಗಳಿಂದ ತುಂಬಿರುವ, ಬಹಳ (ಅಪಾಯವುಳ್ಳ =) ಅಪಾಯಕರವಾಗಿರುವ ಈ ಕಾಡಿನಲ್ಲಿ ಏತಕ್ಕೆ (ಇಡಿಯ ಸಾರ್ಥವೇ ನಿನ್ನಿಂದ ಸಂದೇಹದಲ್ಲಿ

ಇರಿಸಲ್ಪಟ್ಟಿದೆ =) ವರ್ತಕರ ಸಂಘವನ್ನೆಲ್ಲ ಕಷ್ಟಕ್ಕೆ ಈಡುಮಾಡುತ್ತಿದ್ದೀಯೆ ? (ಹೇಳಲ್ಪಟ್ಟೋ ಇದೆ =) ಮತ್ತು ತಿಳಿದವರು ಹೇಳುವದೇನೆಂದರೆ :

**'ತಿಳಿವಳಿಕೆಯುಳ್ಳ ಮನುಷ್ಯನು ಸ್ವಲ್ಪಕ್ಕಾಗಿ ಬಹಳವನ್ನು ಕಳೆದುಕೊಳ್ಳಬಾರದು, (ಇದೇ ಇಲ್ಲಿ ಜಾಣತನವು ; ಯಾವದೆಂದರೆ, ಸ್ವಲ್ಪಕ್ಕಿಂತಲೂ ಬಹಳವನ್ನು ಕಾಪಾಡಿಕೊಳ್ಳುವದು =) ಸ್ವಲ್ಪವನ್ನು ಬಿಟ್ಟು ಕೊಟ್ಟಾದರೂ ಬಹಳವನ್ನು ಉಳಿಸಿಕೊಳ್ಳುವದೇ ಜಾಣತನವು.'**

## ಚಿಂತನ

೧. 'ನಾಮ' - ಇದು 'ಎಂಬ' ಎಂಬರ್ಥವಾದರೆ ಅವ್ಯಯ ; ಹೆಸರು ಎಂಬರ್ಥವಾದರೆ ನಾಮಪದ. 'ಸಂಜೀವಕನನ್ದಕನಾಮಾನೌ' ಇಲ್ಲಿ ಹೆಸರು ಎಂಬರ್ಥದ ನಾಮಪದವನ್ನು ಸಮಾಸದಲ್ಲಿಟ್ಟಿದೆ. ಇದು ನಕಾರಾಂತಪುಲ್ಲಿಂಗ (ಪು. ೭೪)

೨. ದ್ವಂದ್ವಸಮಾಸದಲ್ಲಿ ಕಡಿಮೆಸಂಖ್ಯೆಯ ಸ್ವರಗಳುಳ್ಳ ಪದವು ಮೊದಲು ಬರಬೇಕು. ಆದ್ದರಿಂದ ಇಲ್ಲಿ 'ನನ್ದಕಸಂಜೀವಕನಾಮಾನೌ' ಎಂದಿರಬೇಕಾಗಿತ್ತು. ಕಥೆಗೆ ಸಂಜೀವಕನೇ ಮುಖ್ಯವೆಂಬ ಕಾರಣದಿಂದ ಸಂಜೀವಕಶಬ್ದವನ್ನೇ ಮೊದಲು ಇಟ್ಟಿರಬಹುದು.

೩. **ಧೂರ್ವೋಢಾರೌ** - ಧುರಃ ವೋಢಾರೌ (ಭಾರವನ್ನು ಹೊರತಕ್ಕವು, ಭಾರವನ್ನು ಹೊರಬಲ್ಲವು) । ಧೂಃ ಧುರೌ ಧುರಃ । ಧುರಮ್ ಧುರೌ ಧುರಃ । ಧುರಾ ಧೂರ್ಭ್ಯಾಮ್ ಧೂರ್ಭಿಃ । ಧುರೇ ಧೂರ್ಭ್ಯಾಮ್ ಧೂರ್ಭ್ಯಃ । ಧುರಃ ಧೂರ್ಭ್ಯಾಮ್ ಧೂರ್ಭ್ಯಃ । ಧುರಃ ಧುರೋಃ ಧುರಾಮ್ । ಧುರಿ ಧುರೋಃ ಧೂರ್ಷು ।। ಹೀಗೆ ಈ ರೇಫಾಂತಶಬ್ದವನ್ನು ನಡೆಯಿಸಬೇಕು. ಧೂರ್ವೋಢಾರೌ ಬಂಡಿಗೆ ಕಟ್ಟುವದಕ್ಕೆ ತಕ್ಕ - ಎಂದರ್ಥ. ಇದನ್ನು ಧೂರ್ವಹೌ, ಯುಗ್ಯೌ (ನೊಗಕ್ಕೆ ತಕ್ಕ) ಎಂಬ ಶಬ್ದಗಳಿಂದಲೂ ತಿಳಿಸಬಹುದು.

೪. **ಪಙ್ಕಪೂರಮ್** (ಕೆಸರಿನ ಪ್ರವಾಹವನ್ನು ಎಂದು ಅಕ್ಷರಾರ್ಥ) ನೀರಾಗಿರುವ ವಸ್ತುವಿನ 'ರಾಶಿ' ಎಂಬರ್ಥದಲ್ಲಿ ಸಮಾಸದ ಕೊನೆಯಲ್ಲಿ 'ಪೂರ' ಶಬ್ದವನ್ನಿಡುತ್ತಾರೆ.

೫. '**ಕಲಿತಚರಣಃ**' ಕಲ್ ಎಂಬ ೧೦ ನೆಯ ಗಣದ ಧಾತುವಿಗೆ ಹೋಗು, ಎಣಿಸು - ಎಂಬರ್ಥಗಳಿವೆ. ಈ ಧಾತುವಿಗೆ ಉಪಸರ್ಗಗಳು ಸೇರಿದಾಗಲೂ ಸೇರದೆ ಇರುವಾಗಲೂ ಬೇರೆಬೇರೆಯ ಅರ್ಥವಾಗುತ್ತದೆ. ಉದಾ : 'ಆಕಲಯತಿ' - ಹಿಡಿಯುತ್ತಾನೆ, ತಿಳಿಯುತ್ತಾನೆ ; 'ಸಂಕಲಯತಿ' - ಕೂಡಿಸುತ್ತಾನೆ' ; 'ವಿಕಲಯತಿ' - ಊನಗೊಳಿಸುತ್ತಾನೆ ; ಗಾಯಗೊಳಿಸುತ್ತಾನೆ ; ಇಲ್ಲಿ 'ಕಾಲುಮುರಿದುಕೊಂಡು' ಎಂದು ಕೆಲವರು ಅರ್ಥಮಾಡಿರುತ್ತಾರೆ. ಕಥೆಯಲ್ಲಿ ಅದಕ್ಕೆ ಆಧಾರವಿಲ್ಲ.

೬. 'ಯುಗಭಙ್ಗಂ ವಿಧಾಯ' (ನೊಗವನ್ನು ಮುರಿದುಕೊಂಡು ಎಂದು ಅಕ್ಷರಾರ್ಥ) ಎತ್ತುಗಳು ಸೋತಾಗ ನೊಗದ ಹಗ್ಗವನ್ನು ಕಳಚಿಕೊಂಡು ಅಥವಾ ಹಾಗೆಯೇ ಬಿದ್ದುಕೊಳ್ಳು

ವದುಂಟು. ಇದನ್ನು ಹಳ್ಳಿಯವರು 'ಕಣಿಹಾಕಿಕೊಳ್ಳುವದು' ಎನ್ನುತ್ತಾರೆ ; 'ಮುರಿದು' ಎಂಬುದು ಪ್ರಕೃತಕ್ಕೆ ಹೊಂದುವದಿಲ್ಲ.

೭. **'ವಿಷಣ್ಣಮ್'** ಸದ್ (ಮುರಿ, ಹೋಗು, ಕುಸಿ) ಎಂಬ ಒಂದನೆಯ ಅಥವಾ ಆರನೆಯ ಗಣದ ಧಾತುವಿಗೆ 'ಸೀದತಿ' ಎಂದು ರೂಪವಾಗುತ್ತದೆ. ಅದರ ಕೃದಂತವು 'ಸನ್ನ' ಎಂದಾಗುತ್ತದೆ. ಉಪಸರ್ಗವು ಸೇರಿದಾಗ ಈ ಸಕಾರಕ್ಕೆ ಷಕಾರವು ಆದೇಶ. ಆದ್ದರಿಂದ 'ವಿಷಣ್ಣ' ಎಂದಾಗಿದೆ. ಭೂತಕೃದಂತಗಳಿಗೆ 'ತ' ಬದಲು 'ನ' ಬರುವದೂ ಉಂಟು. ಉದಾ : ಭಗ್ನ, ಸಂಪನ್ನ, ವಿನ್ನ, ತುನ್ನ.

೮. **ವೃಷಭಸ್ಯ ಕೃತೇ ।** 'ಕೃತೇ' (ಓಸ್ಕರ) ಎಂಬ ಅವ್ಯಯಕ್ಕೆ ಷಷ್ಠೀವಿಭಕ್ತಿ ಬೇಕು. 'ವೃಷಭಸ್ಯಾರ್ಥಾಯ', 'ವೃಷಭಸ್ಯ ನಿಮಿತ್ತೇನ' - ಎಂದರೂ ಇದೇ ಅರ್ಥ.

೯. **ತ್ರಿರಾತ್ರಮ್** : 'ತಿಸೃಣಾಂ ರಾತ್ರೀಣಾಂ ಸಮಾಹಾರಃ ; ತತ್ ।' ಎಂದು ವಿಗ್ರಹ. ದ್ವಿಗುಸಮಾಸ.

೧೦. **ಸಾರ್ಥಃ** (ಗುಂಪು), **ಸಾರ್ಥಿಕಾಃ** (ಗುಂಪಿನವರು) - ಈ ಮಾತುಗಳು ಒಟ್ಟಾಗಿ ಪ್ರಯಾಣಮಾಡುವ ವರ್ತಕರನ್ನು ಹೇಳುವವು. 'ಸಮಗ್ರೋಽಪಿ ಸಾರ್ಥಃ' ಎಂದು ಪಾಠಾಂತರವಿದೆ, ಆಗಲೂ ಇದೇ ಅರ್ಥ. ಸಂಸ್ಕೃತದಲ್ಲಿ ವಿಶೇಷಣಗಳಿಗೇ ಚ, ಅಪಿ, ಏವ - ಮುಂತಾದವುಗಳನ್ನು ಅರ್ಥಕ್ಕನುಗುಣವಾಗಿ ಪ್ರಯೋಗಿಸುತ್ತಾರೆ. ಬಾಲಶ್ಚ ರಾಮಃ = ಮತ್ತು ಬಾಲನಾದ ರಾಮನು ; ಬಾಲೋಽಪಿ ರಾಮಃ = ಹುಡುಗನಾದರೂ ರಾಮನು ; ಬಾಲ ಏವ ರಾಮಃ = ಹುಡುಗನೇ ಆದ ರಾಮನು. ಕನ್ನಡದಲ್ಲಿ ವಿಶೇಷ್ಯಕ್ಕೇ ಇವುಗಳನ್ನು ಸೇರಿಸುವ ವಾಡಿಕೆ ಹೆಚ್ಚುತ್ತಿದೆ. ಬಾಲಕನಾದ ರಾಮನೂ, ಹುಡುಗನಾದ ರಾಮನೂ ಅಥವಾ ರಾಮನು ಹುಡುಗನಾದರೂ, ಹುಡುಗನಾದ ರಾಮನೇ ಅಥವಾ ರಾಮನು ಹುಡುಗನೇ ಆದರೂ.

೧೧. **ಏತದೇವಾತ್ರ ಪಾಣ್ಡಿತ್ಯಂ ಯತ್** (that) - ಇಲ್ಲಿ 'ಯತ್' ಎಂಬುದು ಸಂಬಂಧಾರ್ಥಕ ಸರ್ವನಾಮ. 'ಏತತ್' ಗೆ ಬದಲಾಗಿ 'ಇದಮ್' ಎಂದೂ, 'ತತ್' ಎಂದೂ ಉಪಯೋಗಿಸಬಹುದು. ಸಾಮಾನ್ಯವಾಗಿ 'ಯತ್' ಶಬ್ದವಿರುವ ವಾಕ್ಯಕ್ಕೆ 'ತತ್' ಇರುವ ಮತ್ತೊಂದು ವಾಕ್ಯವು ಬೇಕು. (ಪು. ೧೧೪, ೧೧೫)

## ಅಭ್ಯಾಸ ೧೩

1. ಈ ಪ್ರಶ್ನೆಗಳಿಗೆ ಅರ್ಥವನ್ನು ಹೇಳಿ ಸಂಸ್ಕೃತದಲ್ಲಿ ಉತ್ತರವನ್ನು ಬರೆಯಿರಿ :

१. वर्धमानकस्य कति वृषभा आसन् ? २. तौ तेन कथं प्राप्तौ ? ३. तयोरन्यतरस्य यमुनातीरे किम् आपन्नम् ? ४. वर्धमानकः किं कृतवान् ?

2. मङ्गलवृषभौ, यमुनाकच्छम्, भूरिरक्षणम् - ಇವುಗಳಿಗೆ ವಿಗ್ರಹವಾಕ್ಯವನ್ನು ಬರೆಯಿರಿ.

२३. अथासौ तदवधार्य सञ्जीवकस्य रक्षापुरुषान् निरूप्य अशेषसार्थं नीत्वा प्रस्थितः । अथ रक्षापुरुषा अपि बह्वपायं तद्वनं विदित्वा सञ्जीवकं परित्यज्य पृष्ठतो गत्वा अन्येद्युस्तं सार्थवाहं मिथ्या आहुः 'स्वामिन्, मृतोऽसौ सञ्जीवकः । अस्माभिस्तु सार्थवाहस्य अभीष्टः इति मत्वा वह्निना संस्कृतः' इति । तच्छ्रुत्वा सार्थवाहः कृतज्ञतया स्नेहार्द्रहृदयः, तस्य और्ध्वदेहिकक्रियाः वृषोत्सर्गादिकाः सर्वाश्चकार (= अकरोत्, कृतवान्) ॥

ಆಗ ಅವನು ಅದನ್ನು ನಿಶ್ಚಯಿಸಿ ಸಂಜೀವಕನಿಗೆ ಕಾವಲುಜನರನ್ನು ಗೊತ್ತು ಮಾಡಿ ಎಲ್ಲಾ ಸಾರ್ಥವನ್ನೂ ಕರೆದುಕೊಂಡು ಹೊರಟನು. ಬಳಿಕ ಕಾವಲುಜನರು ಕೂಡ ಆ ಕಾಡು ಬಹಳ ಅಪಾಯದ್ದೆಂದು ತಿಳಿದು ಸಂಜೀವಕನನ್ನು ಬಿಟ್ಟು ಹಿಂದು ಗಡೆಯಿಂದ ಹೋಗಿ ಇನ್ನೊಂದು ದಿನ ವರ್ತಕರೊಡೆಯನಿಗೆ ಸುಳ್ಳೇ (ಹೀಗೆಂದು) ಹೇಳಿದರು : 'ಸ್ವಾಮಿ, ಸತ್ತುಹೋಯಿತು, ಆ ಸಂಜೀವಕ. ಸಾರ್ಥವಾಹನಿಗೆ ಬೇಕಾದ್ದೆಂದು ತಿಳಿದು (ನಮ್ಮಿಂದಲಾದರೋ ಬೆಂಕಿಯಿಂದ ಸಂಸ್ಕೃತವಾಯಿತು =) ನಾವೇನೊ, ಅದಕ್ಕೆ ಅಗ್ನಿಯಿಂದ ಸಂಸ್ಕಾರ ಮಾಡಿದೆವು.' ಅದನ್ನು ಕೇಳಿ ಸಾರ್ಥವಾಹನು ಕೃತಜ್ಞತೆಯಿಂದ, ಸ್ನೇಹದಿಂದ ಹೃದಯವು ಕರಗಿ, ಅದಕ್ಕೆ ವೃಷೋತ್ಸರ್ಗವೇ ಮುಂತಾದ (ದೇಹವನ್ನು ಬಿಟ್ಟಮೇಲೆ ಮಾಡಬೇಕಾದ) ಉತ್ತರಕ್ರಿಯೆಗಳೆಲ್ಲವನ್ನೂ ಮಾಡಿದನು.

## ಚಿಂತನ

೧. ಅವಧಾರ್ಯ । ಧೃ ಎಂಬ (ಧರತಿ, ಧಾರಯತಿ) ಒಂದನೆಯ ಗಣದ ಪ್ರೇರಣಾರ್ಥ, ಅಥವಾ ಹತ್ತನೆಯ ಗಣದ ಧಾತುವಿಗೆ ತ್ವಾ ಪ್ರತ್ಯಯ ಸೇರುವಾಗ ಉಪಸರ್ಗವಿರುವದರಿಂದ ಅದಕ್ಕೆ ಬದಲು 'ಯ' ಬಂದಿದೆ (ಪು. 125-126) ಆಲೋಕ್ಯ, ಆಹೂಯ, ಆಕರ್ಣ್ಯ, ಆದಾಯ, ಅಧೀತ್ಯ, ಸಂಪ್ರಧಾರ್ಯ, ವಿಧಾಯ, ಪರಿತ್ಯಜ್ಯ - ಇವೆಲ್ಲ ಇಂಥ ಅವ್ಯಯಗಳೇ. ಪಾಣಿನಿಯ ವ್ಯಾಕರಣದಲ್ಲಿ ಇವನ್ನು ಲ್ಯಬನ್ತಾವ್ಯಯಗಳೆನ್ನುತ್ತಾರೆ.

೨. ಅನ್ಯೇದ್ಯುಃ । (ಇನ್ನೊಂದು ದಿನ), ಒಂದು ದಿನ. ಹೀಗೆಯೇ 'ಇತರೇದ್ಯುಃ', 'ಪೂರ್ವೇದ್ಯುಃ' (ಮುನ್ನಿನ ದಿನ) ; 'ಉತ್ತರೇದ್ಯುಃ', 'ಅಪರೇದ್ಯುಃ' (ಮಾರನೆಯ ದಿನ) ; 'ಅಧರೇದ್ಯುಃ' (ಕೆಳಗಿನ, ಈಚಿನ ದಿನ) ; 'ಅನ್ಯತರೇದ್ಯುಃ' (ಎರಡರಲ್ಲಿ ಒಂದು ದಿನ) ; 'ಉಭಯೇದ್ಯುಃ' (ಎರಡೂ ದಿನ) - ಇವುಗಳೆಲ್ಲ ಅವ್ಯಯಗಳು.

೩. ಮಿಥ್ಯಾ । 'ಸುಳ್ಳು' ಎಂಬರ್ಥದ ಅವ್ಯಯ. 'ಮೃಷಾ' ಎಂಬ ಅವ್ಯಯಕ್ಕೂ ಇದೇ ಅರ್ಥ.

೪. ಸಂಸ್ಕೃತಃ - ಮಂತ್ರಪೂರ್ವಕವಾಗಿ ಸಂಸ್ಕಾರಮಾಡಿದರೆ ಸದ್ಗತಿಯಾಗುವದೆಂದು ಆಸ್ತಿಕರ ನಂಬಿಕೆ. ಔರ್ಧ್ವದೇಹಿಕಕ್ರಿಯಾಃ - ಸತ್ತವರಿಗೆ ಮಾಡಬೇಕಾದ ಕರ್ಮಗಳು. ವೃಷೋತ್ಸರ್ಗಃ - ಒಂದು ಗೂಳಿಯನ್ನು ಧರ್ಮಾರ್ಥವಾಗಿ ಬಿಟ್ಟುಬಿಡುವದು. ಇಂಥ ಗೂಳಿಯನ್ನು ಆಸ್ತಿಕರು ಗೌರವದಿಂದ ಕಾಣುತ್ತಾರೆ.

## ಅಭ್ಯಾಸ ೧೪

ಈ ವಾಕ್ಯಗಳನ್ನು ಪೂರ್ತಿಗೊಳಿಸಿರಿ :

१. इदं वनम् बह्वपायम् ; अतः .... । २. रक्षापुरुषा अपि सञ्जीवकं परित्यक्तवन्तः ; यस्मात्, बह्वपायात् तस्माद्वनात् .... .... । ३. सञ्जीवकः .... अभीष्टः ; अतः अस्माभिः .... .... संस्कृतः ।।

# ೮. ಸಮಸ್ತಪದಗಳು

## ಬಹುವ್ರೀಹಿ, ನಞ್ಸಮಾಸ, ಅವ್ಯಯೀಭಾವ

೨೪. ಈ ವಾಕ್ಯಗಳಲ್ಲಿ 'रक्तनेत्र' ಶಬ್ದವು ವಿಶೇಷಣವೊ, ಸ್ವತಂತ್ರಪದವೊ ? ಅವುಗಳ ವಿಗ್ರಹವಾಕ್ಯದಲ್ಲಿ ಏನು ಹೆಚ್ಚುಕಡಿಮೆ ಇದೆ ?

१. रक्तनेत्रं कोपं सूचयति । = ಕೆಂಗಣ್ಣು ಸಿಟ್ಟನ್ನು ಸೂಚಿಸುತ್ತದೆ.

२. रक्तनेत्रः सेनापतिः कुपित इव दृश्यते । = ಕೆಂಗಣ್ಣ ಸೇನಾಪತಿ ಸಿಟ್ಟಾದವನಂತೆ ಕಾಣಿಸುತ್ತಾನೆ.

३. सन्ध्या रक्तनेत्रा युवतिरिव शोभते । = ಸಂಧ್ಯಾಕಾಲವು ಕೆಂಗಣ್ಣಿನ ಯುವತಿಯಂತೆ ಒಪ್ಪುತ್ತದೆ.

४. रक्तनेत्रं मित्रं ममाग्रे तिष्ठति । = ಕೆಂಗಣ್ಣಿನ ಮಿತ್ರನು ನನ್ನ ಮುಂದೆ ನಿಂತಿದ್ದಾನೆ.

ಮೊದಲನೆಯ ವಾಕ್ಯದಲ್ಲಿ 'ರಕ್ತನೇತ್ರಮ್' ಎಂಬುದು ಸ್ವತಂತ್ರಪದ ; ರಕ್ತಂ ನೇತ್ರಮ್ ಅಥವಾ ರಕ್ತಂ ಚ ತತ್ ನೇತ್ರಂ ಚ - ಎಂದು ವಿಗ್ರಹ. ಇದು ಕರ್ಮಧಾರಯಸಮಾಸ (Appositional Compound)

ಎರಡನೆಯ ವಾಕ್ಯದಲ್ಲಿ 'ರಕ್ತನೇತ್ರಃ' ಎಂಬ ಸಮಸ್ತಪದವು 'ಸೇನಾಪತಿಃ' ಎಂಬುದಕ್ಕೆ ವಿಶೇಷಣ ; ಪುಲ್ಲಿಂಗ. ಇದಕ್ಕೆ 'ರಕ್ತೇ ನೇತ್ರೇ ಯಸ್ಯ ಸಃ' ಎಂದು ವಿಗ್ರಹ.

ಮೂರನೆಯ ವಾಕ್ಯದಲ್ಲಿ 'ರಕ್ತನೇತ್ರಾ' ಎಂಬುದು 'ಯುವತಿಃ' ಎಂಬುದಕ್ಕೆ ವಿಶೇಷಣವಾಗಿದೆ. ಆದ್ದರಿಂದ ಸ್ತ್ರೀಲಿಂಗವಾಗಿದೆ. 'ರಕ್ತೇ ನೇತ್ರೇ ಯಸ್ಯಾಃ ಸಾ' ಎಂದು ವಿಗ್ರಹ.

ನಾಲ್ಕನೆಯ ವಾಕ್ಯದಲ್ಲಿ 'ರಕ್ತನೇತ್ರಮ್' ಎಂಬುದು 'ಮಿತ್ರಮ್' ಎಂಬುದಕ್ಕೆ ವಿಶೇಷಣ ; ನಪುಂಸಕಲಿಂಗ ; 'ರಕ್ತೇ ನೇತ್ರೇ ಯಸ್ಯ ತತ್' ಎಂದು ವಿಗ್ರಹ.

**ಸಮಸ್ತಪದವು ತನ್ನೊಳಗಿನ ಪೂರ್ವೋತ್ತರಪದಗಳೆರಡಕ್ಕಿಂತಲೂ ಬೇರೆ ಯಾದ ಪದದ ಅರ್ಥವನ್ನು ತಿಳಿಸುವದಾದರೆ ಅದಕ್ಕೆ 'ಬಹುವ್ರೀಹಿ' ಎಂದು ಹೆಸರು. ಅದರ ವಿಗ್ರಹವಾಕ್ಯದಲ್ಲಿ ಯತ್ ಎಂಬ ಸರ್ವನಾಮದ ರೂಪಗಳನ್ನು ಬಳಸಬೇಕಾಗುತ್ತದೆ.**

೨೫. ಸಮಸ್ತಪದವು ವಿಶೇಷಣವಾದ ಮಾತ್ರಕ್ಕೆ ಅದು 'ಬಹುವ್ರೀಹಿ' ಎಂದು ತಿಳಿಯುವದಕ್ಕಿಲ್ಲ. ಸಮಾಸವಾಗುವಲ್ಲಿ ಉತ್ತರಪದದ ಅರ್ಥವು ಮುಖ್ಯವಾಗಿದ್ದರೆ ಅದು ತತ್ಪುರುಷವೇ ; ಅನ್ಯಪದಾರ್ಥವು ಪ್ರಧಾನವಾಗಿರುವ ಸಮಾಸವೇ ಬಹುವ್ರೀಹಿ (Adjectival or Attributive Compound)

ಉದಾಹರಣೆಗೆ :

१. विवेकरहितान् पुत्रान् पश्यतो मे दुःखं भवति ।

ಇಲ್ಲಿ 'विवेकरहितान्' ಎಂಬುದು पुत्रान् ಎಂಬುದಕ್ಕೆ ವಿಶೇಷಣವಾಗಿದೆ. ಆದರೆ ಉತ್ತರಪದದ ಅರ್ಥವೇ ಮುಖ್ಯವಾಗಿದೆ. 'विवेकेन रहिताः ; तान् ।' ಎಂದೇ ವಿಗ್ರಹ. ಆದ್ದರಿಂದ ಇದು **ತತ್ಪುರುಷ** (Determinative Compound). ಹೀಗೆಯೇ

'शय्यारूढस्य वणिजः', 'गृहोत्पन्नौ वृषभौ' ಎಂಬಲ್ಲಿಯೂ ತಿಳಿಯಬೇಕು. ಅವೂ ತತ್ಪುರುಷವೇ.

२. आरूढवानरो नक्रो हर्षेण जलं प्रविष्टः ।

आरूढो वानरः यं सः आरूढवानरः (ಯಾವದನ್ನು ಕೋತಿ ಏರಿತ್ತೋ ಆ **ಮೊಸಳೆ**).

ವಿಶೇಷ : ತತ್ಪುರುಷದಲ್ಲಿ ಭೂತಕೃದಂತವು ಉತ್ತರಪದ, ಬಹುವ್ರೀಹಿಯಲ್ಲಿ ಪೂರ್ವಪದ.

३. कृतप्रणामं दूतं युधिष्ठिरः पृच्छति ।

कृतः प्रणामः येन सः = कृतप्रणामः (ಯಾವನಿಂದ ನಮಸ್ಕಾರವು ಮಾಡಲ್ಪಟ್ಟಿತೋ ಆ **ದೂತನು**)

४. अर्पितार्घ्यो ब्राह्मणः सुखासने उपाविशत् ।

अर्पितं अर्घ्यं यस्मै सः (ಯಾವನಿಗೆ ಅರ್ಘ್ಯವು ಕೊಡಲ್ಪಟ್ಟಿತೋ ಆ ಬ್ರಾಹ್ಮಣನು).

५. स मृगोऽपगतशङ्कं स्थलं प्राप्तवान् ।

अपगता शङ्का यस्मात् तत् (ಯಾವದರಿಂದ ಅಂಜಿಕೆ ತೊಲಗಿತ್ತೋ ಆ ಸ್ಥಲವನ್ನು)

६. सञ्जीवकः पङ्के कलितचरणो न्यषीदत् ।

कलितौ चरणौ यस्य सः (ಸಿಕ್ಕಿಕೊಂಡ ಕಾಲುಗಳು ಯಾರವೋ ಆ ಸಂಜೀವಕ)

७. तैर्भूषणैः सन्तुष्टहृदया सा भार्या तमाह ।

सन्तुष्टं हृदयं यस्याः सा (ಯಾವಳ ಹೃದಯವು ಸಂತುಷ್ಟವಾಯಿತೋ ಆ ಭಾರ್ಯೆ)

८. बह्वपाये अस्मिन् वने न स्थातव्यम् ।

बहवः अपायाः यस्मिन् तत् (ಯಾವದರಲ್ಲಿ ಬಹಳ ಅಪಾಯಗಳಿವೆಯೋ ಆ ವನ)

ಮೇಲೆ ಕೊಟ್ಟಿರುವ 2ನೇ ಸಂಖ್ಯೆಯಿಂದ ಹಿಡಿದು ಮುಂದಿನ ವಾಕ್ಯಗಳಲ್ಲಿ ಸಮಾಸದಲ್ಲಿನ ಪೂರ್ವೋತ್ತರಪದಗಳೆರಡಕ್ಕಿಂತಲೂ ಬೇರೆಯಾದ ಮತ್ತೊಂದು ಪದದ ಅರ್ಥವೇ ಮುಖ್ಯ. ಅಂಥ ಪದವನ್ನು ಕಂಸದಲ್ಲಿ ದಪ್ಪಕ್ಷರದಲ್ಲಿ ತೋರಿಸಿದೆ. ಆ ಪದದ ಲಿಂಗವಚನಗಳೇ 'ಯತ್' ಶಬ್ದಕ್ಕೆ ಇವೆ ; ಯಚ್ಛಬ್ದದ ವಿಭಕ್ತಿಯು ಮಾತ್ರ ಅರ್ಥಕ್ಕೆ ತಕ್ಕಂತೆ ಬೇರೆಬೇರೆಯಾಗಿವೆ. ವಿಗ್ರಹವಾಕ್ಯದಲ್ಲಿರುವ ವಿಶೇಷಣಕ್ಕೆ ತನ್ನ ತನ್ನ ವಿಶೇಷ್ಯದ ಲಿಂಗವಿಭಕ್ತಿವಚನಗಳಿವೆ.

## ಅಭ್ಯಾಸ ೧೫

1. ಇಲ್ಲಿರುವ ವಿಗ್ರಹವಾಕ್ಯಗಳಿಂದ ಸಮಸ್ತಪದಗಳನ್ನು ಮಾಡಿರಿ :

१. बहु जलं यस्यां सा नदी । २. स्वल्पाः जनाः यस्मिन् स ग्रामः । ३. धृतः खड्गः यैस्तैर्भटैः । ४. हताः शत्रवः येन स राजा । ५. दत्तः मोदकः (ಶೀಗಡಬು,

ಮಿಠಾಯಿ) यस्मै स बालः । ६. उद्धृतं क्षीरं यस्मात् स कंसः (ಬಟ್ಟಲು)
७. ऊर्ध्वौ बाहू (ತೋಳುಗಳು) यस्य स ऋषिः ।

2. ಈ ವಿಗ್ರಹವಾಕ್ಯಗಳನ್ನು ಸಮಾಸಮಾಡಿ ಸಮಾಸದ ಹೆಸರನ್ನು ಹೇಳಿರಿ :

१. स्थूला च सा बुद्धिश्च । २. स्थूला बुद्धिर्यस्य सः । ३. स्थूला बुद्धिर्यस्याः सा । ४. भक्षितानि फलानि यैस्ते । ५. भक्षितानि च तानि फलानि च । ६. नष्टं च तत् धनं च । ७. नष्टं धनं ययोस्तौ ; ताभ्याम् । ८. विकलानि (ಮುಕ್ಕಾದ) च तानि अङ्गानि च । ९. विकलानि अङ्गानि येषां ते ; तेभ्यः । १०. मितश्चासौ आहारश्च ; तेन । ११. मितः आहारो येषां ते ; तेषाम् ।।

೨೬. ಈ ವಾಕ್ಯಗಳಲ್ಲಿ 'न' ಎಂಬ ಅವ್ಯಯದೊಡನೆ ನಾಮಪದವು ಸೇರಿಕೊಂಡು ಆಗಿರುವ ಸಮಾಸಗಳು ಯಾವವು ? ನಕಾರಕ್ಕೆ ಬದಲು ಅಕಾರವು ಬಂದಿರುವದನ್ನು ಲಕ್ಷಿಸಿರಿ :-

१. अब्राह्मणा अपि गुणवन्तः पूज्याः । २. अस्थूलं पाषाणखण्डमेकं प्रक्षिप्तवान् । ३. सत्यम् अवदन् असत्यं च वदन् नरकं गच्छति । ४. अचक्षुषां सुन्दरेण चित्रेण किं प्रयोजनम् ?

ವಿಗ್ರಹವಾಕ್ಯಗಳು ಹೀಗೆ : न ब्राह्मणाः = अब्राह्मणाः ; न स्थूलः = अस्थूलः ; तम् - अस्थूलम् ; न वदन् = अवदन् ; न सत्यम् = असत्यम् ।। ಇವೆಲ್ಲ ಉತ್ತರಪದಾರ್ಥಪ್ರಧಾನವಾಗಿರುವದರಿಂದ **ನಞ್ತತ್ಪುರುಷ.**

न विद्यते चक्षुषी येषां ते अचक्षुषः ; तेषाम् - अचक्षुषाम् । ಇದು ಅನ್ಯಪದಾರ್ಥಪ್ರಧಾನವಾಗಿರುವದರಿಂದ **ನಞ್ಬಹುವ್ರೀಹಿ.**

ವಿಶೇಷ : ಉತ್ತರಪದವು ಸ್ವರಾದಿಯಾಗಿದ್ದರೆ 'ನ' ಎಂಬುದಕ್ಕೆ ಅಕಾರವು ಬರುವದಿಲ್ಲ. ಅದಕ್ಕೆ 'ಅನ್' ಎಂಬ ಆದೇಶವಾಗುತ್ತದೆ. ಉದಾ : ಅನೀಶಃ (= ನ ಈಶಃ) ಅನಙ್ಗಃ (= ನ ವಿದ್ಯತೇ ಅಙ್ಗಂ ಯಸ್ಯ ಸಃ, ಮನ್ಮಥಃ)

**ಶ್ಲೋಕ : ತತ್ಸಾದೃಶ್ಯಮಭಾವಶ್ಚ ತದನ್ಯತ್ವಂ ತದಲ್ಪತಾ ।**
**ಅಪ್ರಾಶಸ್ತ್ಯಂ ವಿರೋಧಶ್ಚ ನಞರ್ಥಾಃ ಷಟ್ಪ್ರಕೀರ್ತಿತಾಃ ।।**

**ನಞಪದಕ್ಕೆ ಆರು ಅರ್ಥಗಳು :** ೧. ಅದಕ್ಕೆ ಸದೃಶವಾದದ್ದು, अब्राह्मणः

(ಬ್ರಾಹ್ಮಣನಂತಿರುವವನು) ; ೨. ಅಭಾವ : असंदेहः (ಸಂದೇಹವಿಲ್ಲ) ೩. ಅನ್ಯ: अनश्वः (ಕುದುರೆಯಲ್ಲದ ಪ್ರಾಣಿ) ; ೪. ಅಲ್ಪತ್ವ : अनुदराः (ಬಡ ಹೊಟ್ಟೆಯವಳು) ; ೫. ಪ್ರಶಸ್ತವಲ್ಲದ : अपशवः (ಒಳ್ಳೆಯವಲ್ಲದ ಪಶುಗಳು) ; ೬. ವಿರೋಧ : अधर्मः (ಧರ್ಮಕ್ಕೆ ವಿರುದ್ಧವಾದ ಪಾಪ). ಆಯಾ ಸಂದರ್ಭಕ್ಕೆ ಹೊಂದುವಂತೆ ಈ ಅರ್ಥಗಳನ್ನು ತೆಗೆದುಕೊಳ್ಳಬೇಕು.

೨೭. ಇಲ್ಲಿರುವ ಸಮಸ್ತಪದಗಳ ಪೂರ್ವಪದವು ಎಂಥ ಪದ ? ಅಲ್ಲಲ್ಲಿಯೇ ಕಂಸಗಳಲ್ಲಿಟ್ಟಿರುವ ವಿಗ್ರಹವಾಕ್ಯಗಳನ್ನು ನೆನಪಿನಲ್ಲಿಡಿರಿ. ವಾಕ್ಯಗಳ ಅರ್ಥವನ್ನು ಊಹಿಸಿರಿ.

१. देव, यथामति (= मतिमनतिक्रम्य) कथयामि । २. बहिर्ग्रामं (ग्रामाद् बहिः) वनमस्ति । ३. न त्वम् अनुरूपं (= रूपस्य योग्यम्) भाषसे । ४. प्रतिदिनं (= दिनं दिनं प्रति) तत्र स्नानार्थं गच्छन्ति ब्राह्मणाः । ५. अधिहरि ( हरौ इति) भक्तिर्वैष्णवस्य । ६. उपग्रामं (= ग्रामस्य समीपे) भवति अश्वत्थः । ७. सभोजनपत्रम् (= भोजनपत्रमपि अपरित्यज्य) अत्ति क्षुधार्तः ( क्षुधया आर्तः) । ८. आबालं (= बालान् अभिव्याप्य ಹುಡುಗರವರೆಗೂ) विदितमिदम् ॥

ಇಲ್ಲಿ ಮೊದಲಿನ ಪದವು ಅವ್ಯಯವಾಗಿದೆ ; ಸಮಸ್ತಪದವೂ ಅವ್ಯಯವಾಗಿದೆ. ಇದಕ್ಕೆ **ಅವ್ಯಯೀಭಾವಸಮಾಸ** (Adverbial Compound) ವೆಂದು ಹೆಸರು.

೨೮. ಈ ಕೆಳಗೆ ತೋರಿಸಿರುವ ವಿಶೇಷಗಳನ್ನು ಲಕ್ಷಿಸಿರಿ :

१. अकरुणं ताडयति = ಕರುಣವಿಲ್ಲದೆ ಹೊಡೆಯುತ್ತಾನೆ.

न विद्यते करुणा यस्मिन् कर्मणि तद्यथा भवति तथा = अकरुणम् ಅನ್ಯಪದಾರ್ಥಪ್ರಧಾನವಾದ್ದರಿಂದ 'ಅಕರುಣ' ಎಂಬ ವಿಶೇಷಣವು ಬಹುವ್ರೀಹಿ ; ಇದರಿಂದ ಒಂದು ಅವ್ಯಯವನ್ನು ಮಾಡಿಕೊಂಡಿದೆ. ಆದ್ದರಿಂದ ಇದು ಅವ್ಯಯೀಭಾವವಲ್ಲ ; **ಕ್ರಿಯಾವಿಶೇಷಣಬಹುವ್ರೀಹಿ.**

२. सतृणम् (तृणमपि अपरित्यज्य) । ಅವ್ಯಯಪೂರ್ವಪದ, ಅವ್ಯಯ. **ಅವ್ಯಯೀಭಾವಸಮಾಸ.** सपुत्रः पिता गच्छति । पुत्रेण सह वर्तत इति सपुत्रः ಎಂದು ವಿಗ್ರಹ. ಅನ್ಯಪದಾರ್ಥಪ್ರಧಾನವಾದ್ದರಿಂದ ಇದು **ಬಹುವ್ರೀಹಿ.**

३. उपकृष्णम् (कृष्णस्य समीपे) । ಅವ್ಯಯಪೂರ್ವಪದ, ಒಟ್ಟು ಅವ್ಯಯ ; ಅವ್ಯಯೀಭಾವ. उपदशाः । दशानां समीपे ये सन्ति ते (ಸ್ವಲ್ಪ ಹೆಚ್ಚು ಕಡಿಮೆ ಹತ್ತು) ಇದು ಅನ್ಯಪದಾರ್ಥಪ್ರಧಾನವಾದ್ದರಿಂದ **ಬಹುವ್ರೀಹಿ.**

४. द्विजायायं = द्विजार्थः पाकः । ಹೀಗೆಯೇ द्विजायेयं = द्विजार्था शय्या । द्विजायेदम् = द्विजार्थं फलम् । ಇವೆಲ್ಲ **ನಿತ್ಯಸಮಾಸಗಳು** ಎಂದರೆ ಅವುಗಳ ವಿಗ್ರಹವಾಕ್ಯದಲ್ಲಿ ಸಮಾಸದಲ್ಲಿರುವ ಅರ್ಥಶಬ್ದವನ್ನಿಡದೆ ಬೇರೆಯ ಮಾತುಗಳಿಂದ ವಿವರಿಸಿದೆ.

५. पूजार्थमागतः । पूजा अर्थः यस्मिन् कर्मणि तद्यथा भवति तथा । (ಯಾವ ಕ್ರಿಯೆಯಲ್ಲಿ ಪೂಜೆಯು ಪ್ರಯೋಜನವೋ ಅದು ಹೇಗಾಗುವದೋ ಹಾಗೆ) ಎಂದು ವಿಗ್ರಹವಾಕ್ಯ. 'ಪೂಜೆಗೋಸ್ಕರವಾಗಿ' ಎಂದು ಅರ್ಥ. ಇದು **ಕ್ರಿಯಾವಿಶೇಷಣ ಬಹುವ್ರೀಹಿ.**

## ಅಭ್ಯಾಸ ೧೬

ಈ ವಾಕ್ಯಗಳಲ್ಲಿರುವ ಸಮಸ್ತಪದಗಳಿಗೆ ವಿಗ್ರಹವನ್ನು ಹೇಳಿರಿ. ಮೊದಲು ವಾಕ್ಯಗಳ ಅರ್ಥವನ್ನೂಹಿಸಿ :

१. उपग्रामं बहुजला नदी प्रवहति । २. स्वल्पजने अस्मिन् ग्रामे वासो न मह्यं रोचते । ३. सेनापतिर्धृतशस्त्रैर्वीरभटैः सह शत्रुराज्यम् अभियाति । ४. निबिड वृक्षेऽपि अरण्ये विकसितकमलं सरोऽतीव शोभते । ५. मेघश्यामं गुणाभिरामं श्रीरामं सलक्ष्मणं पश्यामि । ६. आमुक्ति जीवाः संसारे परिभ्रमन्ति । ७. यावद्दक्षिणं (= यावत्यो दक्षिणाः तावत्यः) अश्वत्थप्रदक्षिणाः करोमि । ८. शत्रुहतान् सैनिकान् दृष्ट्वा राजा हताशोऽभवत् । ९. श्याममेघं दृष्ट्वा नृत्यति मयूरः । १०. श्यमामेघम् आकशं दृष्ट्वा शङ्के (ಊಹಿಸುತ್ತೇನೆ) अद्य वर्षति देवः (ಇಂದ್ರನು, ಅಥವಾ ಮೋಡವು) इति ॥

## ಅಭ್ಯಾಸ ೧೭

ಇಲ್ಲಿ ಅನೇಕಪದಗಳಿಂದಾಗಿರುವ ಸಮಸ್ತಪದಗಳಿಗೆ ಎರಡೆರಡು ಪದಗಳನ್ನು ತೆಗೆದುಕೊಂಡು ವಿಗ್ರಹವಾಕ್ಯವನ್ನು ಹೇಳಿರಿ :

१. सकलकलापारंगतः (सकलाश्च ताः कलाश्च = सकलकलाः ; तासु-सकलकलासु । सकलकलासु पारंगतः = सकलकलापारंगतः) । २. धर्मोपार्जितभूरिविभवः । ३. परिचितग्राहकागमः । ४. मिथ्याक्रयकथनम् । ५. प्रभूतकालज्ञेयानि । ६. मदनुग्रहार्थम् । ७. स्वनामत्यागः ।

## ಅಭ್ಯಾಸ ೧೮

ಈ ವಾಕ್ಯಗಳನ್ನು ಕನ್ನಡಿಸಿರಿ. ಸಮಸ್ತಪದಗಳಿಗೆ ವಿಗ್ರಹವನ್ನು ಹೇಳಿರಿ :

१. अपुत्राः पुत्रिणः सन्तु । २. अविधिना कृतम् अकृतं भवति । ३. कस्मात् त्वम् अनाहारस्तिष्ठसि ? ४. स यथापूर्वं तूष्णीं भवति । ५. प्रतिग्रामं मेघो वर्षति स्म । ६. अपवित्रोऽपि भगवन्तं स्मरन् पवित्रो भवति । ७. स्वयम् अगच्छन्नपि चन्द्रमा मेघानां चलनेन चलतीव दृश्यते ॥

## ९. मित्रभेदः (अनुवृत्तः)

२९. सञ्जीवकोऽपि आयुःशेषतया यमुनासलिलमिश्रैः शिशिरतरवातैराप्यायितशरीरः कथञ्चिदपि उत्थाय यमुनातटम् उपपेदे (= उपापद्यत, उपपन्नः) तत्र मरकतसदृशानि बालतृणाग्राणि भक्षयन् कतिपयैरहोभिः हरवृषभ इव पीनः, ककुद्मान् बलवांश्च संवृत्तः, प्रत्यहं वल्मीकशिखराग्राणि श्रृङ्गाभ्यां विदारयन् प्रगर्जन् आस्ते ॥

ಸಂಜೀವಕನು ಕೂಡ (ಆಯುಸ್ಸಿನ ಉಳಿಕೆಯುಳ್ಳದ್ದಾಗಿರುವಿಕೆ =) ಆಯುಸ್ಸು ಉಳಿದಿದ್ದದ್ದರಿಂದ ಯಮುನೆಯ ನೀರಿನಿಂದ ಮಿಶ್ರವಾದ ಬಹುತಣ್ಣನೆಯ ಗಾಳಿಗಳಿಂದ (ಪುಷ್ಟಿಗೊಳಿಸಲ್ಪಟ್ಟ ಶರೀರವುಳ್ಳದ್ದಾಗಿ =) ಶರೀರದಲ್ಲಿ ಚೇತರಿಸಿಕೊಂಡು ಹೇಗೋ ಎದ್ದು ಯಮುನೆಯ ದಡವನ್ನು ಸೇರಿತು. ಅಲ್ಲಿ ಪಚ್ಚೆಗೆ ಸಮಾನವಾದ (ಎಳೆಹುಲ್ಲಿನ ತುದಿಗಳನ್ನು =) ಗರಿಕೆಯ ಕುಡಿಗಳನ್ನು ತಿನ್ನುತ್ತಾ ಕೆಲವು ದಿನಗಳೊಳಗೆ ಶಿವನ ಎತ್ತಿನಂತೆ ಕೊಬ್ಬಿ (ದೊಡ್ಡ) ಹಿಣಿಲುಳ್ಳದ್ದೂ ಬಲವುಳ್ಳದ್ದೂ ಆಗಿ ಪ್ರತಿದಿನವೂ ಹುತ್ತದ ಕೋವೆಗಳ ತುದಿಗಳನ್ನು ಕೋಡುಗಳಿಂದ (ಸೀಳುತ್ತಾ =) ಹಾಯ್ದು ಕೆಡಹುತ್ತಾ ಗುಟುರುಹಾಕುತ್ತಾ (ಇದ್ದುಕೊಂಡಿದೆ =) ಇದ್ದುಕೊಂಡಿತ್ತು.

# ಚಿಂತನ

೧. **ಆಯುಃಶೇಷತಯಾ** - ಆಯುಷಃ ಶೇಷಃ ಯಸ್ಯ ಸಃ ಆಯುಃಶೇಷಃ ; ತಸ್ಯ । ಆಯುಶ್ಶೇಷಸ್ಯ ಭಾವಃ ಆಯುಃಶೇಷತಾ ; ತಯಾ ॥

'ತಾ', 'ತ್ವಮ್' ಎಂಬೀ ಪ್ರತ್ಯಯಗಳು ಭಾವಾರ್ಥದಲ್ಲಿ ಬರುತ್ತವೆ. ಉದಾ : ಘಟತ್ವಮ್, ಘಟತಾ । (ಇವಕ್ಕೆ) ಘಟದ ಭಾವ, ಗಡಿಗೆಯಾಗಿರುವಿಕೆ ಎಂದು ಅರ್ಥ.

೨. **ಯಮುನಾಸಲಿಲಮಿಶ್ರೈಃ** - ಯಮುನಾಯಾಃ ಸಲಿಲಮ್ - ಯಮುನಾ ಸಲಿಲಮ್ ; ತೇನ - ಯಮುನಾಸಲಿಲೇನ । ಯಮುನಾಸಲಿಲೇನ ಮಿಶ್ರಾಃ - ಯಮುನಾಸಲಿಲ ಮಿಶ್ರಾಃ ; ತೈಃ ॥

೩. **ಆಪ್ಯಾಯಿತಶರೀರಃ** - ಆಪ್ಯಾಯಿತಂ ಶರೀರಂ ಯಸ್ಯ ಸಃ । 'ಆಪ್ಯಾಯಿತ' ಎಂಬುದು 'ಪ್ಯೈ' (ಬಲಪಡಿಸು) ಎಂಬ ಧಾತುವಿನ ಪ್ರೇರಣಾರ್ಥದ ಭೂತಕೃದಂತ.

೪. **ಶಿಶಿರತರವಾತೈಃ** - ಶಿಶಿರತರಾಶ್ಚ ತೇ ವಾತಾಶ್ಚ ; ತೈಃ ॥

೫. **ಕಥಞ್ಚಿತ್** - (ಹೇಗೋ). ಇದನ್ನು 'ಆಯಾಸದಿಂದ', 'ಕಷ್ಟದಿಂದ' ಎಂಬರ್ಥ ದಲ್ಲಿ ಪ್ರಯೋಗಿಸುತ್ತಾರೆ.

೬. **ಮರಕತಸದೃಶಾನಿ** - 'ಮರಕತೇನ ಸದೃಶಾನಿ' ಎಂದು ವಿಗ್ರಹವಾಕ್ಯ. 'ಪೂರ್ವ' (ಹಿರಿಯ), 'ಸದೃಶ', 'ಸಮ', 'ಊನ' (ಕಡಿಮೆ), 'ಕಲಹ', 'ನಿಪುಣ', 'ಮಿಶ್ರ', 'ಶ್ಲಕ್ಷ್ಣ' (ನಯವಾದ) - ಈ ಪದಗಳೊಡನೆ ಸೇರಿಕೊಂಡಾಗ ತೃತೀಯಾಂತಪದವು ತತ್ಪುರುಷ ಸಮಾಸವಾಗುತ್ತದೆ.

೭. **ಕತಿಪಯೈರಹೋಭಿಃ** - (ಕೆಲವು ದಿವಸಗಳೊಳಗೆ). 'ದ್ವಾದಶಭಿರ್ವರ್ಷೈಃ' ಎಂಬುದಕ್ಕೆ ಚಿಂತನದಲ್ಲಿ ಬರೆದಿರುವ ಟಿಪ್ಪಣಿಯನ್ನು [ಪು. ೫] ನೋಡಿ. 'ವರೆಗೆ' ಎಂಬರ್ಥವು ಬೇಕಾದರೆ ದ್ವಿತೀಯೆಯನ್ನು ಉಪಯೋಗಿಸಬೇಕು. ಉದಾ : ಕತಿಪಯಾನಿ ಅಹಾನಿ ತತ್ರ ಆಸಮ್ । ಕೆಲವು ದಿನಗಳವರೆಗೆ ಅಲ್ಲಿದ್ದೆನು. 'ಅಹನ್' ಶಬ್ದಕ್ಕೆ ಹೀಗೆ ರೂಪ ಗಳು :

೧-೨. ಅಹಃ ಅಹ್ನೀ - ಅಹನೀ ಅಹಾನಿ । ೩. ಅಹ್ನಾ ಅಹೋಭ್ಯಾಮ್ ಅಹೋಭಿಃ । ೪. ಅಹ್ನೇ ಅಹೋಭ್ಯಾಮ್ ಅಹೋಭ್ಯಃ । ೫. ಅಹ್ನಃ ಅಹೋಭ್ಯಾಮ್ ಅಹೋಭ್ಯಃ । ೬. ಅಹ್ನಃ ಅಹ್ನೋಃ ಅಹ್ನಾಮ್ । ೭. ಅಹ್ನಿ-ಅಹನಿ ಅಹ್ನೋಃ ಅಹಸ್ಸು ॥

೮. **ಹರಸ್ಯ ವೃಷಭಃ** - ಹರವೃಷಭಃ (ನಂದಿ). ಹರವೃಷಭ ಇವ - ಎಂಬುದು ಅವ್ಯಯೀಭಾವ ; ನಿತ್ಯಸಮಾಸವಾದ್ದರಿಂದ 'ಇವ' ಶಬ್ದದಿಂದ ವಿಗ್ರಹವಿಲ್ಲ. ಇದು ಒಂದೇ ಪದ. ಇದರಲ್ಲಿ ಪೂರ್ವಪದದ ವಿಭಕ್ತಿಯು ಹಾಗೆಯೇ ಉಳಿದಿರುತ್ತದೆ.

೯. **ಪ್ರತ್ಯಹಮ್** - ಅಹರಹಃ ಎಂದು ವಿಗ್ರಹ. ಅವ್ಯಯೀಭಾವ.

೧೦. **ಪ್ರಗರ್ಜನ್ ಆಸ್ತೇ** - 'ಪ್ರಗರ್ಜಂಶ್ಚ ಆಸ್ತೇ' ಎಂದು ಚಕಾರಯುಕ್ತವಾದ ಪಾಠವೂ ಇದೆ. ವರ್ತಮಾನಕೃದಂತಕ್ಕೆ ಆಸ್ (ಕೂರು), ಸ್ಥಾ (ನಿಲ್ಲು, ಇರು), ಮತ್ತು ಕೆಲವು ವೇಳೆಗಳಲ್ಲಿ

ಮಾತ್ರ ಭೂ, ಅಸ್ (ಇರು) - ಈ ಧಾತುಗಳನ್ನು ಸೇರಿಸಿ ಮಾಡಿದ ಕ್ರಿಯಾಪದವು 'ಹೀಗೆ ನಡೆಯುತ್ತಲಿತ್ತು' - ಎಂಬರ್ಥವನ್ನು ತಿಳಿಸುತ್ತದೆ.

३०. अथ कदाचित् पिङ्गलको नाम सिंहः सर्वमृगपरिवृतः पिपासाकुलः, उदकपानार्थं यमुनातटम् अवतीर्णः सञ्जीवकस्य गम्भीर-तररावं दूरादेव अश्रृणोत् । तच्छ्रुत्वा अतीव व्याकुलहृदयः ससाध्वसम् आकारं प्रच्छाद्य वटतले चतुर्मण्डलावस्थानेन अवस्थितः । चतुर्मण्डला-वस्थानं तु इदम् - सिंहः, सिंहानुयायिनः, काकरवाः, किंवृत्ता इति ।।

ಬಳಿಕ ಒಮ್ಮೆ ಪಿಂಗಲಕನೆಂಬ ಸಿಂಹವು (ಎಲ್ಲಾ ಮೃಗಗಳಿಂದಲೂ ಸುತ್ತುವರಿಯಲ್ಪಟ್ಟು =) ಎಲ್ಲಾ ಮೃಗಗಳೊಡನೆ (ಬಾಯಾರಿಕೆಯಿಂದ ತುಂಬಿಕೊಂಡು =) ಬಹಳ ನೀರಡಿಕೆಯಿಂದ ನೀರು ಕುಡಿಯುವದಕ್ಕಾಗಿ ಯಮುನೆಯ ದಡವನ್ನು ಇಳಿದು ಸಂಜೀವಕನ ಬಲು (ಗಂಭೀರ =) ದೊಡ್ಡ ಗುಟರನ್ನು ದೂರದಿಂದಲೇ ಕೇಳಿತು. ಅದನ್ನು ಕೇಳಿ (ಬಹಳ ತಳಮಳಗೊಂಡ ಹೃದಯವುಳ್ಳದ್ದಾಗಿ =) ಮನಸ್ಸಿನಲ್ಲಿ ಬಹಳ ಕಳವಳದಿಂದ (ಭಯದಿಂದೊಡಗೂಡಿ =) ಅಂಜಿಕೆಯಿಂದ (ಆಕಾರವನ್ನು ಮುಚ್ಚಿಕೊಂಡು =) ತನ್ನ ಸ್ಥಿತಿಯನ್ನು ಹೊರಕ್ಕೆ ತೋರಗೊಡದೆ ಆಲದ ಮರದ ಬುಡದಲ್ಲಿ ಚತುರ್ಮಂಡಲದೊಡಗೂಡಿ ಇದ್ದುಕೊಂಡಿತ್ತು. ಚತುರ್ಮಂಡಲ ದಿಂದಿರುವದೆಂದರೊ, ಇದು : ಸಿಂಹ, ಸಿಂಹದ ಹಿಂಬಾಲಕರು, ಕಾಗೆಯ ಕೂಗಿನ ಪ್ರಾಣಿಗಳು, (ಕೀಳುಗೆಲಸದವರು =) ಆಳುಗಳು.

## ಚಿಂತನ

೧. **ಪಿಙ್ಗಲಕೋ ನಾಮ** । ಎರಡು ಪದ. ಪಿಙ್ಗಲಕನಾಮಾ ಎಂದು ಬಹುವ್ರೀಹಿ ಸಮಾಸವನ್ನು ಮಾಡಿಕೊಳ್ಳಬಹುದು. ಆಗ ಅದು ನಕಾರಾಂತ ಪುಲ್ಲಿಂಗವಾಗುವದು. (೨ನೆಯ ಭಾಗ ಖಂ. ೭೨ ನೋಡಿ.)

೨. **ಉದಕಪಾನಾರ್ಥಮ್** । ಉದಕಸ್ಯ ಪಾನಮ್ ಉದಕಪಾನಮ್ ; ತೇನ - ಉದಕಪಾನೇನ । ಉದಕಪಾನೇನ ಅರ್ಥಃ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ ।।

(೩೫ ನೆಯ ಪುಟದಲ್ಲಿರುವ ೨೪ನೆಯ ಖಂಡದಲ್ಲಿ (೫ನೆಯ ವಾಕ್ಯ) '**ಪೂಜಾರ್ಥಮ್**' ಎಂಬುದರ ವಿಗ್ರಹವನ್ನು ನೋಡಿ.)

೩. '**ರಾವಮ್**' ಕೂಗನ್ನು (ಗುಟರಿಗೆ '**ನರ್ದಿತಮ್**' ಎಂಬ ಶಬ್ದವು ಹೆಚ್ಚು ರೂಢಿ.)

೪. **ಸಸಾಧ್ವಸಮ್** - ಸಾಧ್ವಸೇನ ಸಹ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ ।।

೫. ಕಾಕರವಾಃ - ಕಾಕಸ್ಯೇವ ರವಃ, ಯೇಷಾಂ ತೇ ||

೬. ಕಿಂವೃತ್ತಾಃ - ಕುತ್ಸಿತಂ ವೃತ್ತಂ ಯೇಷಾಂ ತೇ || ಇಲ್ಲಿ 'ಇತಿ'ಯನ್ನು ಕನ್ನಡಿಸಿಲ್ಲ ; ಅದನ್ನು ಕನ್ನಡಿಸಬೇಕಾದರೆ 'ಇದು' ಎಂಬ ಮಾತನ್ನು ಮುಂದಕ್ಕೆ ತಂದುಕೊಂಡು 'ಆಳುಗಳು - ಎಂಬಿದು' ಎಂದು ಅನುವಾದಮಾಡಿಕೊಳ್ಳಬೇಕು.

३१. अथ तस्य करटकदमनकनामानौ द्वौ श्रृगालौ मन्त्रिपुत्रौ भ्रष्टाधिकारौ सदा अनुयायिनौ आस्ताम् । तौ च परस्परं मन्त्रयतः ॥

तत्र दमनकोऽब्रवीत् (= उक्तवान्) - 'भद्र, करटक, अयं तावत् अस्मत्स्वामी पिङ्गलक उदकग्रहणार्थं यमुनाकच्छम् अवतीर्य स्थितः । स किंनिमित्तं पिपासा- कुलोऽपि निवृत्य व्यूहरचनां विधाय दौर्मनस्येन अभिभूतोऽत्र वटतले स्थितः ?'

करटक आह - 'भद्र, किमावयोरनेन व्यापारेण ? आवयोर्भक्षितशेष आहारोऽस्त्येव ॥"

दमनक आह - 'तत्किं भवान् आहारार्थी केवलमेव ? तन्न युक्तम् ।'

करटक आह - 'आवां तावदप्रधानौ । तत्किमावयोरनेन व्यापारेण ?'

दमनक आह - 'मा मैवं वद -

**अप्रधानः प्रधानः स्यात् सेवते यदि पार्थिवम् ।**
**प्रधानोऽप्यप्रधानः स्याद्यदि सेवाविवर्जितः ॥'**

करटक आह - 'अथ भवान् किं कर्तुमनाः ?'

सोऽब्रवित् (उक्तवान्) - 'अद्य अस्मत्स्वामी पिङ्गलको भीतो भीतपरिवारश्च वर्तते । तदेनं गत्वा भयकारणं विज्ञाय सन्धिविग्रहयानासन- संश्रयद्वैधीभावानाम् एकतमेन संविधास्ये ॥'

करटक आह - 'कथं वेत्ति भवान् यद् भयाविष्टोऽयं स्वामी ?'

सोऽब्रवीत् - 'ज्ञेयं किमत्र ? यत उक्तं च -

उदीरितोऽर्थः पशुनापि गृह्यते
हयाश्च नागाश्च वहन्ति चोदिताः ।
अनुक्तमप्यूहति पण्डितो जनः
परेङ्गितज्ञानफला हि बुद्धयः ॥

तदद्यैनं भयाकुलं प्राप्य स्वबुद्धिप्रभावेण निर्भयं कृत्वा वशीकृत्य च निजां साचिव्यपदवीं समासादयिष्यामि ॥'

करटक आह - 'यद्येवम् अभिमतम्, तर्हि शिवास्ते पन्थानः सन्तु । यथाभिलषितम् अनुष्ठीयताम् ।'

सोऽपि प्रणम्य पिङ्गलकाभिमुखं प्रतस्थे (= प्रातिष्ठत, प्रस्थितवान्) ॥

ಆಗ ಆ (ಸಿಂಹಕ್ಕೆ) ಕರಟಕದಮನಕರೆಂಬ ಹೆಸರಿನ ಎರಡು ನರಿಗಳು (ತಪ್ಪಿದ ಅಧಿಕಾರವುಳ್ಳ ಮಂತ್ರಿಪುತ್ರರು =) ಮಂತ್ರಿಪುತ್ರರಾಗಿದ್ದು ನೌಕರಿ ತಪ್ಪಿ ಯಾವಾಗಲೂ ಹಿಂಬಾಲಿಸುವವರಾಗಿ ಇದ್ದರು. ಮತ್ತು ಅವರು ಒಬ್ಬರೊಡನೊಬ್ಬರು (ಹೀಗೆ) ಆಲೋಚನೆ (ಮಾಡುತ್ತಾರೆ =) ಮಾಡಿಕೊಂಡರು :

ಅವರೊಳಗೆ ದಮನಕನು ಇಂತೆಂದಿತು :- 'ಅಣ್ಣ ಕರಟಕ, ಈ ನಮ್ಮ ಒಡೆಯನಾದ ಪಿಂಗಲಕನು ಮೊದಲು (ನೀರನ್ನು ತೆಗೆದುಕೊಳ್ಳುವದಕ್ಕೆ =) ನೀರು ಕುಡಿಯುವದಕ್ಕಾಗಿ ಯಮುನೆಯ (ದಡವನ್ನು ಇಳಿದು =) ದಡಕ್ಕೆ ಇಳಿದು ಬಂದಿದ್ದನು. ಅವನು ಯಾವ ನಿಮಿತ್ತದಿಂದ (ಬಾಯಾರಿಕೆಯಿಂದ ತುಂಬಿದ್ದರೂ =) ಬಹಳವಾಗಿ ನೀರಡಿಸಿದ್ದರೂ ಹಿಂತಿರುಗಿ (ವ್ಯೂಹರಚನೆಯನ್ನು ಮಾಡಿಕೊಂಡು =) ವ್ಯೂಹವನ್ನು ಏರ್ಪಡಿಸಿಕೊಂಡು (ದುಮ್ಮಾನದಿಂದ ತಿರಸ್ಕರಿಸಲ್ಪಟ್ಟವನಾಗಿ =) ದುಮ್ಮಾನದಿಂದ ಕಳೆಗುಂದಿ ಈ ಆಲದ ಮರದ ಬುಡದಲ್ಲಿ ಇರುತ್ತಾನೆ ?'

ಕರಟಕನು (ಹೇಳುತ್ತದೆ =) ಇಂತೆಂದಿತು :- 'ಅಣ್ಣ, (ನಮಗೇನು ಈ ಕೆಲಸದಿಂದ =) ಇದನ್ನು ಕಟ್ಟಿಕೊಂಡು ನಮಗೇನಾಗಬೇಕು ? ನಮ್ಮಿಬ್ಬರಿಗೂ ತಿಂದು ಮಿಕ್ಕ ಆಹಾರವು ಇದ್ದೇ ಇದೆ.'

ದಮನಕನಿಂತೆಂದಿತು :- 'ಹಾಗಾದರೆ ನೀನು ಬರಿಯ ಆಹಾರಾರ್ಥಿಯೇನು ? ಅದು ಸರಿಯಲ್ಲ.'

ಕರಟಕನೆಂದಿತು :- 'ನಾವಂತು ಅಮುಖ್ಯರು. ಹೀಗಿರುವಲ್ಲಿ (ಈ ಕೆಲಸದಿಂದ ನಮಗೇನು =) ಇದನ್ನು ಕಟ್ಟಿಕೊಂಡು ನಮಗೇನಾಗಬೇಕು ?'

ದಮನಕನೆಂದಿತು :- '(ಬೇಡ, ಹೀಗೆನ್ನಬೇಡ =) ಅಲ್ಲ. ಹಾಗಲ್ಲ.

**ಅಮುಖ್ಯನಾದವನು ರಾಜನನ್ನು ಸೇವಿಸಿದರೆ ಮುಖ್ಯನಾಗುವನು ; ಮುಖ್ಯನಾಗಿದ್ದರೂ ಸೇವಾರಹಿತನಾದರೆ ಅಮುಖ್ಯನೇ ಆದಾನು.'**

ಕರಟಕನೆಂದಿತು :- ಹಾಗಾದರೆ ನೀನು (ಏನು ಮಾಡಲು ಮನಸ್ಸುಳ್ಳವನು =) ಏನು ಮಾಡಬೇಕೆಂದಿರುವೆ ?

ಅದು ಹೇಳಿತು :- ಈಗ ನಮ್ಮ ಒಡೆಯನಾದ ಪಿಂಗಲಕನು ಅಂಜಿದವನಾಗಿದಾನೆ. (ಅಂಜಿದ ಪರಿವಾರವುಳ್ಳವನಾಗಿಯೂ ಇರುತ್ತಾನೆ =) ಆವನ ಪರಿವಾರದವರೂ ಅಂಜಿಕೊಂಡಿರುತ್ತಾರೆ. ಆದ್ದರಿಂದ (ಇವನನ್ನು ಸೇರಿ =) ಇವನ ಬಳಿಗೆ ಹೋಗಿ ಅಂಜಿಕೆಯ ಕಾರಣವನ್ನು ಅರಿತುಕೊಂಡು ಸಂಧಿ-ವಿಗ್ರಹ-ಯಾನ-ಆಸನ-ಸಂಶ್ರಯ-ದ್ವೈಧೀಭಾವಗಳೊಳಗೆ ಯಾವದಾದರೊಂದರಿಂದ (ಸರಿಮಾಡುವೆನು =) ತಕ್ಕದ್ದನ್ನು ಮಾಡುವೆನು.

ಕರಟಕನೆಂದಿತು :- ಈ ಧಣಿಯು (ಅಂಜಿಕೆಯಿಂದ ಹೊಗಲ್ಪಟ್ಟವನು =) ಅಂಜಿಕೆಯುಳ್ಳವನಾಗಿದಾನೆ - ಎಂದು ನೀನು ಹೇಗೆ ಬಲ್ಲೆ ?

ಅದೆಂದಿತು :- ತಿಳಿಯತಕ್ಕದ್ದೇನು (ಇದೆ), ಇಲ್ಲಿ ? (ಏಕೆಂದರೆ ಹೇಳಲ್ಪಟ್ಟೊ ಇದೆ =) ಬಲ್ಲವರೂ (ಹೀಗೆಂದು) ಹೇಳಿಲ್ಲವೆ ?

**(ಹೇಳಿದ ವಿಷಯವು ಪಶುವಿನಿಂದಲೂ ಗ್ರಹಿಸಲ್ಪಡುತ್ತದೆ =) ಹೇಳಿದ್ದನ್ನು ಪಶು ಕೂಡ ತಿಳಿದುಕೊಳ್ಳುತ್ತದೆ. ಕುದುರೆಗಳೂ ಆನೆಗಳೂ (ಪ್ರೇರಿಸಲ್ಪಟ್ಟರೆ =) ಹೊರಿಸಿದರೆ ಹೊರುತ್ತವೆ. ಪಂಡಿತನಾದ ಮನುಷ್ಯನು ಹೇಳದೆ ಇದ್ದದ್ದನ್ನು ಊಹಿಸಿಕೊಳ್ಳುತ್ತಾನೆ. (ಬುದ್ಧಿಗಳು ಮತ್ತೊಬ್ಬರ ಇಂಗಿತದ ಜ್ಞಾನವೇ ಫಲವಾಗಿ ಉಳ್ಳವುಗಳಲ್ಲವೆ ? =) ಬುದ್ಧಿಯಿದ್ದದ್ದಕ್ಕೆ ಮತ್ತೊಬ್ಬರ ಮನಸ್ಸಿನಲ್ಲಿರುವದನ್ನು ತಿಳಿದುಕೊಳ್ಳುವದೇ ಪ್ರಯೋಜನವಲ್ಲವೆ ?**

ಆದ್ದರಿಂದ ಇಂದು ಅಂಜಿಕೆಯಿಂದ ತುಂಬಿರುವ (ಇವನನ್ನು ಪಡೆದು =) ಇವನ ಬಳಿಗೆ ಹೋಗಿ ನನ್ನ ಬುದ್ಧಿಯ ಪ್ರಭಾವದಿಂದ (ಅಂಜಿಕೆಯಿಲ್ಲದವನನ್ನಾಗಿ ಮಾಡಿ =) ಅಂಜಿಕೆಯನ್ನು ತೊಲಗಿಸಿ ನನ್ನದೇ ಆದ ಮಂತ್ರಿಪದವಿಯನ್ನು ಸಂಪಾದಿಸಿಕೊಳ್ಳುವೆನು.

ಕರಟಕನು ಹೇಳಿತು :- ಹೀಗೆ ನಿನ್ನ ಅಭಿಪ್ರಾಯವಾದರೆ, (ಹಾಗಾದರೆ) (ನಿನ್ನ ಹಾದಿಗಳು ಮಂಗಳವಾಗಲಿ =) ಸುಖವಾಗಿ ಹೋಗಿಬಾರಪ್ಪ (good bye) ! ಇಷ್ಟವಿದ್ದಂತೆ (ಮಾಡಲ್ಪಡಲಿ =) ಮಾಡು.

ಅದೂ ನಮಸ್ಕರಿಸಿ (ಪಿಂಗಲಕನಿಗೆ ಎದುರಾಗಿ =) ಪಿಂಗಲಕನ ಕಡೆಗೆ ಹೊರಟಿತು.

## ಚಿಂತನ

೧. **ಕರಟಕದಮನಕನಾಮಾನೌ** । ಇದು ಬಹುವ್ರೀಹಿ. ಆದ್ದರಿಂದ ಪುಲ್ಲಿಂಗವಾಗಿದೆ. ಹಿಂದಿನ ಖಂಡದಲ್ಲಿ 'ಪಿಙ್ಗಲಕೋ ನಾಮ' ಎಂಬುದರ ಟಿಪ್ಪಣವನ್ನು ನೋಡಿರಿ.

೨. **ಮನ್ತ್ರಿಪುತ್ರೌ** ಮನ್ತ್ರಿಣಃ ಪುತ್ರೌ । ತಂದೆಯ ಕಾಲದಿಂದ ಮಂತ್ರಿಗಳಾಗಿದ್ದರೆಂದು ತಿಳಿಸುವದಕ್ಕೆ ಪುತ್ರಶಬ್ದವನ್ನುಪಯೋಗಿಸಿದೆ. ಹಿಂದೆ [ಖಂ. 17] ವಣಿಕ್ಪುತ್ರಃ ಎಂಬ ಶಬ್ದವನ್ನು ನೋಡಿ.

೩. **ಭ್ರಷ್ಟಾಧಿಕಾರೌ** ಭ್ರಷ್ಟಃ ಅಧಿಕಾರಃ ಯಾಭ್ಯಾಮ್ (ಪಂ. ದ್ವಿ.)[1] ; ತೌ । ಅಥವಾ ಯಯೋಃ (ಷ. ದ್ವಿ.).

೪. **ತೌ ಚ** । ಮುಂದೆ ಮುಂದೆ ವಿಷಯವನ್ನು ಹೇಳುವದಕ್ಕೆ ಹೀಗೆ 'ಚ' ಕಾರವನ್ನು ಸಂಸ್ಕೃತದಲ್ಲಿ ಹೆಚ್ಚಾಗಿ ಬಳಸುವರು. 'ಸ ಚ, ತಚ್ಚ' - ಇಂಥ ಕಡೆಗಳಲ್ಲಿ ಚಕಾರವನ್ನು ಕನ್ನಡಿಸದಿದ್ದರೂ ಸಾಗುತ್ತದೆ.

೫. **ಮನ್ತ್ರಯತಃ** । ಇದು ಆತ್ಮನೇಪದದಲ್ಲಿ ಪ್ರಯೋಗವಾಗುವದೇ ಹೆಚ್ಚು ರೂಢಿಯಲ್ಲಿದೆ.

೬. **ಅಯಂ ತಾವತ್** । ಮುಂದೆ ಹೇಳತಕ್ಕದ್ದು ಬೇರೆಯಿದೆ ಎಂಬುದನ್ನು ಸೂಚಿಸುವದಕ್ಕೆ 'ತಾವತ್' ಎಂಬ ಶಬ್ದವನ್ನು ಬಳಸುತ್ತಾರೆ. ಆಗ ವಾಕ್ಯದ ಕೊನೆಯಲ್ಲಿ 'ಅಷ್ಟೆ ?' ಎಂದು ಸೇರಿಸಿ ಅಥವಾ ಮಾತಿಗೆ 'ಅಂತೂ' ಎಂಬುದನ್ನೂ ಸೇರಿಸಿ ಕನ್ನಡಿಸಬಹುದು. ಉದಾ : 'ಸ ತಾವತ್ ತರುಣಃ, ತತ್ರ ಕಥಂ ತಪೋಽತಪ್ಯತ' ಅವನು ತರುಣನಷ್ಟೆ ? (ಅಥವಾ ಅವನಂತೂ ತರುಣನು) ; ಹೀಗಿರುವಲ್ಲಿ ಹೇಗೆ ತಪಸ್ಸು ಮಾಡಿದನು ?

೭. **ಅಸ್ಮತ್ಸ್ವಾಮೀ** । 'ಆವಯೋಃ ಸ್ವಾಮೀ' (ಷ. ತ.) 'ಮಮ', 'ಆವಯೋಃ', 'ಅಸ್ಮಾಕಮ್' ಇವುಗಳಲ್ಲಿ ಯಾವದೊಂದು ಪೂರ್ವಪದವಾದರೂ ಹೀಗೆಯೇ ಸಮಾಸವಾಗುವದು. ಆದರೆ 'ಮತ್ಸ್ವಾಮೀ' ಎಂದಿದ್ದರೆ 'ಮಮ ಸ್ವಾಮೀ' ಎಂದೇ ವಿಗ್ರಹ.

೮. **'ಕಿಂ ನಿಮಿತ್ತಮ್ ?'** ದ್ವಿತೀಯಾವಿಭಕ್ತಿ. ಕಾರಣಾರ್ಥಗಳಿಗೆ 'ಕೇನ ನಿಮಿತ್ತೇನ', 'ಕೇನ ಕಾರಣೇನ', 'ಕಸ್ಮೈ ಕಾರಣಾಯ', 'ಕಸ್ಮಾತ್ ಕಾರಣಾತ್', 'ಕಸ್ಯ ಹೇತೋಃ' ಎಂದು ಬೇರೆ ಬೇರೆಯ ವಿಭಕ್ತಿಗಳನ್ನು ಉಪಯೋಗಿಸುತ್ತಾರೆ.

೯. **ವ್ಯೂಹರಚನಾಂ ವಿಧಾಯ** । ಶತ್ರುಗಳು ತಮ್ಮ ಮೇಲೆ ಬೀಳದಂತೆ ಹೀಗೆ ಸೈನ್ಯವನ್ನು

1. ಪಂ. ದ್ವಿ. - ಪಂಚಮೀ ದ್ವಿವಚನ ; ಹೀಗೆಯೇ ಷ. ದ್ವಿ. - ಷಷ್ಠೀ ದ್ವಿವಚನ.

ವ್ಯೂಹವಾಗಿ ಮಾಡಿಕೊಳ್ಳುತ್ತಿದ್ದರು. 'ಚತುರ್ಮಣ್ಡಲಾವಸ್ಥಾನೇನ ಅವಸ್ಥಿತಃ.' ಎಂದು ಹಿಂದಿನ ಖಂಡದಲ್ಲಿ ಹೇಳಿದ್ದರ ಅಭಿಪ್ರಾಯವೇ ಇದು.

೧೦. 'ತತ್ಕಿಂ ಭವಾನಾಹಾರಾರ್ಥೀ', 'ತತ್ಕಿಮಾವಯೋರನೇನ ವ್ಯಾಪಾರೇಣ' । ಇಂಥಲ್ಲಿ 'ತತ್' ಎಂಬ ಅವ್ಯಯಕ್ಕೆ 'ಹಾಗಾದರೆ' ಎಂಬರ್ಥವಿರುವದು. ಇದಕ್ಕೆ 'ಆದ್ದರಿಂದ' ಎಂಬರ್ಥವೂ ಉಂಟು.

೧೧. ಕರ್ತುಮನಾಃ ಕರ್ತುಂ ಮನಃ ಯಸ್ಯ ಸಃ । ಬಹುವ್ರೀಹಿಯಾದ್ದರಿಂದ ಪುಲ್ಲಿಂಗ. 'ತುಮ್' ಎಂಬ ಪ್ರತ್ಯಯವು ಕೊನೆಯಲ್ಲಿರುವ ಅವ್ಯಯದ ಮುಂದೆ ಕಾಮ, ಮನಸ್ ಶಬ್ದಗಳು ಬಂದು ಸಮಾಸವಾದರೆ ಮಕಾರಕ್ಕೆ ಲೋಪ. 'ಕರ್ತುಕಾಮಃ' - ಮಾಡಬೇಕೆಂಬ ಇಚ್ಛೆಯುಳ್ಳವನು ಎಂಬುದನ್ನು ಇದರಂತೆ ಬಿಡಿಸಿಕೊಳ್ಳಬೇಕು.

ಈ ವಾಕ್ಯದ ಆದಿಯಲ್ಲಿರುವ 'ಅಥ' ಎಂಬ ಮಾತಿಗೆ 'ಹಾಗಾದರೆ' ಎಂದರ್ಥ. 'ಇನ್ನು', 'ಅನಂತರ' - ಎಂದಲ್ಲ.

೧೨. ಸಂಧಿ (ಕೌಲು), ವಿಗ್ರಹ (ಯುದ್ಧ), ಯಾನ (ದಂಡೆತ್ತಿ ಹೋಗುವದು), ಆಸನ (ದುರ್ಗದಲ್ಲಿ ಭದ್ರವಾಗಿ ಕೂತಿರುವದು), ಸಂಶ್ರಯ (ತನಗಿಂತಲೂ ಬಲಿಷ್ಠನಾದವನನ್ನು ಅನುಸರಿಸುವಿಕೆ), ದ್ವೈಧೀಭಾವ (ಸಮಯಬಂದಂತೆ ಸಂಧಿವಿಗ್ರಹ - ಎರಡನ್ನೂ ಅನುಸರಿಸುವದು) ರಾಜನೀತಿಶಾಸ್ತ್ರದಲ್ಲಿ ಈ ಆರಕ್ಕೆ ಷಡ್ಗುಣಗಳು ಎಂಬ ಹೆಸರನ್ನೂ ಕೊಟ್ಟಿರುತ್ತಾರೆ.

೧೩. 'ಶಿವಾಸ್ತೇ ಪನ್ಥಾನಃ ಸನ್ತು' ಹೊರಟಿರುವವರಿಗೆ ಸುಖಪ್ರಯಾಣವನ್ನು ಬಯಸುವ ಮಾತಿದು. 'ಸನ್ತು' ಬಿಟ್ಟರೂ ಇದೇ ಅರ್ಥ. ಪಥಿನ್ ಶಬ್ದದ ರೂಪಗಳು ಹೀಗೆ : ಪನ್ಥಾಃ ಪನ್ಥಾನೌ ಪನ್ಥಾನಃ । ಪನ್ಥಾನಮ್ ಪನ್ಥಾನೌ ಪಥಃ । ಪಥಾ ಪಥಿಭ್ಯಾಮ್ ಪಥಿಭಿಃ । ಪಥೇ ಪಥಿಭ್ಯಾಮ್ ಪಥಿಭ್ಯಃ । ಪಥಃ ಪಥಿಭ್ಯಾಮ್ ಪಥಿಭ್ಯಃ । ಪಥಃ ಪಥೋಃ ಪಥಾಮ್ । ಪಥಿ ಪಥೋಃ ಪಥಿಷು ॥

೧೪. ಪ್ರತಸ್ಥೇ । ಇದು ಪರೋಕ್ಷಭೂತ, ಆತ್ಮನೇಪದ. ಸ್ಥಾಧಾತುವಿಗೆ ಸಮ್, ಅವ, ಪ್ರ, ವಿ - ಎಂಬ ಉಪಸರ್ಗಗಳು ಸೇರಿದಾಗ ಆತ್ಮನೇಪದವಿರಬೇಕು.

## ಅಭ್ಯಾಸ ೧೯

1. ಈ ಪಾಠದಲ್ಲಿರುವ ಸಂಭಾಷಣವಾಕ್ಯಗಳನ್ನು ಎರಡು ಮೂರು ಸಲ ಓದಿ ಅಭ್ಯಾಸಮಾಡಿಕೊಳ್ಳಿರಿ ; ಸಂಸ್ಕೃತದಲ್ಲಿ ಮಾತನಾಡುವದಕ್ಕೆ ಉಪಯೋಗವಾಗುತ್ತವೆ. ಭದ್ರ, ಸಖೇ - ಇವುಗಳು ಗೌರವದ ಸಂಬೋಧನಗಳು.

2. मरकतसदृशानि, वल्मीकशिखराग्राणि, सर्वमृगपरिवृतः, सिंहानुयायिनः - ಇವುಗಳ ವಿಗ್ರಹವಾಕ್ಯಗಳನ್ನು ಬರೆಯಿರಿ.

## १०. मित्रभेदः (अनुवृत्तः)

३२. अथागच्छन्तं दमनकम् आलोक्य पिङ्गलको द्वाःस्थम् अब्रवीत् - 'अपसार्यतां वेत्रलता । अयमस्माकं चिरन्तनो मन्त्रिपुत्रो दमनकोऽव्याहतप्रवेशः । तत् प्रवेश्यतां द्वितीयमण्डलभागी' इति ।

स आह - 'यथा अवादीद्भवान्' इति ।

अथोपसृत्य दमनको निर्दिष्ट आसने पिङ्गलकं प्रणम्य प्राप्तानुज्ञ उपविष्टः । स तु तस्य नखकुलिशालङ्कृतं दक्षिणपाणिम् उपरि दत्वा मानपुरःसरम् उवाच 'अपि शिवं भवतः ? कस्माच्चिराद्दृष्टोऽसि ?'

दमनक आह - 'न किञ्चिद्देवपादानाम् अस्माभिः प्रयोजनम् । परं भवतां प्राप्तकालं वक्तव्यम् । यत उत्तममध्यमाधमैः सर्वैरपि राज्ञां प्रयोजनम् । अथ श्रृगालोऽयमिति मन्यमानेन ममोपरि स्वामिना यद्यवज्ञा क्रियते, तदप्ययुक्तम् -

**किं भक्तेनासमर्थेन किं शक्तेनापकारिणा ।**
**भक्तं शक्तं च मां राजन्नावज्ञातुं त्वमर्हसि ।।'**

पिङ्गलक आह - 'भवत्वेवं तावत् । असमर्थः समर्थो वा चिरन्तनस्त्वमस्माकं मन्त्रिपुत्रः । तद् विश्रब्धं ब्रूहि यत्किञ्चिद् वक्तुकामः ।'

दमनक आह - 'देव, विज्ञाप्यं किञ्चिदस्ति ।'

पिङ्गलक आह - 'तन्निवेदयाभिप्रेतम् ।'

सोऽब्रवीत् - 'अपि स्वल्पतरं कार्यं यद्भवेत् पृथिवीपतेः । तन्न वाच्यं सभामध्ये प्रोवाचेदं बृहस्पतिः ।।

तदैकान्तिके मद्विज्ञाप्यमाकर्णयन्तु देवपादाः ।।'

ಆಗ (ಬರುತ್ತಿರುವ ದಮನಕನನ್ನು =) ದಮನಕನು ಬರುತ್ತಿರುವದನ್ನು ಕಂಡು ಪಿಂಗಲಕನು (ದ್ವಾರದಲ್ಲಿರುವವನನ್ನು =) ದ್ವಾರಪಾಲಕನಿಗೆ ಇಂತೆಂದಿತು : '(ಬೆತ್ತದ

ಕೋಲು ಅತ್ತ ತೆಗೆಯಲ್ಪಡಲಿ ! =) ಬೆತ್ತವನ್ನು ಅತ್ತ ಸರಿಯಿಸು ! ಈ ನಮ್ಮ ಹಳೆಯ ಮಂತ್ರಿಪುತ್ರನಾದ (ದಮನಕನು ಅಡ್ಡಿಮಾಡದ ಪ್ರವೇಶವುಳ್ಳವನು =) ದಮನಕನ ಪ್ರವೇಶಕ್ಕೆ ಯಾವ ಅಡ್ಡಿಯೂ ಇಲ್ಲ, ಆದ್ದರಿಂದ (ಎರಡನೆಯ ಮಂಡಲವನ್ನು ಹೊಂದುವಂತೆ =) ಎರಡನೆಯ ಮಂಡಲದವರೆಗೂ (ಪ್ರವೇಶಿಸು =) ಬರಮಾಡು.'

ಆ (ದ್ವಾರಪಾಲಕ) ನೆಂದಿತು :- '(ನೀನು ಹೇಗೆ ಹೇಳಿದೆಯೋ =) ತಾವು ಹೇಳಿದಂತೆ ಆಗಲಿ (ಅಥವಾ 'ಅಪ್ಪಣೆ') !

ಬಳಿಕ ಹತ್ತಿರಕ್ಕೆ ಬಂದು ದಮನಕನು - (ಆಸನವು ತೋರಿಸಲ್ಪಡಲಾಗಿ, ಅಥವಾ ತೋರಿಸಲ್ಪಟ್ಟ ಆಸನದಲ್ಲಿ =) ಪಿಂಗಲಕನು ಆಸನವನ್ನು ತೋರಿಸಲಾಗಿ - ಅದನ್ನು ವಂದಿಸಿ ಅನುಮತಿಯನ್ನು ಪಡೆದು ಕುಳಿತುಕೊಂಡಿತು. ಆ (ಪಿಂಗಲಕ)ನಾದರೆ, ತನ್ನ ವಜ್ರಾಯುಧದಂತಿದ್ದ ಉಗುರುಗಳಿಂದ ಅಲಂಕೃತವಾಗಿದ್ದ ಬಲಗೈಯನ್ನು (ಮೇಲೆ ಕೊಟ್ಟು =) ಮೇಲಕ್ಕೆತ್ತಿ ಗೌರವಪೂರ್ವಕವಾಗಿ 'ನಿನಗೆ ಕ್ಷೇಮವೆ ? (ಏಕೆ ಬಹಳದಿನ ವಾದಮೇಲೆ ಕಾಣಲ್ಪಟ್ಟಿದ್ದೀಯೆ =) ಬಂದು ಬಹಳ ದಿನವಾಯಿತೇಕೆ ?' ಎಂದಿತು.

ದಮನಕನೆಂದಿತು :- '(ದೇವಪಾದರಿಗೆ =) ಸ್ವಾಮಿಯವರಿಗೆ (ನಮ್ಮಿಂದ =) ನಮ್ಮಂಥವರಿಂದ ಏನೂ (ಪ್ರಯೋಜನವು =) ಆಗತಕ್ಕದ್ದು ಇರುವದಿಲ್ಲ. ಆದರೆ ತಮಗೆ (ದೊರಕಿದ ಕಾಲವು ಹೇಗೋ ಹಾಗೆ =) ಸಮಯ ಬಂದಾಗ ಹೇಳಬೇಕು. ಏಕೆಂದರೆ ಉತ್ತಮರು, ಮಧ್ಯಮರು, ಅಧಮರು - ಎಲ್ಲರಿಂದಲೂ ರಾಜರುಗಳಿಗೆ ಪ್ರಯೋಜನ(ವುಂಟು). ಹಾಗಿಲ್ಲದೆ, ಇದು ನರಿ ಎಂದು (ತಿಳಿದಿರುವ ಸ್ವಾಮಿಯಿಂದ ನನ್ನ ಮೇಲೆ ಅನಾದರವು ಮಾಡಲ್ಪಡುವದಾದರೆ =) ಸ್ವಾಮಿಯವರು ನನ್ನನ್ನು ಅನಾದರದಿಂದ ಕಾಣುವದಾದರೆ ಅದೂ ಸರಿಯಲ್ಲ. ಏಕೆಂದರೆ -

**ಅಸಮರ್ಥನಾದ ಭಕ್ತನಿಂದ ಆಗತಕ್ಕದ್ದೇನಿದೆ ? ಶಕ್ತನಾದ ಅಪಕಾರಿ ಯಿಂದ ಪ್ರಯೋಜನವೇನು ? ಭಕ್ತನೂ ಶಕ್ತನೂ ಆಗಿರುವ ನನ್ನನ್ನು, ಎಲೈ ರಾಜನೆ, ನೀನು ಅನಾದರಮಾಡತಕ್ಕದ್ದಲ್ಲ.'**

ಪಿಂಗಲಕನೆಂದಿತು :- 'ಇದಂತಿರಲಿ. ಅಶಕ್ತನೇ ಆಗಲಿ, ಶಕ್ತನೇ ಆಗಲಿ, ನೀನು ನಮ್ಮ ಹಳೆಯ ಮಂತ್ರಿಪುತ್ರನು. ಆದ್ದರಿಂದ ಯಾವದೊಂದನ್ನು (ಹೇಳಲಿಚ್ಛೆ ಯುಳ್ಳವನೋ =) ಹೇಳಬೇಕೆಂದಿರುವೆಯೋ, ಅದನ್ನು (ವಿಶ್ವಾಸದಿಂದ =) ಧಾರಾಳವಾಗಿ ಹೇಳು.'

ದಮನಕನೆಂದಿತು :- 'ದೇವ, ಬಿನ್ನವಿಸಿಕೊಳ್ಳತಕ್ಕದ್ದು ಒಂದು (ವಿಷಯ)ವಿದೆ.'

ಪಿಂಗಲಕನೆಂದಿತು :- 'ಹಾಗಾದರೆ (ಅಭಿಪ್ರೇತವಾದದ್ದನ್ನು =) ಮನಸ್ಸಿನಲ್ಲಿ ರುವದನ್ನು (ತಿಳಿಸು =) ಹೇಳು.

ಅದೆಂದಿತು :-

‘(ನೆಲದೊಡೆಯನ =) ರಾಜನ ಕಾರ್ಯವು (ಯಾವದು ತೀರ ಸಣ್ಣದಾದರೂ ಆಗಿರುವದೋ ಅದನ್ನು =) ತೀರ ಸಣ್ಣದಾದರೂ ಅದನ್ನು (ಸಭೆಯ ನಡುವೆ =) ಸಭೆಯಲ್ಲಿ ಹೇಳತಕ್ಕದ್ದಲ್ಲ. ಇದನ್ನು ಬೃಹಸ್ಪತಿಯು ಹೇಳಿದಾನೆ.

ಆದ್ದರಿಂದ ನನ್ನ ಬಿನ್ನಹವನ್ನು ಸ್ವಾಮಿಯವರು ಏಕಾಂತದಲ್ಲಿ ಕೇಳೋಣಾಗ ಬೇಕು.’

## ಚಿಂತನ

೧. **ವೇತ್ರಲತಾ ।** ಲತಾಶಬ್ದವನ್ನು ‘ಬಳುಕುವ’, ‘ಕೋಮಲವಾದ’ ಎಂಬರ್ಥದಲ್ಲಿ ಸಮಾಸದ ಕೊನೆಯಲ್ಲಿಡುವರು. ಉದಾ : ಬಾಹುಲತಾ, ದೇಹಲತಾ, ವಿದ್ಯುಲ್ಲತಾ, (ಬಳ್ಳಿ ಮಿಂಚು).

‘ಅಪಸಾರ್ಯತಾಂ ವೇತ್ರಲತಾ’ ಎಂದರೆ ‘ಅಡ್ಡಿಮಾಡಬೇಡ’ ಎಂದರ್ಥ.

೨. **ದ್ವಿತೀಯಮಂಡಲಭಾಗೀ ।** ಹಿಂದೆ ಹೇಳಿದ ನಾಲ್ಕು ಮಂಡಲಗಳಲ್ಲಿ ಎರಡನೆಯದು, ತೀರ ಹತ್ತಿರವಿರುವ ಅನುಯಾಯಿಗಳದು. ‘ದ್ವಿತೀಯಮಂಡಲಸ್ಯ ಭಾಗೀ’ ಎಂದು ಇದಕ್ಕೆ ವಿಗ್ರಹವನ್ನು ಹೇಳಬೇಕು. ಅದರಲ್ಲಿ ಭಾಗವುಳ್ಳವನು ಎಂದರ್ಥ.

೩. **ನಖಕುಲಿಶಾಃ** ನಖಾಃ ಕುಲಿಶ ಇವ । ಇಂದ್ರನ ವಜ್ರಾಯುಧದಂತೆ ಚೂಪಾದ ಉಗುರುಗಳು.

೪. **ಮಾನಪುರಸ್ಸರಮ್ = ಮಾನಂ ಪುರಸ್ಸರಂ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ ।** ಗೌರವಪೂರ್ವಕವಾಗಿ ಎಂದರ್ಥ.

೫. **ದೇವಪಾದಾನಾಮ್ ।** ದೇವ, ಸ್ವಾಮಿನ್, ಜೀವ - ಇವೆಲ್ಲ ಧಣಿಗೆ ಉಪಯೋಗಿಸುವ ಸಂಬೋಧನೆಗಳು. ಪಾದ, ಚರಣ - ಈ ಮಾತುಗಳನ್ನು ಗೌರವಕ್ಕೆ ಬಳಸುವರು. ಉದಾ : ತಾತಪಾದಾಃ, ಗುರುಚರಣಾಃ ||

೬. **ಪ್ರಾಪ್ತಕಾಲಮ್** ಪ್ರಾಪ್ತಃ ಕಾಲಃ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ ||

೭. **ಚಿರಾತ್ ।** ಬಹಳ ಕಾಲವಾದ ಮೇಲೆ, ತಡವಾಗಿ, ಬಹುಕಾಲವು ಕಳೆದಮೇಲೆ ಎಂಬರ್ಥದಲ್ಲಿ ಚಿರಮ್, ಚಿರೇಣ, ಚಿರಾಯ, ಚಿರಾತ್, ಚಿರಸ್ಯ - ಎಂಬೀ ಅವ್ಯಯಗಳನ್ನು ಪ್ರಯೋಗಿಸುತ್ತಾರೆ.

೮. **ಪರಮ್ ।** ಆದರೆ, ಕಿಂ ತು, ಕಿಂ ತರ್ಹಿ - ಎಂಬರ್ಥದ ಅವ್ಯಯವಿದು. ‘ಹೆಚ್ಚಿನ’, ‘ಮತ್ತೊಂದು’ ಎಂಬರ್ಥದಲ್ಲಿ ಸರ್ವನಾಮ. ಆಗ ಇದು ಪರಃ, ಪರಾ, ಪರಮ್ - ಎಂದು ಮೂರು ಲಿಂಗಗಳಲ್ಲಿಯೂ ಇರಬಹುದು.

೯. **ಅಥ ।** ‘ಹಾಗಿಲ್ಲದಿದ್ದರೆ’ ಎಂಬ ಪಕ್ಷಾಂತರವಾಚಕಶಬ್ದವಿದು.

೧೦. **ಮಮೋಪರಿ ಅವಜ್ಞಾ ಕ್ರಿಯತೇ ।** ‘ಮಯಿ ಅವಜ್ಞಾ’ ಎಂದೂ ಪ್ರಯೋಗಿಸಬಹುದು.

# ಅಭ್ಯಾಸ ೨೦

ಈ ವಾಕ್ಯಗಳ ಅರ್ಥವನ್ನು ಊಹಿಸಿರಿ :

१. चिरं विचिन्त्य अस्य प्रश्नस्य उत्तरं कथय । २. किमिति रात्रौ चिरेणाऽऽगतः ? ३. एवं चिराय अभ्यस्य पण्डितोऽभवत् । ४. यदा कदा वा आगच्छति, वर्षस्य द्विस्त्रिर्वा । ५. अथ भवानेवं मन्यते, तर्हि मैवात्राऽऽगच्छतु । ६. पूर्वेद्युर्यत् कृतं तेन, परेद्युरपि तदेव कृतम् । ७. कः खल्वत्र भोः (ಯಾರೋ ಅಲ್ಲಿ ?) ८. कश्चन कवाटमुपहन्ति । ९. आर्य, को भवान् ? किं वाञ्छति ? १०. भद्र, दूरादागतोऽहम्, श्रान्तोऽस्मि । ११. अन्तरागम्यतां तर्हि । १२. किमित्यन्तरागच्छेयम् ? अत्रैव तिष्ठामि । १३. मा मैवं वद, अवश्यम् अन्तरागन्तव्यम् । ननु तवैवेदं गृहम् । १४. धन्योऽस्मि भवतो दर्शनात् । १५. अये कथम् ? अयं मम चिरन्तनः सखा । १६. भद्र, चिराद् दृष्टोऽसि । कथमपरिचित इव मयि वर्तसे ? १७. इदमिदमासनम् । १८. अत्रैव आस्यताम् । बहु वक्तव्यमस्ति । १९. कोऽसौ ? किमिति दूरत एव तिष्ठति ? २०. कुक्कुरोऽयं भषति । २१. मा भैषीः । नायं कञ्चन दशति । विस्रब्धमागम्यताम् । अत्रोपविश्यताम् ॥ २२. अरे, कः कोऽत्र ? शीघ्रं पादप्रक्षालनार्थं जलमाहर । २३. भद्र, उत्तिष्ठ । पिपासाकुलः प्रतिभासि । किं तक्रमानयानि, काफीं वा ? २४. अहमद्यापि न स्नातः । २५. अपि कुशली भवान् ? २६. सर्वं मम शिवम् । कच्चित् कुशलिनः सर्वे भवतां गृहे ?

## ११. मित्रभेदः (अनुवृत्तः)

३३. अथ पिङ्गलकाभिप्रायज्ञा व्याघ्रद्वीपिवृकपुरःसराः सर्वेऽपि तद्वचः समाकर्ण्य संसदि तत्क्षणादेव दूरीभूताः ।

ततश्च दमनक आह - 'उदकग्रहणार्थं प्रवृत्तस्य स्वामिनः किमिह निवृत्त्य अवस्थानम् ?'

पिङ्गलक आह सविलक्षस्मितम् - 'किञ्चिदपि' ।

सोऽब्रवीत् - देव, यदि अनाख्येयम्, तत् तिष्ठतु ।'

तत् श्रुत्वा पिङ्गलकश्चिन्तयामास - 'योग्योऽयं दृश्यते । तत्कथयामि एतस्याग्रे आत्मनोऽभिप्रायम् । (प्रकाशम्) भो दमनक, श्रृणोषि शब्दं दूराद् महान्तम् ?'

सोऽब्रवीत् - 'स्वामित्, श्रृणोमि । ततः किम् ?'

पिङ्गलक आह - 'भद्र, अहमस्माद् वनाद् गन्तुमिच्छामि ।'

दमनक आह - 'कस्मात् ?'

पिङ्गलक आह - 'यतोऽद्य अस्मद्वने किमपि अपूर्वं सत्त्वं प्रविष्टम्, यस्यायं महाशब्दः श्रूयते । तस्य च शब्दानुरूपेण पराक्रमेण भाव्यम्' इति ॥

दमनक आह - 'यत् शब्दमात्रादपि भयमुपगतः स्वामी, तदप्ययुक्तम् । यतो भेरीवेणुवीणामृदङ्गतालपटहशङ्खकाहलादिभेदेन शब्दा अनेकविधा भवन्ति ।'

पिङ्गलक आह - 'भोः पश्य । अयं मम सर्वोऽपि परिग्रहो भयव्याकुलितमनाः पलायितुमिच्छति । तत्कथमहं धैर्यावष्टम्भं करोमि ?'

सोऽब्रवीत् - 'स्वामिन्, नैषामेष दोषः । यतः स्वामिसदृशा एव भवन्ति भृत्याः । तत्पौरुषावष्टम्भं कृत्वा त्वं तावदत्रैव प्रतिपालय यावदहमेतच्छब्दस्वरूपं ज्ञात्वा आगच्छामि । ततः पश्चात् यथोचितं कार्यम्' इति ॥

पिङ्गलक आह - 'किं तत्र भवान् गन्तुमुत्सहते ?'

स आह - 'किं स्वाम्यादेशात् सद्भृत्यस्य कृत्याकृत्यमस्ति ?'

पिङ्गलक आह - 'भद्र, यद्येवं तद्गच्छ । शिवास्ते पन्थानः सन्तु ।'

दमनकोऽपि तं प्रणम्य सञ्जीवकशब्दानुसारी प्रतस्थे ॥

ಆಗ ಪಿಂಗಲಕನ ಅಭಿಪ್ರಾಯವನ್ನು ತಿಳಿದವರಾಗಿ ಹುಲಿ, ಚಿರತೆ, ತೋಳ - ಮುಂತಾದವರೆಲ್ಲರೂ ಅದರ ಮಾತನ್ನು ಕೇಳಿ ಸಭೆಯಲ್ಲಿ ಆ ಕ್ಷಣವೇ (ದೂರದಲ್ಲಿರುವರಾದರು =) ದೂರ ಸರಿದರು.

ಆಗ ದಮನಕನೆಂದಿತು :- 'ನೀರು ಕುಡಿಯುವದಕ್ಕೆ (ತೊಡಗಿದ ಸ್ವಾಮಿಗೆ ಏತಕ್ಕೆ ಇಲ್ಲಿ ಹಿಂದಿರುಗಿ ಇರುವಿಕೆ ? =) ಹೋದ ಸ್ವಾಮಿಯವರು ಹಿಂದಿರುಗಿ ಬಂದು ಇಲ್ಲಿಯೇ ಇದ್ದುಕೊಂಡಿರುವದೇಕೆ ?'

ಪಿಂಗಲಕನು ಅಚ್ಚರಿಯ ಮುಗುಳುನಗೆಯಿಂದ ಇಂತೆಂದಿತು :- 'ಏನೋ (ಒಂದು ಕಾರಣ).'

ಅದೆಂದಿತು :- '(ಹೇಳಲ್ಪಡತಕ್ಕದ್ದಲ್ಲವಾದರೆ =) ಹೇಳಬಾರದಾಗಿದ್ದರೆ (ಹಾಗಾದರೆ ಇರಲಿ =) ಇರಲಿ ಬಿಡಿ.'

ಅದನ್ನು ಕೇಳಿ ಪಿಂಗಲಕನು ಯೋಚಿಸಿಕೊಂಡಿತು :- ''ಯೋಗ್ಯನಾಗಿ ಕಾಣಿಸುತ್ತಿದೆ. ಈ (ನರಿ) ; ಆದ್ದರಿಂದ ಇದರ ಮುಂದೆ ನನ್ನ ಅಭಿಪ್ರಾಯವನ್ನು ಹೇಳುವೆನು.'' (ಪ್ರಕಾಶವಾಗಿ =) ಕೇಳುವಂತೆ ಇಂತೆಂದಿತು :- 'ಏನಯ್ಯ ದಮನಕ, ದೂರದಿಂದ (ಬರುವ) ದೊಡ್ಡ (ಶಬ್ದವನ್ನು ಕೇಳುತ್ತೀಯೇನು ? =) ಶಬ್ದವು ನಿನಗೆ ಕೇಳಿಸುತ್ತಿದೆಯೆ ?'

ಅದು ಹೇಳಿತು :- 'ಸ್ವಾಮಿ, (ಕೇಳುತ್ತೇನೆ =) ಕೇಳಿಸುತ್ತಿದೆ. (ಅದರಿಂದೇನು ? =) ಕೇಳಿದರೇನು ?'

ಪಿಂಗಲಕನೆಂದಿತು :- 'ಅಪ್ಪ, ನಾನು ಈ ಕಾಡಿನಿಂದ (ಹೋಗುವದಕ್ಕೆ ಇಚ್ಛಿಸುತ್ತೇನೆ =) ಹೊರಟುಹೋಗಬೇಕೆನ್ನುತ್ತೇನೆ.'

ದಮನಕನೆಂದಿತು :- 'ಏಕೆ ?'

ಪಿಂಗಲಕನೆಂದಿತು :- 'ಏಕೆಂದರೆ, ಇಂದು ನಮ್ಮ ಕಾಡಿನಲ್ಲಿ ಯಾವದೋ (ಅಪೂರ್ವವಾದ =) ಹಿಂದೆ ಎಂದೂ ಇಲ್ಲದಿದ್ದ ಒಂದು ಪ್ರಾಣಿ ಹೊಕ್ಕಿರುತ್ತದೆ. (ಯಾವದರ =) ಅದರದೇ ಈ ದೊಡ್ಡ ಶಬ್ದವು ಕೇಳಿಬರುತ್ತಿದೆ. ಅದಕ್ಕೆ ಶಬ್ದಕ್ಕೆ ತಕ್ಕಂತೆಯೇ (ಪರಾಕ್ರಮದಿಂದಲೂ ಇರೋಣಾಗಬೇಕು =) ಪರಾಕ್ರಮವೂ ಇರಬೇಕು.'

ದಮನಕನೆಂದಿತು :- 'ಬರಿಯ ಶಬ್ದದಿಂದಲೇ ಸ್ವಾಮಿಯವರು ಭಯವನ್ನು ಹೊಂದಿರುವರಲ್ಲ. ಅದೂ ಸರಿಯಲ್ಲ. ಏಕೆಂದರೆ ನಗಾರಿ, ಕೊಳಲು, ವೀಣೆ, ಮದ್ದಲೆ, ತಾಳ, ತಮಟೆ, ಶಂಖ, ಕಾಳೆ - ಮುಂತಾದ (ವಿಶೇಷದಿಂದ =) ರೀತಿಯ ಶಬ್ದಗಳು ಬಲುಬಗೆಯವಾಗಿರುತ್ತವೆ.'

ಪಿಂಗಲಕನೆಂದಿತು :- 'ನೋಡಯ್ಯ, ಈ ನನ್ನ ಪರಿವಾರವೆಲ್ಲ ಅಂಜಿಕೆಯಿಂದ ತುಂಬಿದ ಮನಸ್ಸುಳ್ಳದ್ದಾಗಿ ಓಡುವದಕ್ಕೆ ಇಚ್ಛಿಸುತ್ತಿದೆ. ಹೀಗಿರುವಲ್ಲಿ ನಾನು ಹೇಗೆ (ತಾನೆ) (ಧೈರ್ಯದ ಆಶ್ರಯವನ್ನು ಮಾಡೋಣ =) ಧೈರ್ಯವನ್ನು ತಾಳಲಿ ?'

ಅದು ಹೇಳಿತು :- 'ಸ್ವಾಮಿ, ಈ ತಪ್ಪು ಇವರದಲ್ಲ. ಏಕೆಂದರೆ ಆಳುಗಳು ಒಡೆಯನಿಗೆ (ಸಮನಾದವರೇ =) ತಕ್ಕವರೇ ಆಗಿರುತ್ತಾರೆ. ಆದ್ದರಿಂದ ಪೌರುಷವನ್ನವಲಂಬಿಸಿ ನಾನು (ಎಷ್ಟರೊಳಗೆ ಈ ಶಬ್ದಸ್ವರೂಪವನ್ನು ತಿಳಿದುಕೊಂಡು ಬರುತ್ತೇನೋ ಅಷ್ಟರವರೆಗೆ ಕಾದುಕೊಂಡಿರು =) ಈ ಶಬ್ದವು ಏನೆಂಬುದನ್ನು ನಾನು ತಿಳಿದುಕೊಂಡು ಬರುವವರೆಗೂ ಇಲ್ಲಿಯೇ ಕಾದುಕೊಂಡಿರಿ. ಆಮೇಲೆ ಹೇಗೆ ಯೋಗ್ಯವೋ ಹಾಗೆ (ಮಾಡಲ್ಪಡತಕ್ಕದ್ದು =) ಮಾಡಬಹುದು.'

ಪಿಂಗಲಕನೆಂದಿತು :- 'ನೀನು ಅಲ್ಲಿಗೆ (ಹೋಗಲು ಉತ್ಸಾಹವುಳ್ಳವನಾಗಿರುತ್ತೀಯೇನು ? =) ಹೋಗಲಾಪೆಯ ?'

ಅದೆಂದಿತು :- 'ಒಳ್ಳೆಯ ಸೇವಕನಾದವನಿಗೆ ಒಡೆಯನ ಅಪ್ಪಣೆಗಿಂತಲೂ (ಬೇರೆ) ಮಾಡತಕ್ಕದ್ದು - ಮಾಡಬಾರದ್ದು - ಎಂಬುದಿರುತ್ತದೆಯೇನು ?'

ಪಿಂಗಲಕನೆಂದಿತು :- 'ಅಪ್ಪ, (ಹೀಗಾದರೆ ಆಗ =) ಹಾಗಾದರೆ ಹೊರಡು. (ನಿನ್ನ ಹಾದಿಗಳು ಸುಖದಾಯಕವಾಗಲಿ =) ಸುಖವಾಗಿ ಹೋಗಿ ಬಾ !'

ದಮನಕನೂ ಆ (ಪಿಂಗಲಕನನ್ನು) ನಮಸ್ಕರಿಸಿ ಸಂಜೀವಕನ ಶಬ್ದವನ್ನೇ (ಅನುಸರಿಸಿದ್ದಾಗಿ =) ಹಿಡಿದು ಹೊರಟಿತು.

## ಚಿಂತನ

೧. ವ್ಯಾಘ್ರ.....ಪುರಃಸರಾಃ = ವ್ಯಾಘ್ರಶ್ಚ ದ್ವೀಪೀ ಚ ವೃಕಶ್ಚ । ತೇ ಪುರಃಸರಾ ಯೇಷಾಂ ತೇ ।। ಪುರಃಸರರು ಎಂದರೆ ಮುಂದೆ ಹೋಗುವವರು. ಪುರಸ್ಸರ, ಪ್ರಭೃತಿ, ಆದಿ, ಪ್ರಮುಖ, ಆದ್ಯ - ಇವುಗಳನ್ನು 'ಮುಂತಾದ' ಎಂಬರ್ಥದಲ್ಲಿ ಪ್ರಯೋಗಿಸುತ್ತಾರೆ. 'ಮನ್ತ್ರಿಸೇನಾಪತಿಪುರಃಸರಾಃ', 'ಮನ್ತ್ರಿಸೇನಾಪತಿಪ್ರಮುಖಾಃ' 'ಮನ್ತ್ರಿಸೇನಾಪತಿಪ್ರಭೃತಯಃ', 'ಮನ್ತ್ರಿಸೇನಾಪತ್ಯಾದ್ಯಾಃ', 'ಮನ್ತ್ರಿಸೇನಾಪತ್ಯಾದಯಃ' ಇವಕ್ಕೆಲ್ಲ 'ಮಂತ್ರಿಸೇನಾಪತಿ ಮೊದಲಾದವರು' ಎಂದೇ ಅರ್ಥ.

೨. ಕಿಮಿಹ ನಿವರ್ತ್ಯಾವಸ್ಥಾನಮ್ = ಕಿಂ ಕಾರಣಮ್ ಅತ್ರ ತತೋ ನಿವರ್ತ್ಯ (ಅವಸ್ಥಾನಂ ಕ್ರಿಯತೇ ) ಅವಸ್ಥೀಯತೇ ? ಹೀಗೆಯೇ ಕುತೋ ಗಮನಮ್ ? ಕುತೋ ಗಮ್ಯತೇ ? (ಪು. ೭೮-೮೩)

೩. ಸವಿಲಕ್ಷಸ್ಮಿತಮ್ ವಿಲಕ್ಷಂ ಚ ತತ್ ಸ್ಮಿತಂ ಚ ವಿಲಕ್ಷಸ್ಮಿತಮ್ ; ವಿಲಕ್ಷಸ್ಮಿತೇನ ಸಹ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ ।।

'ಮತ್ತೊಬ್ಬರ ನಡತೆಯಿಂದ ಆಶ್ಚರ್ಯಯುಕ್ತನಾದ' ಎಂಬರ್ಥದಲ್ಲಿ ವಿಲಕ್ಷಶಬ್ದವು ಬರುತ್ತದೆ.

೪. ತನ್ನಲ್ಲಿ ಯೋಚಿಸಿಕೊಳ್ಳುವದನ್ನು 'ಸ್ವಗತಮ್' ಎಂದೂ, ಮತ್ತೊಬ್ಬರಿಗೆ ತಿಳಿಯುವ ಹಾಗೆ ಮಾತಾಡಿದ್ದನ್ನು '**ಪ್ರಕಾಶಮ್**' ಎಂದೂ ನಾಟಕಗಳಲ್ಲಿ ತಿಳಿಸುತ್ತಾರೆ. ಇಲ್ಲಿ '**ಪ್ರಕಾಶಮಾಹ**' ಎಂಬ ಮಾತು ಮೂಲಗ್ರಂಥದಲ್ಲಿಲ್ಲ ; ನಾವು ಸೇರಿಸಿಕೊಂಡಿದ್ದೇವೆ.

೫. **ಕಿಞ್ಚಿದಪಿ** = ಕಿಞ್ಚಿದಪ್ಯಸ್ತಿ ಕಾರಣಮ್. ಹೀಗೆಯೇ **ಯದ್ಯನಾಖ್ಯೇಯಮ್** ಯದಿ ಅನಾಖ್ಯೇಯಂ ಕಾರಣಮ್ ।।

೬. '**ಆತ್ಮನೋಽಭಿಪ್ರಾಯಮ್**' - ಸ್ವಸ್ಯ ಅಭಿಪ್ರಾಯಮ್ - ಮಮಾಭಿಪ್ರಾಯಮ್ । ಆತ್ಮನ್, ಸ್ವಶಬ್ದಗಳ ವಿಷಯಕ್ಕೆ ೨ನೆಯ ಭಾಗದ ೭೫-೭೬ನೇ ಪುಟವನ್ನು ನೋಡಿ. ಉತ್ತಮ ಮಧ್ಯಮಪುರುಷಗಳ ಅರ್ಥದಲ್ಲಿಯೂ ಇದನ್ನು ಉಪಯೋಗಿಸಬಹುದು. 'ಅಹಮ್ ಆತ್ಮನೋ (= ಮಮ) ಗೃಹಂ ಗಚ್ಛಾಮಿ', 'ತ್ವಮ್ ಆತ್ಮನೋ (= ತವ) ಗೃಹಂ ನ ಗಚ್ಛಸಿ ಕಿಮ್ ?'

೭. **ಯಸ್ಯಾಯಂ ಮಹಾನ್ ಶಬ್ದಃ** । ಯಚ್ಛಬ್ದವನ್ನು ಪೂರ್ವವಿಶೇಷಣ ವಾಗಿರುವ ವಾಕ್ಯದಲ್ಲಿಯೂ ಪ್ರಯೋಗಿಸಬಹುದು ; 'ಯಸ್ಯಾನುಗ್ರಹಮಿಚ್ಛಾಮಿ ತಸ್ಯ ವಿತ್ತಂ ಹರಾಮ್ಯಹಮ್' (ಯಾವನ ಅನುಗ್ರಹವನ್ನು ಇಚ್ಛಿಸುತ್ತೇನೋ =) ಯಾರಿಗೆ ಅನುಗ್ರಹ ಮಾಡಬೇಕೆಂದಿರುವೆನೋ ಅವನ ಧನವನ್ನು ಹೋಗಲಾಡಿಸುವೆನು. ಹಿಂದೆ ಹೇಳಿದ್ದಕ್ಕೆ ಮತ್ತೊಂದನ್ನು ಕೂಡಿಸುವದಕ್ಕೂ (Continuatively) ಉಪಯೋಗಿಸಬಹುದು. ಆಗ ಇದನ್ನು ತಚ್ಛಬ್ದದಂತೆ ಕನ್ನಡಿಸಬೇಕು. ಉದಾ : 'ಮಮ ಮಿತ್ರಮಸ್ತಿ ವಸುಗುಪ್ತೋ ನಾಮ, ಯಸ್ಯ (= ತಸ್ಯ ಚ) ಪುತ್ರೋಽಯಮ್ । ನನಗೆ ವಸುಗುಪ್ತನೆಂಬ ಮಿತ್ರನಿದಾನೆ, ಅವನ ಮಗನಿವನು.

೮. **ಪರಾಕ್ರಮೇಣ ಭಾವ್ಯಮ್** । 'ಪರಾಕ್ರಮೋ ಭವೇತ್' - ಎಂಬಿದರ ಭಾವೇ ಪ್ರಯೋಗ (Impersonal Passive)

೯. **ತಾವದತ್ರ ಪ್ರತಿಪಾಲಯ ಯಾವತ್ ಆಗಚ್ಛಾಮಿ** । (Wait till I come). 'ವರೆಗೆ' ಎಂಬರ್ಥದ ನಿತ್ಯಸಂಬದ್ಧಾವ್ಯಯಗಳು. 'ಯಾವನ್ಮದಾಗಮನಂ ಪ್ರತಿಪಾಲಯ' ಎಂದೂ ಹೇಳಬಹುದು.

೧೦. **ಗನ್ತುಮುತ್ಸಹತೇ** - 'ಶಕ್ತಿಯಿದೆ' ಎಂಬರ್ಥದ ಮಾತುಗಳ ಹಿಂದೆ 'ತುಮ್' ಪ್ರತ್ಯಯದ ಕೃದಂತಗಳನ್ನು (Infinitives) ಬಳಸುವರು. (ಪು. ೧೨೪-೧೨೫) 'ಗನ್ತುಂ ಶಕ್ನೋತಿ', 'ಗನ್ತುಂ ಪಾರಯತಿ', 'ಗನ್ತುಮುತ್ಸಹತೇ' ಇವಕ್ಕೆಲ್ಲ 'ಹೋಗಬಲ್ಲನು' (He can go) ಎಂದೇ ಅರ್ಥ.

೧೧. **ಯದ್ಯೇವಂ - ತತ್** । ಹೀಗಾದರೆ, ಯದಿ ಎಂಬುದಕ್ಕೆ 'ತತ್', 'ತತಃ', 'ತರ್ಹಿ', ಅಥವಾ '**ತದಾ**' - ಎಂಬ ಯಾವದಾದರೂ ನಿತ್ಯಸಂಬದ್ಧಾವ್ಯಯವು (Correlative) ಬೇಕು. ಈ ಎರಡನೆಯ ಅವ್ಯಯಗಳನ್ನು ಬಿಟ್ಟರೂ ಕೆಲವು ವೇಳೆ ಸಾಗುತ್ತವೆ. 'ಗಚ್ಛ ಯದ್ಯೇವಮ್' ಎಂಬುದರ ಅರ್ಥವೇ ಇದಕ್ಕೆ ಸಂಬದ್ಧಾವ್ಯಯಗಳನ್ನು ಕನ್ನಡಿಸಬೇಕಾದದ್ದಿಲ್ಲ.

# ಅಭ್ಯಾಸ ೨೦

1. ಈ ವಾಕ್ಯಗಳ ಅರ್ಥವನ್ನು ಊಹಿಸಿರಿ :

२. स्थूलकायोऽपि गजो सिंहाद् बिभेति । ३. गावः, अश्वाः, कुक्कुराश्च ग्राम्याः पशवः । ४. वन्योऽपि मृगराजोऽपि पिङ्गलकः ग्राम्यस्य सञ्जीवकस्य महान्तं शब्दं श्रुत्वा विनैव कारणं सभयोऽभवत् ।।

2. ಈ ವಾಕ್ಯಗಳನ್ನು ಪೂರ್ಣಗೊಳಿಸಿ ಬರೆಯಿರಿ :

चोरो रात्रौ रजकस्य .... प्रविष्टः । तद्दृष्ट्वा रासभः कुक्कुरम् आह - 'सखे, स्वामिनं प्रबोधय ।' तस्मिन् अहनि .... कुक्कुराय ... नदत्तः । तस्मात् स न भषति । रासभस्तु स्वगतं चिन्तयति - 'अयं .... शक्तोऽपि स्वामिने उपकारं .... .... । तत् अहमेव तावत् चीत्करोमि ।' तस्य महान्तं रावं श्रुत्वा .... निद्राभङ्गहेतोः .... रासभं लगुडेन .... .... ।।

3. ಈ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ :

१. करटकदमनकयोः पिङ्गलकस्य च कः संबन्धः ? २. पिङ्गलकः केन हेतुना भयाकुलोऽवस्थितः ? ३. दमनकः किं कर्तुकामः पिङ्गलकमागच्छत् ? ४. करटकः किमिति तूष्णीं स्थितः ? ५. आगतो दमनकः किमकरोत् ? ६. पिङ्गलकस्तं किमाह ?

## ೧೨. ಕೆಲವು ಪರೋಕ್ಷಭೂತಕ್ರಿಯಾಪದಗಳು

## VERBS IN THE PERFECT TENSES

೩೪. ಈ ಕೆಳಗಿನ ಶ್ಲೋಕಗಳಲ್ಲಿರುವ ಕ್ರಿಯಾಪದಗಳ ಭೂತಕಾಲದ ರೂಪಗಳನ್ನು ನೋಡಿ.

ततो दशास्यः स्मरविह्वलात्मा चारप्रकाशीकृतशत्रुशक्तिः ।

विमोह्य मायामयराममूर्ध्ना सीतामनीकं प्रजिघाय योद्धुम् ।।१।।

ಪ್ರತಿಪದಾರ್ಥ : ತತಃ - ಆ ಬಳಿಕ, ದಶಾಸ್ಯಃ - ಹತ್ತು ಮುಖಗಳುಳ್ಳ (ರಾವಣನು), ಸ್ಮರವಿಹ್ವಲಾತ್ಮಾ - ಕಾಮದಿಂದ ತಳಮಳಗೊಂಡ ಮನಸ್ಸುಳ್ಳವನಾಗಿ, ಮಾಯಾಮಯರಾಮ ಮೂರ್ಧ್ನಾ - ಮಾಯಾಸ್ವರೂಪವಾದ ರಾಮನ ತಲೆಯಿಂದ, ಸೀತಾಮ್ - ಸೀತೆಯನ್ನು,

ವಿಮೋಹ್ಯ - ಮೋಹಗೊಳಿಸಿ, ಚಾರಪ್ರಕಾಶೀಕೃತಶತ್ರುಶಕ್ತಿಃ - ಬೇಹುಗಾರರಿಂದ ತಿಳಿಸಲ್ಪಟ್ಟ ಶತ್ರುಸಾಮರ್ಥ್ಯವುಳ್ಳವನಾಗಿ, ಯೋದ್ಧುಮ್ - ಯುದ್ಧ ಮಾಡುವದಕ್ಕೆ, ಅನೀಕಮ್ - ಸೈನ್ಯವನ್ನು, ಪ್ರಜಿಘಾಯ - ಕಳುಹಿಸಿಕೊಟ್ಟನು.

ತಾತ್ಪರ್ಯ : ರಾಮನ ಕಡೆಯವರು ಸೇತುವನ್ನು ಕಟ್ಟಿದ ಬಳಿಕ, ಕಾಮದಿಂದ ತಳಮಳಗೊಂಡಿದ್ದ ರಾವಣನು ಮಾಯಾಮಯವಾದ ರಾಮನ ತಲೆಯನ್ನು ತೋರಿಸಿ ಸೀತಾದೇವಿಯನ್ನು ಮೋಹಗೊಳಿಸಿ, ಚಾರರಿಂದ ಶತ್ರುಬಲವನ್ನು ತಿಳಿದುಕೊಂಡವನಾಗಿ ಯುದ್ಧಮಾಡುವದಕ್ಕೆ ಸೈನ್ಯವನ್ನು ಕಳುಹಿಸಿಕೊಟ್ಟನು.

कम्बूनथ समादध्मुः कोणैर्भेर्यो निजघ्निरे ।

वेणून् पुपूरिरे गुञ्जा जुगुञ्जुः करघट्टिताः ।।२।।

ಅರ್ಥ : ಅಥ ಕಮ್ಬೂನ್ ಸಮಾದಧ್ಮುಃ - ಬಳಿಕ ಶಂಖಗಳನ್ನು ಧ್ವನಿಗೈದರು. ಕೋಣೈಃ ಭೇರ್ಯಃ ನಿಜಘ್ನಿರೇ - ಬಡಿಗೋಲುಗಳಿಂದ ನಗಾರಿಗಳು ಹೊಡೆಯಲ್ಪಟ್ಟವು. ವೇಣೂನ್ ಪುಪೂರಿರೇ - ಕೊಳಲುಗಳನ್ನು ಊದಿದರು. ಗುಞ್ಜಾಃ ಕರಘಟ್ಟಿತಾಃ ಜುಗುಞ್ಜುಃ - ತಮಟೆಗಳು ಕೈಗಳಿಂದ ಬಡಿಯಲ್ಪಟ್ಟು ಭೋರ್ಗರೆದವು.

वादयाञ्चक्रिरे ढक्काः पणवा दध्वनुर्हताः ।

काहलाः पूरयाञ्चक्रुः पूर्णाः पेराश्च सस्वनुः ।।३।।

ಅರ್ಥ : ಢಕ್ಕಾಃ ವಾದಯಾಞ್ಚಕ್ರಿರೇ - ವಿಜಯದ ಡೋಲುಗಳನ್ನು ಬಾರಿಸಿದರು. ಹತಾಃ ಪಣವಾ ಸಸ್ವನುಃ - ಬಾರಿಸಲ್ಪಟ್ಟ ದುಮದುಮಿಗಳು ಧ್ವನಿಗೈದವು. ಕಾಹಲಾಃ ಪೂರಯಾಞ್ಚಕ್ರುಃ - ಕಾಳೆಗಳನ್ನು ಊದಿದರು. ಪೂರ್ಣಾಃ ಪೇರಾಃ ಸಸ್ವನುಃ - ಊದಲ್ಪಟ್ಟ ಪೇರಾ ಎಂಬ ವಾದ್ಯಗಳು ಶಬ್ದಮಾಡಿದವು.

ಮೇಲೆ ಕೊಟ್ಟಿರುವ ಶ್ಲೋಕಗಳಲ್ಲಿ ಈ ಕ್ರಿಯಾಪದಗಳಿವೆ :

ಪ್ರ-ಜಿಘಾಯ, ಸಮಾ-ದಧ್ಮುಃ, ನಿ-ಜಘ್ನಿರೇ, ಪುಪೂರಿರೇ, ಜುಗುಞ್ಜುಃ ವಾದಯಾಞ್ಚಕ್ರಿರೇ, ದಧ್ವನುಃ, ಪೂರಯಾಞ್ಚಕ್ರುಃ, ಸಸ್ವನುಃ - ಇವೆಲ್ಲ ಪರೋಕ್ಷಭೂತಕಾಲವನ್ನು ಹೇಳುತ್ತವೆ.

೩೫. ಪರೋಕ್ಷಭೂತರೂಪವು ಎರಡು ಬಗೆ. ಧಾತುವಿನ ಆದ್ಯಕ್ಷರಕ್ಕೆ ದ್ವಿರ್ಭಾವ ಬರುವ (Reduplicated Perfect) ರೂಪವೊಂದು, ಸಹಾಯಕ ಕ್ರಿಯೆಗಳೊಡನೆ ಏರ್ಪಡುವ (Periphrastic) ರೂಪವೊಂದು.

ಉದಾಹರಣೆಗೆ ಮೇಲೆ ಕೊಟ್ಟಿರುವ ಶ್ಲೋಕಗಳಲ್ಲಿರುವ :

**ಅ) ದ್ವಿರ್ಭಾವದ ರೂಪಗಳಿವು :** ಜಿಘಾಯ, ದಧ್ಮುಃ, ಜುಗುಞ್ಜುಃ, ಸಸ್ವನುಃ, ಜಘ್ನಿರೇ, ಪೂರಿರೇ, ದದ ನುಃ ।

ಆ) ಸಹಾಯಕ ಕ್ರಿಯೆಯೊಡನೆ ಆಗಿರುವ ರೂಪಗಳಿವು : ಪೂರಯಾಞ್ಚಕ್ರುಃ, ವಾದಯಾಞ್ಚಕ್ರಿರೇ.

ಇವುಗಳನ್ನು ಮುಂದೆ ಖಂಡ ೪೬ ರಲ್ಲಿ ವಿಮರ್ಶಿಸಲಾಗುವದು.

ಕೆಲವು ಧಾತುಗಳಿಗೆ ದ್ವಿರ್ಭಾವದ ರೂಪವೇ ಬರುತ್ತದೆ, ಕೆಲವಕ್ಕೆ ಎರಡನೆಯ ರೂಪವೇ ಬರುತ್ತದೆ ; ಇನ್ನು ಕೆಲವು ಧಾತುಗಳಿಗೆ ಈ ಎರಡೂ ರೂಪಗಳು ಬರುತ್ತವೆ. ಏಕಾಕ್ಷರವುಳ್ಳ ಮೂಲಧಾತುಗಳಿಗೂ ಅ, ಆ, ಇ, ಉ, ಋ - ಇವುಗಳಾಗಲಿ, ವ್ಯಂಜನವಾಗಲಿ ಆದಿಯಲ್ಲಿರುವ ಧಾತುಗಳಿಗೂ ಋಚ್ಛ್, ಊರ್ಣು - ಎಂಬ ಧಾತುಗಳಿಗೂ ದ್ವಿರ್ಭಾವದ ರೂಪವೇ ಬರುತ್ತದೆ.

## ದ್ವಿರ್ಭಾವದ ನಿಯಮಗಳು

೧. ಧಾತುವಿನ ಮೊದಲನೆಯ ಸ್ವರಕ್ಕೆ ತನ್ನ ಹಿಂದೆ ವ್ಯಂಜನವಿದ್ದರೆ ಅದರೊಡನೆಯೇ ದ್ವಿರ್ಭಾವ. ಉದಾ : ಅಟ್ - ಅಅಟ್, ಇಟ್-ಇಇಟ್, ಪತ್-ಪಪತ್, ಪುಷ್-ಪುಪುಷ್ ||

೨. (ಅ) ಧಾತುವಿನ ಆದಿಯಲ್ಲಿ ಸಂಯುಕ್ತಾಕ್ಷರವಿದ್ದರೆ ಇಲ್ಲಿ ರೂಪದ ಮೊದಲನೆಯ ಭಾಗಕ್ಕೆ ಅಭ್ಯಾಸವೆಂದು ಹೆಸರು.

(ಆ) ಧಾತುವಿನ ಆದಿಯಲ್ಲಿ ಸಂಯುಕ್ತಾಕ್ಷರವಿದ್ದರೆ ಸ್ವರಸಹಿತವಾಗಿ ಮೊದಲನೆಯ ವ್ಯಂಜನವು ಮಾತ್ರ ದ್ವಿರ್ಭಾವವನ್ನು ಪಡೆಯುತ್ತದೆ. ಉದಾ : ಪ್ರಚ್ಛ್-ಪಪ್ರಚ್ಛ್, ದ್ರುಹ್-ದುದ್ರುಹ್ ||

(ಇ) ಸಂಯುಕ್ತಾಕ್ಷರದ ಮೊದಲನೆಯ ವರ್ಣವು ಶ, ಷ, ಸ-ಗಳಲ್ಲಿ ಒಂದಾಗಿದ್ದು ಮುಂದಿನ ವ್ಯಂಜನವು ಕರ್ಕಶವರ್ಣವಾಗಿದ್ದರೆ ಸ್ವರಸಹಿತಕರ್ಕಶವರ್ಣಕ್ಕೇ ದ್ವಿರ್ಭಾವ. ಉದಾ : ಶ್ಚುತ್ ಚುಶ್ಚುತ್, ಸ್ಪರ್ಧ್-ಪಸ್ಪರ್ಧ್ ; ಆದರೆ ಸ್ವನ್-ಸಸ್ವನ್ (ಏಕೆಂದರೆ ಇಲ್ಲಿ ಕರ್ಕಶ ವರ್ಣವಿಲ್ಲ.)

೩. ಅಭ್ಯಾಸದಲ್ಲಿರುವ ಮಹಾಪ್ರಾಣದ ದೀರ್ಘಸ್ವರವು ಹ್ರಸ್ವವಾಗುವದು. ಮಹಾಪ್ರಾಣವು ಅಲ್ಪಪ್ರಾಣವಾಗುವದು. ಉದಾ : ಬಾಧ್-ಬಬಾಧ್, ಭಾಷ್-ಬಭಾಷ್ ||

೪. ಅಭ್ಯಾಸದ ಕವರ್ಗದ ಅಕ್ಷರಕ್ಕೆ ಚವರ್ಗದ ಆಯಾ ವರ್ಣವು ಆದೇಶ ; ಹಕಾರಕ್ಕೆ ಜಕಾರ. ಉದಾ : ಖಾದ್-ಕಖಾದ್, ಚಖಾದ್ | ಖಿದ್-ಕಿಖಿದ್, ಚಿಖಿದ್ | ಗದ್-ಜಗದ್ | ಘುಷ್-ಝುಘುಷ್, ಜುಘುಷ್ | ಹಸ್-ಹಹಸ್, ಜಹಸ್ | ಹಿಂಸ್-ಹಿಹಿಂಸ್, ಜಿಹಿಂಸ್ ||

೩೬. ಈಗ ಪರೋಕ್ಷಭೂತದ ಪ್ರತ್ಯಯಗಳನ್ನೂ ಅವನ್ನು ಧಾತುಗಳಿಗೆ ಸೇರಿಸುವ ಕೆಲವು ಕ್ರಿಯಾಪದಗಳನ್ನೂ ಕೊಡುವೆವು.

**ಪರ** : अ अतुः उः । थ अथुः अ । अ व म

**ಆತ್ಮನೇ** : ए आते इरे । से आथे ध्वे । ए वहे महे

ಈ ಪ್ರತ್ಯಯಗಳಲ್ಲಿ ಪರಸ್ಮೈಪದದ ಥ-ವ-ಮ ಎಂಬಿವುಗಳೂ ಆತ್ಮನೇಪದದ ವಹೇ-ಸೇ-ಧ್ವೇ ಇವುಗಳೂ ಸೇರುವಾಗ ಇವುಗಳ ಆದಿಯಲ್ಲಿ 'ಇ' ಎಂಬ ಆಗಮವು* ಬರಬಹುದು. ಪರಸ್ಮೈಪದದ ಏಕವಚನಪ್ರತ್ಯಯಗಳು ಪ್ರಬಲವೆಂದೂ ಮಿಕ್ಕವು ದುರ್ಬಲವೆಂದೂ ಸಂಜ್ಞೆ. ಧಾತುವಿನ ಉಪಾಂತ್ಯಹ್ರಸ್ವಸ್ವರಕ್ಕೆ ಪ್ರಬಲಪ್ರತ್ಯಯವು ಸೇರುವಾಗ ಗುಣವಾಗುತ್ತದೆ. ಉದಾ : ತುತೋಷ, ಬುಬೋಧ ; ತುತೋಷಿಥ, ಬುಬೋಧಿಥ, ತುತೋಷ, ಬುಬೋಧ. ಅಂತ್ಯಸ್ವರಕ್ಕೂ ಉಪಾಂತ್ಯ ಅಕಾರಕ್ಕೂ ಪ್ರಥಮಪುರುಷ ಏಕವಚನದಲ್ಲಿ ವೃದ್ಧಿ. ಉದಾ : ಚಕಾರ, ಜಗಾದ (ಹೇಳಿದನು) ; ಉತ್ತಮಪುರುಷೈಕವಚನದಲ್ಲಿ ವಿಕಲ್ಪದಿಂದ ವೃದ್ಧಿ. ಉದಾ : ಚಕಾರ, ಚಕರ ; ಜಗಾದ, ಜಗದ. ಮಧ್ಯಮಪುರುಷೈಕವಚನದಲ್ಲಿ ಅಂತ್ಯಸ್ವರಕ್ಕೆ ಗುಣ, ಉಪಾಂತ್ಯಅಕಾರವು ಹಾಗೆಯೇ ಇರುತ್ತದೆ.

## ಪರೋಕ್ಷಭೂತದ ಕ್ರಿಯಾರೂಪಗಳು

| ಪರ : भू - ಇರು | | | ಕರ್ಮಣಿ ಆತ್ಮ : अनु. भू - ಅನುಭವಿಸು | | |
|---|---|---|---|---|---|
| बभूव | बभूवतुः | बभूवुः | बभूवे | बभूवाते | बभूविरे |
| बभूविथ | बभूवथुः | बभूव | बभूविषे | बभूवाथे | बभूविध्वे-ढ्वे |
| बभूव | बभूविव | बभूविम | बभूवे | बभूविवहे | बभूविमहे |

[ಭೂಧಾತುವಿಗೆ ವಕಾರಾಗಮವು ಬಂದು ಭೂವ್ ಆಗುತ್ತದೆ ; ಭೂವ್-ಭೂವ್-ಭೂ ಭೂವ್-ಭುಭೂವ್-ಬುಭೂವ್ ಎಂದು ದ್ವಿರ್ಭಾವನಿಯಮಗಳಿಂದ ಆಗುತ್ತದೆ. ಈ ಧಾತುವಿನ ಉಕಾರವು ಅಕಾರವಾಗುವದೊಂದು ವಿಶೇಷ.]

| ಪರ : बुध् - ತಿಳಿ | | | ಪರ : वृष् - ಮಳೆಗರೆ | | |
|---|---|---|---|---|---|
| बुबोध | बुबुधतुः | बुबुधुः | ववर्ष | ववृषतुः | ववृषुः |
| बुबोधिथ | बुबुधथुः | बुबुध | ववर्षिथ | ववृषथुः | ववृष |
| बुबोध | बुबुधिव | बुबुधिम | ववर्ष | ववृषिव | ववृषिम |

[ಉಪಾಂತ್ಯಹ್ರಸ್ವಸ್ವರಕ್ಕೆ ಗುಣವಾಗಿರುವದಕ್ಕೂ ಋಕಾರಕ್ಕೆ ಅಕಾರವು ಬಂದಿರುವದಕ್ಕೂ ಉದಾಹರಣೆಗಳಿವು.]

---

* ಈ ಆಗಮವನ್ನು ಪಾಣಿನಿಯ ವ್ಯಾಕರಣದಲ್ಲಿ ಇಡಾಗಮವೆಂದು ಕರೆದಿದೆ. ಇದರ ವಿಷಯವನ್ನು ಮುಂದೆ [೩೯, ४೦] ನೆಯ ಖಂಡಗಳಲ್ಲಿ ವಿವರಿಸಲಾಗುವದು.

ಪರ : खाद् - ತಿನ್ನು ಪರ : गद् - ಹೇಳು

| | | | | | |
|---|---|---|---|---|---|
| चखाद | चखादतुः | चखादुः | जगाद | जगदतुः | जगदुः |
| चखादिथ | चखादथुः | चखाद | जगदिथ | जगदथुः | जगद |
| चखाद | चखादिव | चखादिम | जगाद-जगद | जगदिव | जगदिम |

(ಕವರ್ಗಕ್ಕೆ ಚವರ್ಗದ ಆದೇಶ ಬಂದಿರುವದಕ್ಕೆ ಉದಾಹರಣೆ ; ಜಗಾದ ಎಂಬಲ್ಲಿ ಉಪಾಂತ್ಯ ಅಕಾರಕ್ಕೆ ವೃದ್ಧಿಯು ಬಂದಿರುವದನ್ನು ಲಕ್ಷಿಸಿರಿ.)

ಪರ : हिंस् - ಕೊಲ್ಲು ಪರ : हि - ಹೋಗು

| | | | | | |
|---|---|---|---|---|---|
| जहिंस | जिहिंसतुः | जिहिंसुः | जिघाय | जिघ्यतुः | जिघ्युः |
| जहिंसिथ | जिहिंसथुः | जिहिंस | जिघयिथ-जिघेथ | जिघ्यथुः | जिघ्य |
| जिहिंस | जिहिंसिव | जिहिंसिम | जिघाय-जिघय | जिघ्यिव | जिघ्यिम |

(ಹಕಾರಕ್ಕೆ 'ಜ' ಬಂದದ್ದಕ್ಕೆ ಈ ಎರಡೂ ಉದಾಹರಣೆಗಳು. ಎರಡನೆಯ ಉದಾಹರಣೆಯಲ್ಲಿ 'ಹಿ' ಧಾತುವಿಗೆ 'ಘ' ಎಂಬಾದೇಶವು ಬಂದಿರುವದೊಂದು ವಿಶೇಷ. ಜಿಘಾಯ ಎಂಬಲ್ಲಿ ಅಕಾರಕ್ಕೆ ವೃದ್ಧಿಯು ಪ್ರಥಮಪುರುಷಕ್ಕೆ ನಿತ್ಯ ; ಮಧ್ಯಮಪುರುಷದಲ್ಲಿ ಗುಣ ; ಉತ್ತಮಪುರುಷದಲ್ಲಿ ವಿಕಲ್ಪದಿಂದ ವೃದ್ಧಿ. ಇಡಾಗಮವು ವಿಕಲ್ಪದಿಂದ ಬಂದಿದೆ. ೩ನೆಯ ಖಂಡದ ಶ್ಲೋಕವನ್ನು ನೋಡಿ.)

ಪರ : ध्वन् - ಧ್ವನಿಗೈಯು ಪರ : स्वन् - ಸದ್ದುಮಾಡು

| | | | | | |
|---|---|---|---|---|---|
| दध्वान | दध्वनतुः | दध्वनुः | सस्वान | सस्वनतुः | सस्वनुः |

(ಅಭ್ಯಾಸದ ಮೊದಲನೆಯ ವ್ಯಂಜನವು ಮಾತ್ರ ಉಳಿದದ್ದಕ್ಕೆ ಉದಾಹರಣೆ ಗಳಿವು. ಇವಕ್ಕೆ ಗದ್ ಧಾತುವಿನಂತೆ ರೂಪಗಳು. ಸ್ವನ್ ಧಾತುವಿಗೆ ವಿಶೇಷರೂಪಗಳುಂಟು ; ಅವನ್ನು ಮುಂದೆ ೩ನೆಯ ಖಂಡದಲ್ಲಿ ತಿಳಿಯಿಸುವೆವು.)

## ಅಭ್ಯಾಸ ೨೨

1. ಈ ವಾಕ್ಯಗಳನ್ನು - ಪರೋಕ್ಷಭೂತಕ್ರಿಯಾಪದಗಳ ಅರ್ಥವನ್ನು ಕೊಡುವ ಕೃದಂತಗಳನ್ನುಪಯೋಗಿಸಿ - ರೂಪಾಂತರಗೊಳಿಸಿರಿ. ಧಾತುವನ್ನು ಕಂಸದಲ್ಲಿ ತೋರಿಸಿದೆ :

१. रावणः अनीकं योद्धुं प्रजिघाय (हि) । २. शाङ्खिकाः शङ्खान् समादध्मुः (ध्मा) । ३. भेर्यः कोणैः निजघ्निरे (हन्) । ४. कुशला वादकाः ढक्काः वादयाञ्चक्रिरे (वाद्) । ५. राजा अरण्यं जगाम (गम्) ॥

2. ಈ ವಾಕ್ಯಗಳಲ್ಲಿರುವ ಕ್ರಿಯಾಪದಗಳಿಗೆ ಪರೋಕ್ಷಭೂತರೂಪಗಳನ್ನು ಊಹಿಸಿರಿ ; ವಾಕ್ಯಗಳನ್ನು ಕನ್ನಡಿಸಿ :

१. सिद्धमन्त्रं परित्यज्य भिक्षामटति दुर्मतिः । २. वणिक्पुत्रः सर्वाणि रत्नानि एकस्मिन् करण्डके अरक्षत् । ३. कीटोऽपि कुसुमसङ्गात् सतां शिरः आरोहति । ४. विना कारणं बाहुर्न स्फुरति । ५. पान्थो यक्षमेकम् अपश्यत् ॥

## १३. मित्रभेदः (अनुवृत्तः)

-.३७. अथ दमनके गते भयव्याकुलमनाः पिङ्गलकः चिन्तयामास- 'अहो । न शोभनं कृतं मया यत् तस्य विश्वासं गत्वा आत्माभिप्रायो निवेदितः । कदाचित् दमनकोऽयम् उभयवेतनो भूत्वा ममोपरि दुष्टबुद्धिः स्यात् ; भ्रष्टाधिकारत्वात् । तत् तावत् अस्य चिकीर्षितं वेत्तुम् अन्यत् स्थानान्तरं गत्वा प्रतिपालयामि । कदाचित् दमनकस्तमादाय मां व्यापादयितुमिच्छति ॥'

एवं संप्रधार्य स्थानान्तरं गत्वा दमनकमार्गम् अवलोकयन् एकाकी तस्थौ ॥

ಆಮೇಲೆ ದಮನಕನು ಹೋಗಲಾಗಿ (ಭಯದಿಂದ ತುಂಬಿದ ಮನಸ್ಸುಳ್ಳ =) ಮನಸ್ಸಿನಲ್ಲಿ ಬಹಳ ಅಂಜಿಕೊಂಡು ಪಿಂಗಲಕನು (ಹೀಗೆಂದು) ಯೋಚಿಸಿ ಕೊಂಡಿತು : 'ಎಲಾ, (ಅವನ ವಿಶ್ವಾಸವನ್ನು ಹೊಂದಿ =) ಅವನನ್ನು ನಂಬಿ (ನನ್ನ ಅಭಿಪ್ರಾಯವು ಹೇಳಲ್ಪಟ್ಟಿತಲ್ಲ, ಅದು =) ನನ್ನ ಅಭಿಪ್ರಾಯವನ್ನು ತಿಳಿಸಿದ್ದು (ನನ್ನಿಂದ ಸರಿಯಾಗಿ ಮಾಡಲ್ಪಡಲಿಲ್ಲ =) ಸರಿಯಾಗಲಿಲ್ಲ. ಒಂದು ವೇಳೆ ಈ ದಮನಕನು (ಇಬ್ಬರ ಕೂಲಿಯನ್ನುಳ್ಳವನಾಗಿ =) ನಮ್ಮಿಬ್ಬರಿಂದಲೂ ಲಾಭವನ್ನು ಪಡೆದು ಕೊಂಡು (ನನ್ನ ಮೇಲೆ ಕೆಟ್ಟಬುದ್ಧಿಯುಳ್ಳವನಾಗಬಹುದು =) ನನಗೆ ಕೇಡು ಬಗೆಯಲೂಬಹುದು. (ಕಳೆದುಕೊಂಡ ಅಧಿಕಾರವುಳ್ಳವನಾಗಿರುವದರಿಂದ =)

ಏಕೆಂದರೆ (ಇವನು) ನೌಕರಿಯನ್ನು ಕಳೆದುಕೊಂಡಿರುತ್ತಾನೆ. ಆದ್ದರಿಂದ ಮೊದಲು (ಇವನಿಗೆ ಮಾಡಲಿಷ್ಟವಾದದ್ದನ್ನು =) ಇವನು ಏನು ಮಾಡಬೇಕೆಂದಿರುವನೋ ತಿಳಿದುಕೊಳ್ಳುವದಕ್ಕಾಗಿ ಇನ್ನೊಂದು ಬೇರೆಯ ಸ್ಥಳಕ್ಕೆ ಹೋಗಿ ಕಾಯ್ದುಕೊಂಡಿರುವೆನು. ಒಂದು ವೇಳೆ ದಮನಕನು ಅವನನ್ನು (ತಂದು =) ಕರೆತಂದು ನನ್ನನ್ನು (ಕೊಲ್ಲುವದಕ್ಕೆ ಇಚ್ಛಿಸುತ್ತಾನೆ) ಕೊಲ್ಲಬೇಕೆಂದಿರಬಹುದು.'

ಹೀಗೆಂದು ನಿಶ್ಚಯಿಸಿ ಮತ್ತೊಂದು ಸ್ಥಳಕ್ಕೆ ಹೋಗಿ ದಮನಕನ ಹಾದಿಯನ್ನು ನೋಡುತ್ತಾ ಒಂದೇ ಇದ್ದುಕೊಂಡಿತು.

दमनकोऽपि सञ्जीवकसकाशं गत्वा वृषभोऽयम् इति परिज्ञाय हृष्टमना व्यचिन्तयत् - 'अहो, शोभनमापतितम् । अनेनैतस्य सन्धिविग्रहद्वारेण मम पिङ्गलको वश्यो भविष्यतीति ।' एवं विचिन्तयन् पिङ्गलकाभिमुखः प्रतस्थे । पिङ्गलकोऽपि तमायान्तं प्रेक्ष्य स्वाकारं रक्षन् यथापूर्वम् अवस्थितः । दमंनकोऽपि पिङ्गलकसकाशं गत्वा प्रणम्य उपविष्टः ।

पिङ्गलक आह - किं दृष्टं भवता तत् सत्त्वम् ?

दमनक आह - दृष्टं स्वामिप्रसादात् ।

पिङ्गलक आह - अपि सत्यम् ?

दमनक आह - किं स्वामिपादानामग्रे असत्यं विज्ञाप्यते ?

पिङ्गलक आह - सत्यं दृष्टं भविष्यति भवता । न दीनोपरि महान्तः कुप्यन्तीति न त्वं तेन निपातितः ।

दमनक आह - अस्त्वेवं स महात्मा वयं कृपणाः । तथापि स्वामी यदि कथयति ततो भृत्यत्वे नियोजयामि ।

पिङ्गलक आह सोच्छ्वासम् - किं भवान् शक्नोत्येवं कर्तुम् ?

दमनक आह - किमसाध्यं बुद्धेरस्ति ? उक्तं च -

न तच्छस्त्रैर्न नागेन्द्रैर्न हयैर्न पदातिभिः ।
कार्यं संसिद्धिमभ्येति यथा बुद्ध्या प्रसाधितम् ॥

पिङ्गलक आह - यद्येवं, तर्हि अमात्यपदे अध्यारोपितस्त्वम् । अद्यप्रभृति प्रसादनिग्रहादिकं त्वयैव कार्यमिति निश्चयः ॥

ದಮನಕನೂ ಸಂಜೀವಕನ (ಸಮೀಪವನ್ನು =) ಬಳಿಗೆ ಹೋಗಿ 'ಇದು ಎತ್ತು' ಎಂದು (ಚೆನ್ನಾಗಿ ಅರಿತುಕೊಂಡು =) ಗೊತ್ತುಮಾಡಿಕೊಂಡು (ಹರ್ಷಗೊಂಡ ಮನಸ್ಸುಳ್ಳದ್ದಾಗಿ =) ಮನಸ್ಸಿನಲ್ಲಿ ಹರ್ಷಗೊಂಡು (ಹೀಗೆಂದು) ಯೋಚಿಸಿ ಕೊಂಡಿತು : 'ಆಹಾ ! ಒಳ್ಳೆಯದಾಯಿತು, (ಇದರೊಡನೆ ಇದಕ್ಕೆ =) ಈ (ಎತ್ತಿಗೂ) ಈ (ಸಿಂಹಕ್ಕೂ) (ಸಂಧಿವಿಗ್ರಹಗಳ ಮೂಲಕ =) ಸಂಧಿವಿಗ್ರಹಗಳನ್ನು ಏರ್ಪಡಿಸುವದರ ಮೂಲಕ ನನಗೆ ಪಿಂಗಲಕನು ವಶ್ಯವಾಗುವನು'. ಹೀಗೆಂದು (ಯೋಚಿಸಿಕೊಳ್ಳುತ್ತಾ =) ಯೋಚಿಸಿಕೊಂಡು (ಪಿಂಗಲಕನಿಗೆ ಅಭಿಮುಖನಾಗಿ =) ಪಿಂಗಲಕನ ಕಡೆಗೆ ಹೊರಟಿತು. ಪಿಂಗಲಕನೂ (ಬರುತ್ತಿರುವ ಅದನ್ನು =) ಅದು ಬರುವದನ್ನು ಕಂಡು (ತನ್ನ ಆಕಾರವನ್ನು ಕಾಪಾಡಿಕೊಂಡು =) ತನ್ನ ನಿಜಸ್ಥಿತಿಯನ್ನು ತೋರ್ಪಡಿಸಿಕೊಳ್ಳದೆ ಮೊದಲಿನಂತೆ ಇದ್ದುಕೊಂಡಿತ್ತು. ದಮನಕನೂ ಪಿಂಗಲಕನ ಹತ್ತಿರಕ್ಕೆ ಬಂದು ಅಡ್ಡಬಿದ್ದು ಕುಳಿತುಕೊಂಡಿತು.

ಪಿಂಗಲಕನೆಂದಿತು : - (ಆ ಪ್ರಾಣಿಯು ನಿನ್ನಿಂದ ನೋಡಲ್ಪಟ್ಟಿತೇನು =) ಆ ಪ್ರಾಣಿಯನ್ನು ಕಂಡೆಯ ?

ದಮನಕನೆಂದಿತು : - (ನೋಡಲ್ಪಟ್ಟಿತು, ಸ್ವಾಮಿಯವರ ಪ್ರಸಾದದಿಂದ =) ಕಂಡೆ, ಬುದ್ಧಿಯವರ ಅನುಗ್ರಹದಿಂದ.

ಪಿಂಗಲಕನೆಂದಿತು : - ನಿಜವೆ ?

ದಮನಕನೆಂದಿತು : - ಸ್ವಾಮಿಯವರ ಮುಂದೆ (ಅಸತ್ಯವು ಹೇಳಲ್ಪಡುವ ದೇನು =) ಸುಳ್ಳನ್ನು ಹೇಳಿಯೇನೆ ?

ಪಿಂಗಲಕನೆಂದಿತು : - ನಿಜವಾಗಿಯೂ (ನಿನ್ನಿಂದ ನೋಡಲ್ಪಟ್ಟಿರ ಬಹುದು =) ನೀನು ನೋಡಿರಬೇಕು. ಬಡವರ ಮೇಲೆ ದೊಡ್ಡವರು ಕೋಪಮಾಡು ವದಿಲ್ಲವಾದ್ದರಿಂದ, (ನೀನು ಅದರಿಂದ ಕೆಡಹಲ್ಪಡಲಿಲ್ಲ =) ನಿನ್ನನ್ನು ಅದು ಕೊಲ್ಲಲಿಲ್ಲ.

ದಮನಕನೆಂದಿತು :- ಅವನು ಮಹಾತ್ಮನು, ನಾವು ಅಲ್ಪರು (ಎಂದಿಂತು ಆಗಲಿ =) ಎಂದೇ ಆಗಲಿ. ಆದರೂ (ಸ್ವಾಮಿಯು ಹೇಳುವದಾದರೆ ಆಗ =) ತಾವು ಹೇಳಿದರೆ (ಆಳುತನದಲ್ಲಿ ಗೊತ್ತುಮಾಡುವೆನು =) ತಮ್ಮ ಆಳಾಗಿ ಮಾಡುವೆನು.

ಪಿಂಗಲಕನು ಉಸಿರನ್ನು ಎಳೆದುಕೊಳ್ಳುತ್ತಾ ಹೀಗೆಂದಿತು :- ನೀನು ಹೀಗೆ (ಮಾಡಲು ಶಕ್ತನಾಗುತ್ತೀಯೇನು =) ಮಾಡಲಾಪೆಯ ?

ದಮನಕನೆಂದಿತು :- ಬುದ್ಧಿಗೆ ಅಸಾಧ್ಯವಾದದ್ದು ಏನಿದೆ ? (ಹೇಳಲ್ಪಟ್ಟೂ ಇದೆ =) ಬಲ್ಲವರೂ ಹೀಗೆಂದಿದಾರೆ :

**ಬುದ್ಧಿಯಿಂದ ಸಾಧಿಸಿದರೆ ಹೇಗೆ (ನೆರವೇರುವದೋ ಹಾಗೆ) ಆ (ಕಾರ್ಯವು) ಶಸ್ತ್ರಗಳಿಂದ (ಸಂಸಿದ್ಧಿಯನ್ನು ಹೊಂದುವದಿಲ್ಲ =) ಸಾಧ್ಯವಾಗಲಾರದು, ಆನೆಗಳಿಂದ ಆಗಲಾರದು, ಕುದುರೆಗಳಿಂದ ಆಗಲಾರದು, ಕಾಲಾಳುಗಳಿಂದಲೂ ಆಗಲಾರದು.**

ಪಿಂಗಲಕನೆಂದಿತು :- (ಹೀಗಾದರೆ ಆಗ =) ಹೀಗೆ ಮಾಡಿದರೆ (ಅಮಾತ್ಯ ಪದವಿಯಲ್ಲಿ ನೀನು ಏರಿಸಲ್ಪಟ್ಟೆ)ನಿನ್ನನ್ನು ಅಮಾತ್ಯಪದವಿಯಲ್ಲಿಟ್ಟಂತೆಯೇ (ಎಂದು ತಿಳಿದುಕೊ). ಇಂದಿನಿಂದ ಪ್ರಸಾದ, ನಿಗ್ರಹ - ಮುಂತಾದದ್ದು (ನಿನ್ನಿಂದಲೇ ಮಾಡಲ್ಪಡಬೇಕೆಂದು ನಿಶ್ಚಯು =) ನಿನ್ನ ಮೂಲಕವೇ ಆಗಬೇಕಾಗುವ ದೆಂಬುದು ನಿಶ್ಚಯ.

## ಚಿಂತನ

೧. **'ಶೋಭನಂ ಕೃತಂ ಯತ್'** । ಹೀಗೆ ಮಾಡಿದ್ದು ಸರಿಯಾಯಿತು, ಒಳ್ಳೆಯ ಕೆಲಸ ಮಾಡಿದೆ - ಎಂದರ್ಥ. 'ಎಂಥ ಒಳ್ಳೇ ಕೆಲಸವನ್ನು ಮಾಡಿದೆ !' - ಎಂದು ಕನ್ನಡಿಸಬಹುದು ; ಹೀಗೆಯೇ 'ನ ಶೋಭನಂ ಕೃತಂ ಯತ್' ಎಂಥ ಕೆಟ್ಟ ಕೆಲಸ ಮಾಡಿದೆ ?

೨. **ಅನ್ಯತ್ ಸ್ಥಾನಾನ್ತರಮ್** । ಅನ್ಯತ್ ಸ್ಥಾನಂ - ಸ್ಥಾನಾನ್ತರಮ್ ಎಂದು ವಿಗ್ರಹ, ನಿತ್ಯಸಮಾಸ. 'ಅನ್ಯತ್' ಎಂಬ ಶಬ್ದದ ಅರ್ಥವು ಸ್ಥಾನಾನ್ತರವೆಂಬುದರಲ್ಲಿಯೇ ಸೇರಿದೆಯಾದ್ದರಿಂದ ಇದು ಪುನರುಕ್ತಿಯಾದರೂ ಶಾಂಕರಭಾಷ್ಯದಂಥ ಉತ್ತಮಗ್ರಂಥಗಳಲ್ಲಿ ಕೂಡ 'ಅನ್ಯತ್ ವಸ್ತ್ವನ್ತರಮ್' ಮುಂತಾದ ಪ್ರಯೋಗಗಳು ಕಂಡುಬರುತ್ತವೆ. ಸಿಂಹವು ತನ್ನ ಸ್ಥಾನದಿಂದ ಬೇರೆ ಸ್ಥಳಕ್ಕೆ ಆಗಲೆ ಬಂದಿತ್ತಾದ್ದರಿಂದ 'ಮತ್ತೊಂದು ಸ್ಥಾನಾಂತರ'ಕ್ಕೆ ಹೋಯಿತು ಎಂದೂ ಕೆಲವರು ಇದಕ್ಕೆ ಅರ್ಥ ಮಾಡಿರುತ್ತಾರೆ ; ಮುಂದೆ 'ಸ್ಥಾನಾನ್ತರಮ್' ಎಂದಿಷ್ಟೇ ಪ್ರಯೋಗಿಸಿದೆ.

೩. **ಕದಾಚಿತ್** । ಇದಕ್ಕೆ 'ಒಮ್ಮೆ' ಎಂಬರ್ಥವು ಸಾಮಾನ್ಯವಾಗಿದೆ. ಇಲ್ಲಿ 'ಒಂದು ವೇಳೆ (Perhaps) ಹೀಗಿರಬಹುದು' ಎಂದು ಶಂಕೆಯನ್ನು ತಿಳಿಸುವ ಸಂಭಾವನಾರ್ಥದ ಅವ್ಯಯವಿದು. ಆದ್ದರಿಂದಲೇ ಇಲ್ಲಿ 'ಸ್ಯಾತ್' ಆಗಬಹುದು ಎಂಬ ಶಬ್ದವನ್ನು ಪ್ರಯೋಗಿಸಿದೆ. 'ಭ್ರಷ್ಟಾಧಿಕಾರತ್ವಾತ್' ಎಂಬುದು ಶಂಕೆಗೆ ಹೇತು.

೪. **'ಮಮೋಪರಿ ದುಷ್ಟಬುದ್ಧಿಃ'** । 'ಮಯಿ ದುಷ್ಟಬುದ್ಧಿಃ' ಎಂದೂ ಹೇಳ ಬಹುದಿತ್ತು. **ಚಿಕೀರ್ಷಿತಮ್** । 'ಕರ್ತುಮಿಷ್ಟಮ್' ಎಂಬರ್ಥದ ಕೃದಂತ.

೫. ಉಭಯವೇತನಃ । ಉಭಯಂ ವೇತನಂ ಯಸ್ಯ ಸಃ (ಎರಡೂ ಕಡೆಯ ಸಂಬಳವುಳ್ಳವ) ಎಂದಾಗಲಿ, ಉಭಯೇಷಾಂ ವೇತನಂ ಯಸ್ಯ ಸಃ (ಎರಡೂ ಕಡೆಯವರ, ನಮ್ಮ ಮತ್ತು ಶತ್ರುಪಕ್ಷ - ಇಬ್ಬರ ಸಂಬಳವನ್ನೂ ತೆಗೆದುಕೊಳ್ಳುವವ) ಎಂದಾಗಲಿ ವಿಗ್ರಹ. ಇಬ್ಬರಿಂದಲೂ ದಲ್ಲಾಲಿಯನ್ನು ತೆಗೆದುಕೊಂಡವನು ಎಂದರ್ಥ. (ಉಭಯಶಬ್ದಕ್ಕೆ ದ್ವಿವಚನವಿಲ್ಲ. ಇದಕ್ಕೆ 'ಉಭಯಃ' 'ಉಭಯೇ' - ಎಂದು ಮುಂತಾಗಿ ರೂಪಗಳು.)

೬. 'ವ್ಯಾಪಾದಯಿತುಮಿಚ್ಛತಿ' । 'ವ್ಯಾಪಿಪಾದಯಿಷತಿ' ಎಂದು ಕೂಡಿಸಿ ಹೇಳಬಹುದು. ಪದ್ ಧಾತುವಿಗೆ 'ಆ' ಎಂಬ ಉಪಸರ್ಗವು ಸೇರಿದರೆ ಆಪದ್ಯತೇ (ಎಂದಾಗುತ್ತದೆ), ಆಪಾದಯತಿ (ಉಂಟುಮಾಡುತ್ತದೆ) - ಎಂಬ ರೂಪಗಳು ; ವಿ, ಆ - ಎರಡೂ ಸೇರಿದರೆ 'ವ್ಯಾಪದ್ಯತೇ' (ಸಾಯುತ್ತಾನೆ), 'ವ್ಯಾಪಾದಯತಿ' (ಕೊಲ್ಲುತ್ತಾನೆ) ಎಂಬ ರೂಪಾಂತರಗಳಾಗುವವು.

೭. ದಮನಕಮಾರ್ಗಮವಲೋಕಯನ್ । ದಮನಕನ ಮಾರ್ಗವನ್ನು ನೋಡುತ್ತಾ, ದಮನಕನು ಬರುವದನ್ನೇ ನಿರೀಕ್ಷಿಸಿಕೊಂಡು - ಎಂದರ್ಥ.

೮. ಸಂಧಿವಿಗ್ರಹದ್ವಾರೇಣ । ಮೊದಲು ಇಬ್ಬರಿಗೂ ಕೌಲು ಮಾಡಿಸಿ ಕೂಡಿಸುವದು, ಬಳಿಕ ಅವಶ್ಯವಾದಾಗ ಇಬ್ಬರಿಗೂ ಜಗಳವನ್ನು ತಂದುಹಾಕುವದು - ಇವುಗಳ ಮೂಲಕ.

೯. 'ಸ್ವಾಕಾರಂ ರಕ್ಷಯನ್' । ಹಿಂದೆ [೫೦. ೩೦] 'ಆಕಾರಂ ಪ್ರಚ್ಛಾದ್ಯ' ಎಂದು ಪ್ರಯೋಗಿಸಿರುವದನ್ನು ನೋಡಿ. 'ಸ್ವಾಕಾರಂ ಗೂಹಮಾನಃ' ಎಂದೂ ಪಾಠಾಂತರವಿದೆ. ಇವೆಲ್ಲಕ್ಕೂ ಒಂದೇ ಅರ್ಥ.

೧೦. ದೃಷ್ಟಂ ಭವಿಷ್ಯತಿ । 'ನೋಡಿರಬಹುದು' ಎಂಬರ್ಥದಲ್ಲಿ ಪ್ರಯೋಗಿಸಿದ ವಾಕ್ಯವಿದು.

೧೧. ದೀನೋಪರಿ ನ ಕುಪ್ಯನ್ತಿ । ದೀನೇಭ್ಯೋ ನ ಕುಪ್ಯನ್ತಿ - ಎಂದು ಚತುರ್ಥಿ ಯನ್ನೂ ಉಪಯೋಗಿಸಬಹುದು.

೧೨. ಅಸ್ತ್ಯೇವಂ ಸ ಮಹಾತ್ಮಾ । ಅವನು ಮಹಾತ್ಮನೆಂದೇ ಆಗಲಿ - ಎಂದು ಅಸಮ್ಮತಿಯನ್ನು ಸೂಚಿಸುವದಕ್ಕೆ ಹೇಳಿದ ವಾಕ್ಯವಿದು. 'ಅಸ್ತ್ಯೇವಮ್' ಎಂಬುದು 'ಯದ್ಯಪಿ' ಎಂಬುದರ ಅರ್ಥದಲ್ಲಿ ಬಂದಿದೆ. ಆದ್ದರಿಂದಲೇ ಮುಂದೆ 'ತಥಾಪಿ' ಎಂದು ಪ್ರಯೋಗಿಸಿದೆ.

೧೩. ಯದ್ಯೇವಂ - ಯದಿ ಭವಾನ್ ಶಕ್ನೋತಿ ತಂ ಭೃತ್ಯತ್ವೇ ನಿಯೋಜಯಿತುಮ್ ತರ್ಹಿ ತಸ್ಮಿನ್ ಪಕ್ಷೇ ; 'ಯದಾ ಅಸೌ ಭೃತ್ಯತ್ವೇ ನಿಯುಜ್ಯತೇ ತದಾ' ।।

೧೪. ಅಮಾತ್ಯಪದೇ ನಿಯೋಜಿತಸ್ತ್ವಮ್ ಅಧ್ಯಾರೋಪಿತ ಏವೇತಿ ವಿದ್ಧಿ (ಅಮಾತ್ಯಪದವಿಗೆ ಏರಿಸಿದೆನೆಂದೇ ತಿಳಿದುಕೊ ಎಂದು ಅಭಿಪ್ರಾಯ.)

೧೫. ಅದ್ಯಪ್ರಭೃತಿ - ಅದ್ಯಾರಭ್ಯ (ಇಂದಿನಿಂದ) ಎಂದರ್ಥ. ಇದು ಅವ್ಯಯ ; 'ಅದ್ಯ ಯಾವತ್' ಎಂದರೆ ಇಂದಿನವರೆಗೆ.

೧೬. ಇತಿ ನಿಶ್ಚಯಃ - ಇತಿ ನಿಶ್ಚಯಃ ಕರ್ತವ್ಯಃ, ನಾತ್ರ ಸಂಶಯಃ ಕರ್ತವ್ಯಃ - ಹೀಗೆಂದು ನಿಶ್ಚಯವಾಗಿ ತಿಳಿ (You are sure to be .... ; rest assured that.)

## ಅಭ್ಯಾಸ ೨೩

1. ಈ ಸಮಸ್ತಪದಗಳಿಗೆ ವಿಗ್ರಹವಾಕ್ಯಗಳನ್ನು ಬರೆಯಿರಿ :

भयव्याकुलमनाः, आत्माभिप्रायः, भ्रष्टाधिकारत्वात्, हृष्टमनाः, सन्धिविग्रहद्वारेण, यथापूर्वम्, स्वामिप्रसादात्, प्रसादनिग्रहादिकम् ।।

2. ಈ ವಾಕ್ಯವನ್ನು ಕರ್ತರಿಪ್ರಯೋಗದ ಕೃದಂತಗಳನ್ನಾಗಲಿ ಕ್ರಿಯಾಪದ ಗಳನ್ನಾಗಲಿ ಪ್ರಯೋಗಿಸಿ ರೂಪಾಂತರದಲ್ಲಿ ಬರೆಯಿರಿ :

न शोभनं कृतं मया यत्तस्य विश्वासं गत्वा आत्माभिप्रायो निवेदितः ।।

3. ಈ ವಾಕ್ಯಗಳನ್ನು ಕನ್ನಡಿಸಿರಿ :

१. कदाचित् दमनकोऽयं मां व्यापादयेत् । २. सत्यमनेन मोदकानि भक्षितानि भविष्यन्ति ; यतोऽयं प्रसन्नमुखो दृश्यते । ३. अपि सत्यमेतत् यन्मम शत्रवः सर्वे प्रधाविताः ? ४. स्वामिपादैः ममोपरि कोपो न कार्यः । ५. अस्त्वेवं भवानेव सत्यवादी, अनृतवादिनो वयमिति ।।

4. ಇಲ್ಲಿರುವ ಹೇತುಪಂಚಮೀವಿಭಕ್ತಿಗಳ ಪದಗಳನ್ನು ವಾಕ್ಯಗಳಾಗಿ ಪರಿವರ್ತಿ ಸಿರಿ. ಈ ವಾಕ್ಯಗಳನ್ನು ಕನ್ನಡಿಸಿರಿ :

१. कदाचिदयं दृष्टबुद्धिः स्यात् ; भ्रष्टाधिकारत्वात् । २. न राज्ञामग्रे असत्यं वदेत् ; तेषां सर्वदेवमयत्वात् ।।

5. ಈ ಪ್ರಶ್ನೆಗಳಿಗೆ ಸಂಸ್ಕೃತದಲ್ಲಿ ಉತ್ತರವನ್ನು ಬರೆಯಿರಿ. ಪ್ರಶ್ನೆಗಳನ್ನು ಕನ್ನಡಿಸಿರಿ :

१. पिङ्गलकः किं कारणं धैर्यावष्टम्भं न करोति ? २. शब्दमात्रान्न भेतव्यमिति दमनकः कथं प्राह ? ३. पिङ्गलकपरिग्रहः सर्वोऽपि किमिति भयव्याकुलः पलायितुम् इच्छति स्म ? ४. अमात्यपदाद् भ्रष्टं दमनकं पुनरपि तत्र अध्यारोपयितुं कथं पिङ्गलको निश्चयम् अकरोत् ?

# ೧೪. ಕೆಲವು ಪರೋಕ್ಷಭೂತಕ್ರಿಯಾಪದಗಳು*

೩೮. ಹಿಂದೆ [೩೦. ೩೫ರಲ್ಲಿ] ಹೇಳಿರುವ ಪರೋಕ್ಷಭೂತನಿಮಿತ್ತದಿಂದ ರೂಪಾಂತವನ್ನುಂಟುಮಾಡುವ ಆದೇಶವೇ ಮುಂತಾದವುಗಳಿಲ್ಲದ ಧಾತುವಿಗೆ ದುರ್ಬಲಪ್ರತ್ಯಯಗಳು ಪರವಾದಾಗ ಅಸಂಯುಕ್ತವ್ಯಂಜನದ ನಡುವೆ ಇರುವ ಅಕಾರಕ್ಕೆ ಏಕಾರವು ಬರುತ್ತದೆ ; ಅಭ್ಯಾಸಕ್ಕೆ ಲೋಪವೂ ಆಗುತ್ತದೆ. ಮಧ್ಯಮೈಕವಚನಪ್ರತ್ಯಯವು ಪರವಾದಾಗ ಇಕಾರಾಗಮವು ಬಂದಾಗ ಮಾತ್ರ ಈ ಏಕಾರವು ಬರುತ್ತದೆ.

### ಅಸಂಯುಕ್ತವ್ಯಂಜನಗಳ ನಡುವಿನ ಅಕಾರಕ್ಕೆ ಏಕಾರಾದೇಶ

| ಪಠ್ - ಓದು, ಹೇಳು | | | ಮನ್ - ಯೋಚಿಸು, ಅಭಿಪ್ರಾಯಪಡು | | |
|---|---|---|---|---|---|
| पपाठ | पेठतुः | पेठुः | मेने | मेनाते | मेनिरे |
| पेठिथ | पेठथुः | पेठ | मेनिषे | मेनाथे | मेनिध्वे |
| पपाठ-पपठ | पेठिव | पेठिम | मेने | मेनिवहे | मेनिमहे |

[ಇಲ್ಲಿ ಪಠ್ ಧಾತುವಿಗೆ ಥ ಪ್ರತ್ಯಯದ ಹಿಂದೆ ಇಕಾರಾಗಮವಿರುವದರಿಂದ 'ಪೇಠಿಥ' ಎಂದಾಗಿದೆ. ಆತ್ಮನೇಪದಪ್ರತ್ಯಯಗಳೆಲ್ಲ ದುರ್ಬಲವಾದ್ದರಿಂದ ಮನ್ ಧಾತುವಿನ ಅಕಾರಕ್ಕೆ ಎಲ್ಲಾ ವಚನಗಳಲ್ಲಿಯೂ ಏತ್ವವು ಬಂದಿದೆ.]

## ಪ್ರತ್ಯುದಾಹರಣೆಗಳು

೧. 'ಜಗಾದ, ಜಗದತುಃ, ಜಗದುಃ ।' - ಇಲ್ಲಿ ಗಕಾರಕ್ಕೆ ಜಕಾರಾದೇಶವು ಬಂದಿರುವದರಿಂದ ಏತ್ವವಾಗಲಿ ಅಭ್ಯಾಸಲೋಪವಾಗಲಿ ಇಲ್ಲ.

೨. 'ಮಮನ್ಥ, ಮಮನ್ಥತುಃ, ಮಮನ್ಥುಃ ।' ಇಲ್ಲಿ ಸಂಯುಕ್ತವ್ಯಂಜನ ವಿರುವದರಿಂದ ಏತ್ವಾದಿಗಳಿಲ್ಲ.

೩. 'ಜಹಾಸ, ಜಹಸತುಃ, ಜಹಸುಃ ।' ಇಲ್ಲಿಯೂ ಹಕಾರಕ್ಕೆ ಜಕಾರಾದೇಶ ವಿರುವದರಿಂದ ಏತ್ವಾದಿಗಳಿಲ್ಲ.

* ಈ ಪಾಠವು ಕಷ್ಟವಾಗಿ ಕಂಡರೆ ಇದನ್ನು ಮೊದಲನೆಯ ಸಲಕ್ಕೆ ಸುಮ್ಮನೆ ಒಂದು ಸಲ ಓದಿ ಬಿಟ್ಟುಬಿಡಬಹುದು.

### शप् - ಆಣೆಮಾಡು, ಶಪಿಸು

| ಪರಸ್ಮೈಪದ | | | ಆತ್ಮನೇಪದ | | |
|---|---|---|---|---|---|
| शशाप | शेपतुः | शेपुः | शेपे | शेपाते | शेपिरे |
| शेपिथ-शशप्थ | शेपथुः | शेप | शेपिषे | शेपाथे | शेपिध्वे |
| शशाप-शशप | शेपिव | शेपिम | शेपे | शेपिवहे | शेपिमहे |

[ಇದು ಅನಿಟ್ ; ಆದ್ದರಿಂದ ಥ ಪ್ರತ್ಯಯವು ಸೇರುವಾಗ ಇದು ವೇಟ್ ; (೩೬ನೆಯ ಖಂಡದಲ್ಲಿರುವ ಶ್ಲೋಕವನ್ನು ನೋಡಿ. 'ಶೇಪಿಥ' - ಇಲ್ಲಿ ಇಕಾರಾಗಮವಿರುವದರಿಂದ ಏತ್ವ ; 'ಶಶಪ್ಥ' ಇಲ್ಲಿ ಇಕಾಗಮವಿಲ್ಲದ್ದರಿಂದ ಏತ್ವವೂ ಇಲ್ಲ, ಅಭ್ಯಾಸಲೋಪವೂ ಇಲ್ಲ.]

ವಿಶೇಷ : ಜೃ (ಮುಪ್ಪಾಗು), ಭ್ರಮ್ (ಭ್ರಾಂತನಾಗು), ತ್ರಸ್ (ಹೆದರು), ಫಣ್ (ಹೋಗು) ; ರಾಜ್, ಭ್ರಾಜ್, ಭ್ರಾಶ್, ಭ್ಲಾಶ್ (ಹೊಳೆ), ಸ್ಯಮ್ (ಕೂಗು), ಸ್ವನ್ (ಶಬ್ದಮಾಡು) - ಈ ಧಾತುಗಳಿಗೆ ಏತ್ವವು ವಿಕಲ್ಪದಿಂದ ಬರುತ್ತದೆ. ಆದ್ದರಿಂದ 'ಜಜರತುಃ - ಜೇರತುಃ ಜಜರುಃ - ಜೇರುಃ, ಜಜರಿಥ - ಜೇರಥ' - ಎಂದು ಮುಂತಾಗಿ ಅವಕ್ಕೆ ಎರಡೆರಡು ರೂಪ. ಹಿಂದೆ ೩೪ನೆಯ ಖಂಡದಲ್ಲಿ ಕೊಟ್ಟಿರುವ ಸ್ವನ್ ಧಾತುವಿಗೆ ಪೂರ್ಣವಾಗಿ ಪರೋಕ್ಷಭೂತಗಳು ಹೀಗೆ :

| | | |
|---|---|---|
| सस्वान | सस्वनतुः-स्वेनतुः | सस्वनुः-स्वेनुः |
| सस्वनिथ-स्वेनिथ | सस्वनथुः-स्वेनथुः | सस्वन-स्वेन |
| सस्वान-सस्वन | सस्वनिव-स्वेनिव | सस्वनिम-स्वेनिम |

೩೬. ಕ್ರಿಯಾಪದಗಳಿಗೆ ಲಟ್ (ವರ್ತಮಾನ), ಲಿಟ್ (ಪರೋಕ್ಷಭೂತ), ಲುಟ್ (ಪ್ರಥಮಭವಿಷ್ಯತ್ಕಾಲ), ಲೃಟ್ (ಎರಡನೆಯ ಭವಿಷ್ಯತ್ಕಾಲ), ಲೋಟ್ (ಆಜ್ಞಾರ್ಥ), ಲಙ್ (ಅನದ್ಯತನಭೂತ), ವಿಧಿಲಿಙ್ (ವಿಧ್ಯಾದ್ಯರ್ಥ), ಆಶೀರ್ಲಿಙ್ (ಆಶೀರರ್ಥ), ಲುಙ್ (ಭೂತಸಾಮಾನ್ಯ), ಲೃಙ್ (ಸಂಕೇತಾರ್ಥ) - ಎಂದು ಒಂಬತ್ತು ರೂಪಗಳಿವೆ. ವೇದದಲ್ಲಿ ಮಾತ್ರ ಪ್ರಯೋಗವಾಗುವ ಲೇಟ್ ಎಂಬುದನ್ನು ಸೇರಿಸಿಕೊಂಡು ಪಾಣಿನಿಯ ವ್ಯಾಕರಣದಲ್ಲಿ ಧಾತುರೂಪಗಳನ್ನು ಹತ್ತು ಲಕಾರಗಳಾಗಿ ವಿಂಗಡಿಸಿದೆ. ಲಟ್ (ವರ್ತಮಾನ), ಲಙ್ (ಅನದ್ಯತನಭೂತ), ಲೋಟ್ (ಆಜ್ಞಾರ್ಥ), ವಿಧಿಲಿಙ್ (ವಿಧ್ಯಾದ್ಯರ್ಥ) - ಈ ನಾಲ್ಕು ಲಕಾರಗಳನ್ನು ಮಾತ್ರ ಸಾರ್ವಧಾತುಕ ವೆಂದು ಕರೆಯುವರು. ಮಿಕ್ಕವುಗಳು **ಆರ್ಧಧಾತುಕ**

ವೆನಿಸುವವು. ಆರ್ಧಧಾತುಕಗಳಿಗೆ ಯಕಾರ ಹೊರತು ಮಿಕ್ಕ ವ್ಯಂಜನಗಳು ಆದಿಯಲ್ಲಿರುವ ಪ್ರತ್ಯಯಗಳು ಸೇರುವಾಗ ಇಕಾರಾಗಮವು ಬರುತ್ತದೆ. ಆದ್ದರಿಂದ ಪರೋಕ್ಷಭೂತದಲ್ಲಿ ವ, ಮ, ಥ ; ವಹೇ, ಮಹೇ, ಸೇ, ಧ್ವೇ - ಇಷ್ಟು ಪ್ರತ್ಯಯಗಳಿಗೆ ಇಕಾರಾಗಮವು ಬರಬಹುದಾಗಿರುತ್ತದೆ. ಉದಾಹರಣೆ [೩೬ನೆಯ ಖಂ.] **बभूविव, बभूविम, बभूविथ, बभूविवहे, बभूविमहे, बभूविषे, बभूविध्वे ।** ಇದರಂತೆ ಆ ಖಂಡದಲ್ಲಿ ಕೊಟ್ಟಿರುವ ಬುಧ್, ವೃಷ್, ಖಾದ್ - ಮುಂತಾದ ಧಾತುಗಳ ರೂಪಗಳನ್ನೂ ತಿಳಿಯಬೇಕು.

ಇಕಾರಾಗಮವನ್ನು ತೆಗೆದುಕೊಂಡೇ ತೀರುವ ಧಾತುಗಳಿಗೆ **ಸೇಟ್** ಎಂದೂ, ವಿಕಲ್ಪದಿಂದ ತೆಗೆದುಕೊಳ್ಳುವ ಧಾತುಗಳಿಗೆ **ವೇಟ್** ಎಂದೂ, ಇಕಾರಾಗಮವನ್ನು ತೆಗೆದುಕೊಳ್ಳದ ಧಾತುಗಳಿಗೆ **ಅನಿಟ್** ಎಂದೂ ಸಂಜ್ಞೆ. ಸೇಟ್, ವೇಟ್ - ಧಾತುಗಳನ್ನು ಈ ಪುಸ್ತಕದ ಪರಿಶಿಷ್ಟದಲ್ಲಿ ಶ್ಲೋಕಗಳಾಗಿ ಕೊಟ್ಟು ಕ್ರಿಯಾರೂಪಗಳನ್ನು ಉದಾಹರಿಸಿರುತ್ತದೆ.

## ಪರೋಕ್ಷಭೂತಕ್ಕೆ ಇಕಾರಾಗಮವಿಷಯದಲ್ಲಿ ವಿಶೇಷನಿಯಮಗಳು*

ಸೇಟ್ ಧಾತುಗಳಿಗಾಗಲಿ, ಅನಿಟ್ ಧಾತುಗಳಿಗಾಗಲಿ - ಪರೋಕ್ಷಭೂತದಲ್ಲಿ ಇಕಾರಾಗಮವುಂಟು ; ಆದರೆ ಕೃ, ಸೃ, ಭೃ, ವೃ, ಸ್ತು, ದ್ರು, ಸ್ರು, ಶ್ರು - ಈ ಅನಿಟ್ ಧಾತುಗಳಿಗೆ ಇಕಾರಾಗಮವಿಲ್ಲ.

| कृ - ಮಾಡು | | | वृ - ಆರಿಸಿಕೊ | | |
|---|---|---|---|---|---|
| चकार | चक्रतुः | चक्रुः | ववार | वव्रतुः | वव्रुः |
| चकर्थ | चक्रथुः | चक्र | ववरिथ | वव्रथुः | वव्र |
| चकार-चकर | चकृव | चकृम | ववार-ववर | ववृव | ववृम |

ವಿಶೇಷ : ಸಮ್ ಎಂಬ ಉಪಸರ್ಗವಿರುವ ಕೃ ಧಾತುವಿಗೆ ಇಡಾಗಮವುಂದು. ಉದಾ : ಸಞ್ಚಸ್ಕರಿಥ । ವೃ ಧಾತುವಿಗೆ ಥ ಪ್ರತ್ಯಯದ ಹಿಂದೆ ಇಕಾರಾಗಮವು ಬರುತ್ತದೆ. ಉದಾ : ವವರಿಥ. (ಇದಕ್ಕೆ 'ವವರ್ಥ' ಎಂಬ ರೂಪವು ವೇದದಲ್ಲಿರುವದು.)

---

*ಈ ನಿಯಮಗಳನ್ನು ಗಟ್ಟಿಮಾಡಿಕೊಳ್ಳಲೇಬೇಕೆಂಬ ನಿರ್ಬಂಧವಿಲ್ಲ ; ಮುಂದೆ ಉದಾಹರಣೆಗಳು ಬಂದಾಗ ಆಗಾಗ್ಗೆ ಇವನ್ನು ಪರಾಮರ್ಶಿಸುತ್ತಿರುವೆವು.

स्तु - ಹೊಗಳು

| | | | | | |
|---|---|---|---|---|---|
| तुष्टाव | तुष्टुवतुः | तुष्टुवुः | तुष्टुवे | तुष्टुवाते | तुष्टुविरे |
| तुष्टोथ | तुष्टुवथुः | तुष्टुव | तुष्टुषे | तुष्टुवाथे | तुष्टुढ्वे |
| तुष्टाव-तुष्टव | तुष्टुव | तुष्टुम | तुष्टुवे | तुष्टुवहे | तुष्टुमहे |

[ವಿಶೇಷ : ಅಂತ್ಯಸ್ವರಕ್ಕೆ ಪ್ರಥಮಪುರುಷೈಕವಚನದಲ್ಲಿ ವೃದ್ಧಿ ; ಉತ್ತಮಪುರುಷದಲ್ಲಿ ವಿಕಲ್ಪದಿಂದ ವೃದ್ಧಿ, ಮಧ್ಯಮಪುರುಷೈಕವಚನದಲ್ಲಿ ಗುಣ.]

ಇದರಂತೆ ದ್ರು - ದುದ್ರಾವ, ಸ್ರು - ಸುಸ್ರಾವ, ಶ್ರು - ಶುಶ್ರಾವ ।।

अजन्तोऽकारवान्वा यस्तास्यनिट् थलि वेडयम् ।

ॠदन्त ईदृङ् नित्यानिट् ऋद्यन्यो लिटि सेड् भवेत् ।।

(a) ಎಂದರೆ ಅಜನ್ತ (ಸ್ವರಾನ್ತ) ಧಾತುಗಳೂ, ಅಕಾರವುಳ್ಳ ಧಾತುಗಳೂ - ಈ ಅನಿಟ್‌ಧಾತುಗಳಿಗೆ ಲಿಟ್ (ಪರೋಕ್ಷಭೂತದ) ಥ ಪ್ರತ್ಯಯವು ಸೇರುವಾಗ ವಿಕಲ್ಪದಿಂದ ಇಕಾರಾಗಮವನ್ನು ಪಡೆಯುವವು. (ಪ್ರಥಮಭವಿಷ್ಯತ್ತಿನಲ್ಲಿ ಈ ಆಗಮವಿಲ್ಲ.) ಉದಾಹರಣೆ ಅಜನ್ತಧಾತುಗಳಿಗೆ : ददाथ-ददिथ (ಕೊಟ್ಟಿರಿ), निनयिथ-निनेथ (ಒಯ್ದಿರಿ). ಅಕಾರವುಳ್ಳ ಧಾತುಗಳಿಗೆ : शेकिथ-शशक्थ (ಶಕ್ತರಾದಿರಿ) ; पेचिथ-पपक्थ (ಬೇಯಿಸಿದಿರಿ). ददिव ददिम ; निन्यिव निन्यिम ಇವುಗಳಲ್ಲಿ ವಿಕಲ್ಪವಿಲ್ಲ.

[ವಿಶೇಷ : ಇಕಾರಾಗಮವು ಬಂದಾಗ ಏತ್ವ ಬಂದಿದೆ ; ಇಲ್ಲದಾಗ ಧಾತುವಿಗೆ ಅಭ್ಯಾಸವು ಮಾತ್ರ ಬಂದಿದೆ. ಕೆಲನೆಯ ಖಂಡವನ್ನು ನೋಡಿರಿ.]

(b) सृ - ಸರಿ (ಅನಿಟ್ ೧ ಪರ)

| | | |
|---|---|---|
| ससार | सस्रतुः | सस्रुः |
| ससर्थ | सस्रथुः | सस्र |
| ससार-ससर | ससृव | ससृम |

भृ - (ಅನಿಟ್ ೧ ಉಭಯ)

| ಪರಸ್ಮೈಪದ | | | ಆತ್ಮನೇಪದ | | |
|---|---|---|---|---|---|
| बभार | बभ्रतुः | बभ्रुः | बभ्रे | बभ्राते | बभ्रिरे |
| बभर्थ | बभ्रथुः | बभ्र | बभृषे | बभ्राथे | बभृद्वे |
| बभार | बभृव | बभृम | बभ्रे | बभृवहे | बभृमहे |

ವಿಶೇಷ : ಭೃಞ್ - ಭರಣೇ ಎಂಬ ೧ನೆಯ ಗಣದ ರೂಪಗಳನ್ನು ಇಲ್ಲಿ ಕೊಟ್ಟಿದೆ. ೩ನೆಯ ಗಣದ ಧಾತುವಿಗೆ ಬೇರೆಯ ರೂಪಗಳೂ ಉಂಟು. ಇವನ್ನು ಮುಂದೆ ೧೬ನೆಯ ಪಾಠದಲ್ಲಿ ತಿಳಿಸಲಾಗುವದು.

೪೦. ಆಕಾರಾಂತಧಾತುಗಳಿಗೆ ಪ್ರಥಮ ಮತ್ತು ಉತ್ತಮ - ಪುರುಷಗಳ ಏಕವಚನದಲ್ಲಿ ಅ - ಪ್ರತ್ಯಯಕ್ಕೆ ಬದಲಾಗಿ ಔ - ಪ್ರತ್ಯಯವು ಬರುತ್ತದೆ. ದುರ್ಬಲ ಪ್ರತ್ಯಯಗಳ ಹಿಂದೆಯೂ ಇಡಾಗಮವನ್ನು ತೆಗೆದುಕೊಳ್ಳುವ ಪ್ರತ್ಯಯಗಳ ಹಿಂದೆಯೂ ಅವುಗಳ ಆಕಾರಕ್ಕೆ ಲೋಪವಾಗುತ್ತದೆ.

| या - ಹೋಗು | | | दा - ಕೊಡು | | |
|---|---|---|---|---|---|
| ययौ | ययतुः | ययुः | ददौ | ददतुः | ददुः |
| ययिथ-ययाथ | ययथुः | यय | ददिथ-ददाथ | ददथुः | दद |
| ययौ | ययिव | ययिम | ददौ | ददिव | ददिम |

| स्था - ನಿಲ್ಲು | | | घ्रा - ಮೂಸು | | |
|---|---|---|---|---|---|
| तस्थौ | तस्थतुः | तस्थुः | जघ्रौ | जघ्रतुः | जघ्रुः |
| तस्थिथ-तस्थाथ | तस्थथुः | तस्थ | जघ्रिथ-जघ्राथ | जघ्रथुः | जघ्र |
| तस्थौ | तस्थिव | तस्थिम | जघ्रौ | जघ्रिव | जघ्रिम |

[ವಿಶೇಷ : ಯಾ, ದಾ, ಸ್ಥಾ, ಘ್ರಾ - ಇವುಗಳಿಗೆ ಅಭ್ಯಾಸವಾಗಿದೆ ; ಕವರ್ಗಕ್ಕೆ ಚವರ್ಗಾದೇಶವಾಗಿದೆ. ಅಭ್ಯಾಸದ ನಿಯಮಗಳನ್ನು (ಖಂ. ೩೫) ನೋಡಿ. ಯಯತುಃ, ಯಯುಃ ಮುಂತಾದ ಕಡೆಗಳಲ್ಲಿ ಆಕಾರಕ್ಕೆ ಲೋಪವಾಗಿದೆ. ಅನಿಟ್‌ಧಾತುಗಳಿಗೂ ಇಡಾಗಮವು ಬಂದಿರುವದಕ್ಕೂ ಥಪ್ರತ್ಯಯದ ಹಿಂದೆ ವಿಕಲ್ಪದಿಂದ ಇಡಾಗಮವು ಬಂದಿರುವದಕ್ಕೂ ಹಿಂದಿನ ಖಂಡದ ನಿಯಮಗಳನ್ನು ನೋಡಿರಿ.]

೪೧. (೧) ಧಾತುವಿನ ಆದಿಯಲ್ಲಿರುವ ಇಕಾರ ಅಥವಾ ಉಕಾರಕ್ಕೆ ಗುಣವಾಗಲಿ ವೃದ್ಧಿಯಾಗಲಿ ಆಗುವಾಗ ಅಭ್ಯಾಸದ ಇಕಾರ, ಉಕಾರ - ಇವಕ್ಕೆ ಕ್ರಮವಾಗಿ ಇಯ್, ಉವ್ - ಎಂಬಾದೇಶಗಳು ಬರುತ್ತವೆ. ಮಿಕ್ಕ ಕಡೆಗಳಲ್ಲಿ ಎರಡು ಸ್ವರಗಳೂ ಸೇರಿ ಈ, ಅಥವಾ ಊ ಆಗುವವು.

| इष् - ಇಚ್ಛಿಸು | | | उष् - ಸುಡು | | |
|---|---|---|---|---|---|
| इयेष | ईषतुः | ईषुः | उवोष | ऊषतुः | ऊषुः |
| इयेषिथ | ईषथुः | ईष | उवोषिथ | ऊषथुः | ऊष |
| इयेष | ईषिव | ईषिम | उवोष | ऊषिव | ऊषिम |

(೨) ಧಾತುವಿನ ಅಂತ್ಯದಲ್ಲಿರುವ ಇ ಈಕಾರಗಳಿಗೆ ದುರ್ಬಲಪ್ರತ್ಯಯಗಳ ಹಿಂದೆ ಯ್, ಸಂಯುಕ್ತಾಕ್ಷರದ ಮುಂದೆ ಬಂದಾಗ ಇಯ್, ಆದೇಶ ; ಉ ಊಕಾರಗಳಿಗೆ ವ್ ಮತ್ತು ಉವ್ ಆದೇಶಗಳು.

इ (೨) - ಹೋಗು | नी - ಒಯ್ಯು

| | | | | | |
|---|---|---|---|---|---|
| इयाय | ईयतुः | ईयुः | निनाय | निन्यतुः | निन्युः |
| इययिथ-इयेथ | ईयथुः | ईय | निनयिथ-निनेथ | निन्यथुः | निन्य |
| इयाय-इयय | ईयिव | ईयिम | निनाय-निनय | निन्यिव | नन्यिम |

[ವಿಶೇಷ : ಆತ್ಮನೇಪದಪ್ರತ್ಯಯಗಳೆಲ್ಲ ದುರ್ಬಲವಾದ್ದರಿಂದ ನಿನ್ಯೇ, ನಿನ್ಯಾತೇ,ಕ ನಿನ್ಯಿರೇ ಎಂದು ಮುಂತಾಗಿಯೇ (ಯಕಾರಾದೇಶದ) ರೂಪಗಳಾಗುವವು]

श्री - ಆಶ್ರಯಿಸು

ಪರಸ್ಮೈಪದ | ಆತ್ಮನೇಪದ

| | | | | | |
|---|---|---|---|---|---|
| शिश्राय | शिश्रियतुः | शिश्रियुः | शिश्रिये | शिश्रियाते | शिश्रियिरे |
| शिश्रयिथ | शिश्रियथुः | शिश्रिय | शिश्रियिषे | शिश्रियाथे | शिश्रियिध्वे-ढ्वे |
| शिश्राय-शिश्रय | शिश्रियिव | शिश्रियिम | शिश्रिये | शिश्रियिवहे | शिश्रियिमहे |

[ಇಲ್ಲಿ ಶ್ರೀ ಎಂಬುದು ಸಂಯುಕ್ತಾಕ್ಷರವಾದ್ದರಿಂದ ಇಯ್ ಬಂದಿದೆ.]

कु - ಕೂಗು | धु - ಅಲುಗಾಡಿಸು

| | | | | | |
|---|---|---|---|---|---|
| चुकाव | चुकुवतुः | चुकुवुः | दुधाव | दुधुवतुः | दुधुवुः |
| चुकविथ-चुकोथ | चुकुवथुः | चुकुव | दुधविथ-दुधोथ | दुधुवथुः | दुधुव |
| चुकाव-चुकव | चुकुविव | चुकुविम | दुधाव-दुधव | दुधुविव | दुधुविम |

[ವೇಟ್ ಧಾತುಗಳಿವು ; ಆತ್ಮನೇಪದದಲ್ಲಿ ದುಧುವೇ, ದುಧುವಾತೇ, ದುಧುವಿರೇ । ಸುಷುವೇ, ಸುಷುವಾತೇ, ಸುಷುವಿರೇ - ಎಂದು ಮುಂತಾಗಿ ಊಕಾರಾಂತಗಳ ರೂಪಗಳು.]

೪೨. ಅಕಾರಾದಿಯಾದ ಧಾತುಗಳು ಸಂಯುಕ್ತಾಕ್ಷರಾಂತವಾಗಿದ್ದರೆ, ಅವುಗಳ (ಮತ್ತು ಅಶ್, ಋಚ್ಛ್ ಧಾತುವಿನ) ಅಭ್ಯಾಸಕ್ಕೆ - ನಕಾರವನ್ನು ಸೇರಿಸಬೇಕಾಗುವದು. ಅಭ್ಯಾಸದ ಅಕಾರವು ಆಕಾರವಾಗುವದು.

| अर्ह् - ತಕ್ಕವನಾಗಿರು | | | अस् - ಎಸೆ | | |
|---|---|---|---|---|---|
| आनर्ह | आनर्हतुः | आनर्हुः | आस | आसतुः | आसुः |
| आनर्हिथ | आनर्हथुः | आनर्ह | आसिथ | आसथुः | आस |
| आनर्ह | आनर्हिव | आनर्हिम | आस | आसिव | आसिम |

[ಹೀಗೆಯೇ ಆನರ್ಚ ಆನರ್ದ ; ಅಙ್ಕ್ (ಗುರುತುಮಾಡು), ಆನಙ್ಕೇ, ಆನಙ್ಕಾತೇ, ಆನಙ್ಕಿರೇ]

अश् - ವ್ಯಾಪಿಸು

| | | |
|---|---|---|
| आनशे | आनशाते | आनशिरे |
| आनशिषे-आनक्षे | आनशाथे | आनशिध्वे-ढ्वे |
| आनशे | आनशिवहे-आनश्वहे | आनशिमहे-आनश्महे |

ऋच्छ्- ಹೋಗು

| | | |
|---|---|---|
| आनर्च्छ | आनर्च्छतुः | आनर्च्छुः |
| आनर्च्छिथ | आनर्च्छथुः | आनर्च्छ |
| आनर्च्छ | आनर्च्छिव | आनर्च्छिम |

ಅಶ್ ಧಾತುವಿಗೆ ಮಧ್ಯಮೈಕವಚನದಲ್ಲಿ ಇಡಾಗಮವಿಲ್ಲದಾಗ ಶಕಾರಕ್ಕೆ ಕಕಾರಾದೇಶ ಬಂದಿರುವದನ್ನು ಲಕ್ಷಿಸಿರಿ.

೪೩. ವಚ್, ಸ್ವಪ್, ಯಜ್ - ಮುಂತಾದ ಧಾತುಗಳಲ್ಲಿರುವ ಅಭ್ಯಾಸದ ಯ ವ ರ ಲ ಗಳಿಗೆ ದುರ್ಬಲಪ್ರತ್ಯಯಗಳ ಹಿಂದೆ ಇ, ಉ, ಋ, ಲೃ ಗಳು ಆದೇಶವಾಗಿ ಬರುತ್ತವೆ. ಇದಕ್ಕೆ ಸಂಪ್ರಸಾರಣವೆಂದು ಹೆಸರು.

| वच् - ಮಾತನಾಡು | | | यज् - ಯಾಗಮಾಡು, ಪೂಜಿಸು | | |
|---|---|---|---|---|---|
| उवाच | ऊचतुः | ऊचुः | इयाज | ईजतुः | ईजुः |
| उवचिथ-उवक्थ | ऊचथुः | ऊच | इयजिथ-इयष्ट | ईजथुः | ईज |
| उवाच-उवच | ऊचिव | ऊचिम | इयाज-इयज | ईजिव | ईजिम |

[ಇಲ್ಲಿ ವ, ಯಕಾರಗಳಿಗೆ ಸಂಪ್ರಸಾರಣ ; ಧಾತುಗಳು ಅನಿಟ್ ಆದರೂ ಇಡಾಗಮವು ಬಂದಿರುವದನ್ನು ಲಕ್ಷಿಸಿರಿ.

ಆತ್ಮನೇಪದದಲ್ಲಿ ಊಚೇ, ಊಚಾತೇ, ಊಚಿರೇ । ಈಜೇ, ಈಜಾತೇ, ಈಜಿರೇ - ಎಂದು ಮುಂತಾಗಿ ರೂಪಗಳು.

ಹೀಗೆಯೇ ವಪ್ - ಬಿತ್ತು, ಕ್ಷೌರಮಾಡು ಉವಾಪ ; ವಹ್ - ಒಯ್ಯು ಉವಾಹ ; ವಸ್ - ವಾಸಮಾಡು ಉವಾಸ. ಸ್ವಪ್ (ನಿದ್ರಿಸು) ಧಾತುವಿಗೆ ಸಂಪ್ರಸಾರಣವಾದರೆ ಸುಷ್ವಾಪ ಸುಷುಪತುಃ ಸುಷುಪುಃ । ಸುಷುಪಿಥ-ಸುಷುಷ್ಠ ಸುಷುಪಥುಃ ಸುಷುಪ । ಸುಷ್ವಾಪ - ಸುಷ್ವಪ ಸುಷುಪಿವ ಸುಷುಪಿಮ - ಎಂದೂ ರೂಪಗಳಾಗುವವು.

ವಹ್ ಧಾತುವು ಹಕಾರಾಂತವಾಗಿರುವದರಿಂದ ಇದಕ್ಕೆ ಥ ಸೇರುವ ಮುಂಚೆ ಢಕಾರಾದೇಶ ಥಕಾರಕ್ಕೆ ಧಕಾರವೂ, ಮೂರ್ಧನ್ಯವಾದ ಢಕಾರವೂ ಬರುವದಲ್ಲದೆ ಧಾತುವಿನ ಅಕಾರಕ್ಕೆ ಓಕಾರವು ಆದೇಶವಾಗಿ ಬರುವದೆಂಬುದು ಒಂದು ವಿಶೇಷ.]

वह् - ಹೊರು, ಬೀಸು

| | | | | | |
|---|---|---|---|---|---|
| उवाह | ऊहतुः | ऊहुः | ऊहे | ऊहाते | ऊहिरे |
| उवहिथ-उवोढ | ऊहथुः | ऊह | ऊहिषे | ऊहाथे | ऊहिध्वे-ढ्वे |
| उवाह-उवह | ऊहिव | ऊहिम | ऊहे | ऊहिवहे | ऊहिमहे |

ಇಲ್ಲಿ ಸ್ವಪ್-ಸ್ವಸ್ವಪ್ (ಅಭ್ಯಾಸ) - ಸುಷ್ವಪ್ (ಸಂಪ್ರಸಾರಣ) ಹೀಗಾಗಿದೆ. ಪರೋಕ್ಷಭೂತದ ವಿಶೇಷಗಳನ್ನು ಮುಂದೆ ಅಲ್ಲಲ್ಲಿಯೇ ತಿಳಿಯಿಸುತ್ತಾ ಹೋಗುವೆವು.

## ಅಭ್ಯಾಸ ೨೪

१. अस्ति दाक्षिणात्ये जनपदे महिलारोप्यं नाम नगरम् ।

ಅಸ್ ಧಾತುವಿಗೆ ಪರೋಕ್ಷಭೂತದಲ್ಲಿ ಬಭೂವ ಮುಂತಾಗಿ ರೂಪಗಳಾಗುವವು. ಅವನ್ನು ಪೂರ್ಣವಾಗಿ ಬರೆಯಿರಿ.

२. राजा सचिवान् प्रोवाच ।

ಇಲ್ಲಿ ವಚ್ ಧಾತುವಿಗೆ ಪ್ರ ಎಂಬ ಉಪಸರ್ಗವನ್ನು ಸೇರಿಸಿದ ಪರೋಕ್ಷ ಭೂತರೂಪವನ್ನು ಉಪಯೋಗಿಸಿದೆ. ಉಪಸರ್ಗಸಹಿತವಾಗಿ ಆ ಭೂತಕಾಲದ ರೂಪಗಳನ್ನೆಲ್ಲ ಬರೆಯಿರಿ.

३. महदपि राज्यं तस्य न सौख्यं आवहति ।

ಇಲ್ಲಿರುವ ಕ್ರಿಯಾಪದದ ಪರೋಕ್ಷಭೂತರೂಪಗಳನ್ನು ಹೇಳಿ. (ಇಲ್ಲಿಯೂ ಹಿಂದಿನ ಪ್ರಶ್ನೆಯ ಉತ್ತರದಲ್ಲಿಯೂ ಸಂಧಿನಿಯಮಗಳನ್ನು ಅನುಸರಿಸಬೇಕು.)

# १५. मित्रभेदः (अनुवृत्तः)

४४. अथ दमनकः सत्वरं गत्वा साक्षेपं तम् इदमाह 'एह्येहि दुष्टवृषभ, स्वामी पिङ्गलकस्त्वाम् आकारयति । किं निश्शङ्को भूत्वा मुहुर्मुहुर्नदसि वृथा ?' इति ।

तत् श्रुत्वा सञ्जीवकोऽब्रवीत् - भद्र, कोऽयं पिङ्गलकः ?

दमनक आह - किं स्वामिनं पिङ्गलकमपि न जानासि ? तत् क्षणं प्रतिपालय, फलेनैव ज्ञास्यसि । नन्वयं सर्वमृगपरिवृतो वटतले स्वामी पिङ्गलकनामा सिंहस्तिष्ठति ।

तच्छ्रुत्वा गतासुमिव आत्मानं मन्यमानः सञ्जीवकः परं विषादं अगमत् (गतः) । आह च - भद्र, भवान् साधुसमाचारो वचनपटुश्च दृश्यते । तद् यदि माम् अवश्यं तत्र नयसि, तदभयप्रदानेन स्वामिनः सकाशात् प्रसादः कारयितव्यः ।

दमनक आह - भोः, सत्यमभिहितं त्वया । नीतिरेषा । यतः -

पर्यन्तो लभ्यते भूमेः समुद्रस्य गिरेरपि ।
न कथञ्चिन्महीपस्य चित्तान्तः केनचित् क्वचित् ॥

तत् त्वम् अत्रैव तिष्ठ यावदहं तं समये दृष्ट्वा ततः पश्चात् त्वामानयामि - इति ॥

ಬಳಿಕ ದಮನಕನು (ತ್ವರೆಯಿಂದೊಡಗೂಡಿ =) ಬೇಗನೆ ಹೋಗಿ (ಆಕ್ಷೇಪದಿಂದೊಡಗೂಡಿ =) ಗದರಿಸುವಂತೆ ಆ (ಸಂಜೀವಕ)ನನ್ನು ಕುರಿತು ಇದನ್ನು ಹೇಳಿತು - ಕೆಟ್ಟ ಎತ್ತೇ ಬಾ ಬಾ ! ಒಡೆಯ ಪಿಂಗಲಕನು (ನಿನ್ನನ್ನು ಕರೆಯ ಕಳುಹಿಸಿರುತ್ತಾನೆ =) ಹೇಳಿಕಳುಹಿಸಿದಾನೆ. (ನಿಃಶಂಕನಾಗಿ =) ಯಾವ ಅಂಜಿಕೆಯೂ ಇಲ್ಲದೆ ಏತಕ್ಕೆ ಮತ್ತೆಮತ್ತೆ ಸುಮ್ಮನೆ ಗುಟುರುಹಾಕುತ್ತಿರುವೆ ?

ಅದನ್ನು ಕೇಳಿ ಸಂಜೀವಕನೆಂದಿತು - ಅಯ್ಯ, ಈ ಪಿಂಗಲಕ (ನೆಂಬುವನು) ಯಾರು ?

ದಮನಕನೆಂದಿತು - ಸ್ವಾಮಿ, ಪಿಂಗಲಕನನ್ನು ಕೂಡ ಅರಿಯೆಯೇನು ? ಹಾಗಾದರೆ

ಒಂದುಕ್ಷಣ (ಕಾದಿರು =) ನಿಲ್ಲು, ಫಲದಿಂದಲೇ ತಿಳಿದುಕೊಳ್ಳುವೆಯಂತೆ ! ಆಲದ ಮರದ ಕೆಳಗೆ (ಎಲ್ಲಾ ಮೃಗಗಳಿಂದ ಸುತ್ತುವರಿಯಲ್ಪಟ್ಟು =) ಎಲ್ಲಾ ಪರಿವಾರದ ಮೃಗಗಳೊಡನೆ (ಈ ಪಿಂಗಲಕನೆಂಬ ಹೆಸರಿನ ಸಿಂಹವು ಇರುವದಲ್ಲ =) ಆಗೊ ! ಪಿಂಗಲಕನೆಂಬ ಸಿಂಹವು ಇರುವದು ಕಾಣಿಸುವದಿಲ್ಲವೆ ?

ಅದನ್ನು ಕೇಳಿ (ತನ್ನನ್ನು ಹೋದಪ್ರಾಣವುಳ್ಳವನೆಂಬಂತೆ =) ತಾನು ಸತ್ತೆನೆಂದೇ ಎಣಿಸಿಕೊಂಡು ಸಂಜೀವಕನು ಹೆಚ್ಚಿನ ವಿಷಾದವನ್ನು ಹೊಂದಿತು ; ಮತ್ತು ಇಂತೆಂದಿತು - ಅಯ್ಯ, ನೀನು ಒಳ್ಳೆಯ ನಡತೆಯವನೂ ಮಾತಿನಲ್ಲಿ ಗಟ್ಟಿಗನೂ ಆಗಿ ಕಾಣಿಸುತ್ತೀಯೆ. ಆದ್ದರಿಂದ ನನ್ನನ್ನು ಅಲ್ಲಿಗೆ (ಅವಶ್ಯವಾಗಿ ಕರೆದುಕೊಂಡು ಹೋಗುವೆಯಾದರೆ =) ಕರೆದುಕೊಂಡು ಹೋಗಲೇಬೇಕಾಗಿದ್ದರೆ (ಅಭಯ ಪ್ರದಾನೇನ =) ಅಭಯವನ್ನು ಕೊಡಿಸಿ (ಸ್ವಾಮಿಯ ಕಡೆಯಿಂದ ಪ್ರಸಾದವನ್ನು ಮಾಡಿಸಬೇಕು =) ಸ್ವಾಮಿಯವರು (ನನ್ನಲ್ಲಿ) ಪ್ರಸನ್ನರಾಗುವಂತೆ ಮಾಡಿಸಬೇಕು.

ದಮನಕನೆಂದಿತು - ಎಲೈ, (ನಿನ್ನಿಂದ ಸತ್ಯವು ಹೇಳಲ್ಪಟ್ಟಿತು =) ನೀನು ಹೇಳಿದ್ದೂ ನಿಜ. ಇದೇ (ನೀತಿ =) ಸರಿಯಾದ ನಡೆವಳಿಕೆ. ಏಕೆಂದರೆ -

**ಭೂಮಿಗೂ ಸಮುದ್ರಕ್ಕೂ ಬೆಟ್ಟಕ್ಕೂ ಕೊನೆ (ಪಡೆಯಲ್ಪಡುತ್ತದೆ =) ಸಿಕ್ಕುತ್ತದೆ. (ನೆಲದೊಡೆಯನ =) ದೊರೆಯ ಚಿತ್ತದ ಕೊನೆಯು ಯಾರಿಂದಲೂ ಎಂದಿಗೂ ಹೇಗೂ (ಸಿಕ್ಕ)ಲಾರದು.**

ಆದ್ದರಿಂದ ನೀನು ಇಲ್ಲಿಯೇ ಇರು, (ಎಲ್ಲಿಯವರೆಗೆ =) ಅಷ್ಟರೊಳಗೆ ನಾನು ಅವನನ್ನು ಸಮಯದಲ್ಲಿ ಕಂಡು ಆಮೇಲೆ ನಿನ್ನನ್ನು (ಕರೆದುಕೊಂಡು ಬರುತ್ತೇನೆ =) ಕರೆದೊಯ್ಯುತ್ತೇನೆ.

## ಚಿಂತನ

೧. ಸತ್ವರಮ್, ಸಾಕ್ಷೇಪಮ್ । ಇವುಗಳಿಗೆ 'ತ್ವರಯಾ ಸಹ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ' ; ಆಕ್ಷೇಪೇಣ ಸಹ..... ಎಂದು ವಿಗ್ರಹವಾಕ್ಯಗಳು. ಸಹಪೂರ್ವ ಪದವಾದ ಕ್ರಿಯಾವಿಶೇಷಣಬಹುವ್ರೀಹಿಗಳಿವು.

೨. ಆಹ । ಇದು 'ಬ್ರೂ' (ಹೇಳು) ಎಂಬ ಧಾತುವಿನಿಂದಾಗಿರುವ ವರ್ತಮಾನ ರೂಪಾಂತರ. ಆಹ ಆಹತುಃ ಆಹುಃ । ಆತ್ಥ ಆಹಥುಃ - ಇಷ್ಟು ರೂಪಗಳು ಮಾತ್ರ ಇವೆ. ಇದನ್ನು ಕಥೆಯಲ್ಲಿ 'ಹೇಳಿದನು' ಎಂಬಂತೆ ಭೂತಾರ್ಥದಲ್ಲಿ ಉಪಯೋಗಿಸುವರು.

೩. ಏಹಿ । ಇದು 'ಇ' (ಹೋಗು) ಎಂಬ ೨ನೆಯ ಗಣದ ಧಾತುವಿಗೆ 'ಆ' ಎಂಬ ಉಪಸರ್ಗವನ್ನು ಸೇರಿಸಿದ ಆಜ್ಞಾರ್ಥ (ಲೋಟ್) ರೂಪ. ಏತು ಇತಾಮ್ ಯನ್ತು । ಇಹಿ

ಇತಮ್ ಇತ । ಅಯಾನಿ ಅಯಾವ ಅಯಾಮ । - ಎಂದು ರೂಪಗಳು. (೧, ೪, ೬, ೧೦ - ಈ ಗಣಗಳನ್ನು ಬಿಟ್ಟು ಉಳಿದ ಗಣಗಳ ಧಾತುಗಳಿಗೆ ಆಜ್ಞಾರ್ಥದ ಮ.ಏ. ವಚನಕ್ಕೆ 'ಹಿ' ಪ್ರತ್ಯಯವು ಬರುತ್ತದೆ.) ಪರಸ್ಮೈಪದದ ಆನಿ ಆವ ಆಮ ಮತ್ತು ತು - ಈ ಪ್ರತ್ಯಯಗಳೂ ಮತ್ತು ಆತ್ಮನೇಪದದ 'ಐ' 'ಆವಹೈ' 'ಆಮಹೈ' - ಈ ಪ್ರತ್ಯಯಗಳೂ ಪ್ರಬಲ, ಉಳಿದವು ದುರ್ಬಲ. ಇಕಾರಾಂತ ಉಕಾರಾಂತ ಧಾತುಗಳಿಗೆ ಸ್ವರಾದಿಯಾದ ದುರ್ಬಲಪ್ರತ್ಯಯಗಳು ಬಂದರೆ ಅಂತ್ಯವರ್ಣಕ್ಕೆ ಇಯ್ ಉವ್ - ಆದೇಶಗಳಾಗುವವು. ಉದಾ : ಅಧಿ+ಇ ಆತ್ಮನೇಪದಿ ; ಇದಕ್ಕೆ 'ಅಧೀಯಾತೇ', 'ಅಧೀಯತೇ' । ಆದರೆ ಪರಸ್ಮೈಪದದಲ್ಲಿ ಇಯ್ ಬರುವದಿಲ್ಲ. ಯಕಾರಾದೇಶವು ಬರುತ್ತದೆ.

೪. **ನಿಃಶಙ್ಕೋ ಭೂತ್ವಾ** । ಇದನ್ನು 'ನಿಶ್ಶಙ್ಕಮ್' ಎಂದೂ (ಕ್ರಿ.ವಿ. ಬಹುವ್ರೀಹಿಯಾಗಿ) ಹೇಳಬಹುದು.

೫. **ಅಬ್ರವೀತ್** । 'ಬ್ರೂ' (ಹೇಳು) ಇದರ ಅನದ್ಯತನಭೂತಕಾಲವಿದು. ಈ ಎರಡನೆಯ ಗಣದ ಧಾತುವಿಗೆ ವ್ಯಂಜನಾದಿಪ್ರಬಲಪ್ರತ್ಯಯಗಳು ಸೇರುವಾಗ ಅವುಗಳ ಹಿಂದೆ ಈಕಾರಾಗಮವು ಬರುತ್ತದೆ ; ಎಂದರೆ ವರ್ತಮಾನದಲ್ಲಿ 'ಈತಿ', 'ಈಷಿ', 'ಈಮಿ' ; ಅನದ್ಯತನದಲ್ಲಿ 'ಈತ್', 'ಈಃ' ; ಆಜ್ಞಾರ್ಥದಲ್ಲಿ 'ಈತು' - ಹೀಗೆ ಆಗುತ್ತವೆ. ಆಗ ಊಕಾರಕ್ಕೆ ಗುಣವಾಗಿ ಅವಾದೇಶವು ಬರುತ್ತದೆ. ಪ್ರಕೃತದಲ್ಲಿ 'ಅಬ್ರವೀತ್ ಅಬ್ರೂತಾಮ್ ಅಬ್ರುವನ್ । ಅಬ್ರವೀಃ ಅಬ್ರೂತಮ್ ಅಬ್ರೂತ । ಅಬ್ರವಮ್ ಅಬ್ರೂವ ಅಬ್ರೂಮ ॥' ಎಂದು ಅನದ್ಯತನಭೂತರೂಪಗಳಾಗುವವು. (ಮುಂದೆ ೬೪ನೆಯ ಖಂಡವನ್ನು ನೋಡಿ)

೬. **'ವೃಥಾ', 'ಮುಧಾ', 'ವ್ಯರ್ಥಮ್'** - ಈ ಎಲ್ಲಕ್ಕೂ 'ವ್ಯರ್ಥವಾಗಿ' ಎಂದೇ ಅರ್ಥ.

೭. **ಕೋಽಯಂ ಪಿಙ್ಗಲಕಃ ?** - ಇವನು ಯಾರೋ ಕಾಣೆನಲ್ಲ - ಎಂದರ್ಥ.

೮. **ಫಲೇನೈವ ಜ್ಞಾಸ್ಯಸಿ** । ಹೀಗೆ ಗುಟುರುಹಾಕುತ್ತಾ ಸುಮ್ಮನೆ ಇದ್ದರೆ ಸಿಂಹವು ಬಂದು ನಿನ್ನನ್ನು ಕೊಂದುಹಾಕುವದು - ಎಂಬ ಬೆದರಿಕೆಯನ್ನು ತೋರಿಸುವ ವಾಕ್ಯವಿದು.

೯. ನನು । 'ಅಲ್ಲವೆ ?', 'ಅಲ್ಲ !' ಎಂಬರ್ಥದ ಅವ್ಯಯ. 'ನನ್ವಯಂ ತವ ಭ್ರಾತಾ' । ಇವನು ನಿನ್ನ ಸೋದರನಲ್ಲವೆ ? 'ನನು ಮಯಾ ಉಕ್ತಮೇತತ್' । ನಾನು ಇದನ್ನು ಹೇಳಿದೆನಲ್ಲ ! ವಾದಗ್ರಂಥಗಳಲ್ಲಿ ಪೂರ್ವಪಕ್ಷಿಯ ಆಕ್ಷೇಪವನ್ನು ಹೇಳುವದಕ್ಕೆ ಈ ಅವ್ಯಯವನ್ನು ಬಹಳವಾಗಿ ಉಪಯೋಗಿಸುವರು.

೧೦. **ಗತಾಸುಮಿವ** । ಇದರ ಬದಲು 'ಗತಾಯುಷಮಿವ' ಎಂದೂ ಪಾಠಾಂತರವಿದೆ. 'ಗತಾಃ ಅಸವಃ ಯಸ್ಮಾತ್ ಸಃ', 'ಗತಮ್ ಆಯುಃ ಯಸ್ಯ ಸಃ' - ಎಂದು ಇವಕ್ಕೆ ವಿಗ್ರಹವಾಕ್ಯಗಳು. ಅಸುಶಬ್ದವು ಪ್ರಾಣ ಎಂಬರ್ಥದಲ್ಲಿ ನಿತ್ಯಬಹುವಚನ.

೧೧. **ತತ್ ಕ್ಷಣಂ ಪ್ರತಿಪಾಲಯ** । ತತ್ ಎಂದರೆ ಇಲ್ಲಿ 'ಹಾಗಾದರೆ'. 'ತದ್ ಯದಿ ಮಾಮ್ ಅವಶ್ಯಂ ನಯಸಿ' ; 'ತತ್ ತ್ವಮತ್ರೈವ ತಿಷ್ಠ' ಇಲ್ಲಿ ತತ್ ಎಂದರೆ 'ಆದ್ದರಿಂದ'.

೧೨. **ತಿಷ್ಠ ಯಾವದಹಂ ತ್ವಾಮ್ ಆನಯಾಮಿ** - ತಾವತ್ ತಿಷ್ಠ, ಯಾವತ್ 'ಕರೆತರುವ ವರೆಗೆ' । (ಪು. ೫೨) ರಲ್ಲಿರುವ ಚಿಂತನದ ೯ ನೆಯ ಟಿಪ್ಪಣಿಯನ್ನು ನೋಡಿ.

೧೩. ಸ್ವಾಮಿನಃ ಸಕಾಶಾತ್ । 'ಪಿಙ್ಗಲಕಸಕಾಶಮ್' - ಇವನ್ನು 'ಸ್ವಾಮಿನಃ', ಪಿಙ್ಗಲಕಮ್' ಎಂಬರ್ಥಗಳಲ್ಲಿ ಪ್ರಯೋಗಿಸಿದೆ. ಆಗಾಗ್ಗೆ ಈ ಗ್ರಂಥದಲ್ಲಿ ಈ 'ಸಕಾಶ' ಶಬ್ದದ ಪ್ರಯೋಗವು ಬರುತ್ತಿರುವದು.

೧೪. ನೀತಿರೇಷಾ = ಇದೇ ನಡತೆ, ಹೀಗೆಯೇ ಮಾಡತಕ್ಕದ್ದು ಯುಕ್ತ, ಇದೇ ಸರಿ. ನೈಷಾ ನೀತಿಃ ಇದು ಸರಿಯಲ್ಲ.

೧೫. ವಿಷಾದಮ್ ಅಗಮತ್ । ಇದಕ್ಕೆ ಪರೋಕ್ಷಭೂತದಲ್ಲಿ 'ಸಸಾದ ಸೇದತುಃ ಸೇದುಃ । ಸೇದಿಥ-ಸಸತ್ಥ ಸೇದಥುಃ ಸೇದ । ಸಸಾದ-ಸಸದ ಸೇದಿವ ಸೇದಿಮ' - ಎಂದು ರೂಪಗಳಾಗುವವು. ಉಪಸರ್ಗವು ಸೇರಿದಾಗ 'ವಿಷಸಾದ' ಎಂದು ಮುಂತಾಗಿ ಷಕಾರ ಯುತವಾಗಿ ಹೇಳಬೇಕು.

४५. तथानुष्ठिते दमनकः पिङ्गलकसकाशं गत्वा इदमाह - 'स्वामिन्, न तत् प्राकृतं सत्त्वम् । स हि भगवतो महेश्वरस्य वाहनभूतो वृषभः' इति । मया पृष्टः इदम् ऊचे - 'महेश्वरेण परितुष्टेन कालिन्दीपरिसरे शष्पाग्राणि भक्षयितुं समादिष्टः । किं बहुना ? मम प्रदत्तं भगवता क्रीडार्थं वनमिदम् ।'

पिङ्गलक आह सभयम् - सत्यं ज्ञातं मया अधुना । न देवताप्रसादं विना शष्पभोजिनो व्यालाकीर्णे एवंविधे वने निश्शङ्का नदन्तो भ्रमन्ति । ततस्त्वया किम् अभिहितम् ?

दमनक आह - स्वामिम्, एतदभिहितं मया यत् - 'एतद्वनं चण्डिकावाहनभूतस्य मत्स्वामिनः पिङ्गलकनाम्नः सिंहस्य विषयीभूतम् । तद्भवान् अभ्यागतः प्रियोऽतिथिः । तत् तस्य सकाशं गत्वा भ्रातृस्नेहेन एकत्र भक्षणपानविहरणक्रियाभिः एकस्थानाश्रयेण कालो नेयः' - इति । ततस्तेनापि सर्वमेतत् प्रतिपन्नम् । उक्तं च सहर्षम् - 'स्वामिनः सकाशात् अभयदक्षिणा दापयितव्या' इति । तदत्र स्वामी प्रमाणम् ।।

तच्छ्रुत्वा पिङ्गलक आह - 'साधु सुमते, साधु ! मन्त्रिश्रोत्रिय, साधु ! मम हृदयेन सह संमन्त्र्य भवता एतदभिहितम् । तद् दत्ता मया तस्य अभयदक्षिणा । परं सोऽपि मदर्थे अभयदक्षिणां याचयित्वा द्रुततरम् आनीयताम्' - इति ।।

(ಹಾಗೆ ಮಾಡಲ್ಪಡಲಾಗಿ =) ಪಿಂಗಲಕನು ಇದಕ್ಕೆ ಒಪ್ಪಲು, ದಮನಕನು

ಪಿಂಗಲಕನ ಹತ್ತಿರಕ್ಕೆ ಬಂದು ಇದನ್ನು ಹೇಳಿತು : ಸ್ವಾಮಿ, ಅದು (ಪ್ರಾಕೃತ =) ಸಾಮಾನ್ಯಪ್ರಾಣಿಯಲ್ಲ ; ಏಕೆಂದರೆ ಅದು ಭಗವಂತನಾದ ಮಹೇಶ್ವರನ ವಾಹನವಾದ ಎತ್ತು. (ನನ್ನಿಂದ ಕೇಳಲ್ಪಟ್ಟು =) ನಾನು ಕೇಳಿದ್ದಕ್ಕೆ ಇದನ್ನು ಹೇಳಿತು : 'ಸಂತುಷ್ಟನಾದ ಮಹೇಶ್ವರನಿಂದ ಯಮುನೆಯ (ಹತ್ತಿರ =) ಪ್ರಾಂತದಲ್ಲಿ ಗರಿಕೆಯ ಕುಡಿಗಳನ್ನು ತಿನ್ನುವದಕ್ಕೆ (ಅಪ್ಪಣೆ ಮಾಡಲ್ಪಟ್ಟಿರುತ್ತೇನೆ =) ನನಗೆ (ಅವನು) ಅಪ್ಪಣೆ ಕೊಟ್ಟಿರುತ್ತಾನೆ. (ಬಹಳದಿಂದ ಏನು ? =) ಹೆಚ್ಚೇನು ? (ಭಗವಂತನಿಂದ ನನಗೆ ಆಟಕ್ಕಾಗಿ ಕೊಡಲ್ಪಟ್ಟ =) ಭಗವಂತನು ನನಗೆ ಓಡಾಡಿಕೊಂಡಿರುವದಕ್ಕಾಗಿ ಕೊಟ್ಟ ವನವಿದು.'

ಪಿಂಗಲಕನು ಭಯದಿಂದ ಇಂತೆಂದಿತು - 'ನಿಜವು ನನಗೆ ಈಗ ತಿಳಿಯಿತು. ದೇವತೆಯ ಪ್ರಸಾದವಿಲ್ಲದೆ ಹುಲ್ಲು ತಿನ್ನುವ ಪ್ರಾಣಿಗಳು (ಸರ್ಪಾಕೀರ್ಣವಾದ =) ಹಾವುಗಳು ತುಂಬಿರುವ ಈ ಬಗೆಯ ಕಾಡಿನಲ್ಲಿ ಅಂಜಿಕೆಯಿಲ್ಲದವಾಗಿ ಗುಟುರು ಹಾಕುತ್ತಾ ಓಡಾಡಲಾರವು. ಆಮೇಲೆ (ನಿನ್ನಿಂದ ಏನು ಹೇಳಲ್ಪಟ್ಟಿತು ? =) ನೀನು ಏನು ಹೇಳಿದೆ ?'

ದಮನಕನೆಂದಿತು : "ಸ್ವಾಮಿ, (ನನ್ನಿಂದ ಇದು ಹೇಳಲ್ಪಟ್ಟಿತು, ಯಾವದೆಂದರೆ =) ನಾನು ಹೇಳಿದ್ದೇನೆಂದರೆ, 'ಈ ಕಾಡು ಚಂಡಿಕೆಯ ವಾಹನವಾಗಿರುವ ನನ್ನ ಸ್ವಾಮಿಯಾದ ಪಿಂಗಲಕನೆಂಬ ಹೆಸರಿನ ಸಿಂಹಕ್ಕೆ (ವಿಷಯವಾದದ್ದು =) ಸೇರಿದ್ದು. ಆದ್ದರಿಂದ ಅಭ್ಯಾಗತನಾದ (= ಇಲ್ಲಿಗೆ ಬಂದ) ನೀನು ಪ್ರಿಯನಾದ ಅತಿಥಿ. ಆದ್ದರಿಂದ ಅವನ ಬಳಿಗೆ ಹೋಗಿ ಭ್ರಾತೃಸ್ನೇಹದಿಂದ ಒಂದೇ ಕಡೆಯಲ್ಲಿ ತಿನ್ನುವದು, ಕುಡಿಯುವದು, ಓಡಾಡುವದು - ಈ ಕ್ರಿಯೆಗಳಿಂದ (ಒಂದೇ ಸ್ಥಾನದ ಆಶ್ರಯದಿಂದ =) ಇದೇ ಸ್ಥಾನದಲ್ಲಿದ್ದುಕೊಂಡು (ಕಾಲವು ಕಳೆಯಲ್ಪಡತಕ್ಕದ್ದು =) ಕಾಲವನ್ನು ಕಳೆಯಬೇಕು.' ಆಮೇಲೆ (ಅವನಿಂದಲೂ ಇದೆಲ್ಲವೂ ಒಪ್ಪಲ್ಪಟ್ಟಿತು =) ಅದೂ ಇದೆಲ್ಲಕ್ಕೂ ಒಪ್ಪಿಗೆಯಿತ್ತಿತು. ಮತ್ತು (ಸ್ವಾಮಿಗಳವರಿಂದ ಅಭಯದಕ್ಷಿಣೆಯು ಕೊಡಲ್ಪಡತಕ್ಕದ್ದು ! ಎಂದು ಹರ್ಷದಿಂದ ಹೇಳಲ್ಪಟ್ಟಿತು =) ತಮ್ಮಿಂದ ಅಭಯದಕ್ಷಿಣೆಯನ್ನು ಕೊಡಿಸಬೇಕೆಂದು ಹರ್ಷದಿಂದ ಕೇಳಿಕೊಂಡಿತು. (ಆದ್ದರಿಂದ ಸ್ವಾಮಿಯೇ ಈ ವಿಷಯದಲ್ಲಿ ಪ್ರಮಾಣವು =) ಆದ್ದರಿಂದ ಬುದ್ಧಿಯುವರು ಈ ವಿಷಯಕ್ಕೆ ತಮಗೆ ತಿಳಿದಂತೆ ಮಾಡಬಹುದು."

ಅದನ್ನು ಕೇಳಿ ಪಿಂಗಲಕನೆಂದಿತು : '(ಒಳ್ಳೆಯ ಬುದ್ಧಿಯುಳ್ಳಾತನೆ =) ಜಾಣನೆ, (ಒಳ್ಳೆಯದು =) ಒಳ್ಳೆಯ ಕೆಲಸವನ್ನು ಮಾಡಿದೆ ! ಮಂತ್ರಿಶ್ರೇಷ್ಠನೆ, ಒಳ್ಳೆಯ ಕೆಲಸವನ್ನು ಮಾಡಿದೆ ! ನನ್ನ (ಹೃದಯದೊಡನೆ ಆಲೋಚನೆಮಾಡಿ =) ಮನಸ್ಸಿನಲ್ಲಿದ್ದದ್ದನ್ನು

ಅರಿತುಕೊಂಡೇ (ನಿನ್ನಿಂದ ಹೇಳಲ್ಪಟ್ಟಿತು= ) ನೀನು ಈ ಮಾತನ್ನು ಆಡಿದೆ. ಆದ್ದರಿಂದ (ನನ್ನಿಂದ ಅಭಯದಕ್ಷಿಣೆಯು ಕೊಡಲ್ಪಟ್ಟಿತು =) ಇಗೊ, ನಾನು ಅಭಯದಕ್ಷಿಣೆಯನ್ನು ಕೊಟ್ಟಿರುತ್ತೇನೆ. ಆದರೆ (ಅದೂ ನನಗಾಗಿ ಅಭಯದಕ್ಷಿಣೆಯನ್ನು ಕೇಳಿ ಬಲುಬೇಗನೆ ಕರೆತರಲ್ಪಡಲಿ =) ನನಗೂ ಅದರಿಂದ ಅಭಯದಕ್ಷಿಣೆಯನ್ನು ತೆಗೆದುಕೊಂಡು ನನ್ನ ಬಳಿಗೆ ಕರೆದುಕೊಂಡು ಬಾ !'

## ಚಿಂತನ

೧. ತಥಾ ಅನುಷ್ಠಿತೇ - ಹಾಗೇ ಮಾಡಲ್ಪಡಲಾಗಿ. ಆಗಾಗ್ಗೆ ಕಥೆಯಲ್ಲಿ ಬಳಸುವ ವಾಕ್ಯವಿದು.

೨. ನ ಪ್ರಾಕೃತಮ್ ದಿವ್ಯಮ್ ।

೩. ಕಿಂ ಬಹುನಾ ? ಹೆಚ್ಚು ಹೇಳಿದ್ದರಿಂದೇನು ? ಸ್ವಲ್ಪದರಲ್ಲಿ ಹೇಳಿಬಿಡುತ್ತೇನೆ.

೪. ಇದಮಾಹ - ಇತಿ । 'ಇದಮಾಹ' - ಎಂದಾದಮೇಲೆ 'ಇತಿ' ಬೇಕಿಲ್ಲವಾದರೂ ಸಂಭಾಷಣೆಯು ಮುಗಿಯಿತೆಂಬುದನ್ನು ಸೂಚಿಸುವದಕ್ಕೆ ಈ ಗ್ರಂಥದಲ್ಲಿ ಅಲ್ಲಲ್ಲಿ ಹೀಗೆ 'ಇತಿ' ಯನ್ನು ಸೇರಿಸಿ ಬರೆದಿರುತ್ತಾರೆ.

೫. ಪ್ರದತ್ತಮ್ - 'ದಾ' ಧಾತುವಿನ ಭೂತಕೃದಂತವಿದು. ಇದಕ್ಕೆ 'ಪ್ರತ್ತಮ್' ಎಂದೂ ಪಾಠಾಂತರವುಂಟು.

೬. ದೇವತಾಪ್ರಸಾದಂ ವಿನಾ । 'ವಿನಾ' ಎಂಬ ಅವ್ಯಯಕ್ಕೆ 'ಇಲ್ಲದೆ', 'ಹೊರತು' ಎಂದರ್ಥವಾದಾಗ ಅದಕ್ಕೆ ದ್ವಿತೀಯ, ತೃತೀಯೆ, ಕೆಲವು ವೇಳೆಗಳಲ್ಲಿ ಪಂಚಮೀ - ಈ ವಿಭಕ್ತಿಗಳು ಬರುತ್ತವೆ.

೭. ಏವಂವಿಧೇ । ಏವಂ ವಿಧಾ ಯಸ್ಯ ತತ್ ; ತಸ್ಮಿನ್ - ಎಂದು ವಿಗ್ರಹವಾಕ್ಯ.

೮. ಶಷ್ಪಭೋಜಿನಃ । ಹುಲ್ಲುಮೇಯುವವುಗಳಾದ, ಸಸ್ಯಾಹಾರಿಗಳಾದ.

೯. ನಿಃಶಙ್ಕಾ ನದನ್ತಃ । 'ನಿಃಶಙ್ಕಾಃ ಸನ್ತಃ' ಎಂಬರ್ಥದಲ್ಲಿ. ಇಲ್ಲಿ ನಿಃಶಙ್ಕಮ್ ಎಂಬ ಕ್ರಿಯಾವಿಶೇಷಣಬಹುವ್ರೀಹಿಯನ್ನೂ ಉಪಯೋಗಿಸಬಹುದಿತ್ತು.

೧೦. ಏಕಸ್ಥಾನಾಶ್ರಯೇಣ ಸಮಾನಸ್ಥಾನಮ್ ಆಶ್ರಿತ್ಯ.

೧೧. ಯಾಚಯಿತ್ವಾ । 'ಯಾಚಿತ್ವಾ' ಪ್ರಾರ್ಥಿಸಿ ಎಂಬರ್ಥದಲ್ಲಿ ಉಪಯೋಗಿಸಿರುವ ಪ್ರೇರಣಾರ್ಥಕ.

## ಅಭ್ಯಾಸ ೨೫

೧. (೧) ಈ ಕೆಳಗಿನ ವಾಕ್ಯಗಳನ್ನು ಕನ್ನಡಿಸಿರಿ. (೨) ಭೂತಕಾಲಾರ್ಥದ (ಅನದ್ಯತನ, ಪರೋಕ್ಷಭೂತ, ಭೂತಕೃದಂತ - ಮುಂತಾದ) ರೂಪಗಳು ಇರುವ ಕಡೆಯಲ್ಲಿ ಅದೇ ಅರ್ಥವನ್ನು ಕೊಡುವ ಬೇರೆಯ ರೂಪಗಳಲ್ಲಿ ಒಂದನ್ನಾಗಲಿ, ಬೇರೆಯ ಕ್ರಿಯಾಪದವನ್ನಾಗಲಿ ಪ್ರಯೋಗಿಸಿರಿ :

अस्ति मगधेषु पाटलीपुत्रं नाम नगरम् । तत्र धनपालितनामा वणिग् बभूव । तस्य च कीर्तिसेनाभिधाना लावण्यवती कन्या आस । धनपालितो दुहितरं प्राप्तयौवनां देवसेनाय नाम वणिक्पुत्राय ददौ । कीर्तिसेना भर्तुः बहुमता तेन भृशं लालिताऽपि कलहशीलया श्वश्र्वा पीड्यमाना कथञ्चित् गृहे न्यवसत् ॥

अन्येद्युर्देवसेनो द्रविणार्जनाय वलभीं प्रतस्थे । गते तस्मिन् पतिवियोगदुःखितां स्नुषां देवसेनजननी क्रोधाविष्टा विनाकारणं तां कटुवचनैः सततं निर्भर्त्सयते स्म ॥

२. धनपालितनामा, कीर्तिसेनाभिधाना, प्राप्तयौवनाम्, कलहशीलया, द्रविणार्जनाय, पतिवियोगदुःखिताम् - ಇವುಗಳಿಗೆ ವಿಗ್ರಹವಾಕ್ಯವನ್ನು ಬರೆದು ಸಮಾಸದ ಹೆಸರನ್ನು ಹೇಳಿರಿ.

## ೧೬. ಪರೋಕ್ಷಭೂತವೂ ಭವಿಷ್ಯದ್ರೂಪಗಳೂ

೪೬. ಗುರುವಾಗಿರುವ ಇ, ಉ, ಋ, ಏ, ಓಕಾರಗಳು ಆದಿಯಲ್ಲಿರುವ ಧಾತುಗಳಿಗೆ ಪರೋಕ್ಷಭೂತದಲ್ಲಿ ಆಮ್ ಪ್ರತ್ಯಯವು ಬರುತ್ತದೆ. ಅನೇಕ ಸ್ವರಗಳಿರುವ ಧಾತುಗಳಿಗೂ ಕಾಸ್, ದಯ್, ಅಯ್, ಆಸ್ - ಈ ಧಾತುಗಳಿಗೂ ಆಮ್ ಪ್ರತ್ಯಯವು ಬರುತ್ತದೆ. ಆಮ್ ಪ್ರತ್ಯಯದ ಮುಂದೆ ಕೃ, ಭೂ, ಅಸ್ - ಈ ಧಾತುಗಳಲ್ಲೊಂದರ ಪರೋಕ್ಷಭೂತರೂಪಗಳನ್ನು ಸಹಾಯಕಕ್ರಿಯೆಗಳಾಗಿ ಉಪಯೋಗಿಸುವರು.

ಉದಾ : इन्दाञ्चकार, इन्दाम्बभूव, इन्दामास ( ಒಡೆಯನಾಗಿ ಆಳಿದನು) ; इन्धाञ्चक्रे, इन्धाम्बभूव, इन्धामास (ಹೊಳೆದನು) ; अयाञ्चकार, अयाम्बभूव, अयामास (ಹೋದನು, 'ಈ' ಧಾತು) ; ईक्षाञ्चक्रे, ईक्षाम्बभूव, ईक्षामास (ನೋಡಿದನು) ; उक्षाञ्चकार, उक्षाम्बभूव, उक्षामास (ಚಿಮುಕಿಸಿದನು) ; ऊहाञ्चक्रे, ऊहाम्बभूव, ऊहामास (ಊಹಿಸಿದನು). ಹೀಗೆಯೇ अराञ्चकार (ಹೋದನು, ಋ ಧಾತು), एधाञ्चक्रे (ಬೆಳೆದನು), ओखाञ्चकार (ಒಣಗಿತು).

ವಿಶೇಷ : (೧) ಪರಸ್ಮೈಪದಕ್ಕೆ ಕೃಧಾತುವಿನ ಪರಸ್ಮೈಪದದ ಲಿಟ್, ಆತ್ಮನೇ ಪದಕ್ಕೆ ಕೃಧಾತುವಿನ ಆತ್ಮನೇಪದದ ಲಿಟ್ ರೂಪಗಳು ಬಂದಿವೆ. ಭೂ, ಅಸ್ ಧಾತುಗಳ ಪರಸ್ಮೈಪದಲಿಡ್ರೂಪವೇ ಪರಸ್ಮೈಪದ, ಆತ್ಮನೇಪದ - ಎರಡಕ್ಕೂ ಬಂದಿದೆ ಎಂಬುದನ್ನು ಲಕ್ಷಿಸಿರಿ.

(೨) ಇನ್ದಾಞ್ಚಕಾರ । ಇನ್ದ್ ಇಲ್ಲಿ ಇಕಾರವು ಸಂಯುಕ್ತಾಕ್ಷರದ ಹಿಂದಿರುವದರಿಂದ ಗುರು ; ಈಕ್ಷಾಞ್ಚಕ್ರೇ - ಇಲ್ಲಿ ಈ ದೀರ್ಘವಾದ್ದರಿಂದ ಗುರು. ಹೀಗೆ ಇ, ಉ, ಋಗಳು ಗುರುವಾಗಿರುವಲ್ಲೆಲ್ಲ ಈ ಭೂತರೂಪವೇ ಸಾಧಾರಣವಾಗಿ ಬರುತ್ತದೆ. ಆದರೆ ಋಚ್ಛ್‌ಧಾತುವಿಗೆ ಋ ಗುರುವಾಗಿದ್ದರೂ ಆನರ್ಚ (ಹೋದನು) ಎಂದೇ ರೂಪ ; ಅಂದರೆ ಆಮ್ ಪ್ರತ್ಯಯವಿಲ್ಲ.

೪೭. (ಊರ್ಣುಧಾತುವನ್ನು ಬಿಟ್ಟು ಉಳಿದ) ಅನೇಕ ಸ್ವರಗಳುಳ್ಳ ಧಾತುಗಳಿಗೂ[1], ಕಾಸ್ (ಕೆಮ್ಮು) ಮುಂತಾದ ಧಾತುಗಳಿಗೂ ಉದಾಹರಣೆಯಾಗಿ ಈ ಕೆಳಗೆ ಚಿನ್ತ್ ಧಾತುವಿನ ರೂಪಗಳನ್ನು ಎಲ್ಲಾ ಪುರುಷಗಳಲ್ಲಿಯೂ ಕೊಟ್ಟಿದೆ. ಎಲ್ಲಾ ಧಾತುಗಳಿಗೂ ಹೀಗೆಯೇ ಊಹಿಸಿಕೊಳ್ಳಬೇಕು.

चिन्त् - ಯೋಚಿಸು

| | | |
|---|---|---|
| चिन्तयामास | चिन्तयामासतुः | चिन्तयामासुः |
| चिन्तयामासिथ | चिन्तयामासथुः | चिन्तयामास |
| चिन्तयामास | चिन्तयामासिव | चिन्तयामासिम |

| | | |
|---|---|---|
| चिन्तयाम्बभूव | चिन्तयाम्बभूवतुः | चिन्तयाम्बभूवुः |
| चिन्तयाम्बभूविथ | चिन्तयाम्बभूवथुः | चिन्तयाम्बभूव |
| चिन्तयाम्बभूव | चिन्तयाम्बभूविव | चिन्तयाम्बभूविम |

| | | |
|---|---|---|
| चिन्तयाञ्चकार | चिन्तयाञ्चक्रतुः | चिन्तयाञ्चक्रुः |
| चिन्तयाञ्चकर्थ | चिन्तयाञ्चक्रथुः | चिन्तयाञ्चक्र |
| चिन्तयाञ्चकार / " चकर | चिन्तयाञ्चकृव | चिन्तयाञ्चकृम |

| | | |
|---|---|---|
| चिन्तयाञ्चक्रे | चिन्तयाञ्चक्राते | चिन्तयाञ्चक्रिरे |
| चिन्तयाञ्चकृषे | चिन्तयाञ्चक्राथे | चिन्तयाञ्चकृढ्वे |
| चिन्तयाञ्चक्रे | चिन्तयाञ्चकृवहे | चिन्तयाञ्चकृमहे |

1. ಪ್ರೇರಣಾರ್ಥ (ಪಾಠಯತಿ), ಸನ್ನನ್ತ (ಪಿಪಠಿಷತಿ) ; ಯಙ್ನನ್ತ (ಬೋಭವೀತಿ), 'ನಾಮಧಾತು' (ತಪಸ್ಯತಿ) - ಇವುಗಳೆಲ್ಲವನ್ನೂ ಇಲ್ಲಿ ಸೇರಿಸಿಕೊಳ್ಳಬೇಕು.

ವಿಶೇಷ : (೧) ಚಿನ್ತ್‌ಧಾತು ೧೦ನೆಯ ಗಣ ಉಭಯಪದಿ ; ಆದ್ದರಿಂದ ಕೃಧಾತುವಿನ ಎರಡು ರೂಪಗಳನ್ನೂ ಇಲ್ಲಿ ಅನುಪ್ರಯೋಗಮಾಡಿದೆ.

(೨) ಉಷ್ (ಸುಡು), ವಿದ್ (ತಿಳಿ), ಜಾಗೃ (ಎಚ್ಚರು), ದರಿದ್ರಾ (ಬಡವಾಗಿರು), ಭೀ (ಹೆದರು), ಹ್ರೀ (ನಾಚು), ಹು (ಹೋಮಮಾಡು) - ಇದಕ್ಕೆ ಪರೋಕ್ಷಭೂತದ ಎರಡು ರೂಪಗಳೂ ಉಂಟು. ಆದ್ದರಿಂದ :

१. उवोष ऊषतुः ऊषुः । ओषाञ्चकार ಇತ್ಯಾದಿ

२. विवेद विविदतुः विविदुः । विदाञ्चकार ಇತ್ಯಾದಿ

३. जजागार जजागरतुः जजागरुः । जागराञ्चकार ಇತ್ಯಾದಿ

४. ददरिद्रौ ददरिद्रतुः ददरिद्रुः । दरिद्राञ्चकार ಇತ್ಯಾದಿ

ಆದರೆ ಕಾಸಾಞ್ಚಕ್ರೇ, ದಯಾಞ್ಚಕ್ರೇ, ಅಯಾಞ್ಚಕ್ರೇ, ಆಸಾಞ್ಚಕ್ರೇ, - ಇವುಗಳಿಗೆ ಒಂದೊಂದೇ ರೂಪ.

ಪರೋಕ್ಷಭೂತದಲ್ಲಿರುವ ವಿಶೇಷಗಳನ್ನು ಮುಂದೆ ಅಲ್ಲಲ್ಲಿಯೇ ತಿಳಿಸಲಾಗುವದು.

## ಅಭ್ಯಾಸ ೨೬

1. ಈ ಕಥೆಯನ್ನು ಕನ್ನಡಿಸಿರಿ :

(उत्सङ्ग - ತೊಡೆ ; आहूय - ಕರೆದು)

स्वस्ति श्रीमन्महाराजाधिराजस्य भोजस्य प्रबन्धः कथ्यते । आदौ धाराराज्ये सिन्धुलसंज्ञो राजा चिरं प्रजाः पर्यपालयत् । तस्य वृद्धत्वे भोज इति पुत्रः समजनि (= संजज्ञे, समजायत) । स यदा पञ्चवार्षिकः, तदा पिता हि आत्मनो जरां ज्ञात्वा मुख्यामात्यान् आहूय अनुजं मुञ्जं महाबलम् आलोक्य पुत्रं च बालं वीक्ष्य विचारयामास - 'यदा अहं राज्यलक्ष्मीधारणसमर्थं सोदरम् अपहाय राज्यं पुत्राय प्रयच्छामि, तदा लोकापवादः । अथवा बालं मे पुत्रं मुञ्जो राज्यलोभाद् विषादिना मारयिष्यति । तदा दत्तमपि राज्यं वृथा, पुत्रहानिर्वंशोच्छेदश्च ।।

लोभः प्रतिष्ठा पापस्य प्रसूतिर्लोभ एव च ।
द्वेषक्रोधादिजनको लोभः पापस्य कारणम् ।।

लोभात् क्रोधः प्रभवति क्रोधाद् द्रोहः प्रवर्तते ।
लोभेन नरकं याति शास्त्रज्ञोऽपि विचक्षणः ।।
मातरं पितरं पुत्रं भ्रातरं वा सुहृत्तमम् ।
लोभाविष्टो नरो हन्ति स्वामिनं वा सहोदरम् ।।

इति विचार्य राज्यं मुञ्जाय दत्वा तदुत्सङ्गे भोजमात्मजं मुमोच ।।

೨. श्रीमन्महाराजाधिइराजस्य, सिन्धुलसंज्ञः, राज्यलक्ष्मीधारणसमर्थम् - ಇವುಗಳ ವಿಗ್ರಹವಾಕ್ಯ ಹೇಗೆ ?

೩. ಇಲ್ಲಿರುವ ಧಾತುಗಳ ಪರೋಕ್ಷಭೂತದ ಎಲ್ಲಾ ರೂಪಗಳನ್ನೂ ಹೇಳಿ :

जज्ञौ (ತಿಳಿದನು), ; जज्ञे (ಹುಟ್ಟಿದನು)[1] ; आजुहाव, आजुहुवे (ಕರೆದನು) ; आलुलोके (ಕಂಡನು) ; वीक्षाञ्चक्रे, वीक्षाम्बभूव, वीक्षामास (ಕಂಡನು) ; अपजहौ (ಬಿಟ್ಟನು) ; प्रददौ (ಕೊಟ್ಟನು) ; मारयामास (ಕೊಂದನು) ; प्रबभूव (ಹುಟ್ಟಿದನು) ; प्रववृते (ಉಂಟಾಯಿತು) ; ययौ (ಹೋದನು) ; जघान (ಕೊಂದನು).

೪೮. ಸಂಸ್ಕೃತಕ್ರಿಯಾಪದಗಳಿಗೆ ಎರಡು ಭವಿಷ್ಯದ್ರೂಪಗಳಿವೆ. ಇವುಗಳಲ್ಲಿ ಒಂದು ಸಾಮಾನ್ಯಭವಿಷ್ಯತ್ಕಾಲವನ್ನು ಹೇಳುತ್ತದೆ ; ಇನ್ನೊಂದು ದೂರದಲ್ಲಿ ಆದೀತೆಂಬುದನ್ನು ಹೇಳುವ ಭವಿಷ್ಯತ್ಕಾಲವು.

### ಸಾಮಾನ್ಯಭವಿಷ್ಯತ್ಕಾಲದ ಪ್ರತ್ಯಯಗಳು

| ಪರಸ್ಮೈಪದ | | | ಆತ್ಮನೇಪದ | | |
|---|---|---|---|---|---|
| स्यति | स्यतः | स्यन्ति | स्यते | स्येते | स्यन्ते |
| स्यसि | स्यथः | स्यथ | स्यसे | स्येथे | स्यध्वे |
| स्यामि | स्यावः | स्यामः | स्ये | स्यावहे | स्यामहे |

೧. ಇದು ಜನೀ ಪ್ರಾದುರ್ಭಾವೇ (ಹುಟ್ಟು) ಎಂಬ ೪ನೆಯ ಗಣದ ಧಾತುವಿನ ಪರೋಕ್ಷಭೂತ. 'ಜ್ಞಾ' ಅವಬೋಧನೇ (ತಿಳಿ) ಎಂಬ ೯ನೆಯ ಗಣದ ಧಾತುವೂ ಉಭಯ ಪದಿ ; ಆದರೆ ಸಂಜ್ಞಾ (ತಿಳಿ), ಅವಜ್ಞಾ (ಅಲ್ಲಗಳೆ), ಪ್ರಜ್ಞಾ (ಅರಿತುಕೊ), ಪ್ರತಿಜ್ಞಾ (ಪ್ರತಿಜ್ಞೆ ಮಾಡಿ ಹೇಳು) - ಹೀಗೆ ಉಪಸರ್ಗಗಳೊಡನೆ ಇರುವಾಗ ಯಾವಾಗಲೂ ಆತ್ಮನೇಪದಿಯೇ.

ಈ ಪ್ರತ್ಯಯಗಳು ಸೇರುವ ಮುಂಚೆ ಸೇಟ್ ಧಾತುಗಳಿಗೆ ಇಕಾರಾಗಮ, ಅನಿಟ್ ಧಾತುಗಳಿಗೆ ಇಕಾರಾಗಮವಿಲ್ಲ. ವೇಟ್ ಧಾತುಗಳಿಗೆ ವಿಕಲ್ಪದಿಂದ ಇಕಾರಾಗಮ. (ಸೇಟ್, ಅನಿಟ್, ವೇಟ್ - ವಿಷಯದಲ್ಲಿ ಪರಿಶಿಷ್ಟವನ್ನು ನೋಡಿ.)

भू - ಆಗು, ಇರು (1) | दा - ಕೊಡು (1)

| | | | | | |
|---|---|---|---|---|---|
| भविष्यति | भविष्यतः | भविष्यन्ति | दास्यते | दास्येते | दास्यन्ते |
| भविष्यसि | भविष्यथः | भविष्यथ | दास्यसे | दास्येथे | दास्यध्वे |
| भविष्यामि | भविष्यावः | भविष्यामः | दास्ये | दास्यावहे | दास्यामहे |

ವಿಶೇಷ : ಇಲ್ಲಿ ಭೂ ಧಾತು ಸೇಟ್ ; ಆದ್ದರಿಂದ ಇಕಾರಾಗಮ. ಪ್ರಬಲಪ್ರತ್ಯಯವು ಬಂದಿರುವದರಿಂದ ಊಕಾರಕ್ಕೆ ಗುಣ ; ಅವಾದೇಶವು ಬಂದು ಭವ್-ಇ-ಷ್ಯತಿ ಆಯಿತು. ಇಉಋುಎಓಐಔಹಯವರಲ - ಇವುಗಳ ಮುಂದೆಯೂ ಕವರ್ಗದ ಮುಂದೆಯೂ ಇರುವ ಆದೇಶಾವಯವವಾದ ಅಥವಾ ಪ್ರತ್ಯಯಾವಯವವಾದ ಸಕಾರಕ್ಕೆ ಷಕಾರಾದೇಶ. ಆದ್ದರಿಂದ 'ಭವಿಷ್ಯತಿ' ಎಂದಾಯಿತು. ದಾ ಎಂಬುದು ಅನಿಟ್ ಆದ್ದರಿಂದ ಇಕಾರಾಗಮವಿಲ್ಲ. ಪಾ (ಕುಡಿ) ಎಂಬ ಧಾತುವಿಗೂ ಹೀಗೆಯೇ.

कृ - ಮಾಡು

| | | | | | |
|---|---|---|---|---|---|
| करिष्यति | करिष्यतः | करिष्यन्ति | करिष्यते | करिष्येते | करिष्यन्ते |
| करिष्यसि | करिष्यथः | करिष्यथ | करिष्यसे | करिष्येथे | करिष्यध्वे |
| करिष्यामि | करिष्यावः | करिष्यामः | करिष्ये | करिष्यावहे | करिष्यामहे |

ವಿಶೇಷ : ಋಕಾರಾಂತ ಧಾತುಗಳೂ ಹನ್ ಗಮ್ ಧಾತುಗಳೂ ಅನಿಟ್ ಆಗಿದ್ದರೂ ಇಕಾರಾಗಮವುಂಟು. ಹನಿಷ್ಯತಿ, ಗಮಿಷ್ಯತಿ ॥

वस् - ವಾಸಮಾಡು (೧) | वस् - ಮುಚ್ಚು (೨)

| | | | | | |
|---|---|---|---|---|---|
| वत्स्यति | वत्स्यतः | वत्स्यन्ति | वसिष्यते | वसिष्येते | वसिष्यन्ते |
| वत्स्यसि | वत्स्यथः | वत्स्यथ | वसिष्यसे | वसिष्येथे | वसिष्यध्वे |
| वत्स्यामि | वत्स्यावः | वत्स्यामः | वसिष्ये | वसिष्यावहे | वसिष्यामहे |

ವಿಶೇಷ : ಸಕಾರಾದಿಯಾದ ಆರ್ಧಧಾತುಕವು ಪರವಾದರೆ ಧಾತುವಿನ ಕೊನೆಯಲ್ಲಿರುವ ಸಕಾರಕ್ಕೆ ತಕಾರಾದೇಶವು ಬರುವದು. ಎರಡನೆಯ ಗಣದ ವಸ್ ಧಾತುವಿಗೆ ಇಕಾರಾಗಮವು ಬಂದಿರುವದರಿಂದ ತಕಾರಾದೇಶವಿಲ್ಲ.

೪೯. ಅನದ್ಯತನಭವಿಷ್ಯತ್ಕಾಲದ ಪ್ರತ್ಯಯಗಳಿವು :

| ಪರಸ್ಮೈಪದ | | | ಆತ್ಮನೇಪದ | | |
|---|---|---|---|---|---|
| ता | तारौ | तारः | ता | तारौ | तारः |
| तासि | तास्थः | तास्थ | तासे | तासाथे | ताध्वे |
| तास्मि | तास्वः | तास्मः | ताहे | तास्वहे | तास्महे |

ಈ ಪ್ರತ್ಯಯಗಳು ಸೇರುವಾಗಲೂ ಸೇಟ್, ವೇಟ್, ಅನಿಟ್ - ಎಂಬ ಭೇದಗಳನ್ನು ಲಕ್ಷ್ಯದಲ್ಲಿಡಬೇಕಾಗುವದು. ಇಲ್ಲಿಯೂ ಸಾಮಾನ್ಯಭವಿಷ್ಯತ್ಕಾಲದಂತೆಯೇ ಅಂತ್ಯಸ್ವರಕ್ಕೂ ಉಪಾಂತ್ಯಹ್ರಸ್ವಸ್ವರಗಳಿಗೂ ಗುಣವಾಗುತ್ತದೆ.

कृ - ಮಾಡು(೮)

| ಪರಸ್ಮೈಪದ | | | ಆತ್ಮನೇಪದ | | |
|---|---|---|---|---|---|
| कर्ता | कर्तारौ | कर्तारः | कर्ता | कर्तारौ | कर्तारः |
| कर्तासि | कर्तास्थः | कर्तास्थ | कर्तासे | कर्तासाथे | कर्ताध्वे |
| कर्तास्मि | कर्तास्वः | कर्तास्मः | कर्ताहे | कर्तास्वहे | कर्तास्महे |

ಹೀಗೆಯೇ नेतास्मि, नेताहे ; पतितास्मि, ईक्षिताहे ಇತ್ಯಾದಿ.

೫೦. ಇಷ್ (೬) - ಇಚ್ಛಿಸು. ಇದಕ್ಕೆ ಪರಸ್ಮೈಪದದಲ್ಲಿಯೇ ಎರಡು ರೂಪಗಳು.

| | | | | | |
|---|---|---|---|---|---|
| एषिता | एषितारौ | एषितारः | एष्टा | एष्टारौ | एष्टारः |
| एषितासि | एषितास्थः | एषितास्थ | एष्टासि | एष्टास्थः | एष्टास्थ |
| एषितास्मि | एषितास्वः | एषितास्मः | एष्टास्मि | एष्टास्वः | एष्टास्मः |

ಇದರಂತೆ सहिता - सोढा (೧) लोभिता - लोब्धा (೧-೪) ; रेषिता - रेष्टा (೧-೪) ಮುಂತಾದ ಧಾತುಗಳಿಗೆ ಆರ್ಧಧಾತುಕಪ್ರತ್ಯಯವು ಪರವಾದಾಗ ವಿಕಲ್ಪದಿಂದ ಇಕಾರಾಗಮ.

ವಿಶೇಷ : ಕ್ಲೃಪ್‌ಧಾತುವಿಗೆ ಭವಿಷ್ಯತ್ಕಾಲಗಳ ರೂಪದಲ್ಲಿ ಪರಸ್ಮೈಪದವೂ ಬರುವದುಂಟು ; ಆಗ ಅದಕ್ಕೆ ಇಕಾರಾಗಮವಿಲ್ಲ. ಉದಾ :

कल्प्स्यति कल्प्स्यतः कल्प्स्यन्ति । कल्प्स्यते कल्प्स्येते कल्प्स्यन्ते । कल्पिष्यते कल्पिष्येते कल्पिष्यन्ते ॥

ಭವಿಷ್ಯತ್ತಿನ ವಿಶೇಷಗಳನ್ನು ಮುಂದೆ ಅಲ್ಲಲ್ಲಿ ತಿಳಿಸುವೆವು.

## ಅಭ್ಯಾಸ ೨೭

೧. ಈ ಕೆಳಗಿನ ಶ್ಲೋಕಗಳಲ್ಲಿರುವ ಭವಿಷ್ಯದ್ರೂಪಗಳ ಧಾತುಗಳನ್ನು ತಿಳಿದು ಎಲ್ಲಾ ಪುರುಷಗಳಲ್ಲಿಯೂ ರೂಪಗಳನ್ನು ಬರೆಯಿರಿ. ಇವುಗಳಲ್ಲಿ ಅಸುರರ ಮನೋಭಾವಗಳನ್ನು ವರ್ಣಿಸಿದೆ. ಅರ್ಥವನ್ನು ಊಹಿಸಿರಿ.

इदमस्तीदमपि मे भविष्यति पुनर्धनम् ॥१॥
असौ मया हतः शत्रुर्हनिष्ये चापरानपि ।
ईश्वरोऽहमहं भोगी सिद्धोऽहं बलवान्सुखी ॥२॥
आढ्योऽभिजनवानस्मि कोऽन्योस्ति सदृशो मय ।
यक्ष्ये दास्यामि मोदिष्य इत्यज्ञानविमोहिताः ॥३॥

2. ಈ ಕೆಳಗಿನ ಶ್ಲೋಕಗಳಲ್ಲಿ ಹನುಮಂತನನ್ನು ಕುರಿತ ರಾಮನ ವಾಕ್ಯಗಳಿವೆ. ಇಲ್ಲಿರುವ ಅನದ್ಯತನಭವಿಷ್ಯತ್ಕಾಲದ ಕ್ರಿಯಾಪದಗಳ ರೂಪಗಳನ್ನು ಪೂರ ಬರೆಯಿರಿ :

[गाहितासे - ಪ್ರವೇಶಿಸುವೆ ; अधित्यकाः - ಪರ್ವತದ ಮೇಲುಭಾಗಗಳು ; व्युत्क्रान्तवर्त्मनः - ದಾರಿಯನ್ನು ದಾಟಿರುವ ; सहज्योत्स्नाकुमुद्वतीः - ಬೆಳುದಿಂಗಳೊಡನೆ ಇರುವ ನೈದಿಲೆಗಳಿರುವ.]

ततो रामो हनूमन्तमुक्तवान् हृष्टमानसम् ।
अयोध्यां श्वः प्रयातासि कपे भरतपालिताम् ॥१॥
गाहितासे नभो भूयः स्फुटन्मेघघटावलि ।
ईक्षितासेऽम्भसां पत्युः पयः शिशिरशीकरम् ॥२॥
सेवितासे प्लवङ्ग त्वं महेन्द्राद्रेरधित्यकाः ।
व्युत्क्रान्तवर्त्मनो भानोः सहज्योत्स्नाकुमुद्वतिः ॥३॥

# १७. मित्रभेदः (अनुवृत्तः)

५१.दमनकोऽपि तं प्रणम्य सञ्जीवकसकाशं प्रस्थितः सहर्षम् अचिन्तयत् 'अहो, प्रसादसंमुखो नः स्वामी वचनवशगश्च संवृत्तः । तन्नास्ति धन्यतरो मम ॥'

अथ सञ्जीवकसकाशम् आसाद्य सप्रश्रयम् उवाच - 'भो मित्र, प्रार्थितोऽसौ मया भवदर्थे स्वामी अभयप्रदानम् । तद् विश्रब्धं गम्यताम् ।'[1] परं त्वया राजप्रसादम् आसाद्य मया सह समयधर्मेण वर्तितव्यम् । न गर्वमासाद्य स्वप्रभुतया चिचरणीयम् । अहमपि तव सङ्केतेन सर्वां राज्यधुरम् अमात्यपदवीमाश्रित्य उद्धरिष्यामि । एवं कृते द्वयोरप्यावयोः राज्यलक्ष्मीर्भोग्या भविष्यति ॥

सञ्जीवक आह - 'भद्र, एवमैतत् । यद् भवता अभिहितम् तदेव मया कर्तव्यम्' इति ॥

ದಮನಕನೂ ಆ (ಸಿಂಹವನ್ನು) ನಮಸ್ಕರಿಸಿ ಸಂಜೀವಕನ ಹತ್ತಿರಕ್ಕೆ (ಹೋಗಲು) ಹೊರಟು ಹರ್ಷದೊಡನೆ (ಹೀಗೆಂದು) ಯೋಚಿಸಿಕೊಂಡಿತು : 'ಆಹಾ ! ನಮ್ಮ ಧಣಿಯು (ಪ್ರಸಾದಕ್ಕೆ ಮುಮ್ಮೊಗನಾದಂತೆ =) ಒಲಿಯುವ ಹಾಗೆ (ಇದಾನೆ), (ಮಾತಿಗೆ ವಶನಾಗುವವ =) ಹೇಳಿದಂತೆ ಕೇಳುವವನೂ ಆಗಿರುತ್ತಾನೆ. ಆದ್ದರಿಂದ (ನನಗೆ =) ನನಗಿಂತ ಧನ್ಯನು (ಇನ್ನು) ಯಾರೂ ಇರುವದಿಲ್ಲ !'

ಆ ಬಳಿಕ ಸಂಜೀವಕನ (ಸಾಮೀಪ್ಯವನ್ನು ಹೊಂದಿ =) ಬಳಿಗೆ ಬಂದು ವಿನಯದಿಂದ ಇಂತೆಂದಿತು : 'ಅಯ್ಯ ಮಿತ್ರ, (ಆ ಸ್ವಾಮಿಯು ನಿನ್ನ ಪ್ರಯೋಜನಕ್ಕಾಗಿ ಅಭಯಪ್ರದಾನವನ್ನು ಪ್ರಾರ್ಥಿಸಲ್ಪಟ್ಟನು =) ಆ ಧಣಿಯನ್ನು ಅಭಯಪ್ರದಾನ ಮಾಡಬೇಕೆಂದು ನಿನ್ನ ಪರವಾಗಿ ಬೇಡಿಕೊಂಡಿರುತ್ತೇನೆ. ಆದ್ದರಿಂದ (ವಿಶ್ವಾಸದಿಂದ =) ಏನೂ ಯೋಚಿಸದೆ (ಹೋಗಲ್ಪಡಲಿ =) ಹೊರಡು. ಆದರೆ ರಾಜಪ್ರಸಾದವನ್ನು ಹೊಂದಿ(ದ ಮೇಲೆ), (ನಿನ್ನಿಂದ ನನ್ನೊಡನೆ ಸಮಯಧರ್ಮದಿಂದ ನಡೆದು ಕೊಳ್ಳೋಣವಾಗಬೇಕು =) ನೀನು ನಾನು ಹೇಳುವ ಹಾಗೆ ನಡೆದುಕೊಳ್ಳಬೇಕು ; (ಗರ್ವವನ್ನು ಹೊಂದಿ =) ಹೆಮ್ಮೆಯಿಂದ (ತನ್ನ ಪ್ರಭುತ್ವದಿಂದ ನಡೆಯಲ್ಪಡ ತಕ್ಕದ್ದಲ್ಲ =) ಸ್ವತಂತ್ರನಾಗಿ ನಡೆದುಕೊಳ್ಳಬಾರದು. ನಾನೂ (ನಿನ್ನ ಸಂಕೇತ

೧. ಮೂಲದಲ್ಲಿ ಇಲ್ಲಿ ಒಂದು 'ಇತಿ' ಹೆಚ್ಚಾಗಿದೆ ; ಅದನ್ನು ಬಿಟ್ಟುಬಿಟ್ಟಿದ್ದೇವೆ.

ದಿಂದ =) ನೀನು ಹೇಳುವಂತೆ, ರಾಜ್ಯಭಾರವನ್ನೆಲ್ಲ (ಅಮಾತ್ಯ ಸ್ಥಾನವನ್ನವ ಲಂಬಿಸಿ =) ಅಮಾತ್ಯಸ್ಥಾನದಲ್ಲಿದ್ದುಕೊಂಡು (ಉದ್ಧರಿಸುವೆನು =) ನಿರ್ವಹಿಸುವೆನು. (ಹೀಗೆ ಮಾಡಲ್ಪಟ್ಟರೆ =) ಹೀಗೆ ಮಾಡಿದರೆ ನಮ್ಮಿಬ್ಬರಿಗೂ (ರಾಜಲಕ್ಷ್ಮಿಯು ಭೋಗ್ಯವಾಗುವದು =) ನಾವಿಬ್ಬರೂ ರಾಜ್ಯಸಂಪತ್ತನ್ನು ಉಪಭೋಗಿಸುತ್ತಿರಬಹುದಾಗುವದು.'

ಸಂಜೀವಕನು 'ಅಪ್ಪ, (ಇದು ಹೀಗೆಯೇ =) ಹಾಗೇ ಸರಿ. (ಯಾವದು ನಿನ್ನಿಂದ ಹೇಳಲ್ಪಟ್ಟಿತೋ ಅದೇ ನನ್ನಿಂದ ಮಾಡಲ್ಪಡತಕ್ಕದ್ದು =) ನೀನು ಹೇಳಿದಂತೆಯೇ ಮಾಡುವೆನು'.

## ಚಿಂತನ

೧. **ದಮನಕೋಽಪಿ ।** ಇಲ್ಲಿ 'ಅಪಿ' ಶಬ್ದವು 'ಇತ್ತ ದಮನಕನು' ಎಂದು ಕಥೆಯನ್ನು ಮುಂದುವರಿಸುವದಕ್ಕಾಗಿ ಪ್ರಯುಕ್ತವಾಗಿದೆ.

೨. **ಪ್ರಣಮ್ಯ ।** ಪ್ರಣತ್ಯ ಎಂದೂ ರೂಪವುಂಟು. ಉಪಸರ್ಗವಿಲ್ಲದಿದ್ದರೆ ನತ್ವಾ ; ತ್ವಾಪ್ರತ್ಯಯವು ಸೇರಿದರೆ ಆಗುವ ಭೂತಕೃದಂತಾವ್ಯಯಗಳಿಗೆ ಧಾತುವಿಗೆ ಉಪಸರ್ಗವು ಸೇರಿದಾಗ ತ್ವಾಕ್ಕೆ ಬದಲು 'ಯ' ಸೇರುವದು ; (ಸಂಸ್ಕೃತವ್ಯಾಕರಣದಲ್ಲಿ ಈ ಪ್ರತ್ಯಯಗಳನ್ನು ಕ್ರಮವಾಗಿ ಕ್ತ್ವಾನ್ತ, ಲ್ಯಬನ್ತಗಳೆನ್ನುವರು.) ಧಾತುವು ಹ್ರಸ್ವಸ್ವರಾಂತವಾಗಿದ್ದರೆ ಯಕ್ಕೆ ಬದಲು ತ್ಯ ಬರುತ್ತದೆ. ಧಾತುಗಳಿಗೆ ಕೃನ್ನಾಮಗಳ ಮತ್ತು ಕ್ತ್ವಾನ್ತಲ್ಯಬನ್ತಗಳ ರೂಪಗಳನ್ನು ನೋಡಿ ನೆನಪಿಡುತ್ತಾ ಹೋಗಬೇಕು. ಉದಾಹರಣೆಗೆ :

ಜ್ಞಾತ್ವಾ, ವಿಜ್ಞಾಯ ; ದತ್ತ್ವಾ, ಆದಾಯ ; ಕೃತ್ವಾ, ಸಂಸ್ಕೃತ್ಯ ; ಇತ್ವಾ, ಪ್ರೇತ್ಯ ; ಭೂತ್ವಾ ; ಅನುಭೂಯ ; ಜಿತ್ವಾ, ಪರಾಜಿತ್ಯ - ಇವು ಕ್ತ್ವಾಂತಲ್ಯಬನ್ತಗಳು ; ಜ್ಞಾನಮ್, ದಾನಮ್, ಕರಣಮ್, ಅಯನಮ್, ಭಾವನಮ್, ಜಯಃ - ಇವು ಕೃನ್ನಾಮಗಳು.

೩. **ಸಞ್ಜೀವಕಸಕಾಶಮ್** 'ಸಞ್ಜೀವಕಂ ಪ್ರತಿ ।' 'ಸಞ್ಜೀವಕಮ್' ಎಂದಿಷ್ಟೇ ಆದರೂ ಆದೀತು. ಹಿಂದಿನ ಪಾಠದಲ್ಲಿ 'ಸ್ವಾಮಿನಃ ಸಕಾಶಾದ್ ಅಭಯದಕ್ಷಿಣಾ' ಎಂಬಲ್ಲಿ ಪಂಚಮಿಯೆಂಬುದನ್ನು ತೋರಿಸುವದಕ್ಕೆ ಇದೇ ಶಬ್ದವನ್ನುಪಯೋಗಿಸಿರುವದನ್ನು ನೋಡಿ.

೪. **ಪ್ರಸಾದಸಂಮುಖಃ ।** ಇದರ ವಿರುದ್ಧಾರ್ಥದ ಮಾತು 'ಪ್ರಸಾದಪರಾಙ್ಮುಖಃ ;

೫. **ಧನ್ಯತರೋ ಮಮ ।** ಪಂಚಮೀವಿಭಕ್ತಿಗೆ ಬದಲು ಇಂಥ ವಾಕ್ಯದಲ್ಲಿ ಷಷ್ಠಿಯನ್ನೂ ಉಪಯೋಗಿಸುವದುಂಟು.

೬. **ಸಞ್ಜೀವಕಸಕಾಶಮಾಸಾದ್ಯ** ಸಞ್ಜೀವಕಂ ಪ್ರಾಪ್ಯ ।

೭. **ಭವದರ್ಥೇ ।** (ನಿನ್ನ ಪ್ರಯೋಜನದಲ್ಲಿ) ನಿನಗೋಸ್ಕರ, ನಿನ್ನ ಪರವಾಗಿ ಹಿಂದಿನ ಪಾಠದಲ್ಲಿ 'ಮದರ್ಥೇ ; ಎಂದಿರುವದನ್ನು ನೋಡಿ.

೮. **ಮಯಾ ಸಹ ಸಮಯಧರ್ಮೇಣ ವರ್ತಿತವ್ಯಮ್ ।** ವಿಧ್ಯಾದ್ಯರ್ಥಕ ಕೃದಂತವಿದು

(should conduct yourself). 'ಹೀಗಿದ್ದರೆ ಒಳ್ಳೆಯದು' ಎಂದರ್ಥ. ಮುಂದಿನ ವಾಕ್ಯದಲ್ಲಿ 'ನ ವಿಚರಣೀಯಮ್' (ನಡೆದುಕೊಳ್ಳಬಾರದು) ಎಂದಿರುವ ಪ್ರಯೋಗವನ್ನು ನೋಡಿ.

೯. ಏವಂ ಕೃತೇ । ತಥಾನುಷ್ಠಿತೇ ಎಂಬರ್ಥದ ವಾಕ್ಯವಿದು.

೧೦. ರಾಜ್ಯಧುರಮ್ । ಋಕ್, ಪೂಃ, ಅಪ್ ; ಧೂಃ, ಪಥಿನ್ - ಸಮಾಸಗಳ ಕೊನೆಯಲ್ಲಿ ಇರುವ ಈ ಶಬ್ದಗಳಿಗೆ ಅಪ್ರತ್ಯಯವು ಬರಬೇಕು. ಆದ್ದರಿಂದ 'ರಾಜ್ಯಧುರಾಮ್' ಎಂದು ಆಗಬೇಕಾಗಿತ್ತು ; ಸಮಾಸಾಂತವಿಧಿಯು ನಿತ್ಯವಲ್ಲ ಎಂಬ ನಿಯಮದಿಂದ ಈಗ ಇರುವ 'ರಾಜ್ಯಧುರಮ್' ಎಂಬ ಋಕಾರಾಂತಪ್ರಯೋಗವನ್ನು ಹೇಗೋ ಒಪ್ಪಬೇಕಾಗುತ್ತದೆ.

೧೧. ಭೋಗ್ಯಾ ಭವಿಷ್ಯತಿ । ಭೋಗ್ಯವಾದೀತು ಎಂದು ಕನ್ನಡಿಸಬಹುದು. ಹೀಗೆಯೇ ತೇನ ಕಿಂ ಭವಿಷ್ಯತಿ ? ಅದರಿಂದೇನಾದೀತು ? ಲಕ್ಷ್ಮೀ ಶಬ್ದಕ್ಕೆ ಪ್ರಥಮೈಕವಚನದಲ್ಲಿ ವಿಸರ್ಗವೂ ಇರುತ್ತದೆ : 'ಲಕ್ಷ್ಮೀಃ' ।

೧೨. ತದೇವ ಮಯಾ ಕರ್ತವ್ಯಮ್ । 'ತಥೈವ ಕರಿಷ್ಯಾಮಿ' ಎಂಬರ್ಥದಲ್ಲಿ ಪ್ರಯೋಗಿಸಿದೆ.

## ಅಭ್ಯಾಸ ೨೮

೨೯ನೆಯ ಅಭ್ಯಾಸದಲ್ಲಿರುವ ಕ್ರಿಯಾಪದಗಳಿಗೆ ಕ್ತ್ವಾನ್ತಲ್ಯಬನ್ತಾವ್ಯಯಗಳ ರೂಪಗಳನ್ನು ಊಹಿಸಿರಿ.

ಉದಾ : 'ಕಥಯಿತ್ವಾ', 'ಪರಿಪಾಲ್ಯ', 'ಸಂಜನ್ಯ' - ಇತ್ಯಾದಿ ।

५२. एवमभिहिते दमनकस्तमादाय पिङ्गलकसकाशमगमत् ( अगच्छत्, जगाम) । आह च 'देव, एष मया नीतः स सञ्जीवकः । अधुना देवः प्रमाणम् ।।'

सञ्जीवकोऽपि तं सादरं प्रणम्य अग्रतः सविनयं स्थितः । पिङ्गलकोऽपि तस्य पीनायतककुद्मतो नखकुलिशालङ्कृतं दक्षिणपाणिम् उपरि दत्वा मानपुरःसरम् उवाच 'अपि शिवं भवतः ? कुतस्त्वम् अस्मिन् वने विजने समायातोऽसि ?'

तेनापि आत्मवृत्तान्तः कथितः । यथा वर्धमानेन सह वियोगः संजातः, तथा सर्वं निवेदितम् ।।

तच्छ्रुत्वा पिङ्गलकः सादरतरं तमुवाच - 'वयस्य, न भेतव्यम् । मद्भुजपञ्जर-परिरक्षितेन यथेच्छं त्वया अधुना वर्तितव्यम् । अन्यच्च नित्यं मत्समीपवर्तिना भाव्यम् । यतः कारणात् बह्वपायं रौद्रसत्त्वनिषेवितं वनं गुरूणामपि सत्त्वानाम् असेव्यम्, कुतः शष्पभोजिनम् ?'

एवमुक्त्वा सकलमृगपरिवृतो यमुनाकच्छम् अवतीर्य उदकग्रहणं कृत्वा स्वेच्छया तदेव वनं प्रविष्टः । ततश्च करटकदमनकनिक्षिप्तराज्यभारः सञ्जीवकेन सह सुभाषितगोष्ठीम् अनुभवन्नास्ते ॥

(ಹೀಗೆ ಹೇಳಲ್ಪಡಲು = ಸಂಜೀವಕನು) ಹೀಗೆನ್ನಲು, ದಮನಕನು ಅದನ್ನು (ತೆಗೆದುಕೊಂಡು =) ಕರೆದುಕೊಂಡು ಪಿಂಗಲಕನ ಹತ್ತಿರಕ್ಕೆ ಹೋಯಿತು. ಮತ್ತು (ಹೀಗೆಂದು) ಹೇಳಿತು : 'ಬುದ್ಧಿ, (ಆ ಈ ಸಂಜೀವಕನು ನನ್ನಿಂದ ತರಲ್ಪಟ್ಟಿತು =) ಇಗೋ, ಆ ಸಂಜೀವಕನನ್ನು ಕರೆತಂದಿದ್ದೇನೆ. (ಈಗ ದೇವನು ಪ್ರಮಾಣವು =) ಇನ್ನು ಬುದ್ಧಿಯವರು ತಿಳಿದಂತೆ ಮಾಡಬಹುದು.

ಸಂಜೀವಕನೂ ಆ (ಸಿಂಹವನ್ನು) ಆದರದಿಂದ ನಮಸ್ಕರಿಸಿ ಮುಂದುಗಡೆ ವಿನಯದಿಂದ ನಿಂತುಕೊಂಡಿತು. ಪಿಂಗಲಕನೂ ಆ ದಪ್ಪನಾದ ಅಗಲವಾದ ಹಿಳಿಲುಳ್ಳ, (ಸಂಜೀವಕನ) ಮೇಲೆ ಉಗುರುಗಳೆಂಬ ವಜ್ರಾಯುಧದಿಂದ ಅಲಂಕೃತವಾದ =) ಚೂಪಾದ ಉಗುರುಗಳುಳ್ಳ ಬಲಗೈಯನ್ನು ಇಟ್ಟು ಗೌರವಪೂರ್ವಕವಾಗಿ ನಿನಗೆ ಕ್ಷೇಮವೆ ? ಜನರಿಲ್ಲದ ಈ (ವನದಲ್ಲಿ =) ಕಾಡಿಗೆ ಏಕೆ ಬಂದಿದ್ದೀಯೆ ?' ಎಂದಿತು.

(ಅದರಿಂದಲೂ ತನ್ನ ವೃತ್ತಾಂತವು ಹೇಳಲ್ಪಟ್ಟಿತು =) ಅದೂ ತನ್ನ ವೃತ್ತಾಂತವನ್ನು ಹೇಳಿತು ; (ವರ್ಧಮಾನನೊಡನೆ ಹೇಗೆ ವಿಯೋಗವಾಯಿತೋ ಹಾಗೆ ಅರಿಕೆ ಮಾಡಲ್ಪಟ್ಟಿತು =) ವರ್ಧಮಾನನಿಂದ ಅಗಲಿದ ಪ್ರಕಾರವೆಲ್ಲವನ್ನೂ ತಿಳಿಸಿತು.

ಅದನ್ನು ಕೇಳಿ ಪಿಂಗಲಕನು (ಬಹಳ ಆದರದಿಂದ ಕೂಡಿರುವದಾಗಿ =) ಬಹಳ ಆದರದಿಂದ 'ಗೆಳೆಯ, (ಹೆದರಬಾರದು =) ಅಂಜದಿರು. (ನನ್ನ ಭುಜಪಂಜರದಲ್ಲಿ ರಕ್ಷಿತನಾದ ನಿನ್ನಿಂದ =) ನನ್ನ ಬಾಹುಬಲದಿಂದ ರಕ್ಷಿತನಾಗಿ ನೀನು (ಹೇಗೆ ಇಚ್ಛೆಯೋ ಹಾಗೆ ಈಗ ಇರಬೇಕು =) ಮನಬಂದಂತೆ ಇರಬಹುದು. ಮತ್ತೊಂದೇನೆಂದರೆ, ನಿತ್ಯವೂ ನನ್ನ (ಸಮೀಪವರ್ತಿಯಾದವನಿಂದ ಇರೋಣಾಗಬೇಕು =) ಹತ್ತಿರದಲ್ಲಿಯೇ ಇರಬೇಕು. (ಯಾವ ಕಾರಣದಿಂದ ಎಂದರೆ =) ಏಕೆಂದರೆ ಬಹಳ ಅಪಾಯಗಳುಳ್ಳ (ಭಯಂಕರವಾದ ಪ್ರಾಣಿಗಳಿಂದ ಸೇವಿತವಾಗಿರುವ =) ಕ್ರೂರಪ್ರಾಣಿಗಳಿರುವ (ಈ ಕಾಡು ದೊಡ್ಡ ಪ್ರಾಣಿಗಳಿಗೂ (ಸೇವ್ಯವಲ್ಲ =) ವಾಸಮಾಡುವದಕ್ಕೆ ಕಷ್ಟವಾದದ್ದು. (ಹುಲ್ಲುಮೇಯುವವರಿಗೆ ಎಲ್ಲಿಂದ ? =) ಇನ್ನು ಹುಲ್ಲುಮೇಯುವ (ನಿಮ್ಮಂಥ ವರಿಗೆ ಹೇಗೆ (ವಾಸಯೋಗ್ಯವಾದೀತು ?)

ಹೀಗೆಂದು ಹೇಳಿ (ಎಲ್ಲಾ ಮೃಗಗಳಿಂದ ಸುತ್ತುವರಿಯಲ್ಪಟ್ಟು =) ಎಲ್ಲಾ ಮೃಗಗಳೊಡನೆ, ಯಮುನೆಯ ದಡವನ್ನು ಇಳಿದು (ನೀರಿನ ಗ್ರಹಣವನ್ನು ಮಾಡಿ =) ನೀರನ್ನು ಕುಡಿದು (ತನ್ನ ಇಚ್ಛೆಯಿಂದ =) ಧಾರಾಳವಾಗಿ ಅದೇ ವನವನ್ನು ಪ್ರವೇಶಿಸಿತು. ಮತ್ತು ಆ ಬಳಿಕ (ಕರಟಕದಮನಕರಲ್ಲಿ ಇಟ್ಟ ರಾಜ್ಯಭಾರವುಳ್ಳದ್ದಾಗಿ =) ಕರಟಕದಮನಕರುಗಳಿಗೆ ರಾಜ್ಯಭಾರವನ್ನು ಒಪ್ಪಿಸಿ ಸಂಜೀವಕನೊಡನೆ (ಸುಭಾಷಿತದ ಸಂಭಾಷಣೆಯನ್ನು =) ಸರಸಸಲ್ಲಾಪವನ್ನು (ಅನುಭವಿಸುತ್ತಾ =) ಮಾಡುತ್ತಾ ಇದ್ದುಕೊಂಡಿತ್ತು.

## ಚಿಂತನ

೧. ಏವಮಭಿಹಿತೇ । ಹೀಗೆನ್ನಲಾಗಿ 'ಆಮೇಲೆ' ಎಂದು ಕಥೆಯನ್ನು ಮುಂದುವರಿಸುವದಕ್ಕೆ ಬಳಸಿದ ವಾಕ್ಯವಿದು. ಇಂಥ ಸಂದರ್ಭದಲ್ಲಿ 'ಸಞ್ಜೀವಕೇನ' ಮುಂತಾದ ಕರ್ತೃಪದವನ್ನು ಸುಲಭವಾಗಿ ಊಹಿಸಬಹುದೆಂದು ಬಿಟ್ಟುಬಿಟ್ಟಿರುತ್ತದೆ.

೨. ಏಷ ಮಯಾ ನೀತಃ ಸ ಸಞ್ಜೀವಕಃ । 'ಇಗೊ' ಎಂಬರ್ಥದಲ್ಲಿ 'ಏಷ' ಎಂಬ ಮಾತನ್ನು ಬಳಸುವರು. ಉದಾ : ಏಷೋಽಹಮಾಗತಃ - ಇಗೊ ಬಂದೆ.

೩. 'ಸಾದರಮ್' 'ಸವಿನಯಮ್' ಇವಕ್ಕೆ 'ಆದರೇಣ ಸಹ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ' ಎಂಬಂತೆ ವಿಗ್ರಹವನ್ನು ಹೇಳಬೇಕು. ಇದು ಅವ್ಯಯೀಭಾವ. ಆದರದಿಂದ ಎಂದು ಕನ್ನಡಿಸಿದರೆ ಸಾಕಾಗುವದು. ಹೋಲಿಕೆಯಿಲ್ಲದಾಗಲೂ 'ತರ' ಪ್ರತ್ಯಯವನ್ನು ಉಪಯೋಗಿಸುವರು ; ಆಗ ಬಹಳ ಎಂದು ಕನ್ನಡಿಸಿಕೊಳ್ಳಬೇಕು. **ಸಾದರತರಮ್** ಅತಿಶಯೇನ ಸಾದರಮ್ ।

೪. **ನಖಕುಲಿಶಾಲಙ್ಕೃತಮ್... ದತ್ತ್ವಾ** । ೩೨ನೆಯ ಖಂಡದಲ್ಲಿ ಇದೇ ವಾಕ್ಯವನ್ನುಪಯೋಗಿಸಿದೆ. ಇದು ತನ್ನ ಅನುಗ್ರಹವನ್ನು ಸೂಚಿಸುವ ರೀತಿ.

೫. **ಯಥಾ ವರ್ಧಮಾನೇನ...** । ಇಲ್ಲಿ ಸಂಜೀವಕನು ತನ್ನ ನಿಜವಾದ ವೃತ್ತಾಂತವನ್ನೇ ಹೇಳಿದ್ದರೂ ಪಿಂಗಲಕನು ದಮನಕನು ತನಗೆ ಸುಳ್ಳು ಹೇಳಿತೆಂದು ತಿಳಿಯಲಿಲ್ಲವೆಂಬುದನ್ನು ಕವಿ ಹೇಳುವದನ್ನು ಮರೆತಿದಾನೆ ; ಅಥವಾ ಮೊದಲು ಸಂಜೀವಕನು ಆತ್ಮರಕ್ಷಣೆಗೆ ಹಾಗೆ ತನ್ನ ವಿಷಯವನ್ನು ಜಂಭಕೊಚ್ಚಿಕೊಂಡಿರಬಹುದೆಂದು ಸಿಂಹವು ತಿಳಿದಿರಬಹುದು.

೬. **ಯಥೇಚ್ಛಮ್** । 'ಇಚ್ಛಾಮನತಿಕ್ರಮ್ಯ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ' ಎಂದು ವಿಗ್ರಹ. ಅವ್ಯಯೀಭಾವ.

೭. **ವರ್ತಿತವ್ಯಮ್** । ಇರಬೇಕು ಎಂದರ್ಥವಲ್ಲ, ಇರಬಹುದು ಎಂದರ್ಥ. ವಿಧ್ಯಾದ್ಯರ್ಥ (potential) ಕೃದಂತಕ್ಕೆ ಆದೀತು (can) ಆಗಬಹುದು (may) ಆಗಬೇಕು (should, ought, must) - ಎಂಬರ್ಥಗಳು ಸಂದರ್ಭಾನುಸಾರ ಆಗುತ್ತವೆ.

೮. ಅನ್ಯಚ್ಚ । 'ಅಪಿ ಚ', 'ಕಿಞ್ಚ', 'ಕಿಞ್ಚಾನ್ಯತ್' - ಇವನ್ನೆಲ್ಲ 'ಮತ್ತೊಂದು ಮಾತೇನೆಂದರೆ' ಎಂಬರ್ಥದಲ್ಲಿ ಬಳಸುವರು.

೯. ಯತಃ ಕಾರಣಾತ್ । ಯತ್ಕಾರಣಮ್, ಯಸ್ಮಾತ್ - ಎಂದೂ ಪ್ರಯೋಗಿಸಬಹುದು.

೧೦. ಬಹ್ವಪಾಯಮ್ । 'ಬಹವಃ ಅಪಾಯಾಃ ಯಸ್ಮಿನ್ ತತ್ ।' - ಇದೇ ಶಬ್ದವನ್ನು ೨೫ನೆಯ ಖಂಡದಲ್ಲಿ ಪ್ರಯೋಗಿಸಿದೆ.

೧೧. ಗುರೂಣಾಮಪಿ ಸತ್ತ್ವಾನಾಮ್ ಅಸೇವ್ಯಂ ಕುತಃ ಶಷ್ಪಭೋಜಿನಾಮ್ । ಇಲ್ಲಿರುವ ಕುತಃ ಎಂಬುದಕ್ಕೆ ಕಿಂ ಪುನಃ, ಕೈವ ಕಥಾ - (ಹೇಳತಕ್ಕದ್ದೇನು) ಎಂದೂ ಪ್ರಯೋಗಿಸಬಹುದು. 'ಗುರೂಣಾಮಪಿ ನ ಸೇವ್ಯಮ್, ಪ್ರಾಗೇವ ನ ಶಷ್ಪಭೋಜಿನಾಮ್' ಎಂದೂ ಪ್ರಯೋಗಿಸಬಹುದು.

೧೨. ಸುಭಾಷಿತಗೋಷ್ಠೀ । ನೀತಿಯ ಮಾತುಗಳನ್ನಾಡುವ ಸಂಭಾಷಣೆಯ (ಸುಖ).

೧೩. ಅನುಭವನ್ನಾಸ್ತೇ = 'ಅನುಭವನ್ ಕಾಲಂ ನಯತೇ' । ಹೀಗೆ ನಡೆಯುತ್ತಿತ್ತು ಎಂಬರ್ಥದಲ್ಲಿ ವರ್ತಮಾನಕೃದಂತದ ಮುಂದೆ 'ಆಸ್ತೇ' ಎಂಬ ಕ್ರಿಯಾಪದದ ಅನುಪ್ರಯೋಗವಾಗುವದು.

## ಅಭ್ಯಾಸ ೨೯

ಈ ವಾಕ್ಯಗಳನ್ನು ಪೂರ್ತಿಮಾಡಿ ಬರೆಯಿರಿ :

१. इदानीं प्रसादसम्मुखो नः स्वामी, वचनवशगश्च संवृत्तः ; पूर्वं तु.....।

२. प्रार्थितोऽसौ स्वामी भवदर्थे अभयदक्षिणाम्, तेन च.....; किं भवतापि तस्मै......। ३. एवं कृते द्वयोरप्यावयोः राज्यलक्ष्मीर्भोग्या भवति । नो चेत् .....॥

## ೧೮. ಧಾತುಗಣಗಳ ಎರಡನೆಯ ಗುಂಪು

೫೩. ಈ ಕೆಳಗಿನ ಶ್ಲೋಕಗಳಲ್ಲಿರುವ (೩, ೫, ೮, ೯ನೆಯ ಗಣಗಳ) ಕ್ರಿಯಾಪದಗಳ ರೂಪವನ್ನು ನೋಡಿರಿ :

यत् करोषि यदश्नासि यज्जुहोषि ददासि यत् ।
यत् तपस्यसि कौन्तेय तत् कुरुष्व मदर्पणम् ॥१॥

೧. ಯಾವದನ್ನು ಮಾಡುವೆಯೋ, ಯಾವದನ್ನು ತಿನ್ನುವೆಯೋ, ಯಾವದನ್ನು ಹೋಮಮಾಡುವೆಯೋ, ಯಾವದನ್ನು ದಾನಮಾಡುವೆಯೋ, ಯಾವದನ್ನು ತಪಸ್ಸುಮಾಡುವೆಯೋ, ಎಲೈ ಕೌಂತೇಯನೆ, ಅದನ್ನು (ನನ್ನ ಅರ್ಪಣವನ್ನು ಮಾಡು =) ನನಗೆ ಅರ್ಪಿಸು.

यच्चाप्नोति यदादत्ते यच्चात्ति विषयानिह ।
यच्चास्य सन्ततो भावस्तस्मादात्मेति कीर्त्यते ॥२॥

೨. ಯಾವ ಕಾರಣದಿಂದ ವ್ಯಾಪಿಸಿಕೊಂಡಿರುತ್ತಾನೋ, ಯಾವ ಕಾರಣದಿಂದ ಸ್ವೀಕರಿಸುತ್ತಾನೋ, ಯಾವ ಕಾರಣದಿಂದ ಇಲ್ಲಿ ವಿಷಯಗಳನ್ನು ತಿನ್ನುತ್ತಾನೋ ಮತ್ತು ಯಾವ ಕಾರಣದಿಂದ (ಈತನಿಗೆ ಸಂತತವಾಗಿ ಇರುವಿಕೆಯಿದೆಯೋ =) ಈತನು ಕಡಿವಡೆಯದೆ ಇರುತ್ತಾನೋ ಅದರಿಂದ 'ಆತ್ಮನು' (ಎಂದು ಹೇಳಲ್ಪಡುತ್ತಾನೆ =) ಎನ್ನುವರು.

तृष्णां छिन्धि भज क्षमां जहि मदं पापे रतिं मा कृथाः ।
सत्यं ब्रूह्यनुयाहि साधुपदवीं सेवस्व विद्वज्जनम् ॥
मान्यान् मानय विद्विषोऽप्यनुनय प्रख्यापय प्रश्रयम् ।
कीर्तिं पालय दुःखिते कुरु दयामेतत् सतां चेष्टितम् ॥३॥

೩. (ಬರಿಯ) ಬಯಕೆಯನ್ನು ಕತ್ತರಿಸು, ಕ್ಷಮೆಯನ್ನು ಪಡೆದುಕೊ, ಮದವನ್ನು ನಾಶಪಡಿಸು, ಪಾಪದಲ್ಲಿ ಪ್ರೀತಿಯನ್ನು ಮಾಡಬೇಡ, ಸತ್ಯವನ್ನು ಹೇಳು, ಸಾಧುಮಾರ್ಗವನ್ನು ಅನುಸರಿಸು, (ವಿದ್ವಜ್ಜನರನ್ನು =) ವಿದ್ವಾಂಸರಾದ ಜನರನ್ನು ಸೇವಿಸು, ಮಾನ್ಯರನ್ನು ಗೌರವಿಸು, ಶತ್ರುಗಳನ್ನು ಸಮಾಧಾನಗೊಳಿಸು, ವಿನಯವನ್ನು (ಪ್ರಸಿದ್ಧಿಗೊಳಿಸು =) ತೋರ್ಪಡಿಸು, ಕೀರ್ತಿಯನ್ನು ಕಾಪಾಡಿಕೊ, ದುಃಖಿತನಾದವನಲ್ಲಿ ದಯೆಯನ್ನು ಮಾಡು. ಇದು ಸತ್ಪುರುಷರ (ವ್ಯಾಪಾರವು =) ನಡತೆ.

अशुभानि निराचष्टे तनोति शुभसन्ततिम् ।
स्मृतिमात्रेण यत्पुंसां ब्रह्म तन्मङ्गलं परम् ॥४॥

೪. ಯಾವ ಕಾರಣದಿಂದ ನೆನೆದಮಾತ್ರದಿಂದ ಮನುಷ್ಯರ ಅಮಂಗಲಗಳನ್ನು ತೊಲಗಿಸುತ್ತದೆಯೋ, ಶುಭಸಂತತಿಯನ್ನು ಹಬ್ಬಿಸುತ್ತದೆಯೋ ಆ ಕಾರಣದಿಂದ ಬ್ರಹ್ಮವು ಪರಮಮಂಗಲವು.

೫೪. ೧, ೪, ೬, ೧೦ನೆಯ ಗಣದ ಧಾತುಗಳ ವಿಷಯವನ್ನು ೨ನೆಯ ಪುಸ್ತಕದಲ್ಲಿ ವಿವರಿಸಿರುವದರಿಂದ ಮೇಲಿನ ಶ್ಲೋಕಗಳಲ್ಲಿ ಕಾಣುವ ೨, ೩, ೫, ೭, ೮, ೯ - ಈ ಗಣಗಳ ಧಾತುಗಳ ರೂಪಗಳನ್ನು ಮಾತ್ರ ಇಲ್ಲಿ ವಿಂಗಡಿಸಿ ಬರೆಯುತ್ತೇವೆ :

२. अत्ति, निराचष्टे, ब्रूहि, जहि, अनुयाहि । ७. छिन्धि ।

३. जुहोषि, ददासि, आदत्ते । ८. करोषि, तनोति, कुरु ।

५. आप्नोति । ९. अश्नासि ।

ವಿಶೇಷ : 'ಮಾ ಕೃಥಾಃ' ಈ ರೂಪವು ಲುಙ್ (ಭೂತಸಾಮಾನ್ಯ) ; ಇದರ ವಿಷಯವನ್ನು ಮುಂದೆ ತಿಳಿಯಿಸುವೆವು.

ಈ ಗುಂಪಿನ ಧಾತುಗಳಿಗೆ ಸೇರುವ ಪ್ರತ್ಯಯಗಳನ್ನು ಈ ಕೆಳಗೆ ಕೊಟ್ಟಿದೆ :

| ಪರಸ್ಮೈಪದ | | | ಆತ್ಮನೇಪದ | | |
|---|---|---|---|---|---|
| | | | ಲಟ್ | | |
| ति | तः | अन्ति | ते | आते | अते |
| सि | थः | थ | से | आथे | ध्वे |
| मि | वः | मः | ए | वहे | महे |
| | | | ಲಙ್ | | |
| त् | ताम् | अन् | त | आताम् | अत |
| स् | तम् | त | थाः | आथाम् | ध्वम् |
| अम् | व | म | इ | वहि | महि |
| | | | ಲೋಟ್ | | |
| तु-तात् | ताम् | अन्तु | ताम् | आताम् | अताम् |
| हि | तम् | त | स्व | आथाम् | ध्वम् |
| आनि | आव | आम | ऐ | आवहै | आमहै |
| | | | ವಿಧಿಲಿಙ್ | | |
| यात् | याताम् | युः | ईत | ईयाताम् | ईरन् |
| याः | यातम् | यात | ईथाः | ईयाथाम् | ईध्वम् |
| याम् | याव | याम | ईय | ईवहि | ईमहि |

ವಿಶೇಷ : (1) ಈ ಪ್ರತ್ಯಯಗಳನ್ನು ಹಿಂದಿನ ೪ ಗಣಗಳ ಪ್ರತ್ಯಯಗಳಿಗೆ ಹೋಲಿಸಿರಿ. ಪರಸ್ಮೈಪದಪ್ರತ್ಯಯಗಳಲ್ಲಿ ಆಜ್ಞಾರ್ಥದ 'ಹಿ' ಹೊರತು ಮಿಕ್ಕವು ಹಾಗೆಯೇ ಉಳಿದಿವೆ.

(೨) ಈ ಪ್ರತ್ಯಯಗಳಲ್ಲಿ ವರ್ತಮಾನ ಮತ್ತು ಅನದ್ಯತನಭೂತಗಳ ಎಲ್ಲಾ ಪುರುಷಗಳ ಏಕವಚನಗಳೂ ಆಜ್ಞಾರ್ಥದಲ್ಲಿ ಪ್ರಥಮಪುರುಷೈಕವಚನ, ಉತ್ತಮಪುರುಷದಲ್ಲಿ ಎಲ್ಲಾ ವಚನಗಳು - ಹೀಗೆ ಪರಸ್ಮೈಪದದಲ್ಲಿ ; ಆತ್ಮನೇಪದದಲ್ಲಿ ಆಜ್ಞಾರ್ಥದ ಉತ್ತಮ ಪುರುಷದ ಎಲ್ಲಾ ವಚನಗಳೂ ಪ್ರಬಲ, ಮಿಕ್ಕವು ದುರ್ಬಲ - ಎಂಬುದನ್ನು ನೆನಪಿಡಬೇಕಾಗುವದು. ಪ್ರಬಲ ಪ್ರತ್ಯಯಗಳ ಹಿಂದೆ ಇರುವ ಅಂತ್ಯಸ್ವರಕ್ಕೂ ಉಪಾಂತ್ಯಹ್ರಸ್ವಸ್ವರಕ್ಕೂ ಗುಣವಾಗುತ್ತದೆ.

ಐದು, ಎಂಟು ಮತ್ತು ಒಂಬತ್ತು - ಈ ಗಣಗಳ **ವರ್ತಮಾನರೂಪ**ಗಳನ್ನು ಕೆಳಗೆ ಕೊಟ್ಟಿರುತ್ತದೆ ;

ಪರಸ್ಮೈಪದ — ಆತ್ಮನೇಪದ

### ೫ನೆಯ ಗಣ ('ನು' ವಿಕರಣ)

आप् - ವ್ಯಾಪಿಸು, ಪಡೆದುಕೊ — अश् - ತಿನ್ನು

| | | | | | |
|---|---|---|---|---|---|
| आप्नोति | आप्नुतः | आप्नुवन्ति | अश्नुते | अश्नुवाते | अश्नुवते |
| आप्नोषि | आप्नुथः | आप्नुथ | अश्नुषे | अश्नुवाथे | अश्नुध्वे |
| आप्नोमि | आप्नुवः | आप्नुमः | अश्नुवे | अश्नुवहे | अश्नुमहे |

### ೮ನೆಯ ಗಣ ('ಉ' ವಿಕರಣ)

तन् - ವಿಸ್ತರಿಸು

| | | | | | |
|---|---|---|---|---|---|
| तनोति | तनुतः | तन्वन्ति | तनुते | तन्वाते | तन्वते |
| तनोषि | तनुथः | तनुथ | तनुषे | तन्वाथे | तनुध्वे |
| तनोमि | तनुवः-तन्वः | तनुमः-तन्मः | तन्वे | तनुवहे-तन्वहे | तनुमहे-तन्महे |

### ೯ನೆಯ ಗಣ ('ನಾ' ವಿಕರಣ)

अश् - ತಿನ್ನು — क्रीण् - ಮಾರು

| | | | | | |
|---|---|---|---|---|---|
| अश्नाति | अश्नीतः | अश्नन्ति | क्रीणीते | क्रीणाते | क्रीणते |
| अश्नासि | अश्नीथः | अश्नीथ | क्रीणीषे | क्रीणाथे | क्रीणीध्वे |
| अश्नामि | अश्नीवः | अश्नीमः | क्रीणे | क्रीणीवहे | क्रीणीमहे |

ವಿಶೇಷ : (೧) ತಿ, ಸಿ, ಮಿ - ಇವು ಪ್ರಬಲಪ್ರತ್ಯಯಗಳು. ಇವನ್ನು ಪಾಣಿನಿಯ

ವ್ಯಾಕರಣದಲ್ಲಿ 'ಪಿತ್' ಪ್ರತ್ಯಯಗಳೆಂದು ಕರೆಯುತ್ತಾರೆ ; ಆದ್ದರಿಂದ ಮಿಕ್ಕವು ಅಪಿತ್. ಪಿತ್ ಪ್ರತ್ಯಯಗಳ ಹಿಂದಿನ ಉಕಾರಕ್ಕೆ ಗುಣವಾಗಿ ಆಪ್ನೋತಿ, ಆಪ್ನೋಷಿ, ಆಪ್ನೋಮಿ ; 'ತನೋತಿ', 'ತನೋಷಿ', 'ತನೋಮಿ' ಎಂದಾಗಿದೆ.

(೨) ವಮಕಾರಾದಿಯಾದ ಉತ್ತಮಪುರುಷೈಕವಚನಗಳ ದುರ್ಬಲಪ್ರತ್ಯಯದ ಹಿಂದಿನ ಉಕಾರಕ್ಕೆ ಪೂರ್ವದಲ್ಲಿ ಸಂಯುಕ್ತಾಕ್ಷರವಿಲ್ಲದಿದ್ದರೆ ವಿಕಲ್ಪದಿಂದ ಲೋಪ ; ಆದ್ದರಿಂದ ಚಿನುವಃ, ಚಿನ್ವಃ, ಚಿನುಮಃ, ಚಿನ್ಮಃ - ಎಂದು ಎರಡೆರಡು ರೂಪಗಳು ಬಂದಿವೆ. ಆದರೆ 'ಆಪ್ನುವಃ' 'ಅಶ್ನುಮಹೇ' ; ಏಕೆಂದರೆ ಇಲ್ಲಿ ಸಂಯುಕ್ತಾಕ್ಷರವಿದೆ.

(೩) ೯ನೆಯ ಗಣದ ವಿಕರಣಪ್ರತ್ಯಯವಾದ 'ನಾ' ಎಂಬುದು ಹಲಾದಿ (ವ್ಯಂಜನಾದಿ) ದುರ್ಬಲ ಪ್ರತ್ಯಯಗಳ ಹಿಂದೆ 'ನೀ' ಆಗಿದೆ. ಅಶ್ನೀತಃ, ಕ್ರೀಣೀತೇ - ಎಂದಾಗಿದೆ. (ಇಲ್ಲಿ ರಕಾರದ ಮುಂದಿನ ನಕಾರಕ್ಕೆ ಣಕಾರಾದೇಶ) ; ಅಜಾದಿ (ಸ್ವರಾದಿ) ದುರ್ಬಲಪ್ರತ್ಯಯಗಳಲ್ಲಿ ಆಕಾರಕ್ಕೆ ಲೋಪವಾಗಿ ಅಶ್ನನ್ತಿ, ಕ್ರೀಣತೇ, ಕ್ರೀಣೇ - ಎಂದಾಗಿದೆ.

೫೫. ಈ ಕೆಳಗೆ ೫, ೮, ೯ - ಈ ಮೂರು ಗಣಗಳ ಬೇರೆ ಬೇರೆಯ ಧಾತುಗಳಿಗೆ **ಅನದ್ಯತನಭೂತಕಾಲ**ಗಳ ರೂಪಗಳನ್ನು ತೋರಿಸಿದೆ :

ಪರಸ್ಮೈಪದ ಆತ್ಮನೇಪದ

೫ನೆಯ ಗಣ (चि - ಕೂಡಿಹಾಕು)

| | | | | | |
|---|---|---|---|---|---|
| अचिनोत् | अचिनुताम् | अचिन्वन् | अचिनुत | अचिन्वाताम् | अचिन्वत |
| अचिनोः | अचिनुतम् | अचिनुत | अचिनुथाः | अचिन्वाथाम् | अचिनुध्वम् |
| अचिनवम् | अचिनुव | अचिनुम | अचिन्वि | अचिनुवहि | अचिनुमहि |
| | अचिन्व | अचिन्म | | अचिन्वहि | अचिन्महि |

೮ನೆಯ ಗಣ

कृ - ಮಾಡು ‍ मन् - ಯೋಚಿಸು

| | | | | | |
|---|---|---|---|---|---|
| अकरोत् | अकुरुताम् | अकुर्वन् | अमनुत | अमन्वाताम् | अमन्वत |
| अकरोः | अकुरुतम् | अकुरुत | अमनुथाः | अमन्वाथाम् | अमनुध्वम् |
| अकरवम् | अकुर्व | अकुर्म | अमन्वि | अमनुवहि | अमनुमहि |
| | | | | अमन्वहि | अमन्महि |

೯ನೆಯ ಗಣ

बन्ध् (बध्) - ಕಟ್ಟು ज्ञा - ತಿಳಿ

| | | | | | |
|---|---|---|---|---|---|
| अबध्नात् | अबध्नीताम् | अबध्नन् | अजानीत | अजानाताम् | अजानत |
| अबध्नाः | अबध्नीतम् | अबध्नीत | अजानीथाः | अजानाथाम् | अजानीध्वम् |
| अबध्नम् | अबध्नीव | अबध्नीम | अजानि | अजानीवहि | अजानीमहि |

ವಿಶೇಷ : (೧) ಇಲ್ಲಿಯೂ ಪ್ರಬಲಪ್ರತ್ಯಯದ ಹಿಂದಿನ ಸ್ವರಕ್ಕೆ ಗುಣವಾಗಿದೆ. ಅಚಿನೋತ್, ಅಚಿನವಮ್.

(೨) ವಮಕಾರಾದಿಯಾದ ಉತ್ತಮಪುರುಷದ ದುರ್ಬಲಪ್ರತ್ಯಯದ ಹಿಂದಿನ ಉಕಾರಕ್ಕೆ ವಿಕಲ್ಪದಿಂದ ಲೋಪ. ಆದ್ದರಿಂದ ಅಚಿನುವ, ಅಚಿನ್ವ ; ಅಚಿನುಮ, ಅಚಿನ್ಮ ; ಅಚಿನುವಹಿ, ಅಚಿನ್ವಹಿ ; ಅಚಿನುಮಹಿ, ಅಚಿನ್ಮಹಿ ||

(೩) ಕೃಧಾತು ಉಭಯಪದಿ, ಇದಕ್ಕೆ ಪರಸ್ಮೈಪದರೂಪಗಳನ್ನು ಮಾತ್ರ ಇಲ್ಲಿ ಕೊಟ್ಟಿದೆಯಾದರೂ ಅಕುರುತ ಅಕುರ್ವಾತಾಮ್ ಅಕುರ್ವತ - ಎಂಬು ಮುಂತಾದ ಆತ್ಮನೇಪದದ ರೂಪಗಳನ್ನೂ ಊಹಿಸಿಕೊಳ್ಳಬೇಕು. ಈ ಧಾತುವಿಗೆ ವಮಕಾರಾದಿಯಾದ ದುರ್ಬಲಪ್ರತ್ಯಗಳು ಸೇರುವಲ್ಲಿ ಕುರ್ ಎಂದು ರೂಪ : ಅಕುರ್ವಹಿ, ಅಕುರ್ಮಹಿ, ಅಕುರುಥಃ, ಅಕುರುತ ; ಅಜಾದಿ ದುರ್ಬಲಪ್ರತ್ಯಯಗಳು ಸೇರುವಲ್ಲಿ ಕುರ್ವ್ ಎಂದು ರೂಪ ; ಅಕುರ್ವಾತಾಮ್, ಅಕುರ್ವತ.

(೪) 'ಬನ್ಧ್' ಧಾತುವಿಗೆ 'ಬಧ್' ಆದೇಶ. ಒಂಬತ್ತನೆಯ ಗಣದ ಧಾತುಗಳಿಗೆಲ್ಲ ಉಪಾಂತ್ಯಾನುನಾಸಿಕಕ್ಕೆ ಲೋಪವೇ. ವರ್ತಮಾನರೂಪಗಳಂತೆಯೇ ಇಲ್ಲಿಯೂ ನೀ, ನ್ - ಎಂಬ ಆದೇಶಗಳು ಬಂದಿವೆ.

(೫) 'ಜ್ಞಾ' ಧಾತುವು ಉಭಯಪದಿ ; ಪರಸ್ಮೈಪದದಲ್ಲಿ ವರ್ತಮಾನ ; ಜಾನಾತಿ ; ಅನದ್ಯತನಭೂತದಲ್ಲಿ ಅಜಾನಾತ್ - ಎಂದು ಮುಂತಾಗಿ ರೂಪಗಳು. (ಜ್ಞಾದ ಅನುನಾಸಿಕಕ್ಕೆ ಲೋಪ)

೫೬. ಈಗ (೫, ೮, ೯) ಈ ಮೂರು ಗಣಗಳ ಧಾತುಗಳ (ಲೋಟ್) **ಆಜ್ಞಾರ್ಥ**ರೂಪಗಳನ್ನು ತೋರಿಸಲಾಗುತ್ತದೆ.

ಪರಸ್ಮೈಪದ ಆತ್ಮನೇಪದ

೫ನೆಯ ಗಣ

साध् - ಸಾಧಿಸು धु - ಅಲುಗಾಡಿಸು

| | | | | | |
|---|---|---|---|---|---|
| साध्नोतु | साध्नुताम् | साध्नुवन्तु | धुनुताम् | धुन्वाताम् | धुन्वताम् |
| साध्नुहि | साध्नुतम् | साध्नुत | धुनुष्व | धुन्वाथाम् | धुनुध्वम् |
| साध्नवानि | साध्नवाव | साध्नवाम | धुनवै | धुनवावहै | धुनवामहै |

### ೮ನೆಯ ಗಣ

वन् - ಬೇಡು | | | कृ - ಮಾಡು | |

| | | | | | |
|---|---|---|---|---|---|
| वनोतु | वनुताम् | वन्वन्तु | कुरुताम् | कुर्वाताम् | कुर्वताम् |
| वनु | वनुतम् | वनुत | कुरुष्व | कुर्वाथाम् | कुरुध्वम् |
| वनवानि | वनवाव | वनवाम | करवै | करवावहै | करवामहै |

### ೯ನೆ ಗಣ

प्रि - ಪ್ರೀತಿಸು, ಪ್ರೀತಿಗೊಳಿಸು | | | वृ - ಆರಿಸು | |

| | | | | | |
|---|---|---|---|---|---|
| प्रीणातु | प्रीणीताम् | प्रीणन्तु | वृणीताम् | वृणाताम् | वृणताम् |
| प्रीणीहि | प्रीणीतम् | प्रीणीत | वृणीष्व | वृणीथाम् | वृणीध्वम् |
| प्रीणानि | प्रीणाव | प्रीणाम | वृणै | वृणावहै | वृणामहै |

ವಿಶೇಷ : (೧) ಮಧ್ಯಪುರುಷೈಕವಚನದಲ್ಲಿ ಸಂಯುಕ್ತಾಕ್ಷರ ಪೂರ್ವವಾಗಿಲ್ಲದ ಉಕಾರದ ಮುಂದಿನ ಹಿಪ್ರತ್ಯಯಕ್ಕೆ ಲೋಪ ; ಆದ್ದರಿಂದ 'ವನು' ಎಂದಾಗಿದೆ. ಆದರೆ 'ಸಾಧ್ನುಹಿ' ಇಲ್ಲಿ ಸಂಯುಕ್ತಾಕ್ಷರಪೂರ್ವಕವಾದ ಉಕಾರವಿರುವುದರಿಂದ 'ಹಿ' ಉಳಿದಿದೆ.

(೨) ಪ್ರಬಲಪ್ರತ್ಯಯವು ಸೇರುವಾಗ ಗುಣವಾಗಿರುವದು ; ಸ್ವರಾದಿ ದುರ್ಬಲಪ್ರತ್ಯಯಗಳು ಸೇರುವಲ್ಲಿ ಅಂಗದ ಉಕಾರವು ವ್ ಆಗಿರುವದು. ಆಜ್ಞಾರ್ಥದ ಉತ್ತಮಪುರುಷದ ವಚನಗಳೆಲ್ಲ ಪ್ರಬಲ. ಕೃಧಾತುವಿಗೆ ಕುರ್, ಕುರ್ವ್ ಬಂದಿರುವದು ಇಲ್ಲಿಯೂ ಸಮಾನ.

(೩) ಒಂಬತ್ತನೆಯ ಗಣದ ವ್ಯಂಜನಾಂತಧಾತುಗಳಿಗೆ 'ಹಿ' ಪ್ರತ್ಯಕ್ಕೆ ಬದಲು 'ಆನ' ಬರುತ್ತದೆ ; ಅದರ ಹಿಂದಿನ 'ನೀ' ಗೆ ಲೋಪ. ಆದ್ದರಿಂದ ಬಧಾನ (ಕಟ್ಟು), ಮುಷಾಣ (ಕಳವುಮಾಡು), ಗೃಹಾಣ (ತೆಗೆದುಕೊ) - ಎಂದು ರೂಪಗಳಾಗುವವು. 'ಗ್ರಹ್' ಧಾತುವಿಗೆ 'ಗೃಹ್' ಎಂಬ ರೂಪವು ಬರುತ್ತದೆ.

೫೭. ಇನ್ನು ೫, ೮, ೯ - ಈ ಮೂರು ಗಣಗಳ ಧಾತುಗಳಿಗೆ ವಿಧ್ಯಾದ್ಯರ್ಥಕರೂಪಗಳನ್ನು ಇಲ್ಲಿ ಕೊಡುವೆವು :

ಪರಸ್ಮೈಪದ | ಆತ್ಮನೇಪದ

### ೫ನೆಯ ಗಣ

शक् - ಶಕ್ತನಾಗಿರು | | | स्तृ - ಹರಡು | |

| | | | | | |
|---|---|---|---|---|---|
| शक्नुयात् | शक्नुयाताम् | शक्नुयुः | स्तृण्वीत | स्तृण्वीयाताम् | स्तृण्वीरन् |
| शक्नुयाः | शक्नुयातम् | शक्नुयात | स्तृण्वीथाः | स्तृण्वीयाथाम् | स्तृण्वीध्वम् |
| शक्नुयाम् | शक्नुयाव | शक्नुयाम | स्तृण्वीय | स्तृण्वीवहि | स्तृण्वीमहि |

## ೮ನೆಯ ಗಣ

### क्षिण् - ನಾಶಗೊಳಿಸು

| | | | | | |
|---|---|---|---|---|---|
| क्षिणुयात् | क्षिणुयाताम् | क्षिणुयुः | क्षिण्वीत | क्षिण्वीयाताम् | क्षिण्वीरन् |
| क्षिणुयाः | क्षिणुयातम् | क्षिणुयात | क्षिण्वीथाः | क्षिण्वीयाथाम् | क्षिण्वीध्वम् |
| क्षिणुयाम् | क्षिणुयाव | क्षिणुयाम | क्षिण्वीय | क्षिण्वीवहि | क्षिण्वीमहि |

ವಿಶೇಷ : ಈ ಧಾತುವಿಗೆ ಕ್ಷೇಣೋತಿ, ಕ್ಷೇಣುತೇ - ಎಂದು ಉಪಾಂತ್ಯಉಕಾರಕ್ಕೆ ಗುಣವೂ ಉಂಟು. ಆದ್ದರಿಂದ ಕ್ಷೇಣುಯಾತ್, ಕ್ಷೇಣುಯಾತಾಮ್, ಕ್ಷೇಣುಯುಃ - ಎಂದು ಮುಂತಾಗಿ ಪರಸ್ಮೈಪದದಲ್ಲಿ, ಕ್ಷೇಣ್ವೀತ ಕ್ಷೇಣ್ವೀಯಾತಾಮ್ ಕ್ಷೇಣ್ವೀರನ್ - ಎಂದು ಆತ್ಮನೇಪದದಲ್ಲಿ ರೂಪಾಂತರಗಳೂ ಉಂಟು.

## ೯ನೆಯ ಗಣ

### पू - ಪವಿತ್ರಗೊಳಿಸು / गृह् - ತೆಗೆದುಕೋ

| | | | | | |
|---|---|---|---|---|---|
| पुनीयात् | पुनीयाताम् | पुनीयुः | गृह्णीत | गृह्णीयाताम् | गृह्णीरन् |
| पुनीयाः | पुनीयातम् | पुनीयात | गृह्णीथाः | गृह्णीयाथाम् | गृह्णीध्वम् |
| पुनीयाम् | पुनीयाव | पुनीयाम | गृह्णीय | गृह्णीवहि | गृह्णीमहि |

ವಿಶೇಷ : (೧) ಇಲ್ಲಿ ಪ್ರಬಲಪ್ರತ್ಯಯಗಳಿಲ್ಲದ್ದರಿಂದ ಗುಣವಿಲ್ಲ.

(೨) ಉಭಯಪದಿಗಳಿಗೆ ಎರಡೂ ಬಗೆಯ ಪ್ರತ್ಯಯಗಳನ್ನು ಸೇರಿಸಬೇಕು. ಉದಾಹರಣೆಗೆ :

ಪರಸ್ಮೈಪದಿ / ಆತ್ಮನೇಪದಿ

### ज्ञा - ತಿಳಿ

#### ವರ್ತಮಾನ

| | | | | | |
|---|---|---|---|---|---|
| जानाति | जानीतः | जानन्ति | जानीते | जानाते | जानते |
| जानासि | जानीथः | जानीथ | जानीषे | जानाथे | जानीध्वे |
| जानामि | जानीवः | जानीमः | जाने | जानीवहे | जानीमहे |

#### ಆಜ್ಞಾರ್ಥ

| | | | | | |
|---|---|---|---|---|---|
| जानातु | जानीताम् | जानन्तु | जानीताम् | जानाताम् | जानताम् |
| जानीहि-तात् | जानीतम् | जानीत | जानीष्व | जानाथाम् | जानीध्वम् |
| जानानि | जानीव | जानीम | जानै | जानावहै | जानामहै |

[ತಾತ್ ಎಂಬ ವಿಕಲ್ಪರೂಪವನ್ನು ನಾವು ಇಲ್ಲಿ ಎಲ್ಲಾ ಕಡೆಯಲ್ಲಿಯೂ ತೋರಿಸಿಲ್ಲ.]

ವಿಧ್ಯಾದಿ

| | | | | | |
|---|---|---|---|---|---|
| जानीयात् | जानीयाताम् | जानीयुः | जानीत | जानीयाताम् | जानीरन् |
| जानीयाः | जानीयातम् | जानीयात | जानीथाः | जानीयाथाम् | जानीध्वम् |
| जानीयाम् | जानीयाव | जानीयाम | जानीय | जानीवहि | जानीमहि |

## ಅಭ್ಯಾಸ ೩೦

ಈ ಕೆಳಗೆ ಉಪಸರ್ಗಸಹಿತವಾಗಿ ೫, ೮, ೯ನೆಯ ಗಣದ ಧಾತುಗಳಿಂದಾಗಿರುವ ಕ್ರಿಯಾಪದಗಳನ್ನು ಕೊಟ್ಟಿದೆ. ವಾಕ್ಯಗಳ ಅರ್ಥವನ್ನು ಬರೆದು ಆಯಾ (ಲಟ್, ಲಙ್, ಲೋಟ್, ವಿಧಿಲಿಙ್) ರೂಪಗಳನ್ನು ಮೂರು ಪುರುಷಗಳಿಗೂ ಹೇಳಿ :

१. कथमेतद् विजानीयां त्वमादौ प्रोक्तवानिति ? २. कौन्तेय, प्रतिजानीहि न मे भक्तः प्रणश्यति । ३. किँ भवान् शक्नोति एवं कर्तुम् ? ४. किं पिङ्गलकमपि न जानासि ? ५. यस्य पुरस्तात् महान् जनसंमर्दो भवति तदेष धनगुप्तस्य भवनमिति निश्चिनु । ६. भो वयस्य, अस्मिन् महाकार्ये ईदृशो वेषः कथम् उपकरोति ? ७. यः स्वहृदयस्थितं परमात्मानं शरणं गच्छेत्, स सर्वान् कामान् समश्नुवीत । ८. हे भक्तवर, वाञ्छितं वरं वृणीष्व । ९. सभाङ्गणे चित्रकम्बलम् आस्तृण्वन्तु सेवकाः । १०. भगवान् वर्षं निगृह्णाति, उत्सृजति च ।।

## १९. मित्रभेदः (अनुवृत्तः)

५८. सञ्जीवकेनापि अनेकशास्त्रावगाहनात् उत्पन्नबुद्धिप्रागल्भ्येन स्तोकैरेव अहोभिः मूढमतिः पिङ्गलको धीमान् तथा कृतो यथा आरण्यधर्माद् वियोज्य ग्राम्यधर्मेषु नियोजितः । किं बहुना ? प्रत्यहं पिङ्गलसञ्जीवकावेव केवलं रहसि मन्त्रयतः । शेषः सर्वोऽपि मृगजनो दूरीभूतस्तिष्ठति । करटकदमनकावपि प्रवेशं न लभेते । अन्यच्च सिंहपराक्रमाभावात् सर्वोऽपि मृगजनः, तौ च श्रृगालौ क्षुधाव्याधिबाधिताः, एकां दिशम् आश्रित्य स्थिताः ।।

(ಸಂಜೀವಕನಿಂದಲೂ ಅನೇಕ ಶಾಸ್ತ್ರಗಳಲ್ಲಿ ಮುಳುಗಿದ್ದದ್ದರಿಂದ ಉಂಟಾಗಿದ್ದ

ಬುದ್ಧಿಯ ಗಟ್ಟಿಗತನದಿಂದ ಸ್ವಲ್ಪವೇ ದಿನಗಳೊಳಗೆ ಮೂಢಮತಿಯಾದ ಪಿಂಗಲಕನು ಹಾಗೆ ಬುದ್ಧಿವಂತನಾಗಿ ಮಾಡಲ್ಪಟ್ಟನು =) ಇತ್ತ ಸಂಜೀವಕನು ಅನೇಕ ಶಾಸ್ತ್ರಗಳನ್ನು ಚೆನ್ನಾಗಿ ಬಲ್ಲ ಬುದ್ಧಿವಂತನಾದ್ದರಿಂದ ಕೆಲವೇ ದಿನಗಳೊಳಗಾಗಿ ಮೂಢಬುದ್ಧಿಯಾದ ಪಿಂಗಲಕನನ್ನು ಎಷ್ಟು ಬುದ್ಧಿವಂತನನ್ನಾಗಿ ಮಾಡಿತೆಂದರೆ (ಅರಣ್ಯಧರ್ಮಗಳಿಂದ ಬಿಡಿಸಿ ಗ್ರಾಮ್ಯಧರ್ಮಗಳಲ್ಲಿ ತೊಡಗಿಸಲ್ಪಟ್ಟಿತು =) ಅದು ಕಾಡುಪ್ರಾಣಿಗಳ ಸ್ವಭಾವವನ್ನು ಬಿಟ್ಟು ಊರುಪ್ರಾಣೀಗಳ ಸ್ವಭಾವವನ್ನು ಅವಲಂಬಿಸಿಬಿಟ್ಟಿತು. (ಬಹಳದಿಂದೇನು ? =) ಹೆಚ್ಚೇಕೆ ? ಪ್ರತಿದಿನವೂ ಬರಿಯ ಪಿಂಗಲಕ - ಸಂಜೀವಕರೇ ಗುಟ್ಟಿನಲ್ಲಿ (ಆಲೋಚನೆ ಮಾಡುತ್ತಾರೆ =) ಆಲೋಚನೆ ಮಾಡುತ್ತಿದ್ದರು. ಮಿಕ್ಕ (ಮೃಗಜನರೆಲ್ಲ =) ಮೃಗಗಳೆಲ್ಲ (ದೂರವಾಗಿದ್ದುಕೊಂಡಿದೆ =) ದೂರದಲ್ಲಿದ್ದುಕೊಂಡಿದ್ದವು. (ಕರಟಕ ದಮನಕರೂ ಪ್ರವೇಶವನ್ನು ಪಡೆಯುವದಿಲ್ಲ = ) ಕರಟಕದಮನಕರಿಗೆ ಕೂಡ ಪ್ರವೇಶವು ಸಿಕ್ಕುತ್ತಿರಲಿಲ್ಲ. (ಮತ್ತೂ ಒಂದು =) ಇನ್ನೊಂದೇನೆಂದರೆ, ಸಿಂಹಪರಾಕ್ರಮವಿಲ್ಲದ್ದರಿಂದ (ಮೃಗಜನರೆಲ್ಲ =) ಮೃಗಗಳೆಲ್ಲ, ಮತ್ತು ಆ ನರಿಗಳೂ (ಹಸಿವಿನ ರೋಗದಿಂದ ಬಾಧಿತರಾಗಿ =) ಹಸಿವಿನ ಬಾಧೆಯಿಂದ (ಯಾವದೋ) ಒಂದು ದಿಕ್ಕನ್ನು ಆಶ್ರಯಿಸಿಕೊಂಡು ಇರುತ್ತಿದ್ದವು.

## ಚಿಂತನ

೧. **ಅನೇಕಶಾಸ್ತ್ರಾವಗಾಹನಾತ್ ।** ನ ಏಕಾನಿ - ಅನೇಕಾನಿ ; ಅನೇಕಾನಿ ಚ ತಾನಿ ಶಾಸ್ತ್ರಾಣಿ ಚ । ತೇಷು ಅನೇಕಶಾಸ್ತ್ರೇಷು ಅವಗಾಹನಾತ್ ಎಂದು ವಿಗ್ರಹವಾಕ್ಯ.

೨. **ಸ್ತೋಕೈರೇವ ಅಹೋಭಿಃ ।** ಪು. ೫೫ ರಲ್ಲಿರುವ ೩ನೆಯ ಟಿಪ್ಪಣಿಯಲ್ಲಿ 'ದ್ವಾದಶಭಿರ್ವರ್ಷೈಃ' ಎಂಬುದನ್ನು ವಿವರಿಸಿರುವ ಬಗೆಯನ್ನು ನೋಡಿರಿ. 'ಸ್ತೋಕಾನ್ಯೇವ ಅಹಾನಿ' (ದ್ವಿ.) ಎಂದರೇನರ್ಥ ?

೩. (a) **ಉತ್ಪನ್ನಬುದ್ಧಿಪ್ರಾಗಲ್ಭ್ಯೇನ = ಬುದ್ಧೇಃ ಪ್ರಾಗಲ್ಭ್ಯಮ್ - ಬುದ್ಧಿ.** ಪ್ರಾಗಲ್ಭ್ಯಮ್ । ಉತ್ಪನ್ನಂ ಬುದ್ಧಿಪ್ರಾಗಲ್ಭ್ಯಮ್ ಯಸ್ಯ ಸಃ - ಉತ್ಪನ್ನಬುದ್ಧಿಪ್ರಾಗಲ್ಭ್ಯಃ ; ತೇನ । ಅನೇಕಶಾಸ್ತ್ರಾವಗಾಹನಾತ್ ಎಂಬುದು ಈ ಸಮಾಸದಲ್ಲಿ ಸೇರಿಕೊಂಡಿರುವ 'ಉತ್ಪನ್ನಮ್' ಎಂಬುದಕ್ಕೆ ಹೇತುವನ್ನು ಹೇಳುತ್ತದೆ.

(b) **ಪ್ರಾಗಲ್ಭ್ಯಮ್ ಪ್ರಗಲ್ಭಸ್ಯ ಭಾವಃ ।** ಭಾವಾರ್ಥವನ್ನು ಹೇಳುವ 'ಯ' ಪ್ರತ್ಯಯವುಳ್ಳ ತದ್ಧಿತಾಂತವಿದು. ನಾಮ (ಪ್ರಾತಿಪದಿಕ)ಗಳಿಗೆ ಪ್ರತ್ಯಯವು ಸೇರಿ ಹುಟ್ಟಿದ ಪದವು ತದ್ಧಿತಾಂತವೆನಿಸುವುದು. ಆಸ್ತಿಕ್ಯಮ್, ಪೌರೋಹಿತ್ಯಮ್, ದೂತ್ಯಮ್, ದೌತ್ಯಮ್, ಸಖ್ಯಮ್ - ಇವೆಲ್ಲ ಈ ಅರ್ಥದ ತದ್ಧಿತಾಂತಗಳು.

೪. **ಧೀಮಾನ್ = ಧೀಃ ಅಸ್ಯಾಸ್ತೀತಿ** - ಎಂದು ಇದಕ್ಕೆ ವ್ಯುತ್ಪತ್ತಿ. 'ಉಳ್ಳ' ಎಂಬರ್ಥದ ತದ್ಧಿತಾಂತ. ಬುದ್ಧಿಮಾನ್, ಪಿತೃಮಾನ್, ಗೋಮಾನ್ - ಇವುಗಳಿಗೂ ಹೀಗೆಯೇ ವ್ಯುತ್ಪತ್ತಿ.

೫. **ತಥಾ ಕೃತೋ ಯಥಾ... ನಿಯೋಜಿತಃ ।** ಹೇಗೆ ತೊಡಗಿತೋ ಹಾಗೆ ಮಾಡಲ್ಪಟ್ಟಿತು. 'ತೊಡಗುವಹಾಗೆ ಮಾಡಲ್ಪಟ್ಟಿತು' ಎಂದು ಕನ್ನಡಿಸಬೇಕು ; ಅಥವಾ 'ಹೇಗೆ (ಎಷ್ಟರಮಟ್ಟಿಗೆ) ಮಾಡಲ್ಪಟ್ಟಿತೆಂದರೆ' ಎಂದಿಷ್ಟೇ ಅನುವಾದಮಾಡಿದರೂ ಆಗುತ್ತದೆ. 'ತಥಾ' ಎಂಬುದನ್ನು ಮೊದಲು ಪ್ರಯೋಗಿಸಿರುವ ವಾಕ್ಯಗಳನ್ನೆಲ್ಲ ಹೀಗೆ ಕನ್ನಡಿಸಿಕೊಳ್ಳಬೇಕು.

ಉದಾ : 'ತಥಾ ಕರಿಷ್ಯಾಮಿ ಯಥಾಽಯಂ ದರಿದ್ರೋ ಭವಿಷ್ಯತಿ' ಅವನು ಬಡವನಾಗುವ ಹಾಗೆ ಮಾಡುವೆನು ; ಹೇಗೆ ಮಾಡುವೆನೆಂದರೆ : ಅದರಿಂದ ಅವನು ಬಡವನಾಗಿಬಿಡುವನು.

೬. **ಆರಣ್ಯಧರ್ಮಾಃ ।** ಅರಣ್ಯೇ ಭವಾಃ ಆರಣ್ಯಾಃ । 'ಇರುವ ಎಂಬರ್ಥದ ತದ್ಧಿತಾಂತವಿದು. ಆರಣ್ಯಾನಾಂ ಧರ್ಮಾಃ ಆರಣ್ಯಧರ್ಮಾಃ (ಕಾಡುಮೃಗಗಳ ಸ್ವಭಾವ) ; ತಸ್ಮಾತ್ । ಆರಣ್ಯ ಧರ್ಮಾತ್ । - ಬಿಡಿಸಿ, ಅಗಲುವಂತೆ ಮಾಡಿ ಎಂಬರ್ಥದ 'ವಿಯೋಜ್ಯ' ಎಂಬ ಮಾತಿನ ಸಂಬಂಧ ವಿರುವದರಿಂದ ಪಂಚಮೀವಿಭಕ್ತಿಯು ಬಂದಿದೆ. ಹೀಗೆಯೇ 'ಗ್ರಾಮೇ ಭವಾಃ ಗ್ರಾಮ್ಯಾಃ ; ಗ್ರಾಮ್ಯಾನಾಂ ಧರ್ಮಾಃ ಗ್ರಾಮ್ಯಧರ್ಮಾಃ ; ತೇಷು ।। 'ಗ್ರಾಮ್ಯಧರ್ಮ' ಎಂಬ ಮಾತಿಗೆ 'ಹೆಚ್ಚಿನ ವಿಷಯಾಸಕ್ತಿ' ಎಂಬರ್ಥವೂ ಉಂಟು. ಯುಜ್-ಸೇರಿಸು ಎಂಬ ಧಾತುವಿಗೆ ಪ್ರೇರಕಾರ್ಥ 'ಯೋಜಯ'. ಇದಕ್ಕೆ 'ವಿ' ಸೇರಿದರೆ ವಿಯೋಜಯ (ಬಿಡಿಸು) ; 'ನಿ' ಸೇರಿದರೆ ನಿಯೋಜಯ (ತೊಡಗಿಸು).

೭. **ಕಿಂ ಬಹುನಾ ?** ಪು. ೧೧ರಲ್ಲಿ ೩ನೆಯ ಟಿಪ್ಪಣಿಯನ್ನು ನೋಡಿರಿ.

೮. **ಪ್ರತ್ಯಹಮ್** - 'ಅಹನಿ ಅಹನಿ' ಎಂದು ವಿಗ್ರಹ. ಅವ್ಯಯೀಭಾವ.

೯. **ಮನ್ತ್ರಯತಃ ।** ಈ ೧೦ನೆಯ ಗಣದ ಧಾತುವು ಬಹುಮಟ್ಟಿಗೆ ಆತ್ಮನೇಪದದಲ್ಲಿಯೇ ಪ್ರಯೋಗವಾಗುತ್ತದೆ. ಮುಂದಿನ ಖಂಡವನ್ನು ನೋಡಿ.

೧೦. **ಮೃಗಜನಃ ।** ಮೃಗಲಕ್ಷಣೋ ಜನಃ । ಮೃಗಗಳ ಗುಂಪು. ಗುಂಪು ಎಂಬರ್ಥದಲ್ಲಿ ಸಮಾಸದ ಕೊನೆಯಲ್ಲಿ 'ಜನ' ಶಬ್ದವನ್ನುಪಯೋಗಿಸುವದುಂಟು. ಉದಾ : ದಾಸದಾಸೀ ಜನಃ ।

೧೧. **ದೂರೀಭೂತಃ ।** 'ಅದೂರಃ ದೂರಃ ಸಂಪನ್ನಃ' ಎಂದು ಇದನ್ನು ಬಿಡಿಸಬೇಕು ; 'ದೂರೀಕೃತಃ ಎಂದಿದ್ದರೆ 'ಅದೂರಃ ದೂರಃ ಸಂಪದ್ಯಮಾನಃ ಕೃತಃ' ಎಂದು ಬಿಡಿಸಬೇಕು. ಮೊದಲು ದೂರವಾಗಿಲ್ಲದ್ದು ಈಗ ದೂರವಾಯಿತು - ಎಂದರ್ಥ. (ಇಲ್ಲಿರುವ ಪ್ರತ್ಯಯಕ್ಕೆ ಚ್ವಿಪ್ರತ್ಯಯ ವೆಂದು ಪಾಣಿನಿಯ ವ್ಯಾಕರಣದಲ್ಲಿ ಸಂಜ್ಞೆ).

೧೨. **ಅನ್ಯಚ್ಚ, ಅಪಿ ಚ, ಕಿಞ್ಚ, ಕಿಞ್ಚಾನ್ಯತ್ ।** 'ಇದಲ್ಲದೆ' ಎಂಬರ್ಥದಲ್ಲಿ ಈ ಶಬ್ದಪುಂಜಗಳನ್ನು ಉಪಯೋಗಿಸುತ್ತಾರೆ.

೧೩. **ತೌ ಚ ಶೃಗಾಲೌ....ಸ್ಥಿತಾಃ ।** ಇದಕ್ಕೆ ಬದಲು 'ಕಾಂದಿಶೀಕಃ ಕ್ಷುಧಾವಿಷ್ಟಃ ಸಂವೃತ್ತಃ' ಎಂಬ ಪಾಠವೂ ಉಂಟು. ಕಾಂ ದಿಶೀಕಃ = ಕಾಂ ದಿಶಮ್ ಆಶ್ರಿತಃ । ದಿಕ್ಕುಗಾಣದೆ ಎಂದರ್ಥ.

೧೪. **ಕ್ಷುಧಾವ್ಯಾಧಿಬಾಧಿತಾಃ ।** ಕ್ಷುದೈವ ವ್ಯಾಧಿಃ ಕ್ಷುಧಾವ್ಯಾಧಿಃ ; ತೇನ ಕ್ಷುಧಾ ವ್ಯಾಧಿನಾ ; ಕ್ಷುಧಾವ್ಯಾಧಿನಾ ಬಾಧಿತಾಃ ಕ್ಷುಧಾವ್ಯಾಧಿಬಾಧಿತಾಃ - ಎಂದು ವಿಗ್ರಹ. ಕ್ಷುದ್, ಕ್ಷುಧಾ - ಎಂದು ಧಕಾರಾಂತವಾಗಿಯೂ ಆಕಾರಾಂತವಾಗಿಯೂ ಈ ಶಬ್ದವು ಇರುತ್ತದೆ. ಹೀಗೆಯೇ ವಾಚಾ, ನಿಶಾ, ದಿಶಾ ಎಂಬ ಶಬ್ದಗಳನ್ನೂ ತಿಳಿಯಬೇಕು.

५९. ततः स्वामिप्रसादरहितौ क्षुत्क्षामकण्ठौ परस्परं करटकदमनकौ मन्त्रयेते ।।

तत्र दमनको ब्रूते 'आर्य करटक, आवां तावत् अप्रधानतां गतौ । एष पिङ्गलकः सञ्जीवकानुरक्तः, स्वव्यापारपराङ्मुखः संजातः । सर्वोऽपि परिजनो गतः । तत् किं क्रियते ?

करटक आह - 'यद्यपि त्वदीयवचनं न करोति तथापि स्वामी स्वदोषनाशाय वाच्यः । तत् त्वया एष शष्पभोजी स्वामिनः सकाशम् आनीतः । तत् स्वहस्तेन अङ्गाराः कर्षिताः ।

दमनक आह - 'सत्यमेतत् । ममायं दोषः, न स्वामिनः ।।'

करटक आह - 'अथैवंविधे व्यतिकरे किं कर्तव्यमावयोः ?'[1]

दमनकोऽब्रवीत् - 'एवंविधेऽपि समये मम बुध्दिस्फुरणं भविष्यति, येन सञ्जीवकं प्रभोर्विश्लेषयिष्यामि । तदहं मायाप्रपंचेन गुप्तमाश्रित्य तं स्फोटयिष्यामि ।।'

करटक आह - 'भद्र, यदि कथमपि तव मायाप्रवेशं पिङ्गलको ज्ञास्यति सञ्जीवको वा, तदा नूनं विघात एव ।।

सोऽब्रवीत् - "तात, मैवं वद । गाढबुद्धिभिः आपत्काले विधुरेऽपि दैवे बुद्धिः प्रयोक्तव्या, नोद्यमस्त्याज्यः । कदाचिद् घुणाक्षरन्यायेन बुद्धेः साम्राज्यं भवति । तदेवं ज्ञात्वा सुगाढबुद्धिप्रभावेण[2] यथा तौ द्वावपि न ज्ञास्यतः, तथा मिथो वियोजयिष्यामि । उक्तं हि 'सुप्रयुक्तस्य दम्भस्य ब्रह्माप्यन्तं न गच्छति' इति" ।।

तच्छ्रुत्वा करटक आह - 'भद्र, अस्त्येवम् । परं तथापि महन्मे भयम् । यतो बुद्धिमान् सञ्जीवकः, रौद्रश्च सिंहः । अतो यद्यपि ते बुद्धिप्रागल्भ्यम्, तथापि पिङ्गलकात् तं वियोजयितुमसमर्थः ।।'

೧. 'ಕಿಂ ಕರ್ತವ್ಯಮಾವಾಭ್ಯಾಮ್' ಪಾ ॥ ೨. 'ಗೂಢ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

दमनक आह - "भ्रातः, असमर्थोऽपि समर्थ एव । न किञ्चिदिह बुद्धिमता मसाध्यमस्ति । उक्तं च 'यस्य बुद्धिर्बलं तस्य, निर्बुद्धेस्तु कुतो बलम् ?' इति । तद्यदि भवान् कथयति, तत् तत्रैव गत्वा तयोः स्वबुद्धिप्रभावेण मैत्रीभेदं करोमि ।।"

करटक आह - 'भद्र, यद्येवं तर्हि गच्छ । शिवास्ते पन्थानः सन्तु । यथाभिप्रेतम् अनुष्ठीयताम् ।।'

ಬಳಿಕ ಒಡೆಯನ ಪ್ರಸಾದವಿಲ್ಲದ, ಹಸಿವಿನಿಂದ (ಬಾಡಿದ ಕಂಠವುಳ್ಳವರಾದ =) ಪೀಡಿತರಾದ ಕರಟಕದಮನಕರು ಒಬ್ಬರೊಡನೊಬ್ಬರು (ಹೀಗೆ) ಆಲೋಚನೆ (ಮಾಡುತ್ತಾರೆ =) ಮಾಡಿಕೊಂಡರು.

ಅವರಲ್ಲಿ ದಮನಕನು (ಹೇಳುತ್ತದೆ =) ಹೀಗೆಂದಿತು : 'ಅಯ್ಯ ಕರಟಕ, ನಾವಂತೂ (ಅಮುಖ್ಯತ್ವವನ್ನು ಹೊಂದಿದೆವು =) ಕೆಳಕ್ಕಿಳಿದೆವು. ಈ ಪಿಂಗಲಕನು ಸಂಜೀವಕನಲ್ಲಿ ಪ್ರೇಮವುಳ್ಳದ್ದಾಗಿ (ತನ್ನ ವ್ಯಾಪಾರದಿಂದ ಹಿಮ್ಮುಖವಾದದ್ದಾಯಿತು =) ತನ್ನ ಕೆಲಸವನ್ನು ಮರೆತುಬಿಟ್ಟಿದೆ. ಪರಿವಾರಜನವೆಲ್ಲ ಹೊರಟುಹೋಯಿತು. ಆದ್ದರಿಂದ ಏನು (ಮಾಡಲ್ಪಡುತ್ತದೆ =) ಮಾಡೋಣ ?'

ಕಟಕನೆಂದಿತು ; '(ನಿನ್ನ ಮಾತನ್ನು ಮಾಡದೆ ಇದ್ದರೂ =) ನಿನ್ನ ಮಾತಿನಂತೆ ನಡೆಯದಿದ್ದರೂ ದಣಿಯು ತನ್ನ ತಪ್ಪನ್ನು ತೊಲಗಿಸಿಕೊಳ್ಳುವದಕ್ಕಾಗಿ (ಹೇಳಲ್ಪಡತಕ್ಕವನು =) (ಅದಕ್ಕೆ ತಿಳಿಯ) ಹೇಳಬೇಕು. ಇಲ್ಲಿ ನಿನ್ನಿಂದ ಹುಲ್ಲು ಮೇಯುವ (ಸಂಜೀವಕನು ತರಲ್ಪಟ್ಟಿತು =) ಸಂಜೀವಕನನ್ನು ನೀನು ಪ್ರಭುವಿನ ಬಳಿಗೆ ಕರೆತಂದಿದ್ದೀಯೆ. ಆದ್ದರಿಂದ (ನಿನ್ನ ಕೈಯಿಂದ ಕೆಂಡವು ಕೆಳೆದುಕೊಳ್ಳಲ್ಪಟ್ಟಿದೆ =) ನಿನ್ನ ಕೈಯನ್ನು ನೀನೇ ಸುಟ್ಟುಕೊಂಡಿದೀಯೆ.'

ದಮಕನೆಂದಿತು : 'ನಿಜ, ನನ್ನದೇ ಈ ತಪ್ಪು, ಧಣಿಯದಲ್ಲ'

ಕರಟಕನೆಂದಿರು : 'ಇನ್ನು ಇಂಥ ಕಷ್ಟಸ್ಥಿತಿಯಲ್ಲಿ (ನಮ್ಮ ಕರ್ತವ್ಯವೇನು =) ನಾವೇನುತಾನೆ ಮಾಡಬಹುದು ?'

ದಮಕನೆಂದಿತು : 'ಇಂಥ ಸಮಯದಲ್ಲಿಯೂ ನನಗೆ (ಬುದ್ಧಿಯ ಹೊಳಪು ಆಗುವದು =) ಯಾವದಾದರೊಂದು ಹಂಚಿಕೆಯು ಹೊಳೆದೇ ಹೊಳೆಯುವದು ; ಅದರಿಂದ ಸಂಜೀವಕನನ್ನು ಧಣಿಯಿಂದ (ಬಿಡಿಸುವೆನು =) ಅಗಲಿಸಬಹುದಾಗುವದು. ಆದ್ದರಿಂದ ನಾನು (ಮಾಯಾಪ್ರಪಂಚದಿಂದ =) ಮಾಯೆಯನ್ನು ತೋರಿಸುವದರ

ಮೂಲಕ (ಗುಟ್ಟನ್ನು ಆಶ್ರಯಿಸಿಕೊಂಡು =) ಗುಟ್ಟಾಗಿದ್ದುಕೊಂಡು ಅದನ್ನು (ಸೀಳು ವೆನು =) ಅಗಲಿಸುವೆನು.'

ಕರಟಕನೆಂದಿತು : '(ನಿನ್ನ ಮಾಯಾಪ್ರವೇಶವನ್ನು =) ನೀನು ಮೋಸಮಾಡುತ್ತಿರುವೆಯೆಂಬುದನ್ನು ಹೇಗಾದರೂ ಪಿಂಗಲಕನಾಗಲೀ ಸಂಜೀವಕನಾಗಲೀ ತಿಳಿದುಕೊಳ್ಳುವದಾದರೆ, ಆಗ ನಿಜವಾಗಿಯೂ (ಪೆಟ್ಟೇ =) ಅಪಾಯವೇ.'

ಅದು ಹೀಗೆಂದಿತು : "ಅಪ್ಪ, ಹಾಗೆನ್ನದಿರು. ಹೆಚ್ಚಿನ ಬುದ್ಧಿಯುಳ್ಳವರಿಂದ ಆಪತ್ಕಾಲದಲ್ಲಿ (ದೈವವು ಅಡ್ಡಲಾಗಿದ್ದರೂ ಬುದ್ಧಿಯು ಪ್ರಯೋಗಿಸಲ್ಪಡಬೇಕು =) ಅದೃಷ್ಟವು ಅಡ್ಡಲಾದರೂ ಜಾಣರಾದವರು ಬುದ್ಧಿಯನ್ನು ಉಪಯೋಗಿಸ (ಬೇಕು =) ಬೇಕೇ ಹೊರತು ಪ್ರಯತ್ನವನ್ನು ಬಿಡತಕ್ಕದ್ದಲ್ಲ. ಒಂದುವೇಳೆ (ಗೆದ್ದಲು ಹುಳುವಿನ ಅಕ್ಷರದಂತೆ =) ಆಕಸ್ಮಾತ್ತಾಗಿ ಬುದ್ಧಿಯ ಒಡೆತನವು (ಆಗುವದು =) ಆದೀತು. ಆದ್ದರಿಂದ(ಹೀಗೆಂದು ತಿಳಿದು =) ಈ ನಂಬಿಕೆಯಿಂದ ಬಹಳ ಹೆಚ್ಚಿನ ಬುದ್ಧಿಯ ಮಹಿಮೆಯಿಂದ (ಅವರಿಬ್ಬರೂ ಹೇಗೆ ತಿಳಿಯಲಾರರೋ ಹಾಗೆ =) ಅವರಿಬ್ಬರಿಗೂ ತಿಳಿಯದಂತೆ ಒಬ್ಬರಿಂದೊಬ್ಬರನ್ನು ಅಗಲಿಸುವೆನು.'ಚೆನ್ನಾಗಿ ಉಪಯೋಗಿಸಿದ ಕಪಟದ ಪಾರವನ್ನು ಬ್ರಹ್ಮನೂ (ಮುಟ್ಟಲಾರನು =) ಅರಿಯಲಾರನು' ಎಂದು (ಹೇಳಲ್ಪಟ್ಟ್ಯೋಇದೆ =) ಹೇಳಿಯೂ ಇರುತ್ತಾರೆ."

ಅದನ್ನು ಕೇಳಿ ಕರಟಕನೆಂದಿತು : 'ಅಪ್ಪ, (ಹೀಗೆ ಇದೆ =) ಇದು ನಿಜ. ಆದರೆ ಹೀಗಿದ್ದರೂ ನನಗೆ ಬಹಳ ಅಂಜಿಕೆ. ಏಕೆಂದರೆ ಸಂಜೀವಕನು ಬುದ್ಧಿವಂತನು, ಮತ್ತು ಸಿಂಹವು ಭಯಂಕರವಾದದ್ದು. ಆದ್ದರಿಂದ ನಿನಗೆ ಬುದ್ಧಿಯ ಗಟ್ಟಿತನವಿದ್ದರೂ ಪಿಂಗಲಕನಿಂದ ಅವನನ್ನು ಅಗಲಿಸು (ವದಕ್ಕೆ ಅಶಕ್ತನು=) ವದು ನಿನ್ನಿಂದಾಗಲಾರದು.'

ದಮನಕನೆಂದಿತು : "ಅಣ್ಣ, ಅಶಕ್ತನೂ ಶಕ್ತನೇ. ಇಲ್ಲಿ ಬುದ್ಧಿವಂತರಿಗೆ ಅಸಾಧ್ಯವಾದದ್ದು ಯಾವದೂ ಇರುವದಿಲ್ಲ; 'ಯಾವನಿಗೆ ಬುದ್ಧಿಯೋ ಅವನಿಗೇ ಬಲವು ; ಬುದ್ಧಿಹೀನನಿಗೆ ಬಲವೆಲ್ಲಿಯದು ?' ಎಂದು (ಹೇಳಲ್ಪಟ್ಟ್ಯೊ ಇದೆ =) ಬಲ್ಲವರು ಹೇಳಿಯೂ ಇರುತ್ತಾರೆ. ಆದ್ದರಿಂದ (ನೀನು ಹೇಳುವದಾದರೆ =) ನೀನು ಒಪ್ಪಿದರೆ, ಅಲ್ಲಿಗೇ ಹೋಗಿ ನನ್ನ ಬುದ್ಧಿಯ ಹೆಚ್ಚುಗಾರಿಕೆಯಿಂದ ಅವರಿಬ್ಬರ (ಮೈತ್ರಿಯ ಭೇದವನ್ನು ಮಾಡುತ್ತೇನೆ =) ಮೈತ್ರಿಯನ್ನು ತಪ್ಪಿಸುತ್ತೇನೆ."

ಕರಟಕನೆಂದಿತು : 'ಅಪ್ಪ, ಹಾಗಾದರೆ (ಹೋಗು =) ಹೊರಡು; (ನಿನ್ನ ಹಾದಿಗಳು ಒಳ್ಳೆಯವಾಗಲಿ =) ನಿನಗೆ ಶುಭವಾಗಲಿ ! ಇಷ್ಟವಿದ್ದಂತೆ (ಮಾಡಲ್ಪಡಲಿ =) ಮಾಡು.'

# ಚಿಂತನ

೧. ಕ್ಷುತ್ಕ್ಷಾಮಕಣ್ಠೌ । 'ಕ್ಷುಧಾ ಕ್ಷಾಮಃ ಕಣ್ಠಃ ಯಯೋಸ್ತೌ' ಎಂದು ವಿಗ್ರಹ. ಕ್ಷುತ್ ಕ್ಷುಧೌ ಕ್ಷುಧಃ - ಇದು ಧಕಾರಾಂತ ಸ್ತ್ರೀಲಿಂಗಶಬ್ದ. 'ಕ್ಷಾಮ' ಎಂದರೆ ಒಣಗಿದ.

೨. ಪರಸ್ಪರಮ್ । ಇದು ಅವ್ಯಯ. ಒಬ್ಬರೊಡನೊಬ್ಬರು ಎಂದರ್ಥ. 'ಪರಸ್ಪರೇಣ' ಎಂದೂ ಹೇಳಬಹುದು.

೩. ಬ್ರೂತೇ । ಇದು ಎರಡನೆಯ ಗಣದ ಬ್ರೂಧಾತುವಿನ ರೂಪ. ಬ್ರೂತೇ ಬ್ರುವಾತೇ ಬ್ರುವತೇ । ಮುಂದಿನ ಪಾಠದಲ್ಲಿ ೨ನೆಯ ಗಣದ ಕೆಲವು ಧಾತುಗಳ ರೂಪಗಳನ್ನು ಕೊಡುವೆವು.

೪. ಅಪ್ರಧಾನತಾಂ ಗತೌ = ಅಮುಖ್ಯತೆಯನ್ನು ಹೊಂದಿದೆವು, ಅಮುಖ್ಯರಾದೆವು. 'ಅಪ್ರಧಾನೌ ಸಂಪನ್ನೌ' ಅಥವಾ 'ಜಾತೌ' - ಎಂದೂ ಹೇಳಬಹುದು.

೫. ಅಪ್ರಧಾನತಾ । 'ಅಪ್ರಧಾನಸ್ಯ ಭಾವಃ' ಎಂದು ಬಿಡಿಸಿರಿ. ತಾ, ತ್ವಮ್ - ಇವು ಭಾವಾರ್ಥವನ್ನು ಹೇಳುವ ಪ್ರತ್ಯಯಗಳು. ಹೀಗೆಯೇ ಘಟತಾ, ಘಟತ್ವಮ್; ದುಷ್ಟತಾ, ದುಷ್ಟತ್ವಮ್ - ಇತ್ಯಾದಿ.

೬. ಕಿಂ ಕ್ರಿಯತೇ (ಕ್ರಿಯತಾಮ್) । ಕರ್ತರಿಪ್ರಯೋಗದಲ್ಲಿ 'ಕಿಂ ಕುರ್ಮಃ ?

೭. ತ್ವದೀಯವಚನಂ ನ ಕರೋತಿ । ವಚನಂ ಕರೋತಿ, ವಚನೇ ತಿಷ್ಠತಿ' - ಇವೆರಡಕ್ಕೂ 'ಹೇಳಿದಂತೆ ಮಾಡುತ್ತಾನೆ' ಎಂದೇ ಅರ್ಥ. ಇಲ್ಲಿ ವಚನವೆಂದರೆ ಬುದ್ಧಿಯ ಮಾತು.

೮. ಶಷ್ಪಭೋಜೀ । ನಕಾರಾಂತ. 'ಶಷ್ಪಾಣಿ ಭೋಕ್ತುಂ ಶೀಲಮಸ್ಯ' ಎಂದು ಬಿಡಿಸಬೇಕು. 'ಇಂಥ ಸ್ವಭಾವವುಳ್ಳ' ಎಂಬರ್ಥದಲ್ಲಿ ಇನ್ ಎಂಬ ಪ್ರತ್ಯಯ. ಹೀಗೆಯೇ ಚಿರಪ್ರವಾಸೀ (ಯಾವಾಗಲೂ ಪ್ರಯಾಣಮಾಡುತ್ತಿರುವವ), ಪರಾನ್ನಭೋಜೀ (ಮತ್ತೊಬ್ಬರ ಅನ್ನವನ್ನೇ ಭುಂಜಿಸುತ್ತಿರುವವ), ಪರಾವಸಥಶಾಯೀ (ಮತ್ತೊಬ್ಬರ ಮನೆಯಲ್ಲಿಯೇ ಮಲಗುತ್ತಿರುವವ =) ವಾಸಮಾಡುತ್ತಿರುವವ, ಬಹುದಾಯೀ (ಬಹಳವಾಗಿ ದಾನಮಾಡುತ್ತಿರುವವ) ಇತ್ಯಾದಿ. ನಪುಂಸಕಲಿಂಗದಲ್ಲಿ 'ಮಧುರಾಗಾಮೀನಿ' 'ಮಂದಗಾಮೀನಿ,' 'ಕ್ಷಿಪ್ರಫಲ ದಾಯೀನಿ;' ಸ್ತ್ರೀಲಿಂಗ: 'ಮನ್ದಗಾಮಿನೀ' ।

೯. 'ಸ್ವಹಸ್ತೇನೈವ ಅಙ್ಗಾರಾಃ ಕರ್ಷಿತಾಃ' । 'ನಿನಗೆ ನೀನೇ ಕೇಡುಮಾಡಿಕೊಂಡೆ' ಎಂಬರ್ಥದ ವಾಕ್ಯ. ಕರ್ಷಿತ - ಎಳೆಯಲ್ಪಟ್ಟ; 'ಕೃಷ್ಟ' (ಉತ್ತ) ಎಂದೂ ಈ ಧಾತುವಿಗೆ ಭೂತಕೃದಂತ ರೂಪವಿದೆ.

೧೦. ವಾಚ್ಯಃ । ಹೇಳಲ್ಪಡತಕ್ಕವನು, ಅವನಿಗೆ ಹೇಳಬೇಕು. ಭಾವಾರ್ಥದಲ್ಲಿ ಇವು ಕೃದಂತರೂಪಗಳು : 'ವಾಚ್ಯಮ್', 'ವಚನೀಯಮ್', 'ವಕ್ತವ್ಯಮ್', 'ವಚನಮ್', 'ವ್ಯಕ್ತಿಃ' (ಇದು ಪ್ರಚುರವಾಗಿಲ್ಲ); ಇವಕ್ಕೆಲ್ಲ ಹೇಳತಕ್ಕದ್ದು, ಹೇಳುವಿಕೆ - ಎಂದರ್ಥ.

೧೧. ವಿಶ್ಲೇಷಯಿಷ್ಯಾಮಿ । ಸ್ಫೋಟಯಿಷ್ಯಾಮಿ, ವಿಯೋಜಯಿಷ್ಯಾಮಿ - ಇವೆಲ್ಲ

ಪರ್ಯಾಯಗಳು. 'ಶ್ಲಿಷ್' ಧಾತುವಿಗೆ ಪ್ರೇರಕಾರ್ಥರೂಪ. ಶ್ಲೇಷಯ (ಅಂಟಿಸು) ; ವಿಶ್ಲೇಷಯ (ಬಿಡಿಸು).

೧೨. ಕಥಮಪಿ ಕೇನಾಪಿ ಪ್ರಕಾರೇಣ. 'ಹೇಗೋ', 'ಕಷ್ಟದಿಂದ' - ಎಂಬರ್ಥದಲ್ಲಿ ಇದಕ್ಕೆ ಪ್ರಯೋಗ.

೧೩. ಜ್ಞಾಸ್ಯತಿ । ಜಾನೀಯಾತ್ (ತಿಳಿದಾನು) ಎಂಬರ್ಥದಲ್ಲಿ ಬಂದಿದೆ.

೧೪. ನೋದ್ಯಮಸ್ತ್ಯಾಜ್ಯಃ । 'ನ ತು ಉದ್ಯಮಸ್ತ್ಯಾಜ್ಯಃ' ಎಂದು ತುಶಬ್ದವನ್ನು ಸೇರಿಸಿದರೆ ಸ್ಪಷ್ಟವಾಗುತ್ತದೆ; ಹೀಗೆಯೇ 'ಮಮೈವಾಯಂ ದೋಷಃ, ನ ಸ್ವಾಮಿನಃ' - ಎಂಬಲ್ಲಿಯೂ : ನ ತು ಸ್ವಾಮಿನಃ' ಎನ್ನಬಹುದು. 'ತು' ಇಲ್ಲದಿದ್ದರೂ ಸಾಗುತ್ತದೆ.

೧೫. ಮಿಥೋ ವಿಯೋಜಯಿಷ್ಯಾಮಿ । ಮಿಥಃ ಎಂಬುದು ಅವ್ಯಯ. (ಪರಸ್ಪರಾತ್ ಎಂಬ) ಪಂಚಮ್ಯರ್ಥದಲ್ಲಿ ಬಂದಿದೆ. ಮಿಥೋ ಮನ್ತ್ರಯೇತೇ । ಮಿಥೋ ದೂಷಯತಃ । ಮಿಥಃ ಪ್ರಯೋಜನಮಸ್ತಿ । ಮಿಥಃ ಕ್ರುಧ್ಯತಃ । ಇಲ್ಲಿ ಬೇರೆಬೇರೆಯ ವಿಭಕ್ತಿಗಳ ಅರ್ಥದಲ್ಲಿ ಪ್ರಯೋಗಿಸಿದೆ. ಅರ್ಥವನ್ನು ಊಹಿಸಿರಿ. 'ಮಿಥಃ' ಎಂಬ ಅವ್ಯಯಕ್ಕೆ 'ರಹಸ್ಯವಾಗಿ' ಎಂದೂ ಅರ್ಥವಿದೆ.

೧೬. ತದ್ಯದಿ ಭವಾನ್ ಕಥಯತಿ । 'ನೀನು ಹಾಗೆ ಮಾಡು ಎಂದರೆ', 'ನಿನಗೆ ಒಪ್ಪಿಗೆಯಾದರೆ' ಎಂದರ್ಥ. ಹಿಂದೆ [೫೯ನೆಯ ಪುಟ] ದಲ್ಲಿ 'ಸ್ವಾಮೀ ಯದಿ ಕಥಯತಿ' ಎಂಬ ವಾಕ್ಯವನ್ನು ಪ್ರಯೋಗಿಸಿರುವದನ್ನು ನೋಡಿ.

## ಅಭ್ಯಾಸ ೩೧

೧. ಈ ಕಥಾಭಾಗವನ್ನು ಕನ್ನಡಿಸಿರಿ :

बभूव गङ्गादक्षिणकूले पारिभद्रो नाम राजा । स च प्रकृत्या भीरुः पितुरुपार्जिते राज्ये मन्त्रिभिः क्रियमाणप्रभुरभूत् (अभवत्) । पश्चात् तस्य भीरुतां दृष्ट्वा संनिकृष्टा राजानः तद्भूमिसीमानम् आचक्रमुः । यथा यथा तस्य सीमाम् आक्रान्तवन्तः तथा तथा स भूमिं तत्याज ।।

क्रमेण शत्रूणाम् आक्रमं तस्य राज्ञो भीरुतां च दृष्ट्वा मन्त्रिण ऊचुः - 'देव, सहिष्णुतया भूमिराक्रान्तैव शत्रुभिः । परिशिष्टरक्षणार्थमपि शक्तिर्दर्शयितव्या भवति ।।'

राजोवाच - 'प्रथमं सन्धिरेव क्रियताम्, पश्चात् कर्तव्यमेव युद्धम् ।।'

मन्त्रिण ऊचुः - 'युद्धं चेत् कर्तव्यं तदिदानीमेव किं न क्रियते ? अवश्यकर्तव्ये कर्मणि अलं कालातिपातेन ।।'

राजोवाच - 'युद्धे सति करितुरगपदातयः संदेहे पातयितव्याः ॥'

मन्त्रिणा ऊचुः - 'यदि युद्धं न कर्तव्यं तदा सेनया किं प्रयोजनम् ? युद्धप्रयोजनेनैव सेना पतिष्यति युद्धे ॥'

-೨. ಈ ಮಾತುಗಳನ್ನು ಉಪಯೋಗಿಸಿ ಮೇಲಿನ ಕಥಾವಾಕ್ಯಗಳನ್ನು ಬರೆಯಿರಿ; ಅವಶ್ಯವಾದ ಕಡೆಯಲ್ಲಿ ವಾಕ್ಯಗಳ ರೂಪವನ್ನು ಬದಲಾಯಿಸಿಕೊಳ್ಳಿರಿ :

अस्ति, अभ्यषिञ्चन्, अधैर्यम्, प्रान्तस्थैः, आचक्रमे, त्यक्ता आहुः, क्षमाशीलत्वात्, एवमाक्रम्यते, करिष्यामः, कालहरणम्, संदेहे नियोक्ष्येरन्, किमिति सेनां रक्षामः ?

## ೨೦. ಎರಡನೆಯ ಗಣದ ಧಾತುಗಳು[೧]

೬೦. ಎರಡನೆಯ ಗಣದ ಧಾತುಗಳು ಕೆಲವೇ ಇದ್ದರೂ ಅವುಗಳ ರೂಪಗಳನ್ನು ನೆನಪಿಡುವದು ಕಷ್ಟ. ಅವುಗಳನ್ನು ಪ್ರಯೋಗಿಸಿರುವ ವಾಕ್ಯಗಳನ್ನು ನೋಡಿನೋಡಿ ಮನದಟ್ಟು ಮಾಡಿಕೊಳ್ಳಬೇಕು.

**ಆಕಾರಾಂತಧಾತು** या - ಹೋಗು (ಪರಸ್ಮೈಪದ)

| ವರ್ತಮಾನ | | | ಅನದ್ಯತನಭೂತ | | |
|---|---|---|---|---|---|
| याति | यातः | यान्ति | अयात् | अयाताम् | अयान्, अयुः |
| यासि | याथः | याथ | अयाः | अयातम् | अयात |
| यामि | यावः | यामः | अयाम् | अयाव | अयाम |

| ಆಜ್ಞಾರ್ಥ | | | ವಿಧ್ಯಾದ್ಯರ್ಥ | | |
|---|---|---|---|---|---|
| यातु-यातात् | याताम् | यान्तु | यायात् | यायाताम् | यायुः |
| याहि | यातम् | यात | यायाः | यायातम् | यायात |
| यानि | याव | याम | यायाम् | यायाव | यायाम |

ವಿಶೇಷ : (೧) ಧಾತುಗಳಿಗೆ ವಿಕರಣವು ಸೇರದೆಯೇ ಪ್ರತ್ಯಯಗಳು ಸೇರಿವೆ.

(೨) ಅನದ್ಯತನಭೂತ ಪ್ರ. ಬಹುವಚನದಲ್ಲಿ ಉಃ ಎಂಬ ಪ್ರತ್ಯಯವು ವಿಕಲ್ಪ

---

೧. ಈ ಪಾಠವನ್ನು ಒಂದು ಸಲ ಓದಿ ಬಿಟ್ಟುಬಿಡಬಹುದು. ಈ ಗಣದ ಧಾತುಗಳು ಬಂದಾಗ ಈ ಪಾಠವನ್ನು ಪರಾಮರ್ಶೆಮಾಡುತ್ತಿರುವೆವು.

ದಿಂದ ಸೇರುತ್ತದೆ ; ಹಿಂದಿನ ಆಕಾರಕ್ಕೆ ಲೋಪವಾಗಿದೆ. ದರಿದ್ರಾ - ಬಡವನಾಗು ಎಂಬ ಧಾತುವಿಗೆ ಮಾತ್ರ 'ಅದರಿದ್ರುಃ' ಎಂದು ಒಂದೇ ರೂಪ. ಇದರಂತೆ ನಡೆಯುವ ಧಾತುಗಳು : ಖ್ಯಾ - ಹೇಳು ; ದ್ರಾ - ಓಡು, ನಿದ್ರಿಸು ; ಭಾ - ಹೊಳೆ ; ದಾ - ತೆಗೆದುಕೊ; ವಾ - (ಗಾಳಿ) ಬೀಸು ; ಸ್ನಾ - ಸ್ನಾನಮಾಡು ; ಮಾ - ಅಳೆ.

(೩) ಯಯೌ - [ಲಿಟ್ ಪುಟ ೮೧] ; ಯಾಸ್ಯತಿ, ಯಾತಾ - ಭವಿಷ್ಯದ್ರೂಪಗಳು [ಪುಟ ೮೨] .

೬೧. ಇಈಕಾರಾಂತ ಉಊಕಾರಾಂತ ಧಾತುಗಳ ಅಂತ್ಯ ಸ್ವರವು ಸ್ವರಾದಿಯಾದ ದುರ್ಬಲಪ್ರತ್ಯಯಗಳು ಸೇರುವಾಗ ಇಯ್, ಉಯ್ ಎಂದಾಗುವದು.

अधि + इ = ಅಧ್ಯಯನಮಾಡು (ಆತ್ಮನೇಪದ)

| ವರ್ತಮಾನ | | | ಅನದ್ಯತನಭೂತ | | |
|---|---|---|---|---|---|
| अधीते | अधीयाते | अधीयते | अध्यैत | अध्यैयाताम् | अध्यैयत |
| अधीषे | अधीयाथे | अधीध्वे | अध्यैथाः | अध्यैयाथाम् | अध्यैध्वम् |
| अधीये | अधीवहे | अधीमहे | अध्यैयि | अध्यैवहि | अध्यैमहि |

| ಆಜ್ಞಾರ್ಥ | | | ವಿಧ್ಯಾದ್ಯರ್ಥ | | |
|---|---|---|---|---|---|
| अधियात् | अधीयातम् | अधीयीरन् | अधीयीत | अधीयीयाताम् | अधीयीरन् |
| अधीष्व | अधीयाथाम् | अधीध्वम् | अधीयीथाः | अधीयीयाथाम् | अधीयीध्वम् |
| अध्ययै | अध्ययावहै | अध्ययामहै | अधीयीय | अधीयीवहि | अधीयीमहि |

ವಿಶೇಷ : (೧) ಇಕಾರಕ್ಕೆ ಇಯ್ ಬಂದು ಅನದ್ಯತನದ ಅಕಾರವು ಆಕಾರವಾಗಿ ಅದಕ್ಕೆ ಸೇರಿ ಅಧ್ಯೈಯಿ, ಅಧ್ಯೈಯಾಥಾಮ್,ಅಧ್ಯೈಯಾತಾಮ್ ಎಂದಾಗಿದೆ (೨ನೆಯ ಭಾಗ ೫೬ ಖಂಡ). ಆಜ್ಞಾರ್ಥದ ಉತ್ತಮಪುರುಷದ ಪ್ರತ್ಯಯಗಳು ಪ್ರಬಲವಾದ್ದರಿಂದ ಇಕಾರಕ್ಕೆ ಏಕಾರವು ಬಂದು ಅಯ್ ಆದೇಶವಾಗಿದೆ. ಅಧ್ಯಯೈ ಅಧ್ಯಯಾವಹೈ ಅಧ್ಯಯಾಮಹೈ - ಎಂದು ರೂಪಗಳಾಗಿವೆ.

(೨) 'इ- ಹೋಗು' ಎಂಬ ಧಾತುವಿಗೆ ಮಾತ್ರ 'ಇಯ್' ಬರುವದಿಲ್ಲ; 'ಯ್' ಆದೇಶವಾಗುತ್ತದೆ. ಉದಾ : ಯನ್ತಿ; ಸೌಕರ್ಯಕ್ಕಾಗಿ ರೂಪಗಳನ್ನೆಲ್ಲ ಮುಂದೆ ಕೊಟ್ಟಿದೆ :

| ೧ | | | ೨ | | |
|---|---|---|---|---|---|
| एति | इतः | यन्ति | ऐत् | ऐताम् | आयन् |
| एषि | इथः | इथ | ऐः | ऐतम् | ऐत |
| एमि | इवः | इमः | आयम् | ऐव | ऐम |

| ೩ | | | ೪ | | |
|---|---|---|---|---|---|
| एतु-इतात् | इताम् | यन्तु | इयात् | इयाताम् | इयुः |
| इहि-इतात् | इतम् | इत | इयाः | इयातम् | इयात |
| अयानि | अयाव | अयाम | इयाम् | इयाव | इयाम |

ಲಿಟ್ : ಇಯಾಯ, [ಪುಟ. ೬೯] ; ಲುಟ್ : ಏತಾ ; ಲೃಟ್ : ಏಷ್ಯತಿ ।

### नु - ಹೊಗಳು (ಪರಸ್ಮೈಪದ)

| ೧ | | | ೨ | | |
|---|---|---|---|---|---|
| नौति | नुतः | नुवन्ति | अनौत् | अनुताम् | अनुवन् |
| नौषि | नुथः | नुथ | अनौः | अनुतम् | अनुत |
| नौमि | नुवः | नुमः | अनवम् | अनुव | अनुम |

| ೩ | | | ೪ | | |
|---|---|---|---|---|---|
| नौतु-नुतात् | नुताम् | नुवन्तु | नुयात् | नुयाताम् | नुयुः |
| नुहि-नुतात् | नुतम् | नुत | नुयाः | नुयातम् | नुयात |
| नवानि | नवाव | नवाम | नुयाम् | नुयाव | नुयाम |

ವಿಶೇಷ : (೧) ವ್ಯಂಜನಾದಿಯಾದ ಪ್ರಬಲಪ್ರತ್ಯಯದ ಹಿಂದೆ ಉಕಾರಕ್ಕೆ ವೃದ್ಧಿ.

(೨) ಕು-ಕೂಗು; ಯು-ಮಿಶ್ರಮಾಡು ; ಸ್ನು-ತೊಟ್ಟಿಕ್ಕು, ಜಿನುಗು-ಮುಂತಾದ ಧಾತುಗಳಿಗೆ ಹೀಗೆಯೇ ರೂಪಗಳು.

### ह्नु - ತೆಗೆದುಹಾಕು, ಮುಚ್ಚು (ಆತ್ಮನೇಪದ)

| ೧ | | | ೨ | | |
|---|---|---|---|---|---|
| ह्नुते | ह्नुवाते | ह्नुवते | अह्नत | अह्नुवाताम् | अह्नुवत |
| ह्नुषे | ह्नुवाथे | ह्नुध्वे | अह्नुथाः | अह्नुवाथाम् | अह्नुध्वम् |
| ह्नुवे | ह्नुवहे | ह्नुमहे | अह्नुवि | अह्नुवहि | अह्नुमहि |

| ೩ | | | ೪ | | |
|---|---|---|---|---|---|
| ह्नुताम् | हन्उवाताम् | ह्नुवताम् | ह्नुवीत | ह्नुवीयाताम् | ह्नुवीरन् |
| ह्नुष्व | ह्नुवाथाम् | ह्नुध्वम् | ह्नुवीथाः | ह्नुवीयाथाम् | ह्नुवीध्वम् |
| ह्नुवै | ह्नुवावहै | ह्नुवामहै | ह्नुवीय | ह्नुवीवहि | ह्नबीमहि |

ವಿಶೇಷ : (೧) ಇಲ್ಲಿ ವೃದ್ಧಿಯಾಗುವ ನಿಮಿತ್ತವಿಲ್ಲ; 'ಉವ್' ಎಂಬ ಆದೇಶವು ಮಾತ್ರ ಬಂದಿದೆ.

(೨) 'ಸ್ತು' ಧಾತುವಿಗೆ ವ್ಯಂಜನಾದಿಪ್ರತ್ಯಯಗಳು ಪರವಾದಾಗ 'ಈ' ಎಂಬ ಆಗಮವು ವಿಕಲ್ಪದಿಂದ ಬರುವದು. ಸ್ತವೀತಿ, ಸ್ತೌತಿ - ಹೊಗಳುತ್ತಾನೆ. 'ರು' ಧಾತುವಿಗೂ ಹೀಗೆಯೇ : ರೌತಿ, ರವೀತಿ - ಕೂಗುತ್ತದೆ

೬೨. ಊಕಾರಾಂತ ಬ್ರೂ (ಹೇಳು, ಅನ್ನು) ಧಾತುವಿನ ರೂಪಗಳನ್ನು ಮುಂದೆ ಕೊಟ್ಟಿದೆ :

### ಪರಸ್ಮೈಪದ

| | ೧ | | | ೨ | |
|---|---|---|---|---|---|
| ब्रवीति | ब्रूतः | ब्रुवन्ति | अब्रवीत् | अब्रूताम् | अब्रुवन् |
| आह | आहतुः | आहुः | | | |
| ब्रवीषि | ब्रूथः | ब्रूथ | अब्रवीः | अब्रूतम् | अब्रूत |
| आत्थ | आहथुः | | | | |
| ब्रवीमि | ब्रूवः | ब्रूमः | अब्रवम् | अब्रूव | अब्रूम |

| | ೩ | | | ೪ | |
|---|---|---|---|---|---|
| ब्रवीतु-ब्रूतात् | ब्रूताम् | ब्रुवन्तु | ब्रूयात् | ब्रूयाताम् | ब्रूयुः |
| ब्रुहि-ब्रुतात् | ब्रुतम् | ब्रूत | ब्रूयाः | ब्रूयातम् | ब्रूयात |
| ब्रवाणि | ब्रवाव | ब्रवाम | ब्रूयाम् | ब्रूयाव | ब्रूयाम |

### ಆತ್ಮನೇಪದ

| | ೧ | | | ೨ | |
|---|---|---|---|---|---|
| ब्रूते | ब्रुवाते | ब्रुवते | अब्रूत | अब्रुवाताम् | अब्रुवत |
| ब्रूषे | ब्रुवाथे | ब्रूध्वे | अब्रूथाः | अब्रुवाथाम् | अब्रूध्वम् |
| ब्रुवे | ब्रूवहे | ब्रूमहे | अब्रुवि | अब्रूवहि | अब्रूमहि |

| | ೩ | | | ೪ | |
|---|---|---|---|---|---|
| ब्रूताम् | ब्रुवाताम् | ब्रुवताम् | ब्रुवीत | ब्रुवीयाताम् | ब्रुवीरन् |
| ब्रूष्व | ब्रुवाथाम् | ब्रूध्वम् | ब्रुवीथाः | ब्रुवीयाथाम् | ब्रुवीध्वम् |
| ब्रवै | ब्रवावहै | ब्रवामहै | ब्रुवीय | ब्रुवीवहि | ब्रुवीमहि |

ವಿಶೇಷ : (೧) ವ್ಯಂಜನಾದಿಯಾದ ಪ್ರಬಲಪ್ರತ್ಯಯಗಳ ಹಿಂದೆ ಈಕಾರಾಗಮವು ನಿಯಮದಿಂದ ಬರುತ್ತದೆ. ಸ್ತು, ರು ಧಾತುಗಳಂತೆ ವಿಕಲ್ಪವಿಲ್ಲ. ಇಲ್ಲಿ ಉಕಾರಕ್ಕೆ ಗುಣವಾಗಿದೆ.

(೨) ಪ್ರಥಮಪುರುಷದ ಎಲ್ಲಾವಚನಗಳಿಗೂ ಮಧ್ಯಮಪುರುಷದ ಏಕದ್ವಿವಚನಗಳಿಗೂ 'ಆಹ' ಮುಂತಾದ ಬೇರೆ ರೂಪಗಳೂ ಬಂದಿವೆ.

(೩) ಸೂ - ಹಡೆ, ಆತ್ಮನೇಪದ. ಇದಕ್ಕೆ ಪ್ರಬಲಪ್ರತ್ಯಯಗಳಾದ ಐ ಆವಹೈ ಆಮಹೈ - ಇವುಗಳು ಸೇರುವಾಗ ಗುಣವಾಗುವದಿಲ್ಲ. ಸುವೈ ಸುವಾವಹೈ ಸುವಾಮಹೈ ; ಮಿಕ್ಕದ್ದೆಲ್ಲ ಬ್ರೂ- ಧಾತುವಿನಂತೆಯೇ.

(೪) ಲಿಟ್ ಮುಂತಾದ ರೂಪಗಳು ಬ್ರೂ ಧಾತುವಿಗೆ ಇಲ್ಲ. ವಚ್ ಧಾತುವಿನ ರೂಪಗಳನ್ನೇ ಉಪಯೋಗಿಸಬೇಕು. (೬೬ನೆಯ ಖಂಡವನ್ನು ನೋಡಿ).

೬೩. ಋಕಾರಾಂತವಾದ जागृ (ಎಚ್ಚರು, ಎಚ್ಚರಿಕೆಯಿಂದ ಇರು) ಎಂಬ ಧಾತುವಿಗೆ ಅನದ್ಯತನಭೂತದ ಪ್ರಥಮಮಧ್ಯಮಪುರುಷಗಳ ಏಕವಚನದಲ್ಲಿ ಪ್ರತ್ಯಯಕ್ಕೆ ಲೋಪ.

| ೧ | | | ೨ | | |
|---|---|---|---|---|---|
| जागर्ति | जागृतः | जाग्रति | अजागः | अजागृताम् | अजागरुः |
| जागर्षि | जागृथः | जागृथ | अजागः | अजागृतम् | अजागृत |
| जागर्मि | जागृवः | जागृमः | अजागरम् | अजागृव | अजागृम |

| ३ | | | ४ | | |
|---|---|---|---|---|---|
| जागर्तु-जागृतात् | जागृताम् | जाग्रतु | जागृयात् | जागृयाताम् | जागृयुः |
| जागृहि-जागृतात् | जागृतम् | जागृत | जागृयाः | जागृयातम् | जागृयात |
| जागराणि | जागराव | जागराम | जागृयाम् | जागृयाव | जागृयाम |

ವಿಶೇಷ : (೧) ಅನದ್ಯತನಭೂತದಲ್ಲಿ ಪ್ರಥಮಮಧ್ಯಮೈಕವಚನಗಳಿಗೆ ಒಂದೇ ರೂಪ.

(೨) ವರ್ತಮಾನ ಪ್ರ. ಬಹುವಚನದಲ್ಲಿ ಪ್ರತ್ಯಯದ ನಕಾರಕ್ಕೆ ಲೋಪ.

(೩) ಇದಕ್ಕೆ ಲಿಡ್ರೂಪವು ಎರಡೂ ಬಗೆಯಲ್ಲಿ ಆಗುವದು.

जजागार जजागरतुः जजागरुः । जजागरिथ जजागरथुः जजागर । जजागार-जजागर जजागरिव जजागरिम । ಅಥವಾ जागरामास ಇತ್ಯಾದಿ.

(೪) ಭವಿಷ್ಯದ್ರೂಪಗಳು :

'जागरितासि' 'जागरिष्यसि' ।

೬೪. अस् ಧಾತುವಿನ ರೂಪಗಳನ್ನು ಹಿಂದೆ ಅಲ್ಲಲ್ಲಿ ಕೊಟ್ಟಿದೆ. ಇಲ್ಲಿ अद् (ತಿನ್ನು) ಈ ಧಾತುವಿನ ರೂಪಗಳನ್ನು ಕೊಡುವೆವು :

| ೧ | | | ೨ | | |
|---|---|---|---|---|---|
| अत्ति | अत्तः | अदन्ति | आदत् | आत्ताम् | आदन् |
| अत्सि | अत्थः | अत्थ | आदः | आत्तम् | आत्त |
| अद्मि | अद्वः | अद्मः | आदम् | आद्व | आद्म |

| ೩ | | | ೪ | | |
|---|---|---|---|---|---|
| अत्तु-अत्तात् | अत्ताम् | अदन्तु | अद्यात् | अद्याताम् | अद्युः |
| अद्धि-अत्तात् | अत्तम् | अत्त | अद्याः | अद्यातम् | अद्यात |
| अदानि | अदाव | अदाम | अद्याम् | अद्याव | अद्याम |

ವಿಶೇಷ : (೧) ಅನನುನಾಸಿಕವರ್ಗೀಯವ್ಯಂಜನವಾದ ದಕಾರಕ್ಕೆ ಕರ್ಕಶವರ್ಣದ ಹಿಂದೆ ಪ್ರಥಮಾಕ್ಷರವಾದ ತಕಾರವು ಆದೇಶವಾಗಿ ಬಂದಿದೆ.

(೨) ಅನದ್ಯತನದಲ್ಲಿ ಪ್ರಥಮಮಧ್ಯಮಗಳ ಏಕವಚನದ ಹಿಂದೆ ಅಕಾರಾಗಮ. ಈ ಧಾತುವಿಗೆ ಲಿಟ್ ರೂಪಗಳು ಎರಡು ಬಗೆಯಲ್ಲಾಗುವವು :

| | | | | | |
|---|---|---|---|---|---|
| आद | आदतुः | आदुः | जघास | जक्षतुः | जक्षुः |
| आदिथ | आदथुः | आद | जघसिथ | जक्षथुः | जक्ष |
| आद | आदिव | आदिम | जघास-जघस | जक्षिव | जक्षिम |

ಭವಿಷ್ಯದ್ರೂಪಗಳು : अत्तास्मि । अत्स्यति ॥

ವಿಶೇಷ : ಅಸ್ ಧಾತುವಿಗೆ ಲಿಟ್ ಮುಂತಾದ ರೂಪಗಳಿಲ್ಲ ; ಭೂಧಾತುವಿನ ರೂಪಗಳನ್ನೇ ಉಪಯೋಗಿಸುವರು.

## ಅಭ್ಯಾಸ ೩೨

ಈ ಕೆಳಗಿನ ವಾಕ್ಯಗಳನ್ನು ಕನ್ನಡಿಸಿರಿ. ಸಾಧ್ಯವಾದ ಕಡೆಯಲ್ಲಿ ಕ್ರಿಯಾಪದಗಳಿಗೆ ಆಯಾ ಪುರುಷದ ರೂಪಗಳನ್ನೆಲ್ಲ ಬರೆಯಿರಿ :

१. शिवास्ते पन्थानः सन्तु । २. अथ तस्य सिंहस्य द्वौ शृगालौ मन्त्रिपुत्रौ भ्रष्टाधिकारौ आस्ताम् । ३. अथ आगच्छन्तं दमनकम् आलोक्य पिङ्गलको

द्वाःस्थम् अब्रवीत् । ४. हे कृष्ण, किं मृत्तिकां अत्सि ? ५. तद् विश्रब्धं ब्रूहि यत्किञ्चिद् वक्तुकामः । ६. पिङ्गलकश्चिन्तयामासयोग्योऽयं दृश्यते । ७. दमनकोऽपि सञ्जीवकशब्दानुसारी प्रतस्थे । ८. अस्त्वेदं स महात्मा, वयं कृपणाः ।

## २१. मित्रभेदः (अनुवृत्तः)

६५. अथ दमनकः सञ्जीवकवियुक्तं पिङ्गलकम् अवलोक्य तत्रान्तरे प्रगम्य समुपविष्टः ।।

पिङ्गलकोऽपि तमाह - 'भद्र, किं चिराद् दृष्टः ?'

दमनक आह - 'न किञ्चित् देवपादानाम् अस्माभिः प्रयोजनम् । तेन अहं नागच्छामि । तथापि राजप्रयोजनविनाशम् अवलोक्य संदह्यमानहृदयो व्याकुलतया स्वयमेव अभ्यागतो वक्तुम्' ।।

अथ तस्य साभिप्रायं वचनं आकर्ण्य पिङ्गलक आह - 'किं वक्तुमना भवान् ? तत् कथ्यतां यत् कथनीयमस्ति' ।

स प्राह - "देव, सञ्जीवको युष्मत्पादानाम् उपरि द्रोहबुद्धिरिति विश्वासगतस्य मम विजने इदमाह 'भो दमनक, दृष्टा मया अस्य पिङ्गलकस्य सारासारता । तदहम् एनं हत्वा सकलमृगाधिपत्यं त्वत्साचिव्यपदवीसमन्वितं करिष्यामि' ।।"

पिङ्गलकोऽपि तद् वज्रसारप्रहारसदृशं दारुणं क्रूरं वचः समाकर्ण्य मोहमुपगतो न किञ्चिदपि उक्तवान् ।।

दमनकोऽपि तस्य तमाकारम् आलोक्य चिन्तितवान् 'अयं तावत् सञ्जीवकनिबद्धरागः । तन्नूनम् अनेन मन्त्रिणां विनाशम् अवाप्स्यति । तत् किमत्र युक्तम् ?' इति ।।

पिङ्गलकोऽपि चेतनां समासाद्य कथमपि तमाह - 'सञ्जीवकस्तावत् प्राणसमो भृत्यः । स कथं ममोपरि द्रोहबुद्धिं करोति ?' ।।

दमनक आह - 'देव, भृत्योऽभृत्य इति अनैकान्तिकमेतत् । अक्तं च -

न सोऽस्ति पुरुषो राज्ञां यो न कामयते श्रियम् ।
अशक्ता एव सर्वत्र नरेन्द्रं पुर्युपासते ।।

ಬಳಿಕ ದಮನಕನೂ (ಸಂಜೀವಕನಿಂದ ಬಿಡಿಸಲ್ಪಟ್ಟ =) ಸಂಜೀವಕನಿಲ್ಲದೆ ಒಬ್ಬನೇ ಇದ್ದ ಪಿಂಗಲಕನನ್ನು ನೋಡಿ ಆ ನಡುವೆ ಮುಂದಕ್ಕೆ ಹೋಗಿ ಎದುರಿಗೆ ಕುಳಿತುಕೊಂಡಿತು.

ಪಿಂಗಲಕನೂ ಅದನ್ನು ಕುರಿತು 'ಅಪ್ಪ,(ಏಕೆ ಬಹುಕಾಲಕ್ಕೆ ಕಾಣಲ್ಪಟ್ಟಿರುವೆ ? =) ನಿನ್ನನ್ನು ಕಂಡು ಬಹಳಕಾಲವಾಯಿತಲ್ಲ,ಏಕೆ ?' ಎಂದಿತು.

ದಮನಕನೂ 'ಬುದ್ಧಿಯವರಿಗೆ ನಮ್ಮಿಂದ ಏನೂ ಪ್ರಯೋಜನವಿಲ್ಲ ;

ಆದ್ದರಿಂದ ನಾನು ಬಂದಿಲ್ಲ. ಹೀಗಿದ್ದರೂ ರಾಜರಿಗೆ ಬೇಕಾದದ್ದು ನಾಶ ವಾಗುವದನ್ನು ಕಂಡು (ಸುಡಲ್ಪಟ್ಟ ಹೃದಯವುಳ್ಳವನಾಗಿ =) ಮನೋವ್ಯಥೆಯಿಂದ ನಾನೇ ಮಾತನಾಡುವದಕ್ಕೆ ಬಂದಿದೇನೆ.

ಆಗ ಅದರ ಅಭಿಪ್ರಾಯ (ದಿಂದೊಡಗೂಡಿದ =) ಗರ್ಭಿತವಾದ ಮಾತನ್ನು ಕೇಳಿ ಪಿಂಗಲಕನೆಂದಿತು : '(ನೀನು ಏನು ಹೇಳಬೇಕೆಂಬ ಮನಸ್ಸುಳ್ಳವನು ? =)

ನಿನ್ನ ಮನಸ್ಸಿನಲ್ಲಿ ಏನು ಇದೆ ? ಏನು ಹೇಳಬೇಕೆಂದಿರುವೆಯೋ (ಅದು ಹೇಳಲ್ಪಡಲಿ =) ಅದನ್ನು ಹೇಳಿಬಿಡು !'

ಅದು ಎಂದಿತು : ''ಬುದ್ಧಿ, ಸಂಜೀವಕನು (ನಾನು) ತಮ್ಮ ಮೇಲೆ ದ್ರೋಹ ಬುದ್ಧಿಯೆಂದು (ವಿಶ್ವಾಸಹೊಂದಿದ =) ನಂಬಿಕೆಯಾದ ನನಗೆ (ಯಾರೂ ಇಲ್ಲದ ಸ್ಥಳದಲ್ಲಿ =) ಏಕಾಂತದಲ್ಲಿ (ಇದನ್ನು ಹೇಳಿತು =) ಹೀಗೆಂದಿತು : 'ಎಲೈ ದಮನಕನೆ, ಪಿಂಗಲಕನ (ಬಲಾಬಲವು ನನ್ನಿಂದ ನೋಡಲ್ಪಟ್ಟಿತು =) ಬಲಾಬಲವನ್ನು ನಾನು ಕಂಡುಕೊಂಡಿರುತ್ತೇನೆ. ಆದ್ದರಿಂದ ನಾನು ಇವನನ್ನು ಕೊಂದು ಸಕಲಮೃಗಗಳ ಒಡೆತನವನ್ನು ನಿನ್ನ ಸಚಿವಪದವಿಯೊಂದಿಗೆ ಮಾಡಿಕೊಳ್ಳುವೆನು'.''

ಪಿಂಗಲಕನೂ ಆ ಸಿಡಿಲುಬಡಿತಕ್ಕೆ ಸಮಾನವಾದ ಕ್ರೂರವಚನವನ್ನು ಕೇಳಿ ಮೂರ್ಛೆಹೊಂದಿ ಏನನ್ನೂ ಹೇಳದೆ ಇತ್ತು. ದಮನಕನೂ ಅದರ ಆ ಭಾವವನ್ನು ಕಂಡು ಹೀಗೆಂದು ಯೋಚಿಸಿಕೊಂಡಿತು : 'ಇದಂತೂ ಸಂಜೀವಕನಲ್ಲಿ (ಬಲವಾಗಿ ಕಟ್ಟಿಹಾಕಲ್ಪಟ್ಟ ರಾಗವುಳ್ಳದ್ದು =) ಬಹಳ ಅನುರಾಗವುಳ್ಳದ್ದಾಗಿದೆ; ಆದ್ದರಿಂದ ನಿಜವಾಗಿಯೂ ಈ ಮಂತ್ರಿಯಿಂದ ರಾಜನು ನಾಶವನ್ನು ಹೊಂದುತ್ತಾನೆ. ಆದ್ದರಿಂದ (ಇಲ್ಲಿ ಯಾವದು ಯುಕ್ತವು ? =) ಈ ಸಂದರ್ಭದಲ್ಲಿ ಏನು ಮಾಡಬೇಕು ?'

ಪಿಂಗಲಕನೂ (ಚೇತನವನ್ನು ಹೊಂದಿ =) ಎಚ್ಚತ್ತು (ಹೇಗೋ =) ಕಷ್ಟದಿಂದ ಅದನ್ನು ಕುರಿತು ಹೀಗೆಂದಿತು : 'ಸಂಜೀವಕನಂತೂ ನನಗೆ ಪ್ರಾಣ ಸಮನಾದ ಭೃತ್ಯನು. ಅವನು ನನ್ನ ಮೇಲೆ ಹೇಗೆ ದ್ರೋಹಬುದ್ಧಿಯನ್ನು (ಮಾಡುತ್ತಾನೆ ? =) ಮಾಡಿಯಾನು ?'

ದಮನಕನೆಂದಿತು : 'ಸ್ವಾಮಿ, ಭೃತ್ಯನು ಅಥವಾ ಅಭೃತ್ಯನು ಎಂಬುದೇನೂ (ಗೊತ್ತಿನದಲ್ಲ =) ಇಲ್ಲಿ ವಿಚಾರಮಾಡತಕ್ಕದ್ದಲ್ಲ. (ಬಲ್ಲವರು) ಹೀಗೆಂದು ಹೇಳಿಯೂ ಇರುತ್ತಾರೆ :

''ಅರಸರುಗಳ ಐಶ್ವರ್ಯವನ್ನು ಬಯಸದೆ ಇರುವಂಥ ಪುರುಷನೇ ಯಾವನೂ ಇಲ್ಲ. (ಎಲ್ಲೆಲ್ಲಿಯೂ =) ಯಾವ ಸಂದರ್ಭದಲ್ಲಿಯಾದರೂ ಅಶಕ್ತರೇ ಅರಸನನ್ನು ಸೇವಿಸುತ್ತಾರೆ.''

## ಚಿಂತನ

೧. **ತತ್ರಾನ್ತರೇ ।** ಆ ನಡುವೆ, ಆ ಸಂದರ್ಭವನ್ನು ಉಪಯೋಗಿಸಿಕೊಂಡು, ಹೀಗೆಯೇ 'ಅತ್ರಾನ್ತರೇ' - ಈ ನಡುವೆ, ಇಷ್ಟರಲ್ಲಿ (in the meanwhile) ಎಂದೂ ಪ್ರಯೋಗಿಸುವರು.

೨. **ಪ್ರಗಮ್ಯ ।** ಗಮ್‌ಧಾತುವಿಗೆ 'ಗತ್ವಾ' ಎಂದು ಭೂತಕೃದಂತಾವ್ಯಯ;'ಪ್ರ' ಎಂಬ ಉಪಸರ್ಗವು ಸೇರಿದ್ದರಿಂದ 'ಪ್ರಗಮ್ಯ' ಎಂದಾಗಿದೆ. ಇದಕ್ಕೆ 'ಪ್ರಣಮ್ಯ' (ನಮಸ್ಕರಿಸಿ) ಎಂಬ ಪಾಠಾಂತರವಿದೆ.

೩. **ಸಮುಪವಿಷ್ಟಃ** = ಸಮುಪಾವಿಶತ್, ಸಮುಪವಿವೇಶ. ಇಲ್ಲಿ 'ಸಮ್' ಎಂಬ ಉಪಸರ್ಗಕ್ಕೆ ಅರ್ಥವಿಶೇಷವೇನೂ ಇಲ್ಲ.

೪. **ಕಿಂ ಚಿರಾತ್ ದೃಷ್ಟಃ ? ನ ಕಿಞ್ಚಿದ್ದೇವಪಾದಾನಾಮಸ್ಮಾಭಿಃ ಪ್ರಯೋಜನಮ್** - ಈ ವಾಕ್ಯಗಳು ಹಿಂದೆ (೩೦. ೩೨) ಬಂದಿವೆ. ಅವುಗಳ ಟಿಪ್ಪಣಿಯನ್ನು ನೋಡಿ.

೫. **ತೇನಾಹಂ ನಾಗಚ್ಛಾಮಿ** = ತತ ಏವಾಹಮ್ ಅದ್ಯ ಯಾವತ್ ನಾಗಚ್ಛಮ್ (ಅಥವಾ ನಾಗತವಾನ್) ।

೬. **ಸ್ವಯಮೇವ ।** ನಾನೇ, ನೀವು ಕರೆಯಿಸದೇ ಇದ್ದರೂ - ಎಂದರ್ಥ. ಸ್ವಯಂ ಶಬ್ದವು ಅವ್ಯಯ. ಇದನ್ನು ಕನ್ನಡಿಸುವಾಗ ಪ್ರಕೃತವಾಗಿರುವ ಕರ್ತೃವನ್ನು ನೋಡಬೇಕು. ರಾಜಾ ಸ್ವಯಮಾಗತಃ - ಅರಸನು ತಾನೇ ಬಂದನು. ತಾನಿ ಸ್ವಯಂ ಪತಿತಾನಿ - ಅವು ತಾವೇ ಬಿದ್ದವು. ತ್ವಂ ಸ್ವಯಂಗಚ್ಛಸಿ ಕಿಮ್ ? - ನೀನೇ ಹೋಗುತ್ತೀಯೊ ? ತೇನ ಸ್ವಯಮ್ ಉಕ್ತಮ್ - ಅವನವನೇ ಹೇಳಿದನು.

೭. **ಸಾಭಿಪ್ರಾಯಮ್ ।** ಮನಸ್ಸಿನಲ್ಲಿ ಯಾವದೋ ಒಂದು ಅಭಿಪ್ರಾಯವನ್ನಿಟ್ಟುಕೊಂಡಿದ್ದು.

೮. ಆಕರ್ಣ್ಯ । ಇದು ಕರ್ಣಶಬ್ದದಿಂದ ಬಂದಿರುವ ನಾಮಧಾತು.

೯. ವಕ್ತುಮನಾಃ । ತುಮುನ್ ಪ್ರತ್ಯಯಾಂತವಾದ ಅವ್ಯಯಕ್ಕೆ ಕಾಮ, ಮನಸ್ - ಎಂಬ ಶಬ್ದಗಳು ಸೇರಿ ಸಮಾಸವಾದರೆ ಅವ್ಯಯದ ಮಕಾರಕ್ಕೆ ಲೋಪ. ವಕ್ತುಂ ಮನಃ ಯಸ್ಯ ಸಃ= ವಕ್ತುಮನಾಃ । (ಷ.ಬ.) ಹೀಗೇಯೇ 'ವಕ್ತುಕಾಮಃ' [ಖಂ.೩೧,ಪು.೪೩]

೧೦. ವಿಜನೇ । ವಿಗತಾ ಜನಾಃ ಯಸ್ಮಾತ್ ತತ್ ವಿಜನಮ್, ತಸ್ಮಿನ್ ।

೧೧. ಯುಷ್ಮತ್ಪಾದಾನಾಮ್ । ಯುಷ್ಮಾಕಮ್ (ನಿಮ್ಮ) ಎಂಬುದಕ್ಕೆ ಗೌರವ ಸೂಚಕವಾದ ಪಾದಶಬ್ದವನ್ನು ಸೇರಿಸಿದೆ. ಹೀಗೆಯೇ 'ತಾತಪಾದಾನಾಮ್' ತಾತಸ್ಯ (ತಂದೆಯ), ಹಿಂದೆ ದೇವಪಾದಾನಾಮ್ (= ದೇವಸ್ಯ) ಎಂದು ಬಳಸಿರುವದನ್ನು ನೋಡಿ.

೧೨. ಯುಷ್ಮತ್ಪಾದಾನಾಮುಪರಿ ದ್ರೋಹಬುದ್ಧಿರಿತಿ = ಯುಷ್ಮಭ್ಯಂ ದ್ರುಹ್ಯಾಮಿತಿ । 'ದ್ರುಹ್' ಎಂಬುದಕ್ಕೆ ಚತುರ್ಥೀವಿಭಕ್ತಿಯು ಬೇಕು ; ದ್ರೋಹಬುದ್ಧಿ ಎಂದಿರುವದರಿಂದ ಸಪ್ತಮ್ಯರ್ಥದಲ್ಲಿ 'ಯುಷ್ಮತ್ಪಾದಾನಾಮುಪರಿ' ಎಂದಿದೆ.

೧೩. ವಿಶ್ವಾಸಂ ಗತಸ್ಯ । ನಂಬಿಕೆಯುಳ್ಳ ; [ಪು. ೫೮] ರಲ್ಲಿ (ಖಂ.೩೭) 'ತಸ್ಯ ವಿಶ್ವಾಸಂ ಗತ್ವಾ' ಎಂದಿರುವದನ್ನು ನೋಡಿ.

೧೪. ಇದಮಾಹ, ಏವಮಾಹ । ಹೀಗೆಂದಿತು. ಹೀಗೆಯೇ 'ಏತದಾಹ' ಎಂದೂ ಪ್ರಯೋಗಿಸುವರು.

೧೫. ಸಾರಾಸಾರತಾ । ಸಾರಶ್ಚ ಅಸಾರಶ್ಚ ತಯೋಃ ಸಮಾಹಾರಃ ಸಾರಸಾರಮ್ ; ತಸ್ಯ ಭಾವಃ ।

೧೬. ದಾರುಣಂ ಕ್ರೂರಮ್ – ಈ ಎರಡು ಮಾತುಗಳಿಗೂ 'ಕ್ರೂರವಾದ' ಎಂದೇ ಅರ್ಥ.

೧೭. ಚೇತನಾಂ ಸಮಾಸಾದ್ಯ । ಅರಿವನ್ನು ಹೊಂದಿ. ಸದ್-ಹೋಗು (ಹೊಂದು) ಎಂಬ ಧಾತುವಿನ ಭೂತಕೃದಂತಾವ್ಯಯ, ಲ್ಯಬಂತ.

೧೮. ಆಕಾರಮ್ ಆಲೋಕ್ಯ । ಕಾಣುತ್ತಿದ್ದ ಪರಿಯನ್ನು ಕಂಡು. ಆಕಾರ ಎಂದರೆ ಮನಃಸ್ಥಿತಿಯನ್ನು ತೋರಿಸುವ ಮುಖಭಾವ. ಹಿಂದೆ (ಖಂ.೩೦) 'ಆಕಾರಂ ಪ್ರಚ್ಛಾದ್ಯ' ಎಂದಿರುವದನ್ನು ನೋಡಿ.

೧೯. ಅಯಂ ತಾವತ್ । 'ತಾವತ್' ಎಂಬುದನ್ನು 'ಮೊದಲನೆಯದಾಗಿ' ಎಂಬರ್ಥದಲ್ಲಿಯೂ ಉಪಯೋಗಿಸುವದುಂಟು. ಉದಾ : 'ಷಡ್ಭಿರುಪಾಯೈರ್ಭವತಿ ಭಿಕ್ಷಾದಿಭಿಃ । ತತ್ರ ಭಿಕ್ಷಾ ತಾವತ್ ಅನೇಕೈಃ ಕೃತಾ । ನೃಪಸೇವಯಾ ಸದಾ ಉಚಿತ ಧನಂ ನ ಪ್ರಾಪ್ಯತೇ । ಕೃಷಿಸ್ತು ಕ್ಲಿಷ್ಟಾ । ವಿದ್ಯಾ ಪುನಃ ಗುರುಸೇವಯೈವ ಲಭ್ಯಾ । ವ್ಯವಹಾರೇಣ ದಾರಿದ್ರ್ಯಂ ಧ್ರುವಂ ಭವೇತ್ । ಅತೋ ವಾಣಿಜ್ಯಮೇವ ಶ್ರೇಷ್ಠಃ' ।। ಪ್ರಕೃತದಲ್ಲಿ ಮತ್ತೇನನ್ನೂ ಹೇಳಿಲ್ಲವಾದ್ದರಿಂದ ಇಲ್ಲಿ 'ಮೊದಲನೆಯದಾಗಿ' ಎಂಬರ್ಥವಿಲ್ಲ ; 'ಇವನಂತೂ' ಎಂದು ಕನ್ನಡಿಸಬೇಕು.

೨೦. ನೂನಮ್ । ನಿಶ್ಚಯವಾಗಿ (Surely) ಎಂದರ್ಥ. ಹೀಗೆ ಆಗಿರುವದೆಂದು ಊಹಿಸುವದಕ್ಕೆ ಉಪಯೋಗಿಸುವ ಅವ್ಯಯವಿದು. ಉದಾ : ಚಿರಾದುಪೋಷಿತಸ್ತ್ವಮ್ ; ಅತೋ ನೂನಂ ಮರಿಷ್ಯಸಿ ।।

೨೧. ಪ್ರಾಣಸಮಃ = ಪ್ರಾಣೈಃ ಸಮಃ । ಅತ್ಯಂತಪ್ರಿಯ.

೨೨. ಅನೈಕಾನ್ತಿಕಮೇತತ್ । ಇದು ನಿಶ್ಚಯಿಸುವದಕ್ಕೆ ಕಾರಣವಲ್ಲ. ಏಕ ಏವ ಅನ್ತಃ ಯಸ್ಯ ತತ್ ಐಕಾನ್ತಿಕಮ್ ; ನ ಐಕಾನ್ತಿಕಮ್ ಅನೈಕಾನ್ತಿಕಮ್ । ಸೇವಕನು ದ್ರೋಹ ಮಾಡುವದಿಲ್ಲವೆಂದಾಗಲಿ, ಸೇವಕನಲ್ಲದವನು ದ್ರೋಹಮಾಡುವನೆಂದಾಗಲಿ ನಿಶ್ಚಯಿಸುವದಕ್ಕೆ ಆಗುವದಿಲ್ಲ.

೨೩. ಪರ್ಯುಪಾಸತೇ । ಆಸ್ (ಕೂರು) ಎಂಬ ಧಾತುವಿಗೆ ಪರಿ, ಉಪ - ಎಂಬ ಉಪಸರ್ಗಗಳು ಸೇರಿ 'ಸೇವಿಸು' ಎಂಬರ್ಥವಾಗಿದೆ.

## ಅಭ್ಯಾಸ ೩೩

१. सञ्जीवकवियुक्तम्, त्वत्साचिव्यपदवीसमन्वितम्, राजप्रयोजनविनाशम्, साभिप्रायम्, वज्रसारप्रहारसदृशम्, बद्धरागः - ಈ ಸಮಸ್ತಪದಗಳ ವಿಗ್ರಹವನ್ನು ಹೇಳಿ.

2. १. योऽन्नं ब्रह्म इति उपास्ते स प्रभूतम् अन्नम् अत्ति । २. एवं चिन्ताकुलहृदयो वणिक्पुत्रः सर्वामेव रात्रिम् अजागः । ३. असौ धूर्तो हत्वाऽपि ताम् अपराधं निह्नुते स्म । ४. यदि श्रीहरिं शरणम् उपैषि तर्हि सर्वमपि पापम् अपैति । ५. लोकशरण्यं भवन्तं मुक्त्वा कं यामि शरणम् ? - ಈ ವಾಕ್ಯಗಳಿಗೆ ಅರ್ಥವನ್ನು ಬರೆದು ಕ್ರಿಯಾಪದಗಳಿಗೆ ಪರೋಕ್ಷಭೂತರೂಪವನ್ನು ತಿಳಿಸಿ.

## ೨೨. ಎರಡನೆಯ ಗಣದ ಧಾತುಗಳು

[ಪು. ೧೧೧ ರಿಂದ ಮುಂದುವರಿದದ್ದು]

೬೬. वच् ಧಾತುವಿನ ರೂಪಗಳನ್ನು ಕೆಳಗೆ ಕೊಟ್ಟಿದೆ :

| ೧ | | | ೨ | | |
|---|---|---|---|---|---|
| वक्ति | वक्तः | ..... | वक्तु | वक्ताम् | वचन्तु |
| वक्षि | वक्थः | वक्थ | वग्धि | वक्तम् | वक्त |

| | | | | | |
|---|---|---|---|---|---|
| वच्मि | वच्वः | वच्मः | वचानि | वचाव | वचाम |

| ३ | | | ೪ | | |
|---|---|---|---|---|---|
| अवक्-ग् | अवक्ताम् | अवचन् | वच्यात् | वच्याताम् | वच्युः |
| अवक्-ग् | अवक्तम् | अवक्त | वच्याः | वच्यातम् | वच्यात |
| अवचम् | अवच्व | अवच्म | वच्याम् | वच्याव | वच्याम |

वच् - ಮಾತನಾಡು. ಈ ಧಾತುವಿಗೆ ಪ್ರಥಮಪುರುಷ ಬಹುವಚನವಿಲ್ಲವೆಂದು ಕೆಲವರು, ಬಹುವಚನವೇ ಇಲ್ಲವೆಂದು ಕೆಲವರು, ವರ್ತಮಾನದ ಪ್ರಥಮ ಪುರುಷ ಬಹುವಚನವಿಲ್ಲವೆಂದು ಕೆಲವರು - ಹೀಗೆ ಮತಭೇದವಿದೆ. ಈ ರೂಪಗಳ ಬದಲು ब्रू ಧಾತುವಿನ ರೂಪಗಳನ್ನು ಉಪಯೋಗಿಸಿಕೊಂಡರೆ ಸದ್ಯಕ್ಕೆ ಸಾಕಾಗಿದೆ.

ಪರೋಕ್ಷಭೂತ : ಪ. उवाच ऊचतुः ऊचुः । ಇತ್ಯಾದಿ. [ಪುಟ. ೭೦] (ಖಂ. ೪೩)

ಆ. ऊचे ऊचाते ऊचिरे । ऊचिषे ऊचाथे ऊचिध्वे । ऊचे ऊचिवहे ऊचिमहे ॥

ಭವಿಷ್ಯದ್ರೂಪಗಳು : वक्तासि । वक्तासे । वक्ष्यति । वक्ष्यते । - ಹೀಗೆ ಪರಸ್ಮೈಪದ ಆತ್ಮನೇಪದ ಎರಡೂ ರೂಪಗಳನ್ನು ಉಪಯೋಗಿಸಬಹುದು.

೬೭. रुद् (ಅಳು), स्वप् (ನಿದ್ರಿಸು), श्वस्, अन् (ಉಸಿರಾಡು) - ಈ ನಾಲ್ಕು ಧಾತುಗಳ ರೂಪದಲ್ಲಿ ಸಾಮ್ಯವಿದೆ.

ಒಂದು ಉದಾಹರಣೆಯನ್ನು ಇಲ್ಲಿ ಕೊಡುವೆವು :

| ೧ | | | ೨ | | |
|---|---|---|---|---|---|
| स्वपिति | स्वपतः | स्वपन्ति | अस्वपत्, अस्वपीत् | अस्वपिताम् | अस्वपन् |
| स्वपिषि | स्वपथः | स्वपथ | अस्वपीः, अस्वपः | अस्वपितम् | अस्वपित |
| स्वपिमि | स्वपिवः | स्वपिमः | अस्वपम् | अस्वपिव | अस्वपिम |

| ३ | | | ೪ | | |
|---|---|---|---|---|---|
| स्वपितु | स्वपिताम् | स्वपन्तु | स्वप्यात् | स्वप्याताम् | स्वप्युः |
| स्वपिहि | स्वपितम् | स्वपित | स्वप्याः | स्वप्यातम् | स्वप्यात |

| | | | | | |
|---|---|---|---|---|---|
| स्वपानि | स्वपाव | स्वपाम | स्वप्याम् | स्वप्याव | स्वप्याम |

ವಿಶೇಷ : (೧) ಯಕಾರವನ್ನು ಬಿಟ್ಟು ಉಳಿದ ವ್ಯಂಜನಾದಿಪ್ರತ್ಯಯಗಳಿಗೆ ಇಕಾರಗಮ.

(೨) ಅನದ್ಯತನಭೂತದ ಪ್ರಥಮಮಧ್ಯಮಪುರುಷಗಳ ಏಕವಚನದಲ್ಲಿ ಈಕಾರಾಗಮ, ಅಕಾರಾಗಮಗಳು ವಿಕಲ್ಪದಿಂದ ಬರುತ್ತವೆ.

(೩) ಈ ಧಾತುವಿಗೆ "ಸುಷ್ವಾಪ ಸುಷುಪತುಃ ಸುಷುಪುಃ । ಸುಷ್ವಪಿಥ - ಸುಷ್ವಪ್ಥ, ಸುಷುಪಥುಃ ಸುಷುಪ । ಸುಷ್ವಾಪ - ಸುಷ್ವಪ, ಸುಷುಪಿವ ಸುಷುಪಿಮ - ಎಂದು ಲಿಟ್ ; ಸ್ವಪ್ತಾ । ಸ್ವಪ್ಸ್ಯತಿ - ಇತ್ಯಾದಿ ಭವಿಷ್ಯದ್ರೂಪಗಳು.

(೪) ರುದ್ (ಅಳು) ಧಾತುವಿಗೆ ಪ್ರಬಲಪ್ರತ್ಯಯಗಳು ಬಂದಾಗ ಗುಣ. ಉದಾ: ರೋದಿತಿ, ಅರೋದೀತ್, ರೋದಿತು, ರೋದಾನಿ, ರೋದಾವ, ರೋದಾಮ.

(೫) ಜಕ್ಷ್ ಧಾತುವಿಗೆ ಪ್ರಥಮಪುರುಷಬಹುವಚನದ ಪ್ರತ್ಯಯದ ನಕಾರಕ್ಕೆ ಲೋಪ. ಉದಾ: ಜಕ್ಷತಿ, ಜಕ್ಷತು ; ಅನದ್ಯತನ ಪ್ರ. ಬ. ಕ್ಕೆ : ಅಜಕ್ಷುಃ ।

೬೮. विद् (ತಿಳಿ) ಮತ್ತು हन् (ಕೊಲ್ಲು) - ಈ ಎರಡು ಧಾತುಗಳ ರೂಪಗಳನ್ನು ಈ ಕೆಳಗೆ ಕೊಟ್ಟು ಈ ಪಾಠವನ್ನು ಮುಗಿಸುವೆವು :

### विद् - ತಿಳಿ (ಪರಸ್ಮೈಪದ)

#### ವರ್ತಮಾನ

| | | | | | |
|---|---|---|---|---|---|
| वेत्ति | वित्तः | विदन्ति | वेद | विदतुः | विदुः |
| वेत्सि | वित्थः | वित्थ | वेत्थ | विदथुः | विद |
| वेद्मि | विद्वः | विद्मः | वेद | विद्व | विद्म |

ವಿಶೇಷ : (೧) ಇಲ್ಲಿ ಎರಡನೆಯ ಬಗೆಯ ರೂಪಗಳು ಲಿಟ್ ಪ್ರತ್ಯಯಗಳಿಂದಾಗಿವೆ.

(೨) ಇದಕ್ಕೆ ಲಿಟ್ (ಪರೋಕ್ಷಭೂತ) ರೂಪಗಳು ಎರಡೂ ಬಗೆಯಲ್ಲಾಗುವವು. ವಿವೇದ ವಿವಿದತುಃ ವಿವಿದುಃ - ವಿವೇದಿಥ । ಇತ್ಯಾದಿ. ಅಥವಾ 'ವಿದಾಞ್ಚಕಾರ' ಇತ್ಯಾದಿ. ಭವಿಷ್ಯದ್ರೂಪಗಳು : ವೇದಿತಾ । ವೇದಿಷ್ಯತಿ ।।

#### ಆಜ್ಞಾರ್ಥ

| ೧ | | | ೨ | | |
|---|---|---|---|---|---|
| वेत्तु | वित्ताम् | विदन्तु | विदाङ्करोतु | विदाङ्कुरुताम् | विदाङ्कुर्वन्तु |
| विद्धि | वित्तम् | वित्त | विदाङ्कुरु | विदाङ्कुरुतम् | विदाङ्कुरुत |

| | | | | | |
|---|---|---|---|---|---|
| वेदानि | वेदाव | वेदाम | विदाङ्करवाणि | विदाङ्करवाव | विदाङ्करवाम |

ವಿಶೇಷ : ಎರಡನೆಯ ರೂಪದಲ್ಲಿ 'ವಿದಾಮ್' ಎಂಬುದಕ್ಕೆ ಕೃಧಾತುವಿನ ಆಜ್ಞಾರ್ಥ ರೂಪಗಳನ್ನು ಸೇರಿಸಿದೆ.

| ಅನದ್ಯತನ | | | ವಿಧ್ಯಾದಿ | | |
|---|---|---|---|---|---|
| अवेत्-द् | अवित्ताम् | अविदुः | विद्यात् | विद्याताम् | विद्युः |
| अवेः, अवेत्-द् | अवित्तम् | अवित्त | विद्याः | विद्यातम् | विद्यात |
| अवेदम् | अविद्व | अविद्म | विद्याम् | विद्याव | विद्याम |

ವಿಶೇಷ : (೧) ದಕಾರಾಂತಧಾತುವಿಗೆ ಪ್ರಥಮಮಧ್ಯಮೈಕವಚನಪ್ರತ್ಯಯಗಳಿಗೆ ಲೋಪ.

(೨) ಮಧ್ಯಮೈಕವಚನದಲ್ಲಿ ಧಾತುವಿನ ಕೊನೆಯ ದಕಾರಕ್ಕೆ ವಿಕಲ್ಪದಿಂದ ವಿಸರ್ಗ.

(೩) ಅನುಸ್ವಾರವಿಲ್ಲದ ಅಂತ್ಯವ್ಯಂಜನವಾದ್ದರಿಂದ ದಕಾರವು ಅವೇತ್, ಅವೇದ್ ಎಂದು ವರ್ಗಪ್ರಥಮ ಅಥವಾ ತೃತೀಯಾಕ್ಷರವಾಗಿರುತ್ತದೆ.

### हन् - ಕೊಲ್ಲು, ಹೋಗು

| ೧ | | | ೨ | | |
|---|---|---|---|---|---|
| हन्ति | हतः | घ्नन्ति | अहन् | अहताम् | अघ्नन् |
| हंसि | हथः | हथ | अहन् | अहतम् | अहत |
| हन्मि | हन्वः | हन्मः | अहनम् | अहन्व | अहन्म |

ವಿಶೇಷ : (೧) ವ್ಯಂಜನಾದಿಯಾದ ದುರ್ಬಲಪ್ರತ್ಯಯಗಳ ಹಿಂದೆ ನಕಾರಕ್ಕೆ ಲೋಪ.

(೨) ಸ್ವರಾದಿಯಾದ ದುರ್ಬಲಪ್ರತ್ಯಯದ ಹಿಂದೆ ಧಾತುವಿಗೆ 'ಘ್ನ್' ಎಂಬ ರೂಪವಾಗುತ್ತದೆ.

(೩) ಶಷಸಹಗಳ ಹಿಂದೆ ಅಂತ್ಯ ಮನಕಾರಗಳಿಗೆ ಅನುಸ್ವಾರಾದೇಶ ; ಆದ್ದರಿಂದ 'ಹಂಸಿ'.

| ೩ | | | ೪ | | |
|---|---|---|---|---|---|
| हन्तु | हताम् | घ्नन्तु | हन्यात् | हन्याताम् | हन्युः |
| जहि | हतम् | हत | हन्याः | हन्यातम् | हन्यात |
| हनानि | हनाव | हनाम | हन्याम् | हन्याव | हन्याम |

ವಿಶೇಷ : (೧) ಆಜ್ಞಾರ್ಥಮಧ್ಯಮೈಕವಚನ 'ಜಹಿ'.

(೨) ಈ ಧಾತುವಿಗೆ ಲಿಟ್ (ಪರೋಕ್ಷಭೂತ) ರೂಪ : ಜಘಾನ ಜಘ್ನತುಃ ಜಘ್ನುಃ । ಜಘನಿಥ - ಜಘನ್ಥ, ಜಘ್ನಥುಃ ಜಘ್ನ । ಜಘಾನ - ಜಘನ, ಜಘ್ನಿವ ಜಘ್ನಿಮ । ಜಕಾರವು ಬಂದಿರುವದಕ್ಕೆ ಹಿಂದೆ [ಪು. ೫೬, ೫೭] ನ್ನು ನೋಡಿ.

(೩) ಇದಕ್ಕೆ ಭವಿಷ್ಯದ್ರೂಪಗಳು : ಹನ್ತಾ । ಹನಿಷ್ಯತಿ ।

'ಹನ್' ಧಾತುವನ್ನು ಅಕರ್ಮಕವಾಗಿ ಪ್ರಯೋಗಿಸಿದರೆ, ಅಥವಾ ತನ್ನ ಅಂಗಗಳನ್ನು ಕರ್ಮವಾಗಿಟ್ಟುಕೊಂಡಿರುವಾಗ ಆತ್ಮನೇಪದವಾಗುತ್ತದೆ. ಆದರ ರೂಪಗಳು ಅಷ್ಟು ಪ್ರಚುರವಾಗಿಲ್ಲವಾದರೂ ಇಲ್ಲಿ ತೋರಿಸಿ ಕಂಸದಲ್ಲಿಟ್ಟಿದೇವೆ :

| ೧ | | | | ೨ | | |
|---|---|---|---|---|---|---|
| [हते | घ्नाते | घ्नते | | अहत | अघ्नाम् | अघ्नत |
| हसे | घ्नाथे | हध्वे | | अहथाः | अघ्नाथाम् | अहध्वम् |
| घ्ने | हन्वहे | हन्महे | | अघ्नि | अहन्वहि | अहन्महि |

| ೩ | | | | ೪ | | |
|---|---|---|---|---|---|---|
| हताम् | घ्नाताम् | घ्नताम् | | घ्नीत | घ्नीयाताम् | घ्नीरन् |
| हस्व | घ्नाथाम् | हध्वम् | | घ्नीथाः | घ्नीयाथाम् | घ्नीध्वम् |
| हनै | हनावहै | हनामहै | | घ्नीय | घ्नीवहि | घ्नीमहि] |

೬೯. चक्ष् - ಹೇಳು, ಅನ್ನು ; ನೋಡು - ಎಂಬರ್ಥದ ಧಾತುವಿಗೆ ಇರುವಷ್ಟು[1] ರೂಪಗಳನ್ನು ಇಲ್ಲಿ ಕೊಟ್ಟಿದೆ :

| ೧ | | | | ೨ | | |
|---|---|---|---|---|---|---|
| चष्टे | चक्षाते | चक्षते | | अचष्ट | अचक्षाताम् | अचक्षत |
| चक्षे | चक्षाथे | चड्ढ्वे | | अचष्टाः | अचक्षाथाम् | अचड्ढ्वम् |
| चक्षे | चक्ष्वहे | चक्ष्महे | | अचक्षि | अचक्ष्वहि | अचक्ष्महि |

| ೩ | | | | ೪ | | |
|---|---|---|---|---|---|---|
| चष्टाम् | चक्षाताम् | चक्षताम् | | चक्षीत | चक्षीयाताम् | चक्षीरन् |
| चक्ष्व | चक्षाथाम् | चड्ढ्वम् | | चक्षीथाः | चक्षीयाथाम् | चक्षीध्वम् |
| चक्षै | चक्षावहै | चक्षामहै | | चक्षीय | चक्षीवहि | चक्षीमहि |

[1]ವಿಶೇಷ : (೧) ಸಂಯುಕ್ತಾಕ್ಷರದ ಆದಿಯಲ್ಲಿರುವ ಸಕಾರಕಕಾರಗಳಿಗೆ ಆ

ಸಂಯುಕ್ತಾಕ್ಷರವು ಪದಾಂತ್ಯದಲ್ಲಿದ್ದರೂ ಅನುನಾಸಿಕ ಅರ್ಧಸ್ವರ (ಯರಲವ) ಗಳ ಹೊರತು ಯಾವ ವ್ಯಂಜನವು ಪರವಾದರೂ ಲೋಪ. ಚಕ್ಷ್ + ತೇ = ಚಷ್ + ತೇ = 'ಚಷ್ಟೇ' (ಷ್ಟುತ್ವ)

(೨) ಷಢಕಾರಗಳಿಗೆ ಸಕಾರವು ಪರವಾದರೆ ಕಕಾರಾದೇಶ ; ಪದಾಂತ್ಯವಲ್ಲದ ಆದೇಶ ಪ್ರತ್ಯಯಗಳ ಸಕಾರವು ಅಆಕಾರಗಳು ಹೊರತು ಯಾವುದಾದರೊಂದು ಸ್ವರಕ್ಕೆ, ಅರ್ಧಸ್ವರಗಳಿಗೆ, ಕಂಠಕ್ಷರ, ಹಕಾರ - ಇವಕ್ಕೆ ಪರವಾದರೆ ಷಕಾರಾದೇಶ. ಉದಾ : ಚಕ್ಷ್ + ಸೇ = ಚಷ್ + ಸೆ = ಚಕ್ + ಸೇ = ಚಕ್ಷೇ । ಹೀಗೆಯೇ ಚಕ್ಷ್ವ.

(೩) ಚಕ್ಷ್ ಧ್ವೇ = ಚಷ್ ಧ್ವೇ (ಜಶ್ತ್ವ) = ಚಡ್ಢ್ವೇ (ಷ್ಟುತ್ವ), ಹೀಗೆಯೇ ಚಡ್ಢ್ವಮ್, ಅಚಡ್ಢ್ವಮ್.

(೪) ಈ ಧಾತುವಿಗೆ ಆರ್ಧಧಾತುಕರೂಪಗಳಿಲ್ಲ. ಆಗ ಇದಕ್ಕೆ ಖ್ಯಾ, ಕ್ಷಾ ಎಂಬಾದೇಶಗಳು ಬರುವವು. ಆದ್ದರಿಂದ ಲಿಡ್ರೂಪ : ಚಖ್ಯೌ, ಅಥವಾ ಚಕ್ಷೌ ; ಚಖ್ಯೇ, ಅಥವಾ ಚಕ್ಷೇ ಇತ್ಯಾದಿ. ಲುಡ್ರೂಪ : ಖ್ಯಾತಾಸಿ ಖ್ಯಾತಾಸೇ ; ಕ್ಷಾತಾಸಿ, ಕ್ಷಾತಾಸೇ. ಲೃಡ್ರೂಪ : ಖ್ಯಾಸ್ಯತಿ, ಖ್ಯಾಸ್ಯತೇ ; ಕ್ಷಾಸ್ಯತಿ,ಕ್ಷಾಸ್ಯತೇ ।।

## ಅಭ್ಯಾಸ ೩೪

೧. ಈ ವಾಕ್ಯಗಳನ್ನು ಕನ್ನಡಿಸಿ ಕ್ರಿಯಾಪದಗಳ ಆಯಾ ಪುರುಷದ ರೂಪಗಳನ್ನೆಲ್ಲ

1. कं सञ्जघान कृष्णः ? 2. किं वेत्थ त्वं यथाऽसौ रक्ष्यते ? 3. कथं सुखं स्वपिति दुर्मेधाः ? 4. या निशा सर्वभूतानां तस्यां जागर्ति संयमी । यस्यां जाग्रति भूतानि सा निशा पश्यतो मुनेः । 5. नाहमिदं विश्वसिमि यद् भवादृशोऽपि अनृतं ब्रूयात् । 6. ब्रवीतु भवान् कोऽहमस्मीति । 7. दरिद्रः किमिति धनिनं प्रतिदिनं स्तौति ? 8. क्षुधा पीडितोऽयं शिशुः भृशं रोदिति ।।

೨. ವಾಕ್ಯಗಳನ್ನು ಕನ್ನಡಿಸಿ ಇಲ್ಲಿರುವ ಕ್ರಿಯಾಪದಗಳಿಗೆ ಬದಲು ೨ನೆಯ ಗಣದ ಧಾತುಗಳ ರೂಪವನ್ನು ಹಾಕಿರಿ :

1. अहो ! न कथञ्चिदेष मे विश्वासम् आगच्छति । 2. त्वरितं गच्छत

೧. ಧಾತುಗಳ ರೂಪಕ್ಕೆ ಕೊಟ್ಟಿರುವ ಈ ವಿಶೇಷನಿಯಮಗಳನ್ನು ಓದಿ ತಿಳಿದಿರಬೇಕು ಗಟ್ಟಿಮಾಡಬೇಕಾದದ್ದಿಲ್ಲ.

काशीम् । 3. गङ्गां च अवगाहध्वम्, सर्वाणि च पापानि विनाशयत । 4. कस्माद् वा विलपसि, ननु तव न किञ्चिन्नष्टम् । 5. एतत् सरः स्वल्पजलं वर्तते ; शीघ्रं शोषं गमिष्यति ।।

## २३. मित्रभेदः (अनुवृत्तः)

७०. पिङ्गलक आह - 'भद्र, तथापि मम तस्योपरि चित्तवृत्तिर्न विकृतिं याति' ।

दमनक आह - "अत एवायं दोषः । उक्तं च -

**यस्मिन्नेवाधिकं चक्षुरारोपयति पार्थिवः ।**
**अकुलीनः कुलीनो वा स श्रियो भाजनं नरः ।।**

अपरं केन गुणविशेषेण स्वामी सञ्जीवकं निर्गुणकमपि निकटे धारयति ? अथ देव, यद्येवं चिन्तयसि - 'महाकायोऽयम् । अनेन रिपून् व्यापादयिष्यामि' इति[१] । तदस्मात् न सिध्यति । यतोऽयं शष्पभोजी, देवपादानां शत्रवो मांसाशिनः । तद् रिपुसाधनम् अस्य साहाय्येन न भवति । तस्मात् एनं दूषयित्वा हन्यताम्" ।

पिङ्गलक आह -

**'उक्तो भवति यः पूर्वं गुणवानिति संसदि ।**
**तस्य दोषो न वक्तव्यः प्रतिज्ञाभङ्गभीरुणा ।।**

अन्यच्च । मयास्य तव वचनेन अभयप्रदानं दत्तम् । तत्कथं स्वयमेव व्यापादयामि ? सर्वथा सञ्जीवकोऽयं सुहृदस्माकम् । न तं प्रति कश्चिन्मन्युः । तद् द्रोहबुद्धेरपि मया अस्य न विरुद्धम् आचरणीयम्' ।

दमनक आह - 'स्वामिन्, नैष राजधर्मो यद् द्रोहबुद्धेरपि[२] क्षम्यते । अपरं त्वया अस्य सखित्वात् सर्वोऽपि राजधर्मः परित्यक्तः । राजधर्माभावात् सर्वोऽपि परिजनो विरक्तिं गतः । यत् सञ्जीवकः शष्पभोजी ; भवान् मांसादः, तव प्रकृत-

---

೧. ಇಲ್ಲಿ ಬೇರೆಯ ಪಾಠವೂ ಇದೆ. ಟಿಂತನದ ಟಿಪ್ಪಣಿಯನ್ನು ನೋಡಿ.

೨. ಟಿಪ್ಪಣಿಯನ್ನು ನೋಡಿ.

यश्च । यत् तवावध्यव्यवसायबाह्यं कुतस्तासां मांसाशनम् ? यद्रहितास्ताः त्वां त्यक्त्वा यास्यन्ति । ततोऽपि त्वं विनष्ट एव । अस्य संगत्या पुनस्ते न कदाचित् आखेटके मतिर्भविष्यति । अत एव सन्तो नीचसङ्गं वर्जयन्ति ।।

तदाकर्ण्य पिङ्गलक आह - 'भो दमनक, कः प्रत्ययोऽत्र विषये यत् स ममोपरि दुष्टबुद्धिः ?

स आह - 'अद्य, ममाग्रे तेन निश्चयः कृतो यत् प्रभाते पिङ्गलकं वधिष्यामि । तत्रैष प्रत्ययः (यत् ?) प्रभाते सभावसरवेलायाम् आरक्तमुखनयनः स्फुरिताधरो दिशोऽवलोकयन् अनुचितस्थानोपविष्टस्त्वां क्रूरदृष्ट्या विलोकयिष्यति । ज्ञात्वा यदुचितं तत् कर्तव्यम् ।।'

ಪಿಂಗಲಕನೆಂದಿತು : 'ಅಪ್ಪ, (ಹಾಗಾದರೂ =) ಹೀಗಿದ್ದರೂ ನನಗೆ (ಅವನ ಮೇಲೆ =) ಅವನ ವಿಷಯದಲ್ಲಿ (ಚಿತ್ತವೃತ್ತಿಯು ವಿಕೃತಿಯನ್ನು ಹೊಂದುವದಿಲ್ಲ =) ಮನಸ್ಸು ಮಾರ್ಪಡುವಂತಿಲ್ಲ.'

ದಮನಕನೆಂದಿತು : ''ಆದ್ದರಿಂದಲೇ ಇದು ತಪ್ಪು, (ಬಲ್ಲವರು) ಹೀಗೆಂದು ಹೇಳಿಯೂ ಇರುತ್ತಾರೆ :

**ರಾಜನು ಯಾವನ ಮೇಲೆ (ಹೆಚ್ಚಾಗಿ ಕಣ್ಣನ್ನು ಏರಿಸುತ್ತಾನೋ =) ಪ್ರೀತಿಯ ದೃಷ್ಟಿಯನ್ನು ಮಾಡುತ್ತಾನೋ, ಅಸತ್ಕುಲದವನಾಗಲಿ, ಸತ್ಕುಲದವನಾಗಲಿ, ಆ ಮನುಷ್ಯನೇ ಸಂಪತ್ತಿಗೆ ಪಾತ್ರನು.**

ಇದಲ್ಲದೆ, ಯಾವ (ಗುಣವಿಶೇಷದಿಂದ =) ಇನ್ನೊಬ್ಬರಲ್ಲಿಲ್ಲದ ಗುಣ ವಿರುವದರಿಂದ ಸ್ವಾಮಿಯು (ಸಂಜೀವಕನು ನಿರ್ಗುಣನಾಗಿದ್ದರೂ ಆತನನ್ನು ಹತ್ತಿರ ಇಟ್ಟುಕೊಂಡಿರುತ್ತಾನೆ =) ತಾವು ಈ ಗುಣಹೀನಸಂಜೀವಕನನ್ನು ಹತ್ತಿರ ಏಕೆ ಸೇರಿಸಿಕೊಂಡಿದ್ದೀರಿ ? (ದೇವನೆ=) ಬುದ್ಧಿ, ಒಂದು ವೇಳೆ, 'ಇವನು ಸ್ಥೂಲ ಶರೀರನು, ಇವನಿಂದ ರಿಪುಗಳನ್ನು ಕೊಲ್ಲುವೆನು' - ಎಂದು ಹೀಗೆ ಯೋಚಿಸಿರುವಿರಾದರೆ, ಅದು ಇವನಿಂದ (ಆಗುವಂತಿಲ್ಲ =) ಆಗಲಾರದು. ಏಕೆಂದರೆ ಇವನು (ಹುಲ್ಲು ಮೇಯು ವವನು =) ಸಸ್ಯಾಹಾರಿ. ಸ್ವಾಮಿಯವರ ಶತ್ರುಗಳಾದರೋ ಮಾಂಸಾಹಾರಿಗಳು. ಆದ್ದರಿಂದ ವೈರಿಗಳನ್ನು ಗೆದ್ದುಕೊಳ್ಳುವದು ಇವನ ಸಹಾಯದಿಂದ ಆಗಲಾರದು. ಆದ್ದರಿಂದ ಇವನನ್ನು (ದೂಷಿಸಿ =) ಯಾವದಾದರೊಂದು ತಪ್ಪುಹೊರಿಸಿ ಕೊಂದು ಬಿಡಬೇಕು.''

ಪಿಂಗಲಕನೆಂದಿತು :

'(ಸಭೆಯಲ್ಲಿ =) ಬಹಿರಂಗವಾಗಿ (ಯಾವನು ಗುಣವಂತನೆಂದು ಹೇಳಲ್ಪಟ್ಟಿರುವನೋ =) ಯಾವನನ್ನು ಗುಣವಂತನೆಂದು ಹೇಳಿರುವರೋ, (ಪ್ರತಿಜ್ಞಾಭಂಗಕ್ಕೆ ಅಂಜುವವನಿಂದ ಅವನ ದೋಷವು ಹೇಳಲ್ಪಡತಕ್ಕದ್ದಲ್ಲ =) ಆಡಿದ ಮಾತು ಸುಳ್ಳಾದೀತೆಂಬ ಅಂಜಿಕೆಯಿರುವವರು ಅಂಥವನ ತಪ್ಪನ್ನು ಹೇಳ ಬಾರದು.

ಮತ್ತೊಂದೇನೆಂದರೆ, ನಿನ್ನ ಮಾತಿನಿಂದ ಅವನಿಗೆ (ಅಭಯಪ್ರದಾನವು ನನ್ನಿಂದ ಕೊಡಲ್ಪಟ್ಟಿದೆ =) ಅಭಯವನ್ನು ಕೊಟ್ಟಿರುತ್ತೇನೆ. ಹೀಗಿರುವಲ್ಲಿ ನಾನೇ ಹೇಗೆ ಕೊಲ್ಲಲಿ ? (ಎಲ್ಲಾ ಪ್ರಕಾರದಿಂದಲೂ =) ಹೇಗೆ ನೋಡಿದರೂ ಈ ಸಂಜೀವಕನು ನಮಗೆ ಬೇಕಾದವನು ; ಅವನಮೇಲೆ ಯಾವ ಕೋಪವೂ (ನನಗೆ) ಇರುವದಿಲ್ಲ. ಆದ್ದರಿಂದ ದ್ರೋಹಬುದ್ಧಿಯಾದರೂ ಇವನಿಗೆ (ವಿರುದ್ಧವಾದದ್ದು ನನ್ನಿಂದ ಆಚರಿಸಲ್ಪಡತಕ್ಕದ್ದಲ್ಲ =) ನಾನು ಕೆಟ್ಟದ್ದನ್ನು ಮಾಡಬಾರದು.

ದಮನಕನೆಂದಿತು : 'ಸ್ವಾಮಿ, ದ್ರೋಹಬುದ್ಧಿಯವನ (ತಪ್ಪು ಕ್ಷಮಿಸಲ್ಪಡು ವದು =) ತಪ್ಪನ್ನು ಕ್ಷಮಿಸುವದೆಂಬುದು (ರಾಜಧರ್ಮವಲ್ಲ =) ರಾಜನು ಮಾಡತಕ್ಕದ್ದಲ್ಲ. ಇದಲ್ಲದೆ, ಈತನ ಗೆಳೆತನದಿಂದ (ನಿನ್ನಿಂದ ರಾಜಧರ್ಮವೆಲ್ಲ ಬಿಡಲ್ಪಟ್ಟಿದೆ =) ನೀವು ರಾಜನು ಮಾಡತಕ್ಕದ್ದೆಲ್ಲವನ್ನೂ ಬಿಟ್ಟುಬಿಟ್ಟಿರುತ್ತೀರಿ. ರಾಜಧರ್ಮವನ್ನು ಬಿಟ್ಟಿದ್ದರಿಂದ ಪರಿಜನವೆಲ್ಲವೂ (ವಿರಕ್ತಿಯನ್ನು ಹೊಂದಿದೆ =) ಬೇಸರಗೊಂಡಿದೆ. ಸಂಜೀವಕನು ಸಸ್ಯಾಹಾರಿಯಾದ್ದರಿಂದಲೂ ತಾವೂ ತಮ್ಮ ಪ್ರಜೆಗಳೂ ಮಾಂಸಾಹಾರಿಗಳಾದ್ದರಿಂದಲೂ ನಿಮ್ಮ ಕೊಲ್ಲತಕ್ಕದ್ದಲ್ಲವೆಂಬ ನಿಶ್ಚಯಕ್ಕೆ (ಹೊರಬ್ಬಾಗಿರುವ =) ಒಗ್ಗದ ಮಾಂಸಾಹಾರವು ಅವರಿಗೆಲ್ಲಿಯದು ? ಅದಿಲ್ಲದೆ ಅವರು ತಮ್ಮನ್ನು ಬಿಟ್ಟುಹೋಗುವರು, ಅದರಿಂದಲೂ (ನೀನು ವಿನಷ್ಟನೇ =) ತಮಗೆ ಕೇಡೇ. ಇವನ ಗೆಳೆತನದಿಂದಲಾದರೋ (ನಿನಗೆ =) ನಿಮಗೆ ಎಂದಿಗೂ ಬೇಟೆಯಲ್ಲಿ ಬುದ್ಧಿಯುಂಟಾಗಲಾರದು. ಆದ್ದರಿಂದಲೇ ಸತ್ಪುರುಷರು ನೀಚರ ಸಂಗವನ್ನು ಬಿಟ್ಟುಬಿಡುವರು.'

ಅದನ್ನು ಕೇಳಿ ಪಿಂಗಲಕನೆಂದಿತು : 'ಅಯ್ಯ ದಮನಕ, ಅವನು (ನನ್ನ ಮೇಲೆ) ನನ್ನ ವಿಷಯಕ್ಕೆ ದುಷ್ಟಬುದ್ಧಿಯವ (ನಾಗಿರುವನೆಂದು ಹೇಳುವದಕ್ಕೆ ಪ್ರತ್ಯಯ ವೇನು ? =) ನಾಗಿದಾನೆಂದು ಹೇಗೆ ಗೊತ್ತುಮಾಡಿಕೊಳ್ಳಲಿ ?

ಅದು ಹೇಳಿತು : ''ಇಂದು ನನ್ನ ಮುಂದೆ 'ಬೆಳಗ್ಗೆ ಪಿಂಗಲಕನನ್ನು ಕೊಲ್ಲುವೆನು'' ಎಂದು (ಆ ಸಂಜೀವಕನಿಂದ ನಿಶ್ಚಯಮಾಡಲ್ಪಟ್ಟಿರುತ್ತದೆ =) ಆ ಸಂಜೀವಕನು ತೀರ್ಮಾನಿಸಿದ್ದಾಗಿದೆ. ಆ ವಿಷಯಕ್ಕೆ ಗುರುತೇನೆಂದರೆ ಬೆಳಗ್ಗೆ ಸಭೆಯ ಸಂದರ್ಭದ ಕಾಲದಲ್ಲಿ (ಕೆಂಪೇರಿದ ಮುಖವೂ ಕಣ್ಣುಗಳೂ ಉಳ್ಳವನಾಗಿ =) ಮುಖವನ್ನೂ ಕಣ್ಣುಗಳನ್ನೂ ಕೆಂಪಗೆ ಮಾಡಿಕೊಂಡು (ಅಲುಗಾಡುವ ಕೆಳದುಟಿಯುಳ್ಳವನಾಗಿ =) ಕೆಳದುಟಿಯನ್ನು ಅಲುಗಾಡಿಸುತ್ತಾ (ದಿಕ್ಕುಗಳನ್ನು =) ಅತ್ತಿತ್ತ ನೋಡುತ್ತಾ ಅಯೋಗ್ಯವಾದ ಸ್ಥಾನದಲ್ಲಿ ಕುಳಿತು ನಿನ್ನನ್ನು ಕ್ರೂರದೃಷ್ಟಿಯಿಂದ ನೋಡುವನು. ಹೀಗೆ (ತಿಳಿದು =) ಗೊತ್ತಾದಮೇಲೆ ಯಾವದು ಯುಕ್ತವೋ (ಅದು ಮಾಡಲ್ಪಡ ತಕ್ಕದ್ದು =) ಅದನ್ನು ಮಾಡಬಹುದು.

## ಚಿಂತನ

೧. ಚಿತ್ತವೃತ್ತಿರ್ನ ವಿಕೃತಿಂ ಯಾತಿ = 'ಮಮ ಚಿತ್ತಂ ನ ವಿಕ್ರಿಯತೇ ।' ನನ್ನ ಮನಸ್ಸಿನಲ್ಲಿ ಕೆಟ್ಟ ಕಲ್ಪನೆಯಾಗುತ್ತಿಲ್ಲ.

೨. ಆತ ಏವಾಯಂ ದೋಷಃ । 'ನಾಯಂ ದೋಷಃ', 'ಅತೋಽದೋಷಃ' (ಇದೇನೂ ತಪ್ಪಲ್ಲ) ಎಂಬ ವಾಕ್ಯಗಳನ್ನು ವಾದದಲ್ಲಿ ಆಕ್ಷೇಪಪರಿಹಾರಕ್ಕಾಗಿ ಉಪಯೋಗಿಸುವರು.

೩. ಅಧಿಕಂ ಚಕ್ಷುರಾರೋಪಯತಿ = 'ವಿಶೇಷತಃ ಪ್ರೀತಿಯುಕ್ತಾಂ ದೃಷ್ಟಿಂ ಪ್ರಸಾರ ಯತಿ ।' ಪ್ರೀತಿಯುಕ್ತವಾದ ಕಣ್ಣಿನಿಂದ ನೋಡುತ್ತಾನೆ.

೪. ಕುಲೀನಃ । '(ಪ್ರಶಸ್ತೇ) ಕುಲೇ ಭವಃ' - ಸತ್ಕುಲದಲ್ಲಿ ಹುಟ್ಟಿದವನು.

೫. ಅಥ । ಇದು ಹಾಗಲ್ಲದೆ (if, on the other hand,) ಎಂದು ಪಕ್ಷಾಂತರವನ್ನು ತಿಳಿಸುವ ಅವ್ಯಯ. 'ಅಥ ಮತಮ್', 'ಅಥ ಮನ್ಯಸೇ' - ಇಂಥ ವಾಕ್ಯಗಳು ವಾದದಲ್ಲಿ ಬಹಳವಾಗಿ ಬರುತ್ತವೆ.

೬. ಸಾಹಾಯ್ಯೇನ । 'ಸಹಾಯಸ್ಯ ಕರ್ಮ ಸಾಹಾಯ್ಯಮ್' ಎಂದು ವ್ಯುತ್ಪತ್ತಿ. 'ಸಾಹಾಯ್ಯಕಮ್' ಎಂದರೂ ಇದೇ ಅರ್ಥ.

೭. ಅಭಯಪ್ರದಾನಂ ದತ್ತಮ್ । 'ಅಭಯದಕ್ಷಿಣಾ ದತ್ತಾ' ಎಂದು ಹಿಂದೆ ಪ್ರಯೋಗಿಸಿದ ಶಬ್ದವನ್ನೇ ಬಳಸಬೇಕಾಗಿತ್ತು ; 'ದತ್ತಮ್' ಎಂಬುದಕ್ಕೆ 'ಕೃತಮ್' ಎಂದರೂ ಸಾಗುತ್ತಿತ್ತು.

೮. ದ್ರೋಹಬುದ್ಧೇರಪಿ ಕ್ಷಮ್ಯತೇ । 'ಬುದ್ಧಿರಪಿ' ಎಂದಿದ್ದರೆ ಚೆನ್ನಾಗಿ ಅನ್ವಯವಾಗುತ್ತದೆ. ಅಥವಾ 'ಬುದ್ಧೇರಪಿ' ಆದಮೇಲೆ 'ದೋಷಃ' ಎಂದೂ ಅಧ್ಯಾಹಾರ ಮಾಡಿಕೊಳ್ಳಬಹುದು.

೯. ಸಖಿತ್ವಾತ್ । ಸಖ್ಯುಃ ಭಾವಃ ಸಖಿತ್ವಮ್ ; ತಸ್ಮಾತ್ । ಹೇತುವನ್ನು ಹೇಳುವ ಪಂಚಮೀವಿಭಕ್ತಿ. ಮುಂದೆ 'ರಾಜಧರ್ಮಾಭಾವಾತ್' ಎಂಬ ಪದವನ್ನು ನೋಡಿ. ತರ್ಕವನ್ನು

ಮಾಡುವಾಗ ಇದನ್ನು ಬಹಳವಾಗಿ ಬಳಸುವರು. 'ಪರ್ವತೋಽಯಂ ವಹ್ನಿಮಾನ್ । ಧೂಮವತ್ತ್ವಾತ್ । (ಈ ಬೆಟ್ಟವು ಬೆಂಕಿಯುಳ್ಳದ್ದು) ಈ ಬೆಟ್ಟದಲ್ಲಿ ಬೆಂಕಿಯಿದೆ ; (ಹೊಗೆಯುಳ್ಳದ್ದಾದ್ದರಿಂದ) ಏಕೆಂದರೆ ಇಲ್ಲಿ ಹೊಗೆಯಿದೆ. ಇದರಂತೆ 'ಕಸ್ಮಾತ್ ?' - ಅದೇಕೆ ? (ಏಕೆಂದರೆ) ಎಂಬ ಮಾತನ್ನೂ ಕಾರಣವನ್ನು ಹೇಳುವದಕ್ಕೆ ಪ್ರಯೋಗಿಸುವರು.

೧೦. ಯದ್ರಹಿತಾಃ । 'ಯೇನ ರಹಿತಾಃ' 'ಯಾವದು ಇಲ್ಲದ್ದರಿಂದ' ಎಂದು ಅಕ್ಷರಾರ್ಥ ; ಅದು ಇಲ್ಲದ್ದರಿಂದ - ಎಂದು ತಾತ್ಪರ್ಯ. ಹಿಂದೆ ಹೇಳಿದ ಅಭಿಪ್ರಾಯವನ್ನು ಮುಂದುವರಿಸುವಾಗ ಬಳಸುವ ಯದ್ ಶಬ್ದವನ್ನು 'ಅದು' ಎಂದೇ ಕನ್ನಡಿಸಬೇಕಾಗುವದು. ಉದಾ : ಅಸೌ ಮಮ ಸಖಾ, ಯೋ ಲೋಕೇ ವೀರವರ ಇತಿ ನಾಮ್ನಾ ಖ್ಯಾತಃ ।। ಇದನ್ನು ಇಂಗ್ಲಿಷು ವ್ಯಾಕರಣದಲ್ಲಿ ' 'Continuative Relative' ಎನ್ನುವರು.

೧೧. ಅವಧ್ಯವ್ಯವಸಾಯಬಾಹ್ಯಮ್ । ಅವಧ್ಯ ಇತಿ ವ್ಯವಸಾಯಃ ; ತಸ್ಮಾದ್ ಬಾಹ್ಯಮ್ ।

೧೨. ಕಃ ಪ್ರತ್ಯಯಃ । 'ಕಥಂ ಜ್ಞಾಸ್ಯಾಮಿ ?' ಎಂಬರ್ಥದಲ್ಲಿ ಉಪಯೋಗಿಸಿದ ಮಾತಿದು. ಪ್ರತ್ಯಯಃ - ನಿಶ್ಚಯ, ನಿಶ್ಚಯಿಸುವ ಸಾಧನ, ಗೊತ್ತುಮಾಡುವ ಬಗೆ.

೧೩. ವಧಿಷ್ಯಾಮಿ । ಈ ಮಾತು ವ್ಯಾಕರಣಬದ್ಧವಲ್ಲ. ಏಕೆಂದರೆ ಹನ್ ಧಾತುವಿಗೆ ವಧ್ ಎಂಬಾದೇಶವು ಆಶೀರ್ಲಿಙ್ ವಧ್ಯಾಸಮ್ (ನಾನು ಕೊಲ್ಲುವಂತಾಗಲಿ) ಲುಙ್ ಅವಧಿಷಮ್ (ಕೊಂದೆನು) - ಎಂಬ ಎರಡು ರೂಪಗಳಲ್ಲಿ ಮಾತ್ರವೇ ಬರುತ್ತದೆ ; ಭವಿಷ್ಯತ್ಕಾಲದ ರೂಪಗಳು - ಹನ್ತಾಸ್ಮಿ, ಹನಿಷ್ಯಾಮಿ - ಎಂದಿರಬೇಕು. "ಯದದ್ಯ ಮಮಾಗ್ರೇ ತೇನ ನಿಶ್ಚಯಃ ಕೃತೋ ಯತ್ ಪ್ರಭಾತೇ ಪಿಙ್ಗಲಕಂ ವಧಿಷ್ಯಾಮಿ ತದತ್ರೈವ ಪ್ರತ್ಯಯಃ ಪ್ರಭಾತೇಽವಸರವೇಲಾಯಾಮ್" ಎಂಬ ಪಾಠವು ಅಷ್ಟು ಹೊಂದಿಕೆಯಾಗಿಲ್ಲ. ನನ್ನೆದುರಿಗೆ ನಿಶ್ಚಯಮಾಡಿದ್ದೇ ಗುರುತು - ಎಂದಂತೆ ಆಗಿದೆ.

೧೪. ಆರಕ್ತಮುಖನಯನಃ । 'ಈಷದ್ ರಕ್ತಾನಿ ಆರಕ್ತಾನಿ ; ಮುಖಂ ಚ ನಯನೇ ಚ ಮುಖನಯನಾನಿ ; ಆರಕ್ತಾನಿ ಮುಖನಯನಾನಿ ಯಸ್ಯ ಸಃ ।।' ಎಂದು ವಿಗ್ರಹ.

೧೫. ಯದುಚಿತಂ ತತ್ ಕರ್ತವ್ಯಮ್ । ಯಥೋಚಿತಮ್ ಕ್ರಿಯತಾಮ್ ಎಂದೂ ಹೇಳಬಹುದು.

## ಅಭ್ಯಾಸ ೩೫

ಈ ವಾಕ್ಯಗಳನ್ನು ಪೂರ್ಣಮಾಡಿ ಬರೆಯಿರಿ :

१. यद्यप्ययं दुष्टबुद्धिर्ममोपरि.... । २. अथैवं मन्यते भवान्.... इति, तन्न युक्तम् ; यस्मात्.... । ३. त्वया तावत् तत्र सदा गम्यते ; तन्नूनं.... । ४. नैष ब्राह्मणधर्मो यत्.... । ५. वसुगुप्तो एकाकी कानने सञ्चरति ; कदाचित्.... ।

६. एतं निरपराधिनं धर्माधिकरणे (ನ್ಯಾಯಾಲಯದಲ್ಲಿ)...... । ७. अहं तावत् क्षुत्क्षामकण्ठः ; एवं ज्ञात्वा.... ॥

## ೨೪. ಮೂರನೆಯ ಗಣದ ಧಾತುಗಳು[೧]

೭೧. ಮೂರನೆ ಗಣದ ಧಾತುಗಳಿಗೆ ದ್ವಿರ್ಭಾವವು ಬಂದಮೇಲೆಯೇ ಪ್ರತ್ಯಯಗಳು ಸೇರುತ್ತವೆ, ದ್ವಿರ್ಭಾವದ ನಿಯಮಗಳನ್ನು ಹಿಂದೆ [೩೦. ೩೫, ಪು. ೫೫ ರಲ್ಲಿ] ಕೊಟ್ಟಿದೆ.

हु - ಹೋಮಮಾಡು

| ೧ (ಲಟ್) | | | ೨ (ಲಙ್) | | |
|---|---|---|---|---|---|
| जुहोति | जुहुतः | जुह्वति | अजुहोत् | अजुहुताम् | अजुहवुः |
| जुहोषि | जुहुथः | जुहुथ | अजहोः | अजुहुतम् | अजुहुत |
| जुहोमि | जहुवः | जुहुमः | अजुहवम् | अजुहुव | अजुहुम |

| ೩ (ಲೋಟ್) | | | ೪ (ವಿಧಿಲಿಙ್) | | |
|---|---|---|---|---|---|
| जुहोतु[೨] | जुहुताम् | जुह्वतु | जुहुयात् | जुहुयाताम् | जुहुयुः |
| जुहुधि | जुहुतम् | जुहुत | जुहुयाः | जुहुयातम् | जुहुयात |
| जुहवानि | जुहवाव | जुहवाम | जुहुयाम् | जुहुयाव | जुहुयाम |

ವಿಶೇಷ : ಇಲ್ಲಿ ಹು-ಹುಹು-ಜುಹು (ಹಕಾರಕ್ಕೆ ಜಕಾರಾದೇಶ).

(೨) ಅನದ್ಯತನಭೂತದಲ್ಲಿ ಹ್ರಸ್ವ ಅಥವಾ ದೀರ್ಘ ಇಉಋಕಾರಗಳಿಗೆ ಗುಣ, ಪ್ರಥಮಪುರುಷದ ಬಹುವಚನದಲ್ಲಿ 'ಅನ್' ಗೆ ಬದಲಾಗಿ 'ಉಸ್'. ಆದ್ದರಿಂದ ಅಜುಹವುಃ ॥

(೩) ಜುಹಾವ ಜುಹುವತುಃ ಜುಹುವುಃ । ಜುಹುವಿಥ - ಜುಹೋಥ, ಜುಹುವಥುಃ ಜುಹುವ । ಜುಹಾವ - ಜುಹುವ, ಜುಹುವಿವ ಜುಹುವಿಮ - ಎಂದು ಲಿಡ್ರೂಪ ; ಜುಹವಾಞ್ಚಕಾರ ಎಂದು ಮುಂತಾಗಿಯೂ ರೂಪಾಂತರವಿದೆ. ಭವಿಷ್ಯದ್ರೂಪಗಳು : ಹೋತಾ, ಹೋಷ್ಯತಿ. ಆತ್ಮನೇಪದದಲ್ಲಿ ಜುಹುವೇ ಜುಹುವಾತೇ ಜುಹುವಿರೇ - ಇತ್ಯಾದಿ.

೧. ಈ ಪಾಠವನ್ನು ಮೊದಲನೆಯ ಸಲಕ್ಕೆ ಒಂದು ಬಾರಿ ಓದಿ ಬಿಟ್ಟುಬಿಡಬಹುದು. ಸಮಯಬಂದಾಗ ಇದರ ಪರಾಮರ್ಶವನ್ನು ಮಾಡುವೆವು.

೨. ಆಶೀರರ್ಥದಲ್ಲಿ ಬರುವ ತಾತ್ - ಎಂಬುದನ್ನು ಬಿಟ್ಟುಬಿಟ್ಟಿದ್ದೇವೆ.

हा - ಬಿಡು

| ೧ | | | ೨ | | |
|---|---|---|---|---|---|
| जहाति | जहितः, जहीतः | जहति | अजहात् | अजहिताम्, अजहीताम् | अजहुः |
| जहासि | जहिथः, जहीथः | जहिथ, जहीथ | अजहाः | अजहितम्, अजहीतम् | अजहित, अजहीत |
| जहामि | जहिवः, जहीवः | जहिमः, जहीमः | अजहाम् | अजहिव, अजहीव | अजहिम, अजहीम |

| ೩ | | | ೪ | | |
|---|---|---|---|---|---|
| जहातु | जहिताम्, जहीताम् | जहतु | जह्यात् | जह्याताम् | जह्युः |
| जहाहि, जहिहि, जहीहि | जहितम्, जहीतम् | जहित, जहीत | जह्याः | जह्यातम् | जह्यात |
| जहानि | जहाव | जहाम | जह्याम् | जह्याव | जह्याम |

ವಿಶೇಷ : (೧) ಇಲ್ಲಿಯೂ ಪರೋಕ್ಷಭೂತದಂತೆ ಹಕಾರಕ್ಕೆ ಜಕಾರಾದೇಶ.

(೨) ಧಾತುವಿನ ಆಕಾರಕ್ಕೆ ವರ್ತಮಾನ, ಅನದ್ಯತನ, ಆಜ್ಞಾರ್ಥಗಳ ವ್ಯಂಜನಾದಿಯಾದ ದುರ್ಬಲಪ್ರತ್ಯಯಗಳು ಸೇರುವಾಗ ಇ ಅಥವಾ ಈಕಾರ ; ಸ್ವರಾದಿಯ ದುರ್ಬಲಪ್ರತ್ಯಯಗಳು ಸೇರುವಾಗಲೂ ವಿಧ್ಯಾದಿರೂಪದ ಪ್ರತ್ಯಯಗಳು ಸೇರುವಾಗಲೂ ಲೋಪ ; ಆಜ್ಞಾರ್ಥದಲ್ಲಿ ಏಕವಚನವು ಸೇರುವಾಗ ವಿಕಲ್ಪದಿಂದ ಉಳಿದುಕೊಳ್ಳುತ್ತದೆ.

(೩) ಲಿಡ್ರೂಪ : ಜಹೌ [ಪು. ೬೮] : ಭವಿಷ್ಯತ್ಕಾಲ : ಹಾತಾ, ಹಾಸ್ಯತಿ ॥

मा - ಅಳೆ (ಆತ್ಮನೇಪದ)

| ೧ | | | ೨ | | |
|---|---|---|---|---|---|
| मिमीते | मिमाते | मिमते | अमिमीत | अमिमाताम् | अमिमत |
| मिमीषे | मिमाथे | मिमीध्वे | अमिमीथाः | अमिमाथाम् | अमिमीध्वम् |

| | | | | | |
|---|---|---|---|---|---|
| मिमे | मिमीवहे | मिमीमहे | अमिमि | अमिमीवहि | अमिमीमहि |

| | | | | | |
|---|---|---|---|---|---|
| मिमीताम् | मिमाताम् | मिमताम् | मिमीत | मिमीयाताम् | मिमीरन् |
| मिमीष्व | मिमाथाम् | मिमीध्वम् | मिमीथाः | मिमीयाथाम् | मिमीध्वम् |
| मिमै | मिमावहै | मिमामहै | मिमीय | मिमीवहि | मिमीमहि |

ವಿಶೇಷ : ಮಾ (ಅಳೆ), ಹಾ (ಹೋಗು), ಗಾ (ಹಾಡು) - ಈ ಧಾತುಗಳಿಗೆ ಅಭ್ಯಾಸದ ಸ್ವರಕ್ಕೆ ಇಕಾರಾದೇಶ. ಇವುಗಳ ಅಂತ್ಯಸ್ವರಕ್ಕೆ ವ್ಯಂಜನಾದಿದುರ್ಬಲಪ್ರತ್ಯಯಗಳು ಸೇರುವಾಗ ಈಕಾರ, ಸ್ವರಾದಿದುರ್ಬಲಪ್ರತ್ಯಯಗಳು ಸೇರುವಾಗ ಲೋಪ ; ಪ್ರಬಲಪ್ರತ್ಯಯಗಳು ಸೇರುವಾಗ ಹಾಗೆಯೇ ಉಳಿದುಕೊಳ್ಳುತ್ತದೆ. ಆದ್ದರಿಂದ ಪ್ರಬಲಪ್ರತ್ಯಯಗಳು ಸೇರುವಾಗ ಮಿಮಾ ; ವ್ಯಂಜನಾದಿದುರ್ಬಲಪ್ರತ್ಯಯಗಳು ಸೇರುವಾಗ ಮಿಮೀ ; ಸ್ವರಾದಿಯಾದ ದುರ್ಬಲಪ್ರತ್ಯಯಗಳು ಸೇರುವಾಗ ಮಿಮ್ ಎಂದಾಗಿದೆ. ಹೀಗೆಯೇ ಜಿಹೀತೇ, ಜಿಹಾತೇ, ಜಿಹತೇ । ಜಿಹಾತಿ, ಜಿಹೀತಃ ಜಿಹತಿ । - ಇತ್ಯಾದಿ.

ಲಿಡ್ರೂಪ : ಮಮೇಮಮಾತೇ ಮಮಿರೇ - ಇತ್ಯಾದಿ. ಭವಿಷ್ಯತ್ : ಮಾತಾಸೇ, ಮಾಸ್ಯಸೇ ॥

೭೨. ಈಗ दा - ಕೊಡು ಎಂಬ ಉಭಯಪದಿಧಾತುವಿನ ರೂಪಗಳನ್ನು ಕೊಡುತ್ತೇವೆ :

ಪರಸ್ಮೈಪದ ಆತ್ಮನೇಪದ

ವರ್ತಮಾನ

| | | | | | |
|---|---|---|---|---|---|
| ददाति | दत्तः | ददति | दत्ते | ददाते | ददते |
| ददासि | दत्थः | दत्थ | दत्से | ददाथे | दद्ध्वे |
| ददामि | दद्वः | दद्मः | ददे | दद्वहे | दद्महे |

ಅನದ್ಯತನಭೂತ

| | | | | | |
|---|---|---|---|---|---|
| अददात् | अदत्ताम् | अददुः | अदत्त | अददाताम् | अददत |
| अददाः | अदत्तम् | अदत्त | अदत्थाः | अददाथाम् | अदध्वम् |
| अददाम् | अदद्व | अदद्म | अददि | अदद्वहि | अदद्महि |

### ಆಜ್ಞಾರ್ಥ

| | | | | | |
|---|---|---|---|---|---|
| ददातु | दत्ताम् | ददतु | दत्ताम् | ददाताम् | ददताम् |
| देहि | दत्तम् | दत्त | दत्स्व | ददाथाम् | दद्ध्वम् |
| ददानि | ददाव | ददाम | ददै | ददावहै | ददामहै |

### ವಿಧ್ಯಾದ್ಯರ್ಥ

| | | | | | |
|---|---|---|---|---|---|
| दद्यात् | दद्याताम् | दद्युः | ददीत | ददीयाताम् | ददीरन् |
| दद्याः | दद्यातम् | दद्यात | ददीथाः | ददीयाथाम् | ददीध्वम् |
| दद्याम् | दद्याव | दद्याम | ददीय | ददीवहि | ददीमहि |

ವಿಶೇಷ : (೧) ದುರ್ಬಲಪ್ರತ್ಯಯಗಳ ಹಿಂದೆ ಆಕಾರಕ್ಕೆ ಲೋಪ. 'ದದ್' ಎಂದಾಗಿದೆ.

(೨) ಪರಸ್ಮೈಪದಿ ಆಜ್ಞಾರ್ಥದ ಮಧ್ಯಮಪುರುಷ ಏಕವಚನದಲ್ಲಿ 'ದೇಹಿ' ಎಂದಾಗಿದೆ.

(೩) ಧಾ - ಧರಿಸು, ಪೋಷಿಸು ಎಂಬ ಧಾತುವೂ ಹೀಗೆಯೇ ನಡೆಯುತ್ತದೆ. ಅದಕ್ಕೆ ಸ್, ಧ್ವ್, ತ್ ಮತ್ತು ಥ್ - ಈ ವ್ಯಂಜನಗಳು ಮುಂದಿರುವಾಗ ಧತ್ ಎಂಬ ರೂಪವಾಗುತ್ತದೆ. ಉದಾ : ಧತ್ಸೇ, ಧದ್ಧ್ವಮ್, ಧತ್ತಃ, ಧತ್ತ, ಅಧತ್ತಾಮ್, ಅಧತ್ತ, ಅಧತ್ಥಾಃ ||

(೪) ಲಿಡ್ರೂಪ : 'ದಧೌ' ಇತ್ಯಾದಿ [ಪು. ೬೮] ಆತ್ಮನೇಪದ ; ದಧೇ ಇತ್ಯಾದಿ ; ಭವಿಷ್ಯತ್ : ಧಾತಾ, ಧಾಸ್ಯತಿ, ಧಾಸ್ಯತೇ ।

೭೩. ಇನ್ನೊಂದು ವಿಶೇಷಧಾತು, भी - ಹೆದರು - ಇದರ ರೂಪಗಳನ್ನು ನೋಡಿರಿ :

| | ೧ | | | ೨ | |
|---|---|---|---|---|---|
| बिभेति | बिभितः, बिभीतः | बिभ्यति | अबिभेत् | अबिभिताम्, अबिभीताम् | अबिभयुः |
| बिभेषि | बिभिथः, बिभीथः | बिभिथ, बिभीथ | अबिभेः | अबिभितम्, अबिभीतम् | अबिभित, अबिभीत |
| बिभेमि | बिभिवः, बिभीवः | बिभिमः, बिभीमः | अबिभयम् | अबिभिव, अबिभीव | अबिभिम, अबिभीम |

| ೩ | | | ೪ | | |
|---|---|---|---|---|---|
| बिभेतु | बिभिताम्, बिभीताम् | बिभ्यतु | बिभियात्, बिभीयात् | बिभियाताम्, बिभीयाताम् | बिभियुः, बिभीयुः |
| बिभिहि, बिभीहि | बिभितम्, बिभीतम् | बिभित, बिभीत | बिभियाः, बिभीयाः | बिभियातम्, बिभीयातम् | बिभियात, बिभीयात |
| बिभयानि | बिभयाव | बिभयाम | बिभियाम्, बिभीयाम् | बिभियाव, बिभीयाव | बिभियाम, बिभीयाम |

ವಿಶೇಷ : (೧) ಇಈಕಾರಾಂತಧಾತುಗಳಿಗೆ ಸಂಯುಕ್ತಾಕ್ಷರವು ಪೂರ್ವದಲ್ಲಿಲ್ಲದಿದ್ದಾಗ ಸ್ವರಾದಿಯಾದ ದುರ್ಬಲಪ್ರತ್ಯಯಗಳು ಸೇರುವಾಗ ಇಈಗಳಿಗೆ ಯಕಾರಾದೇಶ. ಅಂಗದಲ್ಲಿ ಅನೇಕ ಸ್ವರಗಳಿರಬೇಕು. ಇಲ್ಲಿ ಬಿಭೀ - ಎರಡು ಸ್ವರಗಳಿವೆಯಾದ್ದರಿಂದ ಬಿಭ್ಯತಿ, ಬಿಭ್ಯತು ಆಗಿದೆ.

(೨) ಈ ಧಾತುವಿನ ಈಕಾರಕ್ಕೆ ವ್ಯಂಜನಾದಿದುರ್ಬಲಪ್ರತ್ಯಯವು ಪರವಾದಾಗ ವಿಕಲ್ಪದಿಂದ ಇಕಾರ : ಬಿಭಿತಃ, ಬಿಭೀತಃ ।

(೩) ಲಿಡ್ರೂಪ : ಬಿಭಾಯ ಬಿಭ್ಯತುಃ ಬಿಭ್ಯುಃ । ಬಿಭಯಿಥ - ಬಿಭೇಥ, ಬಿಭ್ಯಥುಃ ಬಿಭ್ಯ । ಬಿಭಾಯ - ಬಿಭಯ, ಬಿಭ್ಯಿವ ಬಿಭ್ಯಿಮ ।। [ಪು. ೫೫-೫೬]. ಭವಿಷ್ಯತ್ : 'ಭೇತಾ', 'ಭೇತಾಸಿ' ಇತ್ಯಾದಿ । 'ಭೇಷ್ಯತಿ' ಇತ್ಯಾದಿ ।।

## ಅಭ್ಯಾಸ ೩೬

ಈ ವಾಕ್ಯಗಳನ್ನು - ಕಂಸದಲ್ಲಿ ಕೊಟ್ಟಿರುವ ಧಾತುಗಳನ್ನುಪಯೋಗಿಸಿ - ಸಂಸ್ಕೃತಕ್ಕೆ ಅನುವಾದಮಾಡಿ :

೧. ರಾಕ್ಷಸರು ಮಾಯಾನಗರವನ್ನು ನಿರ್ಮಿಸುತ್ತಾರೆ (निर्+मी). ೨. ನೀನೇತಕ್ಕೆ ಹೀಗೆ ಹೆದರುತ್ತೀಯೆ (भी) ? ಇದು ಹಾವಲ್ಲ, ಹಗ್ಗವೇ. ೩. ಸುಳ್ಳನ್ನು ಬಿಟ್ಟು ಬಿಡಿರಿ (हा). ೪. ಬ್ರಹ್ಮನು ಹಿರಣ್ಯಕಶಿಪುವಿಗೆ ಯಾವ ವರವನ್ನು ಕೊಟ್ಟನು (दा) ? ೫. ಯಾವನುತಾನೆ ತನ್ನ ಪ್ರಿಯಳಾದ ಹೆಂಡತಿಯನ್ನು ಕಾಡಿನಲ್ಲಿ ಒಬ್ಬಳನ್ನೇ ಬಿಟ್ಟಾನು (हा) ? ೬. ಯಾವದನ್ನು ಮಾಡುತ್ತೀರೋ (कृ), ಯಾವದನ್ನು ತಿನ್ನುತ್ತೀರೋ (अश्), ಯಾವದನ್ನು ಹೋಮಮಾಡುತ್ತೀರೋ (हु) ಅದನ್ನು ಭಗವಂತನಿಗೆ ಅರ್ಪಿಸಿರಿ (अर्पय). ೭. ಏಳಿರಿ (उत्+स्था), ಎಚ್ಚರಾಗಿರಿ (जागृ), ಏತಕ್ಕೆ ಇನ್ನೂ ನಿದ್ರಿಸುತ್ತಿದ್ದೀರಿ (स्वप्) ?

# २५. मित्रभेदः (अनुवृत्तः)

७४. इति कथयित्वा सञ्जीवकसकाशं गतः । तं प्रणम्योपविष्टः । सञ्जीवकोऽपि सोद्वेगाकारं मन्दगत्या समायान्तं तम् उद्वीक्ष्य सादरतरम् उवाच - 'भो मित्र, स्वागतम् । चिराद् दृष्टोऽसि । अपि शिवं भवतः ? तत् कथय येन अदेयमपि तुभ्यं गृहागताय प्रयच्छामि ।।

दमनक आह - 'भोः, कथं शिवं सेवकजनस्य ?'

सञ्जीवक आह - अथ भवान् किं वक्तुमनाः ?'

सोऽब्रवीत् - "मित्र, सचिवानां मन्त्रभेदं कर्तुं न युज्यते । तथापि मया तव स्नेहपाशबद्धेन मन्त्रभेदः कार्यः । यतस्त्वं मम वचनेन अत्र राजकुले विश्वस्तः प्रविष्टश्च । तत् तवोपरि पिङ्गलकोऽयं दुष्टबुद्धिः । कथितं चाद्य अनेन मत्पुरतः चतुष्कर्णतया यत् 'प्रभाते सञ्जीवकं हत्वा समस्तमृगपरिवारं चिरात् तृप्तिं नेष्यामि' । ततः स मयोक्तः 'स्वामिन्, न युक्तमिदं यन्मित्रद्रोहेण जीवनं क्रियते' । ततस्तेनाहं सामर्षेण उक्तः 'भो दुष्टबुद्धे, सञ्जीवकस्तावत् शष्पभोजी, वयं मांसाशिन । तदस्माकं स्वाभाविकं वैरम् इति कथं रिपुरुपेक्ष्यते ? तस्मात् सामादिभिरुपायैः हन्यते । न च हते तस्मिन् दोषः स्यात्' इति । तदहं तस्य निश्चयं ज्ञात्वा त्वत्सकाशम् इह आगतः । सांप्रतं मे नास्ति विश्वासघातकदोषः । मया सुगुप्तमन्त्रस्तव निवेदितः । अथ यत् ते प्रतिभाति तत् कुरुष्व ।" इति ।।

अथ सञ्जीवकस्तस्य तद् वज्रपातदारुणं वचनं श्रुत्वा मोहम् उपागतः । अथ चेतनां लब्ध्वा सवैराग्यम् इदमाह - 'भोः, अयुक्तं मया कृतं यदनेन सह मैत्री विहिता । उक्तं च -

**ययोरेव समं वित्तं ययोरेव समं कुलम् ।**
**तयोर्मैत्री विवाहश्च न तु पुष्टविपुष्टयोः ।।**

तद् यदि गत्वा तं प्रसादयामि, तथापि न प्रसादं यास्यति । उक्तं च -

निमित्तमुद्दिश्य हि यः प्रकुप्यति

ध्रुवं स तस्यापगमे प्रशाम्यति ।

अकारणद्वेषपरो हि यो भवेत्

कथं नरस्तं परितोषयिष्यति ॥

तत् परिज्ञातं मया यत् प्रसादम् असहमानैः समीपवर्तिभिरेष पिङ्गलकः प्रकोपितः । तेन अयं मम अदोषस्यापि एवं वदति ॥'

दमनक आह - 'भो मित्र, यद्येवं तन्नास्ति ते भयम् । प्रकोपितोऽपि स दुर्जनैः, तव वचनरचनया प्रसादं यास्यति' ॥

स आह - 'भोः, न युक्तमुक्तं भवता । लघूनामपि दुर्जनानां मध्ये वस्तुं न शक्यते । उपायान्तरं विधाय ते नूनं घ्नन्ति । तद् भद्र, क्षुद्रपरिवारोऽयं ते राजा मया सम्यग् ज्ञातः । तन्नूनं ममोपरि केनचिद् दुर्जनेन अयं प्रकोपितः । तेनैवं वदति ॥

## ಅಭ್ಯಾಸ ೩೭

ಮೇಲೆ ಕೊಟ್ಟಿರುವ ಗ್ರಂಥಭಾಗವನ್ನು ಕನ್ನಡಿಸಿರಿ. ಈ ಕೆಳಗೆ ಕೆಲವು ಕ್ಲಿಷ್ಟಪದಗಳಿಗೆ ಅರ್ಥವನ್ನು ಕೊಟ್ಟಿದೆ :

**ಸೋದ್ವೇಗಾಕಾರಮ್ - ಕಳವಳವನ್ನು ಸೂಚಿಸುವ ಮುಖದಿಂದ. ಮನ್ದಗತ್ಯಾ - ನಿಧಾನವಾಗಿ ಹೆಜ್ಜೆಹಾಕುತ್ತಾ. ಅದೇಯಮಪಿ - ಕೊಡಬಾರದ್ದನ್ನಾದರೂ. ಮನ್ತ್ರಭೇದಃ - ಗುಟ್ಟಿನ ಆಲೋಚನೆಯನ್ನು ಹೊರಗೆ ಹಾಕುವದು. ಮಮ ವಚನೇನ - ನನ್ನ ಮಾತಿನಮೇಲೆ. ರಾಜಕುಲಮ್ - ಅರಮನೆ. ಮತ್ಪುರತಃ - ನನ್ನ ಮುಂದೆ. ಚತುಷ್ಕರ್ಣ ತಯಾ - (ನಾಲ್ಕು ಕಿವಿಗಳ ಭಾವದಿಂದ) ನಾವಿಬ್ಬರೇ ಇರುವಾಗ. ಚಿರಾತ್ - ಬಹುಕಾಲದವರೆಗೆ, ಸುಗುಪ್ತಮನ್ತ್ರಃ - ಬಲು ಗುಟ್ಟಾದ ಆಲೋಚನೆ (ಸಂಚು). ಸಾಮರ್ಷೇಣ - ಕೋಪದಿಂದೊಡಗೂಡಿದವನಿಂದ. ಪ್ರತಿಭಾತಿ - ತೋರುತ್ತದೆ. ಅದೋಷಃ - ತಪ್ಪಿಲ್ಲದವನು. ಲಘೂನಾಮ್ - ಅಲ್ಪರಾದವರ.**

## ಅಭ್ಯಾಸ ೩೮

ಈ ಪಾಠದಲ್ಲಿರುವ ಈ ಮುಂದಿನ ವಾಕ್ಯಭಾಗಗಳಿಗೆ ಸಮಾನಾರ್ಥಕವಾಗಿ ೨೧ ಮತ್ತು ೨೩ನೆಯ ಪಾಠಗಳಲ್ಲಿ ಬಳಸಿರುವ ವಾಕ್ಯಗಳನ್ನು ಬರೆಯಿರಿ :

चिराद् दृष्टः, अथ भवान् किं वक्तुमनाः ? त्वं मम वचनेन राजकुलं प्रविष्टः वज्रपातदारुणं वचनम् श्रुत्वा, चेतनाम् लब्ध्वा ।।

## ಅಭ್ಯಾಸ ೩೯

कथयित्वा, प्रणम्य, उद्वीक्ष्य, हत्वा, ज्ञात्वा, श्रुत्वा, लब्ध्वा, गत्वा ।। ಇಲ್ಲಿ ಕೊಟ್ಟಿರುವ ಕ್ತ್ವಾಂತಗಳಿಗೆ ಲ್ಯಬಂತರೂಪಗಳನ್ನೂ, ಲ್ಯಬಂತಗಳಿಗೆ ಕ್ತ್ವಾಂತಗಳನ್ನೂ ಬರೆಯಿರಿ. ಉಪಸರ್ಗವನ್ನು ಸೇರಿಸುವಾಗ ಲ್ಯಬಂತ, ಬರಿಯ ಧಾತುವಿಗೆ ಕ್ತ್ವಾಂತವು ಬೇಕು. ಉದಾ : कथयित्वा (ಕ್ತ್ವಾಂತ), प्रकथ्य (ಲ್ಯಬಂತ), प्रणम्य (ಲ್ಯಬಂತ), नत्वा (ಕ್ತ್ವಾಂತ).

## ಅಭ್ಯಾಸ ೪೦

ಈ ವಾಕ್ಯಗಳನ್ನು - ಕಂಸದಲ್ಲಿಟ್ಟಿರುವ ಪದಗಳನ್ನು ಉಪಯೋಗಿಸಿ - ರೂಪಾಂತರ ಮಾಡಿರಿ :

१. अदेयमपि तुभ्यं प्रयच्छामि (मया) । २. सचिवानां मन्त्रभेदं कर्तुं न युज्यते (न कर्तुमर्हन्ति) । ३. मया तव स्नेहपाशबद्धेन मन्त्रभेदः कृतः (अकरवम्) । ४. कथितं च अद्य अनेन मत्पुरतः (कथयितवांश्च) । ५. प्रभाते सञ्जीवकं हत्वा समस्तमृगपरिवारं तृप्तिं नेष्यामि (नेष्यते) । ६. ततस्तेनाहं सामर्षेण उक्तः (ऊचे) । ७. कथं रिपुरुपेक्ष्यते (उपेक्षे) ? ८. परिज्ञातं मया यत् प्रसादम् असहमानैः समीपवर्तिभिरेष पिङ्गलकः प्रकोपितः असहमानाः ।।

## ೨೯. ಏಳನೆಯ ಗಣದ ಧಾತುಗಳೂ ವರ್ತಮಾನಕೃದಂತಗಳೂ

೭೫. ಏಳನೆಯ ಗಣದ ಧಾತುಗಳಿಗೆ ಅಂತ್ಯಸ್ವರಕ್ಕೆ न ಎಂಬ ವಿಕರಣವು ಬರುತ್ತದೆ.

अथालम्ब्य धनू रामो जगर्ज गजविक्रमः ।
रुणध्मि सवितुर्मार्गं भिनद्मि कुलपर्वतान् ।।

रिणच्मि जलधेस्तोयं विविनच्मि दिवः सुरान् ।
क्षुणद्मि सर्पान् पाताले छिनद्मि क्षणदाचरान् ।।
यमं युनज्मि कालेन समिन्धानोऽस्त्रकौशलम् ।

ಅರ್ಥ :- ಬಳಿಕ ಆನೆಯಂತೆ ವಿಕ್ರಮವುಳ್ಳ ರಾಮನು ಧನುಸ್ಸನ್ನು ಹಿಡಿದುಕೊಂಡು (ಹೀಗೆಂದು) ಗರ್ಜಿಸಿದನು : 'ಸೂರ್ಯನ ದಾರಿಯನ್ನು ಅಡ್ಡಗಟ್ಟುತ್ತೇನೆ, ಕುಲಪರ್ವತಗಳನ್ನು ಸೀಳುತ್ತೇನೆ, ಸಮುದ್ರದ ನೀರನ್ನು ಹೊರಹುಯ್ಯುತ್ತೇನೆ, ದೇವತೆಗಳನ್ನು ಸ್ವರ್ಗದಿಂದ ವಿಂಗಡಿಸಿ ತೆಗೆಯುತ್ತೇನೆ, ಪಾತಾಲದಲ್ಲಿ ಸರ್ಪಗಳನ್ನು ಪುಡಿಮಾಡುತ್ತೇನೆ, ರಾಕ್ಷಸರನ್ನು ಕತ್ತರಿಸಿ ತುಂಡುಮಾಡುತ್ತೇನೆ. ಅಸ್ತ್ರಕೌಶಲವನ್ನು ಭುಗಿಲೆಬ್ಬಿಸಿ ಯಮನನ್ನು ಕಾಲನೊಡನೆ ಸೇರಿಸುತ್ತೇನೆ.

(धनू रामः = धनुः + रामः)

ಮೇಲಿನ ಶ್ಲೋಕಗಳಲ್ಲಿ ಕೆಲವು ಏಳನೆಯ ಗಣದ ಧಾತುರೂಪಗಳನ್ನು ಕೊಟ್ಟಿದೆ.

छिद् - ಕತ್ತರಿಸು

ಪರಸ್ಮೈಪದ | ಆತ್ಮನೇಪದ

ವರ್ತಮಾನ

| | | | | | |
|---|---|---|---|---|---|
| छिनत्ति | छिन्तः | छिन्दन्ति | छिन्ते | छिन्दाते | छिन्दते |
| छिनत्सि | छिन्त्थः | छिन्त्थ | छिन्त्से | छिन्दाथे | छिन्ध्वे |
| छिनद्मि | छिन्द्वः | छिन्द्मः | छिन्दे | छिन्द्वहे | छिन्द्महे |

ಅನದ್ಯತನಭೂತ

| | | | | | |
|---|---|---|---|---|---|
| अच्छिनत्-द् | अच्छिन्ताम् | अच्छिन्दन् | अच्छिन्त | अच्छिन्दाताम् | अच्छिन्दत |
| अच्छिनः अच्छिनत्-द् | अच्छिन्तम् | अच्छिन्त | अच्छिन्त्थाः | अच्छिन्दाथाम् | अच्छिन्द्ध्वम् |
| अच्छिनदम् | अच्छिन्द्व | अच्छिन्द्म | अच्छिन्दि | अच्छिन्द्वहि | अच्छिन्द्महि |

ಆಜ್ಞಾರ್ಥ

| | | | | | |
|---|---|---|---|---|---|
| छिनत्तु | छिन्ताम् | छिन्दन्तु | छिन्ताम् | छिन्दाताम् | छिन्दताम् |
| छिन्धि | छिन्तम् | छिन्त | छिन्स्व | छिन्दाथाम् | छिन्द्ध्वम् |
| छिनदानि | छिनदाव | छिनदाम | छिनदै | छिनदावहै | छिनदामहै |

ವಿಧ್ಯಾದ್ಯರ್ಥ

| | | | | | |
|---|---|---|---|---|---|
| छिन्द्यात् | छिन्द्याताम् | छिन्द्युः | छिन्दीत | छिन्दीयाताम् | छिन्दीरन् |
| छिन्द्याः | छिन्द्यातम् | छिन्द्यात | छिन्दीथाः | छिन्दीयाथाम् | छिन्दीध्वम् |
| छिन्द्याम् | छिन्द्याव | छिन्द्याम | छिन्दीय | छिन्दीवहि | छिन्दीमहि |

ವಿಶೇಷ : (೧) 'न' ವಿಕರಣದ ಅಕಾರಕ್ಕೆ ದುರ್ಬಲಪ್ರತ್ಯಯಗಳ ಹಿಂದೆ ಲೋಪ ; ಅನುನಾಸಿಕಾರ್ಧಸ್ವರವಲ್ಲದ ವ್ಯಂಜನಾಂತವಾದ್ದರಿಂದ ಆಜ್ಞಾರ್ಥದಲ್ಲಿ 'ಹಿ' ಎಂಬುದಕ್ಕೆ ಬದಲಾಗಿ 'ಧಿ'.

(೨) ಲಿಡ್ರೂಪ : ಚಿಚ್ಛೇದ ಚಿಚ್ಛಿದತುಃ ಚಿಚ್ಛಿದುಃ । ಚಿಚ್ಛೇದಿಥ ಇತ್ಯಾದಿ. ಲುಡ್ರೂಪ : ಛೇತ್ತಾ ; ಲೃಟ್ : ಛೇತ್ಸ್ಯತಿ ॥

(೩) भिद् ಧಾತುವಿಗೂ ಹೀಗೆಯೇ ರೂಪಗಳು.

೭೬. युज्, रिच् - ಮುಂತಾದ ಧಾತುಗಳ ರೂಪಗಳನ್ನು ಸಿದ್ಧಪಡಿಸುವಾಗ ಸಂಧಿನಿಯಮಗಳನ್ನು ನೆನಪಿನಲ್ಲಿಡಬೇಕು.

ವರ್ತಮಾನ

| | | | | | |
|---|---|---|---|---|---|
| युनक्ति | युङ्क्तः | युञ्जन्ति | युङ्क्ते | युञ्जाते | युञ्जते |
| युनक्षि | युङ्क्थः | युङ्क्थ | | युञ्जाथे | युङ्ग्धवे |
| युनज्मि | युञ्ज्वः | युञ्ज्मः | युञ्जे | युञ्ज्वहे | युञ्ज्महे |

ಅನದ್ಯತನಭೂತ

| | | | | | |
|---|---|---|---|---|---|
| अयुनक्-ग् | अयुङ्क्ताम् | अयुञ्जन् | अयुङ्क्त | अयुञ्जाताम् | अयुञ्जत |
| अयुनक्-ग् | | अयुङ्क्त | अयुङ्क्थाः | अयुञ्जाथाम् | अयुङ्ध्वम् |
| अयुनजम् | अयुञ्ज्व | अयुञ्ज्म | अयुञ्जि | अयुञ्ज्वहि | अयुञ्ज्महि |

ಆಜ್ಞಾರ್ಥ

| | | | | | |
|---|---|---|---|---|---|
| युनक्तु | युङ्क्ताम् | युञ्जन्तु | युङ्क्ताम् | युञ्जाताम् | युञ्जताम् |
| युङ्ग्धि | युङ्क्तम् | युङ्क्त | युङ्क्ष्व | युञ्जाथाम् | युङ्ग्ध्वम् |
| युनजानि | युनजाव | युनजाम | यनजै | युनजावहै | युनजामहै |

ವಿಧ್ಯಾದ್ಯರ್ಥ

| | | | | | |
|---|---|---|---|---|---|
| युञ्ज्यात् | युञ्ज्याताम् | युञ्ज्युः | युञ्जीत | युञ्जीयाताम् | युञ्जीरन् |
| युञ्ज्याः | युञ्ज्यातम् | युञ्ज्यात | युञ्जीथाः | युञ्जीयाथाम् | युञ्जीध्वम् |
| युञ्ज्याम् | युञ्ज्याव | युञ्ज्याम | यञ्जीय | | युञ्जीमहि |

ವಿಶೇಷ: (೧) ಕಕರ್ಶವರ್ಣವು ಪರವಾದಾಗ ಜಕಾರಕ್ಕೆ ಕಕಾರ, ಅನುನಾಸಿಕಾರ್ಧಾಕ್ಷರವಲ್ಲದ ಮೃದುವ್ಯಂಜನವು ಪರವಾದಾಗ ಗಕಾರ : ಯುನಕ್ತಿ, ಯುನಕ್ಷಿ (ಕಕಾರವು ಕಂಠ್ಯವಾದ್ದರಿಂದ ಷಕಾರ), ಯುಙ್ಗ್ಧ್ವಮ್ ।

(೨) ದುರ್ಬಲಪ್ರತ್ಯಯದ ಹಿಂದೆ ನಕಾರದ ಅಕಾರಕ್ಕೆ ಲೋಪ, ನಕಾರಕ್ಕೆ ಆಯಾ ವರ್ಗದ ಅನುನಾಸಿಕ : ಯುಙ್ಕ್ತಃ, ಯುಞ್ಜ್ವಃ, ಯುಙ್ಕ್ಥ । ಹೀಗೆಯೇ ರಿಣಕ್ತಿ, ರಿಙ್ಕ್ತಃ, ರಿಞ್ಚನ್ತಿ ।... ರಿಞ್ಚ್ವಃ, ರಿಞ್ಚ್ಮಃ । ರಿಙ್ಕ್ತೇ, ರಿಞ್ಚಾತೇ ರಿಞ್ಚತೇ । ರಿಞ್ಚ್ವಹೇ, ರಿಞ್ಚ್ಮಹೇ । ಅರಿಣಕ್ - ಗ್....ಇತ್ಯಾದಿಯಾಗಿ 'ರಿಚ್' ಧಾತುವಿಗೆ ರೂಪಗಳಾಗುವವು.

ರುಧ್ ಧಾತುವನ್ನು ನಡೆಯಿಸುವಾಗ ಈ ನಿಯಮವನ್ನು ನೆನಪಿನಲ್ಲಿಡಬೇಕು ; ಅನುನಾಸಿಕಾರ್ಧಸ್ವರವಲ್ಲದ ವ್ಯಂಜನಕ್ಕೆ ಅಥವಾ 'ಹ' ಕ್ಕೆ ಪೂರ್ವದಲ್ಲಿ ವ್ಯಂಜನವಿದ್ದು ಸಮಾನವರ್ಣವು ಪರವಾದರೆ ವಿಕಲ್ಪದಿಂದ ಲೋಪ. ಉದಾ :

| | | | | | |
|---|---|---|---|---|---|
| रुणद्धि (धि) | रुन्द्धः (न्धः) | रुन्धन्ति | रुन्धे (न्धे) | रुन्धाते | रुन्धते |
| रुणत्सि | रुन्द्धः (द्धः) | रुन्द्ध (न्ध) | रुन्त्से | रुन्धाथे | रुन्ध्वे |
| रुणध्मि | रुन्ध्वः | रुन्ध्मः | रुन्धे | रुन्ध्वहे | रुन्ध्महे |

ವಿಶೇಷ : (೧) ರುಧ್ - ತಿ ರುಣದ್ - ತಿ ರುಣದ್ ಧಿ ದಕಾರಕ್ಕೆ ಲೋಪವಾದರೆ ರುಣಧಿ ಇತ್ಯಾದಿ. (ಪ್ರತ್ಯಯಾದಿಯಾದ ತಥಕಾರಗಳು ವರ್ಗಚತುರ್ಥಾಕ್ಷರದ ಮುಂದೆ ಬಂದಾಗ ಅವಕ್ಕೆ ಧಕಾರಾದೇಶ).

(೨) ಆತ್ಮನೇಪದದಲ್ಲಿಯೂ ಎರಡು ರೂಪಗಳಿವೆ. ದಕಾರಕ್ಕೆ ಲೋಪವಾದ ರೂಪಗಳನ್ನು ಮಾತ್ರ ತೋರಿಸಿದೆ.

೭೭. ಪಾಠದ ಮೊದಲು ಕೊಟ್ಟಿರುವ ಶ್ಲೋಕದಲ್ಲಿರುವ 'समिन्धानः' ಎಂಬ ರೂಪವು इन्ध् - ಹೊತ್ತಿಸು, ಹೊಳೆ ಎಂಬ ೭ನೆಯ ಗಣದ ಧಾತುವಿನ **ವರ್ತಮಾನ ಕೃದಂತ.**

ಈವರೆಗೆ ಕೊಟ್ಟಿರುವ ಹತ್ತು ಗಣಗಳ ಪರಸ್ಮೈಪದ ಮತ್ತು ಆತ್ಮನೇಪದದ ಧಾತುಗಳಿಗೆ ವರ್ತಮಾನಕೃದಂತಗಳು ಹೇಗೆ ಆಗುವವೆಂಬುದನ್ನು ಈ ಕೆಳಗಿನ ಪಟ್ಟಿಯಿಂದ ಕಾಣಬಹುದು :

| ಧಾತು | ಕೃದಂತ ಪರಸ್ಮೈ | ಕೃದಂತ ಆತ್ಮನೇ | ಕೃದಂತ ಕರ್ಮಣಿ |
|---|---|---|---|
| भू (१) | भवन् | | अनुभूयमानः |
| एध् (१) | | एधमानः | एध्यमानः |
| दिव् (४) | दीव्यन् | .... | दीव्यमानः |
| जन् (४) | .... | जायमानः | जन्यमानः |
| तुद् (६) | तुदन् | तुदमानः | तुद्यमानः |
| चुर् (१०) | चोरयन् | चोरयमाणः | चोर्यमाणः |
| अद् (२) | अदन् | .... | अद्यमानः |
| द्विष् (२) | द्विषन् | द्विषाणः | द्विष्यमाणः |
| धा (३) | दधत् | दधानः | धीयमानः |
| चि (५) | चिन्वन् | चिन्वानः | चीयमानः |
| रुध् (७) | रुन्धन् | रुन्धानः | रुध्यमानः |
| तन् (८) | तन्वन् | तन्वानः | तन्यमानः, तायमानः |
| क्री (९) | क्रीणन् | क्रीणानः | क्रीयमाणः |

ಮೇಲಿರುವ ರೂಪಗಳನ್ನು ನೋಡಿದರೆ (೧) ಪರಸ್ಮೈಪದದಲ್ಲಿ ಲಟ್ ಪ್ರಥಮಾ ಬಹುವಚನದ ಪ್ರತ್ಯಯವು ಸೇರುವಾಗ ಇರುವ ಧಾತುವಿನ ಅಂಗರೂಪಕ್ಕೆ अत् ಪ್ರತ್ಯಯವನ್ನು ಸೇರಿಸಿದರೆ ವರ್ತಮಾನಕೃದಂತವಾಗುವದೆಂದು ಗೊತ್ತಾಗುತ್ತದೆ. ಉದಾ : ವದನ್ತಿ - ವದನ್, ತಿಷ್ಠನ್ತಿ - ತಿಷ್ಠನ್, ಭ್ರಮನ್ತಿ - ಭ್ರಮನ್, ಘ್ನನ್ತಿ - ಘ್ನನ್, ಶ್ವಸನ್ತಿ - ಶ್ವಸನ್, ಜುಹ್ವತಿ - ಜುಹ್ವನ್, ಶಾಮ್ಯನ್ತಿ - ಶಾಮ್ಯನ್, ಆಪ್ನುವನ್ತಿ - ಆಪ್ನುವನ್, ದಿಶನ್ತಿ - ದಿಶನ್, ಹಿಂಸನ್ತಿ -

ಹಿಂಸನ್, ಕುರ್ವನ್ತಿ - ಕುರ್ವನ್, ಅಶ್ನನ್ತಿ - ಅಶ್ನನ್, ಕೀರ್ತಯನ್ತಿ - ಕೀರ್ತಯನ್ (ಎರಡನೆಯ ಭಾಗದ ೫೭ನೆಯ ಪುಟವನ್ನು ನೋಡಿ.) ಈ ಕೃದಂತಗಳೆಲ್ಲ ಭವನ್ ಭವನ್ತೌ ಭವನ್ತಃ - ಹೀಗೆ ನಡೆಯುತ್ತವೆ.[1]

(೨) ಆತ್ಮನೇಪದದಲ್ಲಿ ಪ್ರಥಮಪುರುಷದ ಬಹುವಚನದ ಪ್ರತ್ಯಯದ ಹಿಂದಿರುವ ರೂಪಕ್ಕೆ आन ಸೇರಿಸಿದರಾಯಿತು ; ಆದರೆ ೧, ೪, ೬, ೧೦ - ಈ ಗಣಗಳ ಧಾತುಗಳಿಗೆ 'ಮಾನ' ಸೇರಿಸಬೇಕು. ಉದಾ : ಈಹನ್ತೇ - ಈಹಮಾನಃ, ಮೋದನ್ತೇ - ಮೋದಮಾನಃ, ದಯನ್ತೇ - ದಯಮಾನಃ, ಕಲ್ಪನ್ತೇ - ಕಲ್ಪಮಾನಃ, ಗಾಹನ್ತೇ - ಗಾಹಮಾನಃ, ಬುಧ್ಯನ್ತೇ - ಬುಧ್ಯಮಾನಃ, ಯುಧ್ಯನ್ತೇ - ಯುಧ್ಯಮಾನಃ, ಮ್ರಿಯನ್ತೇ - ಮ್ರಿಯಮಾಣಃ, ಕ್ಷಿಪನ್ತೇ - ಕ್ಷಿಪಮಾನಃ ಗರ್ಹಯನ್ತೇ - ಗರ್ಹಯಮಾಣಃ, ವಞ್ಚಯನ್ತೇ - ವಞ್ಚಯಮಾನಃ ।। ಈಶತೇ - ಈಶಾನಃ, ಆಶಾಸತೇ - ಆಶಾಸಾನಃ, ದುಹತೇ - ದುಹಾನಃ, ಸ್ತುವತೇ - ಸ್ತುವಾನಃ, ದದತೇ - ದದಾನಃ, ಶೇರತೇ - ಶಯಾನಃ, ಅಶ್ನುವತೇ - ಅಶ್ನುವಾನಃ, ಸ್ವೃಣ್ವತೇ - ಸ್ವೃಣ್ವಾನಃ, ಇನ್ಧತೇ - ಇನ್ಧಾನಃ, ಕುರ್ವತೇ - ಕುರ್ವಾಣಃ, ಮನ್ವತೇ - ಮನ್ವಾನಃ, ಪುನತೇ - ಪುನಾನಃ, ಗೃಹ್ಣತೇ - ಗೃಹ್ಣಾನಃ, ಜಾನತೇ - ಜಾನಾನಃ - ಇತ್ಯಾದಿ.

(೩) ಕರ್ಮಣಿಪ್ರಯೋಗದ ಪ್ರತ್ಯಯವು ಸೇರುವ ರೂಪಕ್ಕೆ 'ಮಾನ' ಸೇರಿಸಿದರೆ ಕರ್ಮಣಿಕೃದಂತವಾಗುತ್ತದೆ. ಉದಾ : ಕಥ್ಯತೇ - ಕಥ್ಯಮಾನಃ, ಉಚ್ಯತೇ - ಉಚ್ಯಮಾನಃ, ಗಮ್ಯತೇ - ಗಮ್ಯಮಾನಃ, ಪೀಯತೇ - ಪೀಯಮಾನಃ, ಸ್ತೂಯತೇ - ಸ್ತೂಯಮಾನಃ, ಸ್ಮರ್ಯತೇ - ಸ್ಮರ್ಯಮಾಣಃ, ಕೀರ್ತ್ಯತೇ - ಕೀರ್ತ್ಯಮಾನಃ - ಇತ್ಯಾದಿ.

## ಅಭ್ಯಾಸ ೪೧

ಈ ಕಥಾಭಾಗವನ್ನು ಕನ್ನಡಿಸಿರಿ :

ಪ್ರತಾರ್ಯತೇ - ವಂಚಿಸಲ್ಪಡುತ್ತಾನೆ. ಮುದ್ರಾ - ಮುಖಚಿಹ್ನೆ. ಅಭಿಜ್ಞಾನಾನಿ - ಗುರುತಿನ ವಿಷಯಗಳು. ಪಞ್ಚಾಶಪದಾನಿ - ಐದಾರು ಹೆಜ್ಜೆಗಳನ್ನು ವಿತನೋತಿ - ವಿಸ್ತರಿಸುತ್ತದೆ.

ततः क्रमेण सभायां कोऽपि ज्योतिश्शस्त्रपारङ्गतः सकलविद्याचातुर्यवान् ब्राह्मणः समागमत् (= समागच्छत्) । 'राज्ञे स्वस्ति' इत्युक्त्वा राजाज्ञया उपविष्टः । 'हे देव, लोकोऽयं मां सर्वज्ञं वक्ति । तत्किमपि पृच्छ ।

कण्ठस्था या भवेद् विद्या सा प्रकाश्या सदा बुधैः ।

---

೧. ದದತ್, ಜಕ್ಷತ್, ಜಾಗ್ರತ್, ಶಾಸತ್, ದರಿದ್ರತ್ - ಮುಂತಾದ ಕೆಲವು ಕೃದಂತಗಳು ತಕಾರಾಂತವಾಗಿಯೇ ಇರುವವು. ಇವನ್ನು 'ಮರುತ್' ಶಬ್ದದಂತೆ ನಡೆಯಿಸಬೇಕು.

या गुरौ पुस्तके विद्या तया मूढः प्रतार्यते ।।'

ततो राजा विप्रस्य अहम्भावमुद्रया चमत्कृतां तां तद्वार्तां श्रुत्वा 'अस्माकं जन्मारभ्य एतत्क्षणपर्यन्तं यद्यन्मया आचरितं यद्यत् कृतं तत्सर्वं वदसि यदि तर्हि भवान् सर्वज्ञ एव' इति उवाच । ततो ब्राह्मणोऽपि राज्ञा यद्यत् कृतं तत्सर्वम् उवाच गूढव्यापारमपि । ततो राजापि सर्वण्यपि अभिज्ञानानि ज्ञात्वा तुतोष पुनश्च पञ्चषपदानि गत्वा विप्रस्य पादयोः पतित्वा तमिन्द्रनीलपुष्यरागमरकतवैडूर्यखचितसिंहासने उपवेशयित्वा राजा प्राह -

**मातेव रक्षति पितेव हिते नियुङ्क्ते**
**कान्तेव चाभिरमयत्यपनीय खेदम् ।**
**कीर्तिं च दिक्षु विमलां वितनोति लक्ष्मीं**
**किं किं न साधयति कल्पलतेव विद्या ।।**

## ಅಭ್ಯಾಸ ೪೨

वक्ति, पृच्छ, तुतोष, प्राह, नियुङ्क्ते, वितनोति - ಈ ಕ್ರಿಯಾಪದಗಳ ಆಯಾ ಲಕಾರದ (mood or tense) ರೂಪಗಳನ್ನು ಪೂರ್ತಿಯಾಗಿ ಬರೆಯಿರಿ.

## २७. मित्रभेदः (अनुवृत्तः)

७८. सञ्जीवक आह - 'तदेवंगतेऽपि किं कर्तव्यम् ?' - इत्यहं सुहृद्भावात् पृच्छामि' ।

दमनक आह - 'तद् देशान्तरगमनं युज्यते, नैवंविधस्य कुस्वामिनः सेवां विधातुम्' ।

सञ्जीवक आह - अस्माकमुपरि स्वमिनि कुपिते गन्तुं न शक्यते । न च अन्यत्र गतानामपि निर्वृतिर्भवति । तद् युद्धं मुक्त्वा मे नान्यदस्ति श्रेयस्करम्' ।

तदाकर्ण्य दमनकश्चिन्तयामास - 'युद्धाय कृतनिश्चयोऽयं दृश्यते दुरात्मा । तद् यदि कदाचित् तीक्ष्णश्रृङ्गाभ्यां स्वामिनं प्रहरिष्यति, तन्महाननर्थः संपत्स्यते ।

तदेनं भूयोऽपि स्वबुध्दया प्रबोध्य तथा करोमि यथा देशान्तरगमनं करोति ।' आह च प्रकाशम् - 'भो मित्र, सम्यगभिहितं भवता । परं किन्तु कः स्वामिभृत्ययोः संग्रामः ? तस्मात् त्वया उद्यमो न त्याज्यः ।' ॥

तदाकर्ण्य सञ्जीवकस्तमेव भूयोऽपि पप्रच्छ - 'भो मित्र, कथं ज्ञेयो मया असौ दुष्टबुद्धिरिति ? इयन्तं कालं यावत् उत्तरोत्तरस्नेहेन प्रसादेन च अहं दृष्टः । न कदचित् तद्विकृतिर्दृष्टा । तत् कथ्यताम्, येनाहं आत्मरक्षार्थं तद्वधाय उद्यमं करोमि' ।

दमनक अह - 'भद्र, किमत्र ज्ञेयम् ? एष ते प्रत्ययः - यदि रक्तनेत्रः, त्रिशिखां भृकुटिं दधानः, स्रक्वणी परिलेलिहत् त्वां दृष्ट्वा भवति तद् दुष्टबुद्धिः ; अन्यथा सुप्रसादश्च इति । तदाज्ञापय माम्, स्वाश्रयं गच्छामि । त्वया च यथायं मन्त्रभेदो न भवति तथा कार्यम् । यदि निशामुखं प्राप्य गन्तुं शन्कोषि, तद् देशत्यागः कार्यः । यतो बलवता अभिभूतस्य विदेशगमनं तदनुप्रवेशो वा नीतिः । तद्देशत्यागः कार्यः, अथवा आत्मा सामादिभिरुपायैरभिरक्षणीयः ॥

ಮೇಲಿನ ಕಥಾಭಾಗವನ್ನು ಕನ್ನಡಿಸಿರಿ.

## ಚಿಂತನ

೧. ಏವಂಗತೇಽಪಿ । ಹೀಗಿದ್ದರೂ. 'ಏವಂವಿಧೇ ವ್ಯತಿಕರೇ', 'ಏವಂವಿಧೇ ಸಮಯೇ' - ಎಂದು ಹಿಂದೆ ಉಪಯೋಗಿಸಿರುವದಕ್ಕೆ ಸಮಾನಾರ್ಥಕವಿದು.

೨. ಸುಹೃದ್ಭಾವಾತ್ ಪೃಚ್ಛಾಮಿ । ನನಗೆ ಒಳ್ಳೆಯದನ್ನು ಕೋರುವವನೆಂಬ ಕಾರಣದಿಂದ ಕೇಳುತ್ತೇನೆ. ಬುದ್ಧಿಯಮಾತನ್ನು (Advice) ಹೇಳೆಂದು ಕೇಳುವ ಬಗೆಯಿದು. ಸುಹೃದ್ಭೂತ್ವಾ ವದತಿ - ಒಳ್ಳೆಯದನ್ನು ಕೋರಿ ತಾನೇ ಹೇಳುತ್ತಾನೆ - ಎಂಬ ಮಾತನ್ನು ಹೀಗೆಯೇ ಪ್ರಯೋಗಿಸುವರು.

೩. ದೇಶಾನ್ತರಗಮನಂ ಯುಜ್ಯತೇ । 'ದೇಶಾನ್ತರಮ್' ಅನ್ಯೋ ದೇಶಃ ಎಂದು ಈ ನಿತ್ಯಸಮಾಸಕ್ಕೆ ವಿಗ್ರಹ. ಹೀಗೆಯೇ ಭಾಷಾನ್ತರಮ್ - ಅನ್ಯಾ ಭಾಷಾ । ಕಾರಣಾನ್ತರಮ್ - ಅನ್ಯತ್ ಕಾರಣಮ್ । ದೇಶಾನ್ತರಂ ಗನ್ತುಂ ಯುಜ್ಯತೇ 'ಯುಕ್ತಮ್', 'ಉಚಿತಮ್' - ಎಂದೂ ಹೇಳಬಹುದು.

೪. ನೈವಂವಿಧಸ್ಯ ಕುಸ್ವಾಮಿನಃ ಸೇವಾಂ ವಿಧಾತುಮ್ . 'ಯುಜ್ಯತೇ' ಎಂದು ಇಲ್ಲಿ ಹಿಂದಿನ ವಾಕ್ಯದಿಂದ ಸೇರಿಸಿಕೊಳ್ಳಬೇಕು. ಹೀಗೆ ಮೊದಲು ಹೇಳಿದ್ದನ್ನೇ ಸೇರಿಸಿಕೊಳ್ಳುವದಕ್ಕೆ 'ಅನುಷಂಗವೆಂದು' ಹೆಸರು. 'ನೈವಂವಿಧಸ್ಯ', 'ನ ತ್ವೇವಂವಿಧಸ್ಯ' - ಎಂದು ತುಶಬ್ದವನ್ನು ಸೇರಿಸಿಯೂ ಹೇಳಬಹುದು. 'ಕುತ್ಸಿತಃ ಸ್ವಾಮೀ = ಕುಸ್ವಾಮಿ । ತಸ್ಯ ಕುಸ್ವಾಮಿನಃ' ಎಂದು ವಿಗ್ರಹ. ಕರ್ಮಧಾರಯ.

೫. ಅಸ್ಮಾಕಮುಪರಿ = ಅಸ್ಮಾಸು । 'ನಮ್ಮ ಮೇಲೆ' ಎಂದರ್ಥ. ಸಪ್ತಮಿಯ ಅರ್ಥದಲ್ಲಿ 'ಉಪರಿ'ಯನ್ನು ಪ್ರಯೋಗಿಸುವ ಸ್ಥಲಗಳು ಈ ಗ್ರಂಥದಲ್ಲಿ ಬಹಳ ಇವೆ. ಇದರ ಹಿಂದೆ 'ಅಸ್ತ್ಯೇತತ್, ಪರಮ್' ಎಂದು ಪಾಠಾಂತರವಿದೆ. (ಇದು ಉಂಟು =) ಇದು ನಿಜ ; ಆದರೆ - ಎಂದು ಅದಕ್ಕೆ ಅರ್ಥ.

೬. ಸ್ವಾಮಿನಿ ಕುಪಿತೇ । ಒಡೆಯನು ಸಿಟ್ಟಾಗಿರುವಲ್ಲಿ. ಸತಿಸಪ್ತಮಿ (Locative absolute).

೭. ನ ಚ ಅನ್ಯತ್ರ ಗತಾನಾಮಪಿ ನಿರ್ವೃತಿರ್ಭವತಿ । ಮತ್ತೊಂದು ಕಡೆಗೆ (ಹೋದವರಿಗೂ =) ಹೋದರೂ ಸುಖವಾಗುವದಿಲ್ಲ. 'ನ ಚ' ಎಂಬ ಮಾತನ್ನು 'ಹೀಗೂ ಆಗಲಾರದು' ಎಂಬರ್ಥದಲ್ಲಿ ವ್ಯಾಖ್ಯಾನಗಳಲ್ಲಿ ಬಹಳವಾಗಿ ಬಳಸುವರು. ಉದಾ : ಸ ನ ತದ್ ಭಕ್ಷಯತಿ, ನ ಚ ಮಾಂ ಭಕ್ಷಯಿತುಮ್ ಅನುಜಾನಾತಿ । ಅವನು ಅದನ್ನು ತಿನ್ನುವದಿಲ್ಲ, (ನನ್ನನ್ನು =) ನಾನು ತಿನ್ನುವದಕ್ಕೂ ಒಪ್ಪುವದಿಲ್ಲ. ನ ಚೈವಂ ವಾಚ್ಯಮ್ ಹೀಗೆ ಹೇಳಲೂಬಾರದು.

೮. ಯುದ್ಧಂ ಮುಕ್ತ್ವಾ ನಾನ್ಯತ್ । ಯುದ್ಧವನ್ನು ಬಿಟ್ಟರೆ ಮತ್ತೊಂದು ; 'ವಿಹಾಯ ವರ್ಜಯಿತ್ವಾ' ಮುಂತಾದ ಮಾತುಗಳನ್ನು 'ಮುಕ್ತ್ವಾ' ಎಂಬುದಕ್ಕೆ ಬದಲಾಗಿ ಪ್ರಯೋಗಿಸಬಹುದು.

೯. ಯುದ್ಧಾಯ ಕೃತನಿಶ್ಚಯೋಽಯಂ ದೃಶ್ಯತೇ ದುರಾತ್ಮಾ = ಅಯಂ ದುಷ್ಟಬುದ್ಧಿಃ ಯೋದ್ಧುಂ ನಿಶ್ಚಿತವಾನ್ ಇತಿ ತರ್ಕಯಾಮಿ (ಮನ್ಯೇ, ಶಂಕೇ) - ಹೀಗೆ ಕಾಣಿಸುತ್ತದೆ, ಹೀಗೆಂದು ನನಗೆ ತೋರುತ್ತದೆ - ಎಂಬರ್ಥದಲ್ಲಿ ಉಪಯೋಗಿಸುವ ಮಾತಿದು. 'ಯೋಗ್ಯೋಽಯಂ ದೃಶ್ಯತೇ' ಎಂಬ ವಾಕ್ಯವನ್ನು ನೋಡಿ [ಪುಟ ೪೯ರಲ್ಲಿ ].

೧೦. ಯದಿ ಕದಾಚಿತ್ ತೀಕ್ಷ್ಣಶೃಙ್ಗಾಭ್ಯಾಂ ಪ್ರಹರಿಷ್ಯತಿ । ಒಂದುವೇಳೆ ಚೂಪಾದ ಕೋಡುಗಳಿಂದ ತಿವಿದರೆ - ಎಂದರ್ಥ.

೧೧. ಮಹಾನನರ್ಥಃ ಸಂಪತ್ಸ್ಯತೇ । ದೊಡ್ಡ ಕೇಡು ಆಗುವದು. ಪದ್ ಧಾತುವಿನ ಭವಿಷ್ಯದ್ರೂಪ 'ಪತ್ಸ್ಯತೇ' । 'ಭವಿಷ್ಯತಿ' ಎಂದೂ ಹೇಳಬಹುದು.

೧೨. ತಥಾ ಕರೋಮಿ ಯಥಾ । (ಹೋಗು) ವಂತೆ ಮಾಡುತ್ತೇನೆ. [ಪು. ೧೦೦ ರಲ್ಲಿ] 'ತಥಾ - ಯಥಾ' ಇದರ ವಿಷಯದ ಟಿಪ್ಪಣಿಯನ್ನು ನೋಡಿ. 'ಕರೋಮಿ' ಎಂಬುದನ್ನು 'ಕರಿಷ್ಯಾಮಿ' ಎಂಬರ್ಥದಲ್ಲಿ ಪ್ರಯೋಗಿಸಿದೆ.

೧೩. ಸಮ್ಯಗಭಿಹಿತಂ ಭವತಾ । ನೀನು ಹೇಳಿದ್ದು ಸರಿ. ಸಾಧೂಕ್ತಮ್, ಸತ್ಯಮುಕ್ತಮ್, ಯುಕ್ತಮುಕ್ತಮ್ - ಇವೆಲ್ಲ ಸಮಾನಾರ್ಥಕ.

೧೪. 'ಸಮ್ಯಗಭಿಹಿತಂ, ಪರಮ್' - ಸತ್ಯಮೇತತ್ ಕಿಂ ತು, ಯದ್ಯಪ್ಯೇವಂ ತಥಾಪಿ. ಇದು ನಿಜ, ಆದರೆ - ಎಂದರ್ಥ. ಪರಂ ಕಿಂ ತು - ಎಂಬ ಪ್ರಯೋಗದಲ್ಲಿ ಪುನರುಕ್ತಿಯಿದೆ. 'ಪರಮ್' ಅಥವಾ ಕಿಂ ತು' ಎಂದು ಒಂದೊಂದೇ ಇದ್ದರೆ ಸಾಕು.

೧೫. ಇಯನ್ತಂ ಕಾಲಂ ಯಾವತ್ । ಇಷ್ಟುಕಾಲದವರೆಗೂ. 'ವರೆಗೆ' ಎಂಬರ್ಥವಿರುವದರಿಂದ ದ್ವಿತೀಯಾವಿಭಕ್ತಿಯು ಬಂದಿದೆ.

೧೬. ಉತ್ತರೋತ್ತರ ಸ್ನೇಹೇನ - ಹೆಚ್ಚು ಹೆಚ್ಚು ಸ್ನೇಹದಿಂದ.

೧೭. ನ ಕದಾಚಿತ್ - ನ ಜಾತುಚಿತ್, ಯಾವಾಗಲೂ ಇಲ್ಲ, 'ವಿಕೃತಿಃ' - ಬೇರೆಯಾದದ್ದು.

೧೮. ಆತ್ಮರಕ್ಷಾರ್ಥಮ್ । ತನ್ನನ್ನು ರಕ್ಷಿಸಿಕೊಳ್ಳುವದಕ್ಕಾಗಿ. ಆತ್ಮನ್ ಶಬ್ದವು ಹಿಂದೆ ಯಾವದು ಪರಾಮೃಷ್ಟವಿರುವದೋ ಅದಕ್ಕನುಗುಣವಾಗಿ ಅರ್ಥವನ್ನು ಕೊಡುತ್ತದೆ. (ಎರಡನೆಯ ಭಾಗದ ೭೫ನೆಯ ಪುಟವನ್ನು ನೋಡಿ.)

೧೯. ಸೃಕ್ವಣೀ ಪರಿಲೇಲಿಹತ್ । ಕಟವಾಯನ್ನು ನೆಕ್ಕುತ್ತಾ. ಸೃಕ್ವಣೀ - ಇದು ಸೃಕ್ವನ್ ಶಬ್ದದ ದ್ವಿವಚನ. ಈ ಶಬ್ದಕ್ಕೆ ಹೆಚ್ಚು ಪ್ರಯೋಗವಿಲ್ಲ. ಲೇಲಿಹತ್ । ಲಿಹ್ (ನೆಕ್ಕು) ಧಾತುವಿಗೆ ಮತ್ತೆಮತ್ತೆ ಎಂಬ ಅರ್ಥವನ್ನು ಕೊಡುವ ಯಙನ್ತಕ್ರಿಯಾಪದದ ವರ್ತಮಾನ ಕೃದಂತವಿದು. ಲೇಲಿಹತ್ ಎಂದು ರೂಪ, ಲೇಲಿಹನ್ ಎಂದಲ್ಲ. ಆತ್ಮನೇಪದದಲ್ಲಿ ಲೇಲಿಹಾನಃ ಎಂದು ರೂಪ.

೨೦. ತ್ರಿಶಿಖಾಂ ಭ್ರುಕುಟಿಂ ಕೃತ್ವಾ । ಹುಬ್ಬುಗಂಟುಹಾಕಿಕೊಂಡು. 'ಭ್ರೂಕುಟಿಂ ಬದ್ಧ್ವಾ' ಎಂದೂ ಇರಬಹುದು. ಭ್ರುವೋಃ ಕುಟಿಃ ಭ್ರುಕುಟಿಃ । 'ಭ್ರೂಕುಟಿಃ' ಎಂದು (ಭ್ರೂ - ದೀರ್ಘ) ಪ್ರಯೋಗವೂ ಇದೆ.

೨೧. ತದಾಜ್ಞಾಪಯ ಮಾಮ್ । 'ಹೋಗಿಬರುತ್ತೇನೆ' ಎಂಬ ಅಭಿಪ್ರಾಯದಿಂದ ಹೇಳುವ ಮಾತಿದು. 'ಆಪೃಚ್ಛೇ ತ್ವಾಮ್' ಎಂದರೂ ಇದೇ ಅರ್ಥ.

೨೨. ನಿಶಾಮುಖಂ ಪ್ರಾಪ್ಯ । ರಾತ್ರಿಯಾದ ಕೂಡಲೆ.

೨೩. ತದನುಪ್ರವೇಶೋ ವಾ । ಅವನನ್ನೇ ಒಳಹೋಗುವದು, ಅವನು ಹೇಳಿದಂತೆ ಕೇಳುವದು ರಾಜನೀತಿ.

೨೪. ಆತ್ಮಾ ಸಾಮಾದಿಭಿರುಪಾಯೈರಭಿರಕ್ಷಣೀಯಃ । ಸಾಮವೇ ಮುಂತಾದ ಉಪಾಯಗಳಿಂದ ಬದುಕಿಕೊಳ್ಳಬೇಕು. ಆತ್ಮಾನಂ ರಕ್ಷಯ - ಎಂಬುದರ ಕರ್ಮಣಿ ಪ್ರಯೋಗ. ಸಾಮದಾನಭೇದಗಳನ್ನು ಮಾತ್ರ ಇಲ್ಲಿ ದಮನಕನು 'ಸಾಮಾದಿ' ಎಂದಿರುತ್ತಾನೆ.

## २८. मित्रभेदः (अनुवृत्तः)

७९. अथ दमनके गते सञ्जीवकश्चिन्तयामास 'अहो ! किमेतन्मया कृतम्,

यत् शष्पादोऽपि मांसाशिनस्तस्य अनुगः संवृत्तः । तत्किं करोमि ? क्व गच्छामि ? कथं मे शान्तिर्भविष्यति ? अथवा तमेव पिङ्गलकं गच्छामि । कदाचिन्मां शरणागतं रक्षति, प्राणैर्न वियोजयति । अपरं च अन्यत्र गतस्यापि मे कस्याचिद् दुष्टसत्वस्य मांसाशिनः सकाशान्मृत्युर्भविष्यति । तद् वरं सिंहात्' ।।

एवं निश्चित्य स स्खलितगतिः मन्दं मन्दं गत्वा सिंहाश्रयम् अपश्यत् । तत्र दमनकोक्ताकारं पिङ्गलकं दृष्ट्वा प्रचकितः संवृतशरिरो दूरतरं प्रणामकृतिं विनापि उपविष्टः । पिङ्गलकोऽपि तथविथं तं विलोक्य दमनकवाक्यं श्रद्दधानः कोपात् तस्योपरि पपात । अथ सञ्जीवकः खरनखरविकर्तितपृष्ठः शृङ्गाभ्यां तदुदरम् उल्लिख्य कथमपि तस्मादपेतः शृङ्गाभ्यां हन्तुमिच्छन् युद्धाय अवस्थितः ।।

अथ द्वावपि तौ पुष्पितपलाशप्रतिमौ परस्परवधकाङ्क्षिणौ दृष्ट्वा करटको दमनकम् आह - 'भो मूढमते, अनयोर्विरोधं वितन्वता त्वया न साधु कृतम् । यदि स्वाम्यभिघातो भविष्यति, तत् किं त्वदीयमंत्रबुद्धया क्रियते ? अथ सञ्जीवको न हन्यते, तथाप्यभव्यम् ? यतः प्राणसंदेहात् तस्य च वधः । यदि त्वं स्वामिनं एनां दशां नयसि, तदस्मद्विधस्य का गणना ? तस्मान्मम आसन्नेन भवता न भाव्यम् ।।

अथैवं संवदतोस्तयोः सञ्जीवकः क्षणमेकं पिङ्गलकेन सह युद्धं कृत्वा तस्य खरनखरप्रहाराभिहतो गतासुर्वसुन्धरापीठे निपपात । अथ तं गतासुम् अवलोक्य पिङ्गलकस्तद्गुणस्मरणार्द्रहृदयः प्रोवाच - 'भोः, अयुक्तं मया पापेन कृतं सञ्जीवकं व्यापादयता । यतो विश्वासघातात् अन्यन्नास्ति पापतरं कर्म । तथा मया सभामध्ये स सदैव प्रशंसितः । तत् किं कथयिष्यामि तेषामग्रतः ?

एवंविधं प्रलपन्तं दमनकः समेत्य सहर्षम् इदमाह - 'देव, कातरतमस्तवैष न्यायो यद् द्रोहकारिणं शष्पभुजं हत्वेत्थं शोचसि । तन्नैतदुपपन्नं भूभुजाम्' । एवं तेन संबोधितः पिङ्गलकः सञ्जीवकशोकं त्यक्तवा दमनकसाचिव्येन राज्यम् अकरोत् ।।

## ಅಭ್ಯಾಸ ೪೩

ಮೇಲಿನ ಗ್ರಂಥಭಾಗವನ್ನು ಕನ್ನಡಿಸಿರಿ. ಇಲ್ಲಿ ಕೆಲವು ಕಠಿನಶಬ್ದಗಳ ಅರ್ಥವನ್ನು ಕೊಟ್ಟಿದೆ :

**ಶಷ್ಪಾದಃ, ಶಷ್ಪಭುಕ್** - ಹುಲ್ಲುಮೇಯುವ, ಸಸ್ಯಾಹಾರಿಯಾದ. **ಅನುಗಃ** - ಹಿಂಬಾಲಕ, ಸೇವಕ **ಸಂವೃತ್ತಃ** - ಆದೆನು. **ಪ್ರಾಣೈರ್ನ ವಿಯೋಜಯತಿ** - ಕೊಲ್ಲುವದಿಲ್ಲ. **ಸತ್ವಮ್** - ಪ್ರಾಣಿ. **ಅನ್ಯತ್ರ ಗತಸ್ಯಾಪಿ ಮೇ** - ಮತ್ತೊಂದುಕಡೆ ಹೋದವನಾದರೂ ನನಗೆ. **ವರಂ ಸಿಂಹಾತ್** - ಸಿಂಹದಿಂದಲೇ ಮೇಲು. **ಸಿಂಹಾಶ್ರಯಃ** - ಸಿಂಹದ ಮನೆ. **ದಮನಕೋಕ್ತಾಕಾರಮ್** - ದಮನಕನು ಹೇಳಿದ ಆಕಾರವುಳ್ಳ. **ಪ್ರಚಕಿತಃ** - ಬೆಚ್ಚಿಬಿದ್ದು. **ಸ್ಖಲಿತಗತಿಃ** - ತಪ್ಪುಹೆಜ್ಜೆಯ ಗತಿಯುಳ್ಳವನಾಗಿ, ತಪ್ಪುಹೆಜ್ಜೆಹಾಕುತ್ತಾ. **ಪ್ರಣಾಮಕೃತಿಂ ವಿನಾ** - ನಮಸ್ಕಾರಕ್ರಿಯೆಯಿಲ್ಲದೆ. **ಪುಷ್ಪಿತಪಲಾಶ ಪ್ರತಿಮೌ** - (ಹೂಬಿಟ್ಟ ಮುತ್ತುಗದ ಗಿಡದಂತಿರುವ) ರಕ್ತವನ್ನು ಸುರಿಸುತ್ತಾ ಕೆಂಪಗಿರುವ. **ಸ್ವಾಮ್ಯಭಿಘಾತಃ** - ಒಡೆಯನ ಕೊಲೆ. **ಮನ್ತ್ರಬುದ್ಧಿಃ** - ಮಂತ್ರಾಲೋಚನೆಯ ಬುದ್ಧಿ. **ಅಭವ್ಯಮ್** - ಅಮಂಗಲ. **ಪ್ರಾಣಸಂದೇಹಾತ್** - (ಪ್ರಾಣಾಪಾಯದಿಂದ ) ಪ್ರಾಣಾಪಾಯವಾಗುವ ಸಂದರ್ಭದಲ್ಲಿ. **ತದಸ್ಮದ್ವಿಧಸ್ಯ ಕಾ ಗಣನಾ ?** - ಆಗ ನಮ್ಮಂಥವರ ಲೆಕ್ಕವೇನು ? **ಮಮ ಆಸನ್ನೇನ ಭವತಾ ನ ಭಾವ್ಯಮ್** - ನಿನ್ನಿಂದ ನನ್ನ ಹತ್ತಿರವಿರೋಣಾಗ ಬಾರದು, ನನ್ನ ಹತ್ತಿರವಿರಬೇಡ. **ಸಂವದತೋಸ್ತಯೋಃ** - ಅವರಿಬ್ಬರೂ ಸಂಭಾಷಣೆ ಮಾಡುತ್ತಿರಲು. **ನಖರಪ್ರಹಾರಃ** - ಉಗುರಿನ ಏಟು. **ಅಯುಕ್ತಂ ಮಯಾ ಪಾಪೇನ ಕೃತಂ ಸಂಜೀವಕಂ ವ್ಯಾಪಾದಯತಾ** - ಸಂಜೀವಕನನ್ನು ಕೊಂದ ಕೆಟ್ಟ ನಾನು ಅಯುಕ್ತವಾಗಿ ಮಾಡಿದಂತಾಯಿತು. **ಪ್ರಶಂಸಿತಃ** - ಹೊಗಳಲ್ಪಟ್ಟ. **ಕಾತರತಮಃ** - ಹೆಚ್ಚಿನ ಅಂಜುಪುರಕತನದ. **ತೇನ ಸಂಬೋಧಿತಃ** - ಅವನಿಂದ ತಿಳಿಸಲ್ಪಟ್ಟವನಾಗಿ) ಅವನು ತಿಳಿವಳಿಕೆ ಹೇಳಿದ್ದರಿಂದ.

## ೨೯. ಭೂತಕೃದಂತಗಳು

### श्वापदराजः शृगालः

४०. कस्मिंश्चिद् वनप्रदेशे चण्डरवो नाम श्रृगालः प्रतिवसति स्म । स कदाचित् क्षुधाविष्टो जिह्वालौल्यात् नगरान्तरे प्रविष्टः । अथ तं नगरवासिनः सारमेया अवलोक्य सर्वतः शब्दायमानाः परिधाव्य तीक्ष्णदंष्ट्राग्रैर्भक्षितुमारब्धाः । सोऽपि तैर्भक्ष्यमाणः प्राणभयात् प्रत्यासन्नरजकगृहं प्रविष्टः । तत्र च नीलीरसपरिपूर्णमहाभाण्डं सज्जीकृतमासीत् । तत्र सारमेयैराक्रान्तो भाण्डमध्ये पतितः । अथ यावन्निष्क्रान्तः,

तावन्नीलीवर्णः सञ्जातः । तत्र अपरे सारमेयास्तं शृगालमजानन्तो यथाभीष्टदिशं जग्मुः । चण्डरवोऽपि दूरतरं प्रदेशम् आसाद्य काननाभिमुखं प्रतस्थे ॥

## ಅಭ್ಯಾಸ ೪೪

ಭೂತಕೃದಂತಗಳಿಗೆ[೧] ಸಾಮಾನ್ಯವಾಗಿ त, ಕೆಲವಕ್ಕೆ न ಎಂಬ ಪ್ರತ್ಯಯಗಳು ಸೇರಿರುತ್ತವೆ. ಮೇಲಿನ ಕಥಾಭಾಗದಲ್ಲಿರುವ ಭೂತಕೃದಂತಗಳನ್ನು ಕಂಡುಹಿಡಿಯಿರಿ. ಅವುಗಳ ವರ್ತಮಾನಪ್ರಥಮಪುರುಷದ ರೂಪಗಳನ್ನು ಹೇಳಿ. ಉದಾ : आविष्टः - आविशति । आरब्धाः - आरभन्ते । आसन्नम् - आसीदति । ಇತ್ಯಾದಿ.

81. अथ तं हरगलगरलतमालसमप्रभम् अपूर्वसत्त्वं अवलोक्य सर्वे सिंहव्याघ्रद्वीपिवृकप्रभृतयोऽरण्यनिवासिनो भयव्याकुलचित्ताः समन्तात् पलायनक्रियां कुर्वन्ति । कथयन्ति च 'न ज्ञायतेऽस्य कीदृग् विचेष्टितं पौरुषं च । तद् दूरतरं गच्छामः' ॥

## ಅಭ್ಯಾಸ ೪೫

(೧) कुर्वन्ति, कथयन्ति, गच्छामः - ಈ ಕ್ರಿಯೆಗಳ ಅನದ್ಯತನ ಮತ್ತು ಪರೋಕ್ಷಭೂತರೂಪಗಳನ್ನು ಬರೆಯಿರಿ. (೨) ಈ ಕ್ರಿಯಾಪದಗಳಿಗೆ ಭೂತಕೃದಂತ ರೂಪಗಳನ್ನು ಹೇಳಿ.

82. चण्डरवोऽपि तान् भयव्याकुलितान् विज्ञाय, इदमाह - 'भो भोः श्वापदाः, किं यूयं मां दृष्ट्वैव संत्रस्ता व्रजथ ? तन्न भेतव्यम् । अहं ब्रह्मणा अद्य स्वयमेव सृष्ट्वा अभिहितो यत् श्वापदानां मध्ये कश्चिद् राजा नास्ति । तत् त्वं मया अद्य सर्वश्वापदप्रभुत्वेऽभिषिक्तः ककुद्द्रुमाभिदः । ततो गत्वा क्षितितले तान् सर्वान् परिपालय' इति । ततोऽहम् अत्रागतः । तन्मम छत्रच्छायायां सर्वैरेव श्वापदैर्वर्तितव्यम् । अहं ककुद्द्रुमो नाम राजा त्रैलोक्येऽपि संजातः । तच्छ्रुत्वा सिंहव्याघ्रपुरःसराः श्वापदाः 'स्वामिन्, प्रभो, समादिश' इति वदन्तः तं परिवव्रुः । अथ तेन सिंहस्य

೧. ಭೂತಕೃದಂತಗಳ ವಿಷಯವನ್ನು ೨ನೆಯ ಭಾಗದ (ಪುಟ ೮೪ರಲ್ಲಿ) ನೋಡಿರಿ.

अमात्यपदवी प्रदत्ता । व्याघ्रस्य शय्यापालत्वम् ; द्वीपिनस्ताम्बूलाधिकारः ; वृकस्य द्वारपालकत्वम् । ये च आत्मीयाः शृगालाः, तैः सह आलापमात्रमपि न करोति । शृगालाः सर्वेऽपि अर्धचंद्रम् दत्वा निःसारिताः । एवं तस्य राज्यक्रियायां वर्तमानस्य, ते सिंहादयो मृगान् व्यापाद्य तत्पुरतः प्रक्षिपन्ति । सोऽपि प्रभुधर्मेण सर्वेषां तान् प्रविभज्य प्रयच्छति ।।

## ಅಭ್ಯಾಸ ೪೬

ಮೇಲಿನ ಕಥಾಭಾಗದಲ್ಲಿರುವ ಭೂತಕೃದಂತಗಳನ್ನು ತಿಳಿಸಿ ಅವು ಭಾವಾರ್ಥ (Impersonal) ದಲ್ಲಿ ಬಂದಿವೆಯೋ ಕರ್ಮಾರ್ಥ (Passive) ದಲ್ಲಿ ಬಂದಿವೆಯೋ ಹೇಳಿ. ಉದಾ : सन्त्रस्ताः - (ಹೆದರಿದ) ಭಾವಾರ್ಥ ; अभिहितः - (ಹೇಳಲ್ಪಟ್ಟ) ಕರ್ಮಾರ್ಥ.

೮೩. ಭೂತಕೃದಂತಗಳಿಗೆ ಸಾಮಾನ್ಯವಾಗಿ ತ, ಕೆಲವು ವೇಳೆ ನ ಸೇರುತ್ತವೆ. ಈ ಪ್ರತ್ಯಯಗಳು ಸೇರುವಾಗ ಕೆಲವಕ್ಕೆ ಇಡಾಗಮವು ಬರುತ್ತದೆ, ಕೆಲವಕ್ಕೆ ಇಲ್ಲ. ಇಲ್ಲಿ ಕೆಲವು ಉದಾಹರಣೆಗಳನ್ನು ಮಾತ್ರ ತೋರಿಸುವೆವು :

(೧) ತ ಪ್ರತ್ಯಯವು ಬಂದಿರುವ ರೂಪಗಳು : ಭೂತ, ನೀತ, ಶ್ರಿತ (ಆಶ್ರಯಿಸಲ್ಪಟ್ಟ), ಶ್ರುತ, ಹೂತ (ಕರೆಯಲ್ಪಟ್ಟ), ತ್ಯಕ್ತ, ಕೃತ, ಜಾತ, ಜ್ಞಾತ, ಕ್ಷಿಪ್ತ (ಎಸೆಯಲ್ಪಟ್ಟ), ಸ್ಥಿತ, ಕಥಿತ, ಪ್ರಥಿತ (ಪ್ರಸಿದ್ಧವಾದ), ಕ್ಷುಧಿತ, ಜಾಗರಿತ, ದರಿದ್ರಿತ, ಏಧಿತ (ಹೆಚ್ಚಿದ), ಕಮ್ಪಿತ, ಮುಷಿತ (ಕದಿಯಲ್ಪಟ್ಟ) ; ನಷ್ಟ, ಸೃಷ್ಟ (ಸೃಷ್ಟಿಸಲ್ಪಟ್ಟ), ಇಷ್ಟ, ದೃಷ್ಟ, ಹೃಷಿತ - ಹೃಷ್ಟ, ಶ್ವಸಿತ-ವಿಶ್ವಸ್ತ, ಇಷ್ಟ (ಯಾಗಮಾಡಲ್ಪಟ್ಟ), ಭ್ರಷ್ಟ (ಹುರಿಯಲ್ಪಟ್ಟ), ಉಷಿತ (ವಾಸಮಾಡಿದ), ಉದಿತ, ಗೃಹೀತ, ಪೃಷ್ಟ (ಕೇಳಲ್ಪಟ್ಟ) ; ಇದ್ಧ (ಹೊತ್ತಿಕೊಂಡ), ಧ್ವಸ್ತ, ಭ್ರಷ್ಟ (ಜಾರಿಬಿದ್ದ), ದಷ್ಟ (ಕಚ್ಚಲ್ಪಟ್ಟ), ಶಸ್ತ (ಹೊಗಳಲ್ಪಟ್ಟ), ಗತ, ನತ, ರತ, ಮತ, ತತ, ಶಾನ್ತ - ಶಮಿತ, ದಾನ್ತ - ದಮಿತ.

(೨) ನಕಾರವು ಬರುವಂಥವು : ತುನ್ನ (ವ್ಯಥೆಗೊಳಿಸಲ್ಪಟ್ಟ), ಲೀನ, ಭಿನ್ನ, ಕ್ಷೀಣ, ಲಗ್ನ, ಖಿನ್ನ, ಕ್ಲಿನ್ನ (ತೋಯ್ದ), ಸಂಪನ್ನ ಉದ್ವಿಗ್ನ, ಮಗ್ನ, ಛನ್ನ - ಛಾದಿತ (ಮುಚ್ಚಿದ), ಜೀರ್ಣ, ತೀರ್ಣ (ದಾಟಿದ), ರುಗ್ಣ (ಬೇನೆಬಿದ್ದ)[1].

(೩) ಅನಿಯಮಬದ್ಧ : ದತ್ತ, ಕ್ಷಾಮ (ಒಣಗಿದ, ಬಾಡಿದ), ಖ್ಯಾತ (ಹೇಳಿದ), ಸಂಫುಲ್ಲ (ಅರಳಿದ), ಪಕ್ವ, (ಬೇಯ್ದ, ಮಾಗಿದ), ಶುಷ್ಕ (ಒಣಗಿದ).

ವಿಶೇಷ : ಈ ಕೃದಂತಗಳಿಗೆ ವತ್‌ಪ್ರತ್ಯಯವನ್ನು ಸೇರಿಸಿದರೆ ಅದೇ ಅರ್ಥದ ಕರ್ತ್ರರ್ಥ

ಕೃದಂತಗಳಾಗುವವು. ಉದಾ : ತ್ಯಕ್ತವತ್ (ಬಿಟ್ಟ), ಕಥಿತವತ್ (ಹೇಳಿದ), ಗೃಹೀತವತ್ (ಹಿಡಿದ).

## ಅಭ್ಯಾಸ ೪೭

ಈ ಪಾಠದಲ್ಲಿರುವ वसति स्म, जग्मुः, प्रतस्थे, कुर्वन्ति, कथयन्ति, ज्ञायते, परिपालय, समादिश, परिवव्रुः, प्रक्षिपन्ति, प्रयच्छति - ಈ ಕ್ರಿಯಾಪದಗಳಿಗೆ ತಕ್ಕ ಭೂತಕೃದಂತಗಳನ್ನು ಬರೆಯಿರಿ.

84. एवं गच्छति काले कदाचित् तेन सभागतेन दूरदेशे शब्दायमानस्य शृगालवृन्दस्य कोलाहलः श्रुतः । तं शब्दं श्रुत्वा सोऽपि पुलकिततनुः, आनन्दाश्रुपरिपूर्णनयनः, उत्थाय तारस्ववरेण विरोतुम् आरब्धवान् । अथ ते सिंहादयः, तं तारस्वरम् आकर्ण्य शृगालोऽयम् इति मत्वा सलज्जम् अधोमुखाः क्षणमेकं स्थित्वा मिथः प्रोचुः - 'भोः, वाहिता वयम् अनेन क्षुद्रशृगालेन । तद् हन्यताम्' इति । सोऽपि तदाकर्ण्य पलायितुमिच्छन् स्थान एव सिंहादिभिः खण्डशः कृतो मृतश्च ॥

## ಅಭ್ಯಾಸ ೪೮

ಕಥೆಯಲ್ಲಿರುವ ಕ್ತ್ವಾಂತ ಲ್ಯಬಂತಾವ್ಯಯಗಳನ್ನೆಲ್ಲ ವಿಂಗಡಿಸಿ ಹೇಳಿ. दृष्ट्वा, गत्वा, श्रुत्वा, दत्वा - ಇವುಗಳಿಗೆ ಉಪಸರ್ಗವನ್ನು ಸೇರಿಸಿ ಲ್ಯಬಂತಾವ್ಯಯಗಳಾಗಿ ಮಾಡಿರಿ.

## ಅಭ್ಯಾಸ ೪೯

೮೦, ೮೧, ೮೨, ೮೪ - ಈ ಖಂಡಗಳಲ್ಲಿರುವ ವಾಕ್ಯಗಳನ್ನು ಕನ್ನಡಿಸಿ. ಈ ಕೆಳಗೆ ಕೊಟ್ಟಿರುವ ಕೋಶವನ್ನು ಉಪಯೋಗಿಸಿಕೊಳ್ಳಿ. (ಪು. = ಪುಲ್ಲಿಂಗ, ಸ್ತ್ರೀ. = ಸ್ತ್ರೀಲಿಂಗ, ನ. = ನಪುಂಸಕಲಿಂಗ, ವಿ. = ವಿಶೇಷಣ, ಅ. = ಅವ್ಯಯ.)

೧. ಭೂತಕೃದಂತದ ಪ್ರತ್ಯಯವು ದುರ್ಬಲವಾದ್ದರಿಂದ ಅದರ ಹಿಂದಿನ ಸ್ವರಕ್ಕೆ ಗುಣವೃದ್ಧಿಗಳಾಗುವದಿಲ್ಲ. ಆದರೆ ಇದಕ್ಕೆ ಪ್ರತಿಷೇಧಗಳೂ ಉಂಟು. ಉದಾ : ಶಯಿತ, ಜಾಗರಿತ, ಸ್ವೇದಿತ, ಘೋಷಿತ, ಶೋಭಿತ.

ಜಿಹ್ವಾಲೌಲ್ಯ - (ನ.) ನಾಲಗೆಯ ಚಟ.

ಸಾರಮೇಯ - (ಪು.) ನಾಯಿ.

ಶಬ್ದಾಯಮಾನ - (ವಿ.) ಕೂಗುವ.

ಪ್ರತ್ಯಾಸನ್ನ - (ವಿ.) ಹತ್ತಿರವಿರುವ.

ರಜಕಗೃಹ - (ನ.) ಅಗಸನ ಮನೆ.

ಸಮನ್ತಾತ್ - (ಅ.)ಎಲ್ಲಾ ಕಡೆಯಿಂದಲೂ.

ಸಂತ್ರಸ್ತ - (ವಿ.) ಹೆದರಿದ.

ಶ್ವಾಪದ - (ಪು.) ಕಾಡುಮೃಗ.

ಕ್ಷಿತಿತಲ - (ನ.) ಭೂಮಿ.

ಕಕುದ್ದ್ರುಮಾಭಿದ - (ವಿ.) ಕಕುದ್ರುಮನೆಂಬ ಹೆಸರಿನ.

ಛತ್ರಚ್ಛಾಯಾ - (ಸ್ತ್ರೀ.) ಕೊಡೆಯ ನೆಳಲು, ಆಶ್ರಿಕೆ

ಆತ್ಮೀಯ - (ವಿ.) ತನ್ನವ.

ಅರ್ಧಚನ್ದ್ರಂ ದತ್ವಾ - ಕತ್ತುಹಿಡಿದು ತಳ್ಳಿ.

ನಿಃಸಾರಿತ - (ವಿ.) ದೂಡಲ್ಪಟ್ಟ.

ಆಲಾಪ - (ಪು.) ಮಾತು.

ಸಜ್ಜೀಕೃತ - (ವಿ. ) ಸಿದ್ಧಮಾಡಿದ.

ಆಕ್ರಾನ್ತ - (ವಿ.) ಮೇಲೆ ಬಿದ್ದ.

ನಿಷ್ಕ್ರಾಂತ - (ವಿ.) ಹೊರಹೊರಟ.

ಹರಗಲಗರಲ-(ನ.)ಶಿವನ ಕೊರಳ ವಿಷ.

ತಮಾಲ - (ಪು.) ಹೊಂಗೆಗಿಡ.

ರಾಜ್ಯಕ್ರಿಯಾ - (ಸ್ತ್ರೀ.) ಆಳುತ್ತಿರುವದು.

ಪ್ರಭುಧರ್ಮ - (ಪು.) ರಾಜನ ಸ್ವಭಾವ.

ಪುಲಕಿತತನು-(ವಿ.)ಕೂದಲು ನೆಟ್ಟಗಾದ ಶರೀರವುಳ್ಳ.

ಉತ್ಥಾಯ - (ಅ.) ಎದ್ದುನಿಂತ.

ತಾರಸ್ವರ - (ಪು.) ಗಟ್ಟಿಯಾದ ಧ್ವನಿ.

ವಿರೋತುಮ್ - (ಅ.) ಬಲವಾಗಿ ಕೂಗುವದಕ್ಕೆ.

ವಾಹಿತ - (ವಿ.) ವಂಚಿಸಲ್ಪಟ್ಟ.

ಮಿಥಃ - (ಇ.) ಒಬ್ಬರೊಡನೊಬ್ಬರು.

ಕ್ಷುದ್ರಶೃಗಾಲ - (ಪು.) ಅಲ್ಪವಾದ ನರಿ.

ಖಣ್ಡಶಃ ಕೃತಃ - ತುಂಡು ತುಂಡು ಮಾಡಲ್ಪಟ್ಟಿತು.

೮೫. आसिद्गङ्गा दक्षिणकूले राढा नाम नगरी । तत्र निरपेक्षो नाम राजा बभूव । एकदा तस्य राजशब्दप्रतारितः सकलकविकलाकुशलो वाग्विलसो नाम कश्चित् कविराजो दुर्दैवादेशितस्तत्राजगाम । स तस्य राज्ञः प्रियसचिवम् उपगम्य आह - 'विचक्षण, राजानं दर्शय' ।

सचिवोऽब्रबीत् - 'कवे, किमस्य राज्ञो दर्शनेन प्रयोजनम् ? त्वं कविः, अयं अविज्ञः । तद्युवयोः समालापसुखं न भविता - इति तर्कयामि' ।।

कविरुवाच - 'मन्त्रिराज, अविज्ञोऽपि राजाऽसौ मम कवितया निश्चितं परितोषम् अङ्गीकरिष्यति' ।।

सचिव उवाच - 'न द्रष्टव्योऽयं भूपालः । यतः - [೧]

न श्रृणोति न जानाति ज्ञात्वा यो न प्रयच्छति ।
तं कविः कविभावेन किमाराध्य करिष्यति[೨]।।'

कविरह - 'मन्त्रिराज, मम कविता कर्णगतापि यं नाराधयति, सोऽद्भुतः पुरुषस्तत एव दर्शनीयो भवति' ।।

ततो महता सचिवप्रयत्नेन स राजा निरपेक्षस्तस्मै कविराजाय कदाचित् दर्शनं ददौ । कविश्च राजानं दृष्ट्वा पद्यमेकं पपाठ ।।

राजोवाच - 'हे मन्त्रिणः, किमयं विहगकुलकोलाहलाकारं प्रलपति ?'

मन्तिण ऊचुः - 'देव, महानयं कविः । देवस्य यशो वर्णयति । ततः पूजनीयो भवति' ।।

राजोवाच - 'कथमस्य पूजा कर्तव्या ? एतस्य कवितया मम धनं वर्धिष्यते, सैन्यं वा ?'

मन्त्रिणा ऊचुः - 'धनस्य सैन्यस्य च फलं यशो वर्धते कविगिरा । ततो भवान् पूजयितुमर्हति कविराजं काञ्चनैः' ।।

राजोवाच - 'न मम अनेन यशः रव्यापनेन प्रयोजनम्, यत्र अर्थव्ययस्य कारणता । रे रे, मम पुरोवर्तिनो वेत्रपाणयः पुरुषाः, गलहस्तिकया अयं बहिः क्रियताम्, । ततस्तैस्तथा कृतम् ।।

---

೧. ಮೂಲದಲ್ಲಿರುವ ಕೆಲವು ಪದ್ಯಗಳನ್ನು ಬಿಟ್ಟುಬಿಟ್ಟಿದೆ. ಸಂಭಾಷಣೆಯಲ್ಲಿಯೂ ಸ್ವಲ್ಪ ಮಾರ್ಪಾಡು ಮಾಡಲಾಗಿದೆ.

